ವಿಶ್ವವಾಣಿ
ವಿಶ್ವಾಸವೇ ವಿಶ್ವ



ಸೈಬರ್ ಕ್ರೈಂ ಸಮನ್ವಯ ಕೇಂದ್ರಕ್ಕೆ ರಶ್ಮಿಕಾ ರಾಷ್ಟ್ರೀಯ ಬ್ರ್ಯಾಂಡ್ ಅಂಬಾಸಿಡರ್

ದೇಶದಲ್ಲಿ ಸೈಬರ್ ಅಪರಾಧಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಕೇಂದ್ರದ ಗೃಹ ಸಚಿವಾಲಯ ಆರಂಭಿಸಿರುವ ಭಾರತದ ಸೈಬರ್ ಅಪರಾಧಗಳ ಸಮನ್ವಯ ಕೇಂದ್ರದ (ಐ4ಸಿ) ರಾಷ್ಟ್ರೀಯ ಬ್ರ್ಯಾಂಡ್ ಅಂಬಾಸಿಡರ್ ಆಗಿ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಅವರನ್ನು ನೇಮಕ ಮಾಡಲಾಗಿದೆ.

ಪುಟ ತೆರೆದಂತೆ...

ಇದು ಸಯನೇಡಿಗಿಂತ ತೀವ್ರ ವಿಷ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಗೌಡಾಗೆ ಗೌರವಸ್ಥರು ಬೇಕಾಗಿದ್ದಾರೆ!
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ನಮ್ಮ ಮೇಲೆ ಇರಾನ್ ಸಿಡಿಸಿದ 200 ಕ್ಷಿಪಣಿಗಳಿಗೆ ಹೇಗೆ ಪ್ರತ್ಯುತ್ತರ ನೀಡಬೇಕು ಎಂದು ಅಮೆರಿಕವನ್ನು ಕೇಳಿ ನಾವು ನಿರ್ಧರಿಸುವುದಿಲ್ಲ. ನಮ್ಮ ದೇಶದ ಹಿತಾಸಕ್ತಿಗೆ ಅನುಗುಣವಾಗಿ ನಾವೇ ನಿರ್ಧರಿಸುತ್ತೇವೆ.
– ಬೆಂಜಮಿನ್ ನೆತನ್ಯಾಹು
ಇಸ್ರೇಲ್ ಪ್ರಧಾನಿ

ದಾರಿದೀಪೋಕ್ತಿ

ಪರಸ್ಪರ ಮಾತುಕತೆಯಿಲ್ಲದೇ ಯಾವ ಸಂಬಂಧವೂ ಏರ್ಪಡುವುದಿಲ್ಲ. ಗೌರವವಿಲ್ಲದೇ ಪ್ರೀತಿ ಮೂಡುವುದಿಲ್ಲ. ವಿಶ್ವಾಸ, ನಂಬಿಕೆಯಿಲ್ಲದೇ ಯಾವ ಸಂಬಂಧವೂ ಮುಂದುವರಿಯುವುದಿಲ್ಲ. ಕಾಳಜಿ ತೋರದಿದ್ದರೆ ಯಾರೂ ಹತ್ತಿರ ಬರುವುದಿಲ್ಲ.

ವಕ್ರತುಂಡೋಕ್ತಿ

ನಿಮ್ಮ ಹಲ್ಲು ಹಳದಿಯಾಗುತ್ತಿದ್ದರೆ, ನೀವು ಬ್ರೌನ್ ಶರ್ಟ್ ಧರಿಸಬಹುದು.

ಮುನಿರತ್ನಗೆ ಜಾಮೀನು

ಬೆಂಗಳೂರು: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಹನಿಟ್ರ್ಯಾಪ್‌ಗೆ ಬಳಸಿ ಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ಮುನಿರತ್ನಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಅ.17 ರಂದು ಬಿಬಿಎಂಪಿಯಿಂದ ನಾಯಿಗಳ ಹಬ್ಬ ಆಚರಣೆ



ಶಿಗ್ಗಾವಿ, ಸಂಡೂರು, ಚನ್ನಪಟ್ಟಣಕ್ಕೆ ನ.20ರಂದು ಚುನಾವಣೆ
ಟಿಕೆಟ್ ಹಂಚಿಕೆ ಕಸರತ್ತು ಆರಂಭಿಸಿದ ರಾಜಕೀಯ ಪಕ್ಷಗಳು
ಚನ್ನಪಟ್ಟಣವೇ ಈ ಬಾರಿಯೂ ರಾಜ್ಯದ ಹೈವೋಲ್ಟೇಜ್ ಕ್ಷೇತ್ರ

ಉಪಸಮರಕ್ಕೆ ಅಖಾಡ ಸಜ್ಜು

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆಗಳೊಂದಿಗೆ ನ.20 ರಂದು ಕರ್ನಾಟಕದ ಮೂರು ಕ್ಷೇತ್ರಗಳಿಗೂ ಉಪಚುನಾವಣೆ ನಡೆಸುವುದಾಗಿ ಚುನಾವಣಾ ಆಯೋಗ ಮಂಗಳವಾರ ಘೋಷಿಸಿದ್ದು, ಉಪಸಮರಕ್ಕೆ ವೇದಿಕೆ ಸಜ್ಜಾಗಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಸಂಸದ ಬಸವರಾಜ ಬೊಮ್ಮಾಯಿ ಹಾಗೂ ಈ. ತುಕಾರಾಂ ಅವರ ರಾಜೀನಾಮೆಯಿಂದ ತೆರವಾ ಗಿರುವ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಸುವುದಾಗಿ ಘೋಷಿಸಿ ರುವ ಚುನಾವಣಾ ಆಯೋಗ, ನ.13ಕ್ಕೆ ಮತದಾನ ನಡೆಸಿ, 23ಕ್ಕೆ ಫಲಿತಾಂಶ ಪ್ರಕಟಿಸು ವುದಾಗಿ ಘೋಷಿಸಿದೆ. ಅ.25 ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ನಾಮಪತ್ರ ಹಿಂಪಡೆಯಲು 30 ಕೊನೆಯ ದಿನವೆಂದು ಪ್ರಕಟಿಸಿದೆ.

ಚುನಾವಣಾ ಆಯೋಗ ಉಪಚುನಾವಣೆಯನ್ನು ಘೋಷಿಸುತ್ತಿ ದ್ದಂತೆ, ಕರ್ನಾಟಕದಲ್ಲಿ ರಾಜಕೀಯ ಮೇಲಾಟ ಶುರುವಾಗಿದೆ. 3 ಕ್ಷೇತ್ರಗಳ ಪೈಕಿ ಚನ್ನಪಟ್ಟಣ 'ಹೈವೋಲ್ಟೇಜ್' ಕ್ಷೇತ್ರವೆನಿಸಿದೆ. ಈ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿಯಾಗುವುದು ಯಾರೆನ್ನುವ ಗೊಂದಲ ಒಂದೆಡೆಯಾದರೆ, ಇನ್ನೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರ ಸ್ವಾಮಿ ನಡುವಿನ ನೇರ ಜಿದ್ದಾಜಿದ್ದಿನ ಅಖಾಡವಾಗುವುದು ಸ್ಪಷ್ಟವಾಗಿದೆ.

ಸಂಡೂರು, ಶಿಗ್ಗಾವಿಗೆ ಅಭ್ಯರ್ಥಿ ಬಹುತೇಕ ನಿಶ್ಚಿತ: ಚನ್ನಪಟ್ಟಣ ಗೊಂದಲದ ಗೂಡಾಗಿದ್ದರೂ ಸಂಡೂರು ಹಾಗೂ ಶಿಗ್ಗಾವಿ ಕ್ಷೇತ್ರದ ಅಭ್ಯರ್ಥಿಯ ವಿಷಯದಲ್ಲಿ ಕಾಂಗ್ರೆಸಿನಲ್ಲಿ ಹೆಚ್ಚು ಗೊಂದಲವಿಲ್ಲ ಎನ್ನಲಾಗಿದೆ. ಸಂಡೂರಿಗೆ ಸಂಸದ ತುಕಾರಾಂ ಪುತ್ರಿ ಸೌಪರ್ಣಿಕಾ ಅವರನ್ನೇ ಅಂತಿಮಗೊಳಿಸುವ ಸಾಧ್ಯತೆಯಿದೆ. ಇದಕ್ಕೆ ಪೂರಕವಾಗಿ ಈ ಕ್ಷೇತ್ರಕ್ಕೆ ಯಾರೊಬ್ಬರೂ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿಲ್ಲ ಎನ್ನಲಾಗಿದೆ.

→ 4

ಚುನಾವಣೆ ವೇಳಾಪಟ್ಟಿ



ಚುನಾವಣೆ ಅಧಿಸೂಚನೆ	ಅ.18
ನಾಮಪತ್ರ ಸಲ್ಲಿಕೆಗೆ ಕಡೆದಿನ	ಅ.25
ನಾಮಪತ್ರ ಪರಿಶೀಲನೆ	ಅ.28
ನಾಮಪತ್ರ ವಾಪಸ್‌ಗೆ ಕಡೆದಿನ	ಅ.30
ಮತದಾನ	ನ.13
ಮತ ಎಣಿಕೆ	ನ.23

ಮಹಾ, ಜಾರ್ಖಂಡ್ ಚುನಾವಣೆ ನಿಗದಿ

ದೆಹಲಿ: ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನಸಭೆಗೆ ಚುನಾವಣೆ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಪ್ರಕಟಿಸಿದೆ. ಜತೆಗೆ ಹಲವು ಲೋಕಸಭೆ, ವಿಧಾನಸಭೆ ಕ್ಷೇತ್ರಗಳಿಗೂ ಉಪ ಚುನಾವಣೆ ಘೋಷಣೆಯಾಗಿದೆ. ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ ನ.20ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. 81 ಕ್ಷೇತ್ರಗಳಿರುವ ಜಾರ್ಖಂಡ್ ವಿಧಾನಸಭೆಗೆ ನ.13 ಮತ್ತು ನ.20ರಂದು 2 ಹಂತಗಳಲ್ಲಿ ಮತದಾನವಾಗಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ನ.23 ರಂದು ನಡೆದು ಫಲಿತಾಂಶ ಪ್ರಕಟವಾಗಲಿದೆ. ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿರುವ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನ.13ರಂದು ಉಪ ಚುನಾವಣೆ ನಡೆಯಲಿದೆ. ಇದೇ ವೇಳೆ, ಮಹಾರಾಷ್ಟ್ರದ ನಾಂದೇಡ್ ಲೋಕಸಭಾ ಕ್ಷೇತ್ರ ಹಾಗೂ ಉತ್ತರಾಖಂಡ್ ರಾಜ್ಯದ ಕೇದಾರ ವಿಧಾನಸಭಾ ಕ್ಷೇತ್ರಕ್ಕೆ ನ.20ರಂದು ಉಪ ಚುನಾವಣೆ ನಿಗದಿಯಾಗಿದೆ.

ನಾಳೆ ಆಸ್ಪತ್ರೆಗಳಲ್ಲಿ ಸೇವೆಗಳು ಸ್ಥಗಿತ

ಬೆಂಗಳೂರು: ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಹಿಂಸಾತ್ಮಕ ಘಟನೆಯನ್ನು ಖಂಡಿಸಿ ಕಿರಿಯ ವೈದ್ಯರು ನಡೆಸುತ್ತಿರುವ ಮುಷ್ಕರಕ್ಕೆ ಬೆಂಬಲ ಸೂಚಿಸಿ ಅ.17ರಂದು ಬೆಳಗ್ಗೆ 6ರಿಂದ ಮರುದಿನ ಬೆಳಗ್ಗೆ 6ರವರೆಗೆ ರಾಜ್ಯಾದ್ಯಂತ ಆಸ್ಪತ್ರೆಗಳಲ್ಲಿ ಸೇವೆಗಳನ್ನು ಸ್ಥಗಿತಗೊಳಿಸಲು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ಘಟಕ ನಿರ್ಧರಿಸಿದೆ. ತುರ್ತು ಸೇವೆಗಳನ್ನು ಹೊರತುಪಡಿಸಿ ಬೇರೆ ಸೇವೆಗಳು ಇರುವುದಿಲ್ಲ, ಒಪಿಡಿ, ಶಸ್ತ್ರಚಿಕಿತ್ಸೆಗಳೂ ಇರುವುದಿಲ್ಲ ಎಂದು ತಿಳಿಸಿದೆ.

31 ಪ್ರಿಡೇಟರ್ ಡ್ರೋನ್‌ಗಳ ಖರೀದಿ ಒಪ್ಪಂದ

ದೆಹಲಿ: ಕಡಲ ಗಡಿಯಲ್ಲಿ ಕಣ್ಗಾವಲಿಡಲು ಬಳಕೆಯಾಗುವ ಶಸ್ತ್ರಸಜ್ಜಿತ ಎಂಕ್ಯೂ 9ಬಿ ಹೆಸರಿನ 31 ಡ್ರೋನ್‌ಗಳನ್ನು ಖರೀದಿ ಸಲು ಅಮೆರಿಕದ ಜತೆ ಭಾರತ ಒಪ್ಪಂದ ಮಾಡಿಕೊಂಡಿದೆ. ಇದನ್ನು ಪ್ರಿಡೇಟರ್ ಎಂದೂ ಕರೆಯಲಾಗುತ್ತದೆ. ನ್ಯಾಟೊ ಸಮೂಹ ಹೊರತುಪಡಿಸಿ ಇಂತಹ ಶಸ್ತ್ರಾಸ್ತ್ರ ಪಡೆಯುತ್ತಿರುವ ಮೊದಲ ರಾಷ್ಟ್ರ ಭಾರತವಾಗಲಿದೆ.

ವಯನಾಡ್‌ನಿಂದ ಪ್ರಿಯಾಂಕಾ

ದೆಹಲಿ: ಕೇರಳದ ಒಂದು ಲೋಕಸಭಾ ಕ್ಷೇತ್ರ, ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಉಪಚುನಾವಣೆಗೆ ಅಭ್ಯರ್ಥಿಗಳ ಪಟ್ಟಿ ಕಾಂಗ್ರೆಸ್ ಮಂಗಳವಾರ ಪ್ರಕಟಿಸಿದೆ. ವಯನಾಡ್ ಕ್ಷೇತ್ರದಿಂದ ಪ್ರಿಯಾಂಕಾ ಗಾಂಧಿ, ಪಾಲಕ್ಕಾಡ್ ವಿಧಾನಸಭಾ ಕ್ಷೇತ್ರದಿಂದ ರಾಹುಲ್ ಮಾಂಕೂಟತ್ತಿಲ್, ಚೆಲ್ಲಕ್ಕಾರದಿಂದ ರಮ್ಯಾರನ್ನು ಅಂತಿಮಗೊಳಿಸಲಾಗಿದೆ.

ರಾಜಧಾನಿ ಬೆಂಗಳೂರು ಸೇರಿ ರಾಜ್ಯಾದ್ಯಂತ ವರುಣಾರ್ಭಟ

ಸತತ ಮಳೆ ಶಾಲೆಗೆ ರಜೆ

ಬೆಂಗಳೂರು: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಧಾರಾಕಾರ ಮಳೆಯಿಂದ ಇಡೀ ರಾಜ್ಯ ಕೂಲ್ ಆಗಿದ್ದು, ಇನ್ನೆರೆಡು ದಿನ ತೀವ್ರ ಮಳೆಯಾಗುವ ಎಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ. ಆಗ್ನೇಯ ಬಂಗಾಳ ಉಪಮಹಾಸಾಗರದಲ್ಲಿ ವಾಯುಭಾರ ಕುಸಿತ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಇನ್ನೂ ಮೂರು ದಿನ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಬೆಂಗಳೂರಿನಲ್ಲಿ ಸೋಮವಾರ ರಾತ್ರಿಯಿಂದ ಶುರುವಾದ ಮಳೆ ಮಂಗಳವಾರ ರಾತ್ರಿಯವರೆಗೆ ಮುಂದುವರಿದಿದೆ. ಬುಧವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿರುವುದರಿಂದ ಬೆಂಗಳೂರು ವ್ಯಾಪ್ತಿಯ ಶಾಲೆಗಳಿಗೆ ಬುಧವಾರ ರಜೆ ಘೋಷಿಸಲಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು ಹಾಗೂ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ ಸೇರಿದಂತೆ ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಬುಧವಾರ ಯೆಲ್ಲೋ ಅಲರ್ಟ್ ಹಾಗೂ ಗುರುವಾರ ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ.

ತುಮಕೂರು, ಶಿವಮೊಗ್ಗದಲ್ಲೂ ಅಬ್ಬರ: ತುಮಕೂರಿನಲ್ಲೂ ವರುಣನ ಅಬ್ಬರ ಜೋರಾಗಿದೆ. ರಾತ್ರಿಯಿಂದಲೂ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ದೈನಂದಿನ ಕೆಲಸಕ್ಕೆ ಹೋಗುವವರ ಪರದಾಡಿದರು. ಈಗಾಗಲೇ ಜಿಲ್ಲಾಡಳಿತ ಆರೆಂಜ್ ಅಲರ್ಟ್ ಘೋಷಣೆ ಮಾಡಿದೆ.

→ 4

- ಬೆಂಗಳೂರಿನ ಬಹುತೇಕ ರಸ್ತೆಗಳು ಜಲಾವೃತ, ಜನರ ಪರದಾಟ
- ತುರ್ತುಸ್ಥಿತಿ ಎದುರಿಸಲು ಬಿಬಿಎಂಪಿ ಸಿದ್ಧ; ಸಹಾಯವಾಣಿ ಆರಂಭ
- ಭಾರಿ ಮಳೆಗೆ ಜಲಾವೃತ್ತಗೊಂಡ ಮಾನ್ಯತಾ ಟೆಕ್‌ಪಾರ್ಕ್
- ಉದ್ಯೋಗಿಗಳಿಗೆ ವರ್ಕ್ ಫ್ರಂ ಹೋಂ ನೀಡಿದ ಐಟಿ ಕಂಪನಿಗಳು

ಬಿಬಿಎಂಪಿ ಹೈ ಅಲರ್ಟ್

ಧಾರಾಕಾರ ಮಳೆಯ ಹಿನ್ನೆಲೆ ಎಲ್ಲ ವಲಯಗಳಲ್ಲಿಯೂ ಹೈ ಅಲರ್ಟ್‌ನಲ್ಲಿರುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ನಗರದ ಹಲವು ಭಾಗದ ರಸ್ತೆಗಳು ಕೆರೆಯಂತಾಗಿವೆ. ರಸ್ತೆಗುಂಡಿಗಳ ಸಂಖ್ಯೆ ಹೆಚ್ಚಾಗಿರುವ ಬಗ್ಗೆಯೂ ದೂರುಗಳು ಕೇಳಿಬಂದಿವೆ. ನಗರದ ತಗ್ಗು ಪ್ರದೇಶದಲ್ಲಿ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬೇಕು. ಸಮಸ್ಯೆಯಾಗುವಂತೆ ಇದ್ದರೆ, ಕೂಡಲೇ ಸ್ಥಳೀಯ ನಿವಾಸಿಗಳನ್ನು ಸುರಕ್ಷಿತ ಸ್ಥಳಕೆ ಕರೆದೊಯ್ಯುವ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ.

ಮುಡಾ ಅಧ್ಯಕ್ಷ ಮರೀಗೌಡ ತಲೆದಂಡ?

ಮೈಸೂರು: ನಿವೇಶನ ಹಂಚಿಕೆ ಹಗರಣ ಸಂಬಂಧ ಮೈಸೂರು ನಗರಾ ಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಕೆ. ಮರಿಗೌಡ ತಲೆದಂಡವಾ ಗಲಿದೆ ಎಂಬ ಸುದ್ದಿ ದಟ್ಟವಾಗಿ ಹರಡಿದೆ.

ಸಿಎಂ ಸಿದ್ದರಾಮಯ್ಯ ಅವರ ಪತ್ನಿಗೆ 14 ನಿವೇಶನ ಮಂಜೂರಾದ ಪ್ರಕರಣ ಸಂಬಂಧ ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾವಮೈದುನ ಮಲ್ಲಿಕಾರ್ಜುನ ಹಾಗೂ ಮೂಲ ಮಾಲೀಕನ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆ ಮುಡಾ ಅಧ್ಯಕ್ಷ ಮರಿಗೌಡ ವಿರುದ್ಧ ಸ್ವಪಕ್ಷದವರಿಂದಲೇ ಆಕ್ರೋಶ ವ್ಯಕ್ತವಾಗಿತ್ತು. ಇದರಿಂದ ಎಚ್ಚೆತ್ತ ಸರಕಾರ ಮುಡಾಗೆ ಆಡಳಿತಾಧಿಕಾರಿ ನೇಮಿಸಲು ನಿರ್ಧರಿಸಿತ್ತು. ಮರಿಗೌಡ ರಿಗೆ ರಾಜೀನಾಮೆ ನೀಡುವಂತೆಯೂ ಸೂಚನೆ ನೀಡಿತ್ತು. ಆದರೆ, 'ದಸರಾ ಮಗಿಯುವವರೆಗೂ ನಾನು ರಾಜೀ ನಾಮೆ ನೀಡಲ್ಲ. ಆಡಳಿತಾಧಿಕಾರಿ ನಿರ್ಧಾರ ಬೇಡ' ಎಂದು ಮರಿಗೌಡ ಅವರು ಸಿಎಂಗೆ ಮನವಿ ಮಾಡಿದ್ದರು.

ಇದೀಗ ದಸರಾ ಮುಗಿದು ಮೂರು ದಿನ ಕಳೆದಿದ್ದು, ಮರಿಗೌಡ ಅವರು ಇಂದು ಅಥವಾ ನಾಳೆ ಖುದ್ದು ಮುಖ್ಯಮಂತ್ರಿಗಳನ್ನೇ ಭೇಟಿ ಮಾಡಿ ರಾಜೀನಾಮೆ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಇಂದು ಹೈಕಮಾಂಡ್ ಮೀಟಿಂಗ್

ಬೆಂಗಳೂರು: ರಾಜ್ಯದಲ್ಲಿ ಮುಡಾ ನಿವೇಶನ ಹಂಚಿಕೆ ಪ್ರಕರಣ, ಮುಖ್ಯಮಂತ್ರಿ ಬದಲಾವಣೆಯ ಸರಣಿ ಮಾತುಗಳಿಂದ ಅಸಮಾಧಾನಗೊಂಡಿರುವ ಪಕ್ಷದ ಹೈಕಮಾಂಡ್ ಪರವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬುಧವಾರ 'ಹೈ' ಮೀಟಿಂಗ್ ನಡೆಸಲಿದ್ದಾರೆ.

ಎರಡು ದಿನಗಳ ಕಾಲ ಸಂಸತ್ತಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸಭೆಯ ನಿಮಿತ್ತ ಬೆಂಗಳೂರಿಗೆ ಆಗಮಿಸಿರುವ ಕೆ.ಸಿ.ವೇಣುಗೋಪಾಲ್ ಅವರು ಬುಧವಾರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಭೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

- ಸಂಜೆ ವೇಣುಗೋಪಾಲ್ ಜತೆ ಸಭೆ ಸಾಧ್ಯತೆ
- ಸಿಎಂ ಬದಲಾವಣೆ, ಸರಕಾರದ ವಿರುದ್ಧ ಮಾತಾಡಿದವರಿಗೆ ಕ್ಲಾಸ್

ಈ ಹಿಂದೆ ಕೆ.ಸಿ.ವೇಣುಗೋಪಾಲ್ ಅವರು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಎಲ್ಲ ಸಚಿವರೊಂದಿಗೆ ಸಭೆ ನಡೆಸಲಿದ್ದಾರೆ ಎನ್ನಲಾಗಿತ್ತು. ಆದರೀಗ ಸಚಿವರ ಬದಲಿಗೆ ಸಿಎಂ, ಡಿಸಿಎಂ ಜತೆಗೆ ಮಾತ್ರ ಗೌಪ್ಯ ಸಭೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

→ 4

ಇಂದಿನಿಂದಲೇ 55 ಲಕ್ಷ ಜನರಿಗೆ ಕುಡಿಯುವ ನೀರಿನ ಸಂಪರ್ಕ | ಕಾವೇರಿ ನೀರಿನ ಬಗ್ಗೆ ಜಾಗೃತಿ

ರಾಜಧಾನಿ ಬಾಯಾರಿಕೆ ನೀಗಿಸಲು ಹೋರಾಟ

ಸಂದರ್ಶನ: ರಂಜಿತ್ ಎಚ್. ಅಶ್ವತ್ಥ

ರಾಜಧಾನಿ ಬೆಂಗಳೂರಿನ ದಶಕದ ಕನಸು ಈಡೇರುವ ಸನಿಹದಲ್ಲಿದ್ದೇವೆ. ನಮ್ಮ ಸರಕಾರವೇ ಆರಂಭಿಸಿದ್ದ ಕಾವೇರಿ ಐದನೇ ಹಂತಕ್ಕೆ ಇಂದು ಅಧಿಕೃತವಾಗಿ ನಮ್ಮ ಸರಕಾರವೇ ಚಾಲನೆ ನೀಡಲಿದೆ. ಇದರಿಂದ ಬೆಂಗಳೂರಿನ ನೀರಿನ ಬವಣೆ ನೀಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟಿ ದ್ದಾರೆ. ಕಾವೇರಿ ಐದನೇ ಹಂತದ ಯೋಜನೆಗೆ ಬುಧವಾರ ಚಾಲನೆ ಸಿಗಲಿದ್ದು, ಇದಕ್ಕೆ ಪೂರಕವಾಗಿ 'ವಿಶ್ವವಾಣಿ'ಯೊಂದಿಗೆ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಈ ವೇಳೆ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸವಾಲಿಗೆ ಯಾವ ರೀತಿ ಸರಕಾರದ ಸಿದ್ಧತೆ ನಡೆಸಿಕೊಂಡಿದೆ ಎಂದು ತಿಳಿಸಿದ್ದಾರೆ.

- **ಐದನೇ ಹಂತದ ಕಾವೇರಿಗೆ ತಯಾರಿ ಹೇಗಿದೆ?**
- ಕಳೆದ ಬಾರಿ ಬೆಂಗಳೂರಿನ ಜನರು ಬರದ ಬೇಗೆಯನ್ನು ಅನುಭವಿಸಿದ್ದಾರೆ. ಕಳೆದ ಹಲವು ವರ್ಷಗಳಿಂದ ಬೆಂಗಳೂರಿನ ಹಲವು ಭಾಗಗಳಿಗೆ ಕುಡಿಯುವ ನೀರು ಸಿಗದೇ ಹಲವು ಸಮಸ್ಯೆ ಎದುರಾಗಿದ್ದವು. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವಾಗಿ ಕಾವೇರಿ ಐದನೇ ಹಂತದ ಯೋಜನೆಯಿದೆ. ಬುಧವಾರ ಈ ಯೋಜನೆಗೆ ಅಧಿಕೃತವಾಗಿ ಚಾಲನೆ ಸಿಗಲಿದೆ. ಚಾಲನೆ ಸಿಕ್ಕ ಕ್ಷಣದಿಂದಲೇ ನೀರು ಬೆಂಗಳೂರಿನ ಏಳು ವಿಧಾನಸಭಾ ಕ್ಷೇತ್ರಗಳಿಗೆ ಪೂರೈಕೆಯಾಗಲಿದೆ.

- **ಈ ಬಾರಿ ಹೆಚ್ಚು ಮಳೆಯಿಂದ ಸಮಸ್ಯೆಯಾಗುತ್ತಿದೆಯಲ್ಲವೇ?**
- ಮಳೆ ವಿಷಯದಲ್ಲಿ ಯಾರೇನೇ ಹೇಳಿದರೂ, ನಾನಂತೂ ಮಳೆ ಬೀಳಲಿ ಎಂದೇ ಆಶಿಸುತ್ತೇನೆ. ರಾಜ್ಯಾದ್ಯಂತ ಭಾರಿ ಮಳೆಯಾಗುತ್ತಿದ್ದರೂ, ಕಾರ್ಯ ಕ್ರಮಕ್ಕೆ ಯಾವುದೇ ಸಮಸ್ಯೆಯಾಗದಂತೆ ಕ್ರಮವಹಿಸಲಾಗಿದೆ. ಕಳೆದ ವರ್ಷ ಮಳೆಯಿಲ್ಲದೇ ಆಗಿರುವ ಸಮಸ್ಯೆಗಳಿಗೆ ನಾವೆಲ್ಲ ಸಾಕ್ಷಿಯಾಗಿದ್ದೇವೆ. ಆದರೆ ಒಂದು ದಿನ ಮಳೆಯಾದರೂ, ರೈತನ ಬೆಳೆಗೆ ಒಂದು ವಾರ ಸಹಾಯವಾಗಲಿದೆ.

→ 4



ಕಾವೇರಿ ಐದನೇ ಹಂತದ ಮೂಲಕ ರಾಜಧಾನಿಯ ಸುಮಾರು 55 ಲಕ್ಷ ಜನರಿಗೆ ನೀರಿನ ಸೌಕರ್ಯ ಲಭಿಸಲಿದೆ. ಐದನೇ ಹಂತದಲ್ಲಿ ಯಾವುದೇ ಕಾರಣಕ್ಕೂ ನೀರು ಪೋಲಾಗದಂತೆ ಹಾಗೂ ಸೋರಿಕೆಯಾಗದಂತೆ ಎಚ್ಚರವಹಿಸಲಾಗಿದೆ. ಇದರೊಂದಿಗೆ ಭವಿಷ್ಯದ ದೃಷ್ಟಿಯಿಂದಲೂ ಹೆಚ್ಚುವರಿ ನೀರಿನ ಲಭ್ಯತೆಯನ್ನು ಒದಗಿಸಲಾಗಿದೆ.
– ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ

- ಕಾವೇರಿ ಆರನೇ ಹಂತಕ್ಕೂ ಈಗಾಗಲೇ ಸಿದ್ಧತೆ ಆರಂಭಿಸಲಾಗಿದೆ
- ಐದನೇ ಹಂತದಲ್ಲಿ ಯಾವುದೇ ಕಾರಣಕ್ಕೂ ಅಕ್ರಮ ಸಂಪರ್ಕಕ್ಕೆ ಅವಕಾಶವಿಲ್ಲ
- ಐದನೇ ಹಂತದಲ್ಲಿ ಸುಮಾರು 55 ಲಕ್ಷ ಜನರಿಗೆ ಕಾವೇರಿ ನೀರು
- ಬ್ರ್ಯಾಂಡ್ ಬೆಂಗಳೂರಿಗೆ ಬೂಸ್ಟರ್ ನೀಡಲು ನೀರಿನ ಅಗತ್ಯ
- ಕಾವೇರಿ ಐದನೇ ಹಂತದ ಬಗ್ಗೆ ಜಾಗೃತಿ ಮೂಡಿಸಲು ಕ್ಷೇತ್ರವಾರು ಜಾಗೃತಿ ಕಾರ್ಯಕ್ರಮ
- ಮುಂದಿನ ದಿನದಲ್ಲಿ ನೀರಿನ ಸೋರಿಕೆ ಹಾಗೂ ಕಳ್ಳತನ ತಡೆಗೆ ಇನ್ನಷ್ಟು ಕಠಿಣ ಕ್ರಮ
- ಬಾಕಿ ನೀರಿನ ಬಿಲ್ ಉಳಿಸಿಕೊಂಡವರಿಗೆ ಕ್ರಮವಹಿಸಲು ವಿಶೇಷ ಕ್ರಮವಹಿಸಲಾಗುವುದು.

ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್
ನೂತನ ಅಧ್ಯಕ್ಷರಾದ ಸೌಮ್ಯ ರೆಡ್ಡಿರವರ
ಪದಗ್ರಹಣ ಕಾರ್ಯಕ್ರಮ
ದಿನಾಂಕ : 17-10-2024 ಗುರುವಾರ
ಸಮಯ : ಮಧ್ಯಾಹ್ನ 03:30 ಕ್ಕೆ
ಮುಖ್ಯ ಅತಿಥಿಗಳು
ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕೆ.ಪಿ.ಸಿ.ಸಿ ಅಧ್ಯಕ್ಷರು
ಅಲ್ಕಾ ಲಾಂಬ
ರಾಷ್ಟ್ರೀಯ ಅಧ್ಯಕ್ಷರು, ಕಾಂಗ್ರೆಸ್ ಮಹಿಳಾ ಘಟಕ
ಎಲ್ಲಾ ಸಚಿವರಿಗೂ, ಶಾಸಕರಿಗೂ, ಮುಖಂಡರಿಗೂ, ಮಹಿಳಾ ಕಾಂಗ್ರೆಸ್ ಸೋದರಿಯರಿಗೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಗೆ ಆತ್ಮೀಯ ಸ್ವಾಗತ
ಸ್ಥಳ
ಭಾರತ್ ಜೋಡೋ ಸಭಾಂಗಣ
ಕೆ.ಪಿ.ಸಿ.ಸಿ. ಕಚೇರಿ ಹಿಂಭಾಗ ಕ್ವೀನ್ಸ್ ರಸ್ತೆ, ಬೆಂಗಳೂರು
ಪ್ರಕಟಣೆ: ಬೆಂಗಳೂರು ಮಹಿಳಾ ಕಾಂಗ್ರೆಸ್ ಘಟಕ

ಜಾಲತಾಣದ ಹಬ್ಬದ ಆಫರ್‌ಗೆ ಮರುಳಾಗಬೇಡಿ

ಸಾಮಾಜಿಕ ಜಾಲತಾಣದಲ್ಲಿ ವಂಚನೆ | ಮಹಿಳೆಯರು, ವಿದ್ಯಾರ್ಥಿಗಳೇ ಇದಕ್ಕೆ ಬಲಿ

ವಿನುತಾ ಹೆಗಡೆ

ಶಿರಸಿ: ಆಧುನಿಕತೆ ಮುಂದುವರಿದಂತೆ ಸಾಮಾಜಿಕ ಜಾಲತಾಣದಲ್ಲಿ ವಂಚನೆಗಳು ಸಲೀಸಾಗಿ ನಡೆಯುತ್ತಿವೆ. ಅದರಲ್ಲೂ ಹೆಚ್ಚಾಗಿ ಮಹಿಳೆಯರು ಸಾಮಾಜಿಕ ಜಾಲತಾಣದಲ್ಲಿ ಗೃಹುಪಯೋಗಿ ಸಾಮಾನಿನ ಆಸೆಗೆ ಬಿದ್ದು ಮೋಸ ಹೋಗುತ್ತಿರುವುದು ಸರ್ವೇಸಾಮಾನ್ಯ ಎಂಬಂತಾಗಿದೆ.

ಹಬ್ಬ ಬಂತೆಂದರೆ ಸಾಕು ಆಫರ್‌ಗಳ ಸುರಿಮಳೆಯೇ ಸಾಮಾಜಿಕ ಜಾಲತಾಣದಲ್ಲಿ ರಾರಾಜಿಸುತ್ತದೆ. ಆಕರ್ಷಕ ಉಡುಗೊರೆ, ಬಂಪರ್ ಆಫರ್ ಹೀಗೆ ಬರುವ ಜಾಹೀರಾತಿಗೆ ಮರುಳಾಗಿ ಆರ್ಡರ್ ಮಾಡಿದಿರಿ ಎಂದುಕೊಳ್ಳಿ ಅಲ್ಲಿ ಕ್ಯಾಶ್ ಆ್ಯಂಡ್ ಡೆಲಿವರಿ ಅವಕಾಶ ಇರುವುದೇ ಇಲ್ಲ. ಬದಲಾಗಿ ಆನ್ ಲೈನ್ ಪೇಮೆಂಟ್ ಇರುತ್ತದೆ. ಹಾಗೆಯೇ ಪೇ ಮಾಡಿದರೆ ನಿಮ್ಮ ಹಣ ಹೋಗುವುದು ಗ್ಯಾರಂಟಿ. ಹಣ ಕಟ್ ಆಗುತ್ತದೆ ಆದರೆ ನಂತರ ಪೇಮೆಂಟ್ ಫೇಲ್ ಎಂದು ವರ ಸ್ಟೋರ್‌ನಲ್ಲಿ ಮೆಸೇಜ್ ಬರುತ್ತದೆ. ಆದರೆ ನಮ್ಮ ಹಣ ಅಷ್ಟರಲ್ಲಾಗಲೇ ಕಳೆದುಕೊಂಡಾಗಿರುತ್ತದೆ.

ಇನ್ನು ಕೆಲವರು ಫ್ಲಿಪ್ ಕಾರ್ಟ್ ಅಂತ ಒಳ್ಳೆಯ ಆನ್ ಲೈನ್ ಆ್ಯಪ್ ಎಂದುಕೊಂಡು ಕರೀದಿ ಮಾಡಿದರೂ ಅಷ್ಟೇ. ಸಾಮಾಜಿಕ ಜಾಲತಾಣದ ಹೊರತಾಗಿ ಅದೇ ಆ್ಯಪ್ ಗೆ ಹೋಗಿ ನೋಡಿದರೆ ಅಲ್ಲಿ ಆ ಆಫರ್ ಇರುವುದಿಲ್ಲ.

ಗ್ರಾಹಕರನ್ನು ವಂಚಿಸುವುದಕ್ಕಾಗಿಯೇ ಉತ್ತಮ ಆ್ಯಪ್ ಗಳ ಬಳಕೆ ಮಾಡಲಾಗುತ್ತಿದೆ. ಸಮಾಜಿಕ ಜಾಲತಾಣದಲ್ಲಿ ಅರ್ಧ ಘಂಟೆಯೋ ಅಥವಾ 15 ನಿಮಿಷವೋ ಕಾಲಾವಕಾಶದಲ್ಲಿ ಪಡೆದುಕೊಳ್ಳಿ ಎಂದು ದೊಡ್ಡದಾಗಿ ಹೇಳಲಾಗುತ್ತದೆ. ಅಯ್ಯೋ ಇದು ಬೇಗ ಮುಗಿದು ಹೋಗುತ್ತದೆ ಎನ್ನುವ ಅವಸರದಲ್ಲಿ ಎಲ್ಲರೂ ಅದನ್ನು ಆರ್ಡರ್ ಹಾಕುತ್ತಾರೆ. ನಂತರ ಮೋಸಕ್ಕೆ ಒಳಗಾಗಿದ್ದು ಅರ್ಥವಾದರೆ ಏನೂ ಪ್ರಯೋಜನವಿಲ್ಲ. ಇದು ಹಬ್ಬದಲ್ಲಿ ಕಳೆದುಕೊಳ್ಳುವ ಆಫರ್ ಎಂದು ನಂತರ ಅರ್ಥವಾಗುತ್ತದೆ. ಅದೂ ಅಲ್ಲದೇ ಒಂದು ನೂರು ರುಪಾಯಿ, ಎರಡು ನೂರು ರುಪಾಯಿ ಹೀಗೇ ಸಾವಿರಾರು ರುಪಾಯಿಯ ವಸ್ತುವನ್ನು ನೂರಾರು ರೂಪಾಯಿಗೆ ನೀಡಲಾಗುವುದೆಂದು ತಿಳಿಸಲಾಗುತ್ತದೆ. ಕಡಿಮೆಗೆ ಇದೆಯಲ್ಲ. ಇದು ಹಬ್ಬದ ಆಫರ್ ಆಗಿರುವುದಕ್ಕೆ ಇಷ್ಟು ಕಡಿಮೆಗೆ ಇದೆ ಎಂದು ನಂಬಿದರೆ ಹಣ ಗೋವಿಂದ. ಒಳ್ಳೆಯ ನಂಬಿಕೆಯ ಆ್ಯಪ್ ಇದು ನಮಗೆ ಸಿಗುತ್ತಿದೆ ಎಂದು ಎಲ್ಲರೂ ನಿಜವೆಂದು ನಂಬುತ್ತಾರೆ. ಆದರೆ ಹಣ ಕಳೆದುಕೊಂಡ ಮೇಲೆ ಅದು ನಿಜವಾಗಿರುವುದಲ್ಲ ಎನ್ನುವುದು ತಿಳಿಯುತ್ತದೆ.

ಅಲ್ಲದೇ ವಿದ್ಯಾರ್ಥಿಗಳೂ ಸಹ ಇದು ಆಫರ್ ಎಂದು ಆಸೆಗೆ ಬೀಳುತ್ತಾರೆ ಹಣ ಕಳೆದುಕೊಂಡ ಅನೇಕರು ಹೇಳುವುದೇ ಇಲ್ಲ ಎನ್ನುವುದು ಹಲವರ ಮಾತು. ಜನರು ನಂಬುವಂಥ ಒಳ್ಳೆಯ ಆ್ಯಪ್‌ನ ಹೆಸರನ್ನೇ ಬಳಸಿ ಫೇಸ್‌ಬುಕ್ ನಲ್ಲಿ ಆಫರ್ ನೀಡುತ್ತಾರೆ. ಅದು ನಂಬಿಕೆಗೆ ಅರ್ಹ ಆ್ಯಪ್ ಆದ್ದರಿಂದ ಜನ ಬೇಗನೆ ನಂಬುತ್ತಾರೆ. ಇಲ್ಲಿ ಅಧಿಕೃತವಾದ ಆ್ಯಪ್‌ಗೆ ಹೋಗಿ ಚೆಕ್ ಮಾಡುವಷ್ಟು ಸಮಯವನ್ನೂ ಆಫರ್ ಸಮಯದಲ್ಲಿ ನೀಡಲಾಗುತ್ತಿಲ್ಲ. ಕೆಲವೇ ಸಮಯದ ಕಾಲಾವಕಾಶ ನೀಡಿರುವುದರಿಂದ ನಿಜವೆಂದು ಆರ್ಡರ್ ಹಾಕುತ್ತಾರೆ. ಹಣ ನೀಡಿದಾಗ ಅಲ್ಲಿ ಪೇಮೆಂಟ್ ಅದೇ ಆ್ಯಪ್‌ಗೆ ಹೋಗಿರುವುದಿಲ್ಲ. ಬದಲಾಗಿ ಕಿಚನ್ ಸ್ಟೋರ್ ಎಂಬಲ್ಲಿಗೆ ಹೋಗಿರುವುದಾಗಿ ತಿಳಿಸುತ್ತದೆ.

ಆದರೆ ವಸ್ತುವೂ ಇಲ್ಲ ಹಣವೂ ಇಲ್ಲ ಎನ್ನುವ ಸ್ಥಿತಿ ಗ್ರಾಹಕರದ್ದಾಗಲಿದೆ. ಪೊಲೀಸರು ಇಂಥ ವಂಚನೆ ಕುರಿತು ಸಾಕಷ್ಟು ಜಾಗೃತಿ ಮೂಡಿಸುತ್ತಿದ್ದಾರೆ. ಆದರೂ ಹಲವರು ಆಸೆಗೆ ಬೀಳುತ್ತಾರೆ. ಯಾರಿಗೇ ಆಸೆ ಇದ್ದರೂ ನಿಜವಾದ ಆ್ಯಪ್‌ಗೆ ಒಮ್ಮೆ ಭೇಟಿ ನೀಡಿ ಪರೀಕ್ಷಿಸಿಕೊಳ್ಳಿ. ಆಸೆಗೆ ಬಿದ್ದು ಮೋಸ ಹೋಗಬೇಡಿ.

ಗೃಹ ಉಪಯೋಗಿ ವಸ್ತು ಖರೀದಿಸಲು ಫೇಸ್‌ಬುಕ್‌ನಲ್ಲಿ ವಂಚನೆಗೆ ಫ್ಲಿಪ್‌ಕಾರ್ಟ್ ಹೆಸರು ಬಳಕೆ ಮಾಡಿರುವುದು.

ಜನ ಆಸೆಬಿದ್ದು ಈ ರೀತಿ ಮಾಡ್ತಿದಾರೆ. ನಾವು ಈಗಾಗಲೇ ನಮ್ಮ ಇಲಾಖೆಯಿಂದ ಸೈಬರ್ ಕ್ರೈಮ್ ಕುರಿತಂತೆ ಶಾಲೆ ಕಾಲೇಜಿ ನಲ್ಲೂ ಸಾಮಾಜಿಕ ಜಾಲತಾಣದಲ್ಲಿ ಜಾಗೃತಿ ಮೂಡಿಸ್ತಿದ್ದೇವೆ. ಶೇರ್ ಮಾರ್ಕೆಟ್, ಗಿಫ್ಟ್ ಹೀಗೆ, ಆಫರ್ ಹೀಗೇ ಹತ್ತಾರು ರೀತಿಯಲ್ಲಿ ಜನರನ್ನು ವಂಚಿಸೋಕಾರ್ಯ ಆಗ್ತಿದೆ. ಆದರೆ ಜನರೇ ಜಾಗೃತರಾಗಬೇಕು. ಏನೇ ಪರ್ಚೆಸ್ ಮಾಡಬೇಕು ಅಂದರೂ ಅಧಿಕೃತವಾಗಿರೋ ಆಯಾ ಆಯಪ್ ಗಳಿಗೆ ಹೋಗಬೇಕು. ಆಫರ್ ಆಸೆಗೆ ಬೀಳಬಾರದು.

–ಗಣೇಶ, ಡಿಎಸ್‌ಪಿ, ಶಿರಸಿ

ಮೋಸ ಹೋಗಬೇಡಿ

ಯಾವುದೇ ಹಬ್ಬ ಇರಲಿ ಯಾವುದೇ ಆಫರ್ ಇರಲಿ ಸಾಮಾಜಿಕ ಜಾಲತಾಣ ಎನ್ನುವುದು ನಂಬಿಕೆಗೆ ಅರ್ಹ ಅಲ್ಲ ಎನ್ನುವುದು ನೆನಪಿರಲಿ. ಸಾಮಾಜಿಕ ಜಾಲತಾಣದಲ್ಲಿ ಬಂದಿರುವ ಆಫರ್ ಕುರಿತು ಅಧಿಕೃತವಾಗಿ ಇರುವ ವೆಬ್ ಸೈಟ್ ನಲ್ಲಿಯೇ ಅದನ್ನು ಚೆಕ್ ಮಾಡಿಕೊಳ್ಳಿ. ಅಥವಾ ಅಧಿಕೃತವಾದ ಅಂಗಡಿಗೆ ಹೋಗಿ ಅದನ್ನು ಪರಿಶೀಲಿಸಿಕೊಳ್ಳಿ. ಕೈನಲ್ಲಿ ಫೋನ್ ಇದೆ. ಎಲ್ಲೋ ಆಫರ್ ಇದೆ. ದುಡ್ಡು ನಿಮ್ಮದೇ ಹೋಗುವ ಸಂಭವವೂ ಇದೆ. ಇಂಥ ಆಫರ್ ಕುರಿತು ಎಚ್ಚರ ವಹಿಸಿ. ಆಕರ್ಷಕ ಜಾಹೀರಾತಿಗೆ ಮರುಳಾಗಿ ಮೋಸಹೋಗಬೇಡಿ.



ಖಾಸಗಿ ಕಂಪನಿಗಳು ಗುಣಮಟ್ಟದ ಕೆಲಸಮಾಡಿ

ಯಲ್ಲಾಪುರ: ಪ್ರಯತ್ನ ಮಾಡದೆ ಜೀವನದ ಯಾವುದೇ ಘಟ್ಟದಲ್ಲಿ ಸಾಧನೆಯನ್ನು ಕಾಣಲು ಸಾಧ್ಯವಿಲ್ಲ. ಖಾಸಗಿ ಕಂಪನಿಗಳು ನೀವು ಮಾಡುವ ಕೆಲಸದ ಗುಣಮಟ್ಟ ಹಾಗೂ ಬದ್ಧತೆಯನ್ನು ಗಮನಿಸಿ ನಮ್ಮ ಏಳ್ಗೆಗೆ ಪ್ರೋತ್ಸಾಹ ನೀಡುತ್ತದೆ ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು.

ಅವರು, ಮಂಗಳವಾರ ಪಟ್ಟಣದ ಕ್ರಿಯೇಟಿವ್ ಕಂಪ್ಯೂಟರ್ ಶಿಕ್ಷಣ ಸಂಸ್ಥೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇದರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಮಾತನಾಡಿ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಿಗಳ ಕೌಶಲ್ಯ, ಜ್ಞಾನ ಹಾಗೂ ಕರ್ತವ್ಯ ನಿಷ್ಠೆಗೆ ಬೆಲೆ ನೀಡಲಾಗುತ್ತದೆ. ಹೀಗಾಗಿ ಭಾಗವಹಿಸಿದ ಎಲ್ಲರಿಗೂ ಉದ್ಯೋಗ ದೊರಯದೇ ಇರಬಹುದು. ಆದರೆ ಅವರ ಮುಂದಿನ ಭವಿಷ್ಯಕ್ಕೆ ಇದು ಮುನ್ನುಡಿಯಾಗಲಿ. ನಾವು ಕೆಲಸ ಮಾಡುವ ಯಾವುದೇ ಕಂಪನಿಗೆ ದ್ರೋಹ ಬಗೆಯಬಾರದು. ಇಂದಿನ ಉದ್ಯೋಗ ಮೇಳ ಇನ್ನಷ್ಟು ಜನರಿಗೆ ಉದ್ಯೋಗದ ಆಕಾಂಕ್ಷೆಯನ್ನು ನೀಡಲಿ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ. ಆರ್.ಡಿ. ಜನಾರ್ಧನ್ ಮಾತನಾಡಿದರು. ಬಾಷ್ ಕಂಪನಿಯ ಪ್ಲೇಸ್‌ಮೆಂಟ್ ಹೆಡ್ ಕಲೀಮ್ ಎಸ್ ಮಾತನಾಡಿ, ಇದು ಯಲ್ಲಾಪುರದಲ್ಲಿ ಉದ್ಯೋಗ ಅವಕಾಶ ಒದಗಿಸುವ ಮೊದಲ ಹೆಜ್ಜೆಯಾಗಿದೆ. ಈ ಅವಕಾಶವನ್ನು ಎಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು. ಇಲ್ಲಿನ ವಿದ್ಯಾರ್ಥಿಗಳಲ್ಲಿ ಪ್ರತಿಭೆ ಇದೆ ಎಂಬ ಕಾರಣಕ್ಕೆ ನಾವೆಲ್ಲ ದೂರದ ಊರಿಂದ ಬಂದಿದ್ದೇವೆ. ಯಾವುದೇ ಆಕಾಂಕ್ಷಿಗಳು ಬರಿಗೈ ಅಲ್ಲಿ ಹೋಗುವಂತಾಗಬಾರದು ಎಂಬುದು ನಮ್ಮ ಅಪೇಕ್ಷೆ. ಕೊನೆಯ ಪಕ್ಷ ಆಯ್ಕೆ ಆಗದಿದ್ದಲ್ಲಿ ಅವರಿಗೆ ಸಮರ್ಪಕವಾದ ಫೀಡ್ ಬ್ಯಾಕ್ ನೀಡುವ ಕಾರ್ಯವನ್ನು ಎಚ್‌ಆರ್‌ಗಳು ಮಾಡಿ ಎಂದರು

ಕ್ರಿಯೇಟಿವ್ ಕಂಪ್ಯೂಟರ್ ಇನ್ಸ್ಟಿಟ್ಯೂಟ್ ಮುಖ್ಯಸ್ಥ ಶ್ರೀನಿವಾಸ್ ಮುರ್ಡೇಶ್ವರ ಅಧ್ಯಕ್ಷತೆವಹಿಸಿದ್ದರು. ವೇದಿಕೆಯಲ್ಲಿ ಬಾಷ್ ಸಿಎಸ್‌ಆರ್ ಮೇಲ್ವಿಚಾರಕ ಸುಧೀರ್ ಪಿಡಿ, ಗ್ರೀನ್‌ಕೇರ್ ಸಂಸ್ಥೆಯ ನಿರ್ದೇಶಕಿ ಆಶಾ ಡಿಸೋಜ, ಪ್ರಮುಖರಾದ ವಿಜಯ ಮಿರಾಶಿ, ಎನ್.ಕೆ. ಭಟ್, ಕಾಲೇಜಿನ ಪ್ರಾಧ್ಯಾಪಕರು ಇದ್ದರು.

ವೇದಾ ಪ್ರಾರ್ಥಿಸಿದಳು. ಪ್ರಾಧ್ಯಾಪಕ ಶರತ್‌ಕುಮಾರ ಸ್ವಾಗತಿಸಿದರು. ಮೇಘಾ ದೇವಾಡಿಗ ವಂದಿಸಿದಳು.

ಉದ್ಯೋಗ ಮೇಳದಲ್ಲಿ 27 ಕಂಪನಿಗಳು ಪಾಲ್ಗೊಂಡಿದ್ದವು. ಭಾಗವಹಿಸಿದ 846 ಉದ್ಯೋಗ ಆಕಾಂಕ್ಷಿಗಳ ಪೈಕಿ 297 ಜನರಿಗೆ ಸ್ಥಳದಲ್ಲಿಯೇ ನೇಮಕಾತಿ ಪತ್ರ ನೀಡಲಾಯಿತು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ಆಯೋಜಿಸಲಾಗಿದ್ದ ಉದ್ಯೋಗ ಮೇಳವನ್ನು ಶಾಸಕ ಶಿವರಾಮ ಹೆಬ್ಬಾರ ಉದ್ಘಾಟಿಸಿದರು.

ಕಾಂಗ್ರೆಸ್ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ

ಮುಂಡಗೋಡ: ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯ ನೀಡುವ ಜೊತೆಗೆ ಪ್ರತಿಯೊಂದು ಜಾತಿ ಧರ್ಮ, ಬಡವ, ಕೂಲಿ ಕಾರ್ಮಿಕರನ್ನು ಸಮಾನವಾಗಿ ನೋಡುತ್ತದೆ ಎಂದು ರಾಜ್ಯ ಸರ್ಕಾರದ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ ದೇಶಪಾಂಡೆ ಹೇಳಿದರು.

ಮಂಗಳವಾರ ಪಟ್ಟಣದ ಗಣಪತಿ ದೇವಾಲಯ ಜಿ.ಎಸ್.ಬಿ ಸಭಾಂಗಣದಲ್ಲಿ ನೂತನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ ಅವರ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ತನ್ನಷ್ಟಕ್ಕೆ ತಾನು ಬಡವರ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿ ಕಳೆದ 10 ವರ್ಷದಿಂದ ಬೆಲೆ ಏರಿಕೆ, ನಿರುದ್ಯೋಗ ಮತ್ತು ಬಡತನವನ್ನು ಮತ್ತಷ್ಟು ಉತ್ತುಂಗಕ್ಕೇರಿಸಿದ್ದು, ದೇಶದ ಜನತೆ ತತ್ತರಿಸುವಂತೆ ಮಾಡಿದೆ. ಬಿಜೆಪಿಯಲ್ಲಿ ಸಾಮಾಜಿಕ ನ್ಯಾಯವೇ ಇಲ್ಲ ಎಂದು ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಸಮುದ್ರವಿದ್ದಂತೆ ಕೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪಡೆ ದೊಡ್ಡದಿದೆ ಇಲ್ಲಿ ಬಿನ್ನಾಭಿಪ್ರಾಯ ಕ್ಕೆ ಅವಕಾಶ ನೀಡದೆ ಈಗಿನಿಂದಲೇ ಕಾರ್ಯ ಕರ್ತರನ್ನು ಒಗ್ಗೂಡಿಸುವ ಕೆಲಸ ಮಾಡಿ ಎಂದ ಅವರು, ಕಾಂಗ್ರೆಸ್ ಪಕ್ಷ ಯಾರೊಬ್ಬರ ಮನೆ ಪಕ್ಷವಲ್ಲ ಇದು ಕಾರ್ಯ ಕರ್ತರ ಪಕ್ಷ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಮುಂದುವರೆದು ಪಕ್ಷ ಸಂಘಟನೆ ಮಾಡುವಂತೆ ನೂತನ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ ಅವರಿಗೆ ಸಲಹೆ ನೀಡಿದರು.

ನೂತನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ ಅಧಿಕಾರ ಸ್ವೀಕರಿಸಿ ಮಾತನಾಡಿ, ಸಾಮಾಜದಲ್ಲಿ ಒಳ್ಳೆಯ ಕೆಲಸ ಮಾಡಿದರೆ ಮಾತ್ರ ಸಮಾಜ ನಮ್ಮನ್ನು ಗೌರವಿಸುತ್ತದೆ. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟಿಸುವ ಕಲಸ ಮಾಡುವುದಾಗಿ ಹೇಳಿದರು. ಮಾಜಿ ಶಾಸಕ ವಿ.ಎಸ್ ಪಾಟೀಲ ಮಾತನಾಡಿ, ಕೆ.ಪಿ.ಸಿ.ಸಿ ಸದಸ್ಯ ವಿವೇಕ ಹೆಬ್ಬಾರ ಮಾತನಾಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಾಯಿ ಗಾಂವಕರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಮ್.ಎನ್ ದುಂಡಸಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸುಜಾತಾ ಗಾಂವಕರ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ರಾಜಶೇಖರ ಹಿರೇಮಠ, ನಾಗರಾಜ ನಾರ್ವೇಕರ, ಎಚ್.ಎಮ್ ನಾಯ್ಕ, ಶಾರದಾ ರಾಥೋಡ, ಜಮೀರಅಹ್ಮದ ಧರ್ಗಾವಾಲೆ, ಬಸವರಾಜ ಸಂಗಮೇಶ್ವರ, ರಾಮಕೃಷ್ಣ ಮೂಲಿಮನಿ, ರಫೀಕ್ ಇನಾಮದಾರ, ಮುನಾಫ್ ಮಿರ್ಜಾನಕರ, ಮಂಜುನಾಥ ಕಟಗಿ ಮುಂತಾದವರು ಉಪಸ್ಥಿತರಿದ್ದರು. ಧರ್ಮರಾಜ ನಡಗೇರ ನಿರೂಪಿಸಿದರು.

ವಿಶ್ವಸಂಸ್ಥೆ ಸಮ್ಮೇಳನಕ್ಕೆ ದಾಮೋದರ ನೇತೃತ್ವದ ತಂಡ

ಭಟ್ಕಳ : ಅಮೆರಿಕದ ಕೊಲಂಬಿಯಾದಲ್ಲಿ ಅ.21ರಿಂದ ನವೆಂಬರ 1ರ ವರೆಗೆ ನಡೆಯುವ ವಿಶ್ವಸಂಸ್ಥೆಯ 16ನೇ ಜೀವ ವೈವಿಧ್ಯತೆ ಮಹಾ ಸಮ್ಮೇಳನದಲ್ಲಿ ಭಾರತೀಯ ಅರಣ್ಯ ಸೇವೆಯ ಹಿರಿಯ ಅಧಿಕಾರಿ ಕನ್ನಡಿಗ ಎ.ಟಿ.ದಾಮೋದರ ನೇತೃತ್ವದ 13 ಸದಸ್ಯರ ತಂಡ ಪಾಲ್ಗೊಳ್ಳಲಿದೆ.

ಅರುಣಾಚಲ ಪ್ರದೇಶ ರಾಜ್ಯದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆಲಸ ಮಾಡುವುದರ ಜೊತೆಗೆ ಅಲ್ಲಿಯ ಜೀವಗೋಳ ಮೀಸಲು ಸಂಕೀರ್ಣಗಳ ನಿರ್ದೇಶಕ ಹಾಗೂ ರಾಷ್ಟ್ರೀಯ ಹುಲಿ ಸಂಯೋಜನೆ ಮುಖ್ಯಸ್ಥರ ಜವಾಬ್ದಾರಿಯನ್ನು ಎ.ಟಿ.ದಾಮೋದರ ಹೊಂದಿದ್ದಾರೆ. ಅವರು ಭಾರತದ ರಾಜತಾಂತ್ರಿಕ ರಾಯಭಾರ ಪ್ರತಿನಿಧಿಯಾಗಿ ಜೀವ ವೈವಿಧ್ಯತೆಯ ಮಹಾ ಸಮ್ಮೇಳನದಲ್ಲಿ ಮಾತನಾಡಲಿದ್ದಾರೆ. ಭಾರತದ ಜೀವ ವೈವಿಧ್ಯತೆಯ ಸಂರಕ್ಷಣೆಯ ಯಶೋಗಾಥೆ ಹಾಗೂ ಸವಾಲುಗಳ ಬಗೆಗಿನ ಸಮಾಲೋಚನಾ ಸಭೆಯಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ.

ಕಳೆದ ವರ್ಷ ಯುನೆಸ್ಕೋದ ಜೀವಗೋಳ ಮೀಸಲು ಸಂಕೀರ್ಣಗಳ ವಿಶ್ವ ವಾರ್ಷಿಕ ಮಹಾ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಅವರು ಪಾಲ್ಗೊಂಡಿದ್ದರು. ಲಕ್ಷದೀಪದ ಹವಳದ ದಂಡೆಗಳ ಅಲಂಕಾರಿಕ ಮೀನುಗಳು ಹಾಗೂ ಸಿಗಡಿಗಳ ಸಂರಕ್ಷಣೆ ಬಗ್ಗೆ ಅಧ್ಯಯನ ನಡೆಸಿದ ಪ್ರಬಂದಕ್ಕೆ ಗೌರವ ಪಿಎಚ್.ಡಿ ಪದವಿ ಲಭಿಸಿದೆ. ಭಟ್ಕಳದಲ್ಲಿ ವಿದ್ಯಾಭ್ಯಾಸ ಪೂರೈಸಿರುವ ಎ.ಟಿ.ದಾಮೋದರ ಅವರು ಮೂಲತಃ ಸಾಗರ ತಾಲೂಕಿನ ನಾಗವಳ್ಳಿ ನಿವಾಸಿಯಾಗಿದ್ದಾರೆ. ಭಟ್ಕಳದ ಮಾಜಿ ಶಾಸಕ ಜೆ.ಡಿ.ನಾಯ್ಕ ಅವರ ಅಳಿಯ ಆಗಿದ್ದಾರೆ.

ಬಸ್ ನಿಲ್ದಾಣಕ್ಕೆ ಡಾ. ಅಂಬೇಡ್ಕರ್ ಹೆಸರಿಡಿ

ಶಿರಸಿ: ಶಿರಸಿಯಲ್ಲಿ ನೂತನವಾಗಿ ನಿರ್ಮಾಣ ವಾಗುತ್ತಿರುವ ಬಸ್ ನಿಲ್ದಾಣಕ್ಕೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಇಡಬೇಕು ಎಂದು ಭೀಮ ಘರ್ಜನೆ ಸಂಘಟನೆಯ ಜಿಲ್ಲಾಧ್ಯಕ್ಷ ಅರ್ಜುನ್ ಮಿಂಟಿ ಆಗ್ರಹಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಅಂಬೇಡ್ಕರ್ ಅವರ ಹೆಸರು ಇಡಲು ಶಾಸಕರು, ಸಂಸದರ ಬಳಿ ವಿನಂತಿ ಮಾಡುತ್ತೇವೆ. ಅವರೂ ಸಹ ಮಹಾನ್ ವ್ಯಕ್ತಿಯ ಹೆಸರು ಇಡಲು ಮುಂದಾಗಬೇಕು ಎಂದರು. ಈ ಹಿಂದೆ ಐದು ರಸ್ತೆಯ ಹೆಸರು ಬದಲಿಸಲು ಆಗ್ರಹ ಮಾಡಲಾಗಿತ್ತು. ಆಗ ಐದು ರಸ್ತೆಯಲ್ಲಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡಿ, ಅಂಬೇಡ್ಕರ್ ಸರ್ಕಲ್ ಎಂದು ನಾಮಕರಣ ಮಾಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ಅದು ಹುಸಿಯಾಗಿದೆ. ಕಾರಣ ಶೀಘ್ರವಾಗಿ ಅಲ್ಲಿ ಉಪವಾಸ ಸತ್ಯಾಗ್ರಹ ಮಾಡುವುದಾಗಿ ತಿರ್ಮಾನ ಮಾಡಲಾಗಿದೆ ಎಂದರು.

ಈ ವೇಳೆ ಸಂಘಟನೆಯ ಶ್ಯಾಮ್ ದೇಶಭಾಗ, ಪುನೀತ್ ಮರಾಠೆ, ಕುಮಾರ್ ಹುಬ್ಬಳ್ಳಿ, ನಾಗೇಶ ಮುನಿಯಾಳ್, ಅಕ್ಷಯ ಧೋತ್ರೆ, ಹರ್ಷಾ ಇದ್ದರು.

ಸಮಾಚಾರ ಸಣ್ಣದಲ್ಲ

ಸ್ವಾವಲಂಬಿ ಉತ್ತೇಜನಕ್ಕೆ ಹೊಲಿಗೆ ತರಬೇತಿ ಶಿಬಿರ

ಕಾರವಾರ: ಪರಿಶಿಷ್ಟ ಜಾತಿ ಉಪಯೋಜನೆಯಡಿಯಲ್ಲಿ ಯುವಜನರನ್ನು ಸ್ವಾವಲಂಬಿಯಾಗಲು ಉತ್ತೇಜಿಸುವ ದೃಷ್ಟಿಯಿಂದ ಹೋಲಿಗೆ ತರಬೇತಿ ಹಾಗೂ ವಿಡಿಯೋಗ್ರಫಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಆಸಕ್ತ ಪರಿಶಿಷ್ಟ ಜಾತಿ ಯುವಕ/ಯುವತಿಯರು ಅ.30 ರೊಳಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾರವಾರ ಕಚೇರಿಗೆ ಅರ್ಜಿಯನ್ನು ಸಲ್ಲಿಸಬಹುದು.

ಹೊಲಿಗೆ ತರಬೇತಿ ಶಿಬಿರವು ನ. 7 ರಿಂದ ನವಂಬರ್ 26 ರವರೆಗೆ ಹಾಗೂ ವಿಡಿಯೋಗ್ರಫಿ ತರಬೇತಿ ಶಿಬಿರವು ನವಂಬರ್ 15 ರಿಂದ ನವಂಬರ್ 26 ವರೆಗೆ ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಲಿದೆ. ಎಲ್ಲಾ ಶಿಬಿರಕ್ಕೆ ಕನಿಷ್ಠ ವಯೋಮಿತಿ 18 ರಿಂದ 40 ವರ್ಷದೊಳಗಿರಬೇಕು, ಹೊಲಿಗೆ ತರಬೇತಿ ಶಿಬಿರಕ್ಕೆ ಎಸ್.ಎಸ್,ಎಲ್.ಸಿ ಪಾಸ್ ಅಥವಾ ಫೇಲ್ ಮತ್ತು ವಿಡಿಯೋಗ್ರಾಫಿ ತರಬೇತಿ ಶಿಬಿರಕ್ಕೆ ದ್ವಿತೀಯ ಪಿಯುಸಿ ಪಾಸ್ ಅಥವಾ ಫೇಲ್ ಆದವರು ಅರ್ಜಿ ಸಲ್ಲಿಸಬಹುದು. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳು ದೂರವಾಣಿ/ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು. ಶಿಬಿರದಲ್ಲಿ ಹಾಜರಾಗುವ ಯುವಕ/ಯುವತಿಯರಿಗೆ ಊಟೋಪಹಾರ, ಪ್ರಮಾಣ ಪತ್ರ ಹಾಗೂ ಹೊರ ಜಿಲ್ಲೆಗಳಿಂದ ಭಾಗವಹಿಸುವ ಯುವತಿಯರಿಗೆ ಸಾಮಾನ್ಯ ವಸತಿ ವ್ಯವಸ್ಥೆಯನ್ನು ನೀಡಲಾಗುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ:08382-201824 ಹಾಗೂ ಮೊಬೈಲ್ ಸಂಖ್ಯೆ: 9480886551 ಕ್ಕೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

ಕಾರವಾರ: ಹೊನ್ನಾವರ ಉಪ-ವಿಭಾಗದ ಶಾಖೆಯ ಬಂದರು ರಸ್ತೆ ಹಾಗೂ ಎಲ್.ಐ.ಸಿ ಫೀಡರನ 11ಕೆ.ವಿ ಮಾರ್ಗದ ನಿರ್ವಹಣೆಯ ನಿಮಿತ್ತ ಈ ಫೀಡರುಗಳ ವ್ಯಾಪ್ತಿಯಲ್ಲಿ ಅ.16 ರಂದು ಬೆಳಗ್ಗೆ 10 ಗಂಟೆಯಿದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸುವಂತೆ ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. **ಕಾರವಾರದಲ್ಲಿ ವ್ಯತ್ಯಯ:** ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ತುರ್ತು ಲೈನ್ ನಿರ್ವಹಣೆ ಕೆಲಸ ಇಟ್ಟು ಕೊಂಡಿರುವುದರಿಂದ ಅ.16 ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕೋಡಿಭಾಗ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಗ್ರಾಹಕರು ಸಹಕರಿಸುವಂತೆ ಕಾರ್ಯ ಮತ್ತು ಪಾಲನಾ ಉಪವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನೀಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಯಕ್ಕೆ ಬಾರದ ತಹಸೀಲ್ದಾರ್‌ಗೆ ತರಾಟೆ

ಮುಂಡಗೋಡ: ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್ ವಿ ದೇಶಪಾಂಡೆ ಮುಂಡಗೋಡ ತಹಸೀಲ್ದಾರ ಶಂಕರ್ ಗೌಡಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಪ್ರಸಂಗ ಮಂಗಳವಾರ ನಡೆಯಿತು. ಮಂಗಳವಾರ ಮುಂಡಗೋಡ ತಾಲೂಕಿನ ಪ್ರವಾಸಿ ಮಂದಿರದಲ್ಲಿ ಜನರ ಅಹವಾಲುಗಳನ್ನು ಸ್ವೀಕರಿಸಲು ಮುಂದಾಗಿದ್ದರು, ಜನಸಾಮಾನ್ಯರು ತಮ್ಮ ಅಳಲನ್ನು ದೇಶಪಾಂಡೆಯವರ ಬಳಿ ತೋಡಿಕೊಳ್ಳಲು ಆಗಿಮಿಸಿದ್ದರು, ಈ ಸಂದರ್ಭದಲ್ಲಿ ತಹಸೀಲ್ದಾರ ಶಂಕರ್ ಗೌಡಿ ಅಗಮಿಸಿರಲಿಲ್ಲ. ಇದರಿಂದ ಕುಪಿತಗೊಂಡ ದೇಶಪಾಂಡೆಯವರು ತಹಸೀಲ್ದಾರ್‌ಗೆ ದೂರವಾಣಿ ಕರೆ ಮಾಡಿ ನಾನೇನು ದನ ಕಾಯಲು ಇಲ್ಲಿಗೆ ಬಂದಿದ್ದೇನಾ? ಜನರ ಸಮಸ್ಯೆಯನ್ನು ಬಗೆಹರಿಸುವುದು ಬಿಟ್ಟು ಎಲ್ಲಿದ್ದೀಯಪ್ಪ ನೀನು? ನಿನ್ನ ಮೇಲೆ ಕಂದಾಯ ಸಚಿವರಿಗೆ ದೂರು ನೀಡುತ್ತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ವಿ.ಎಸ್. ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

ನರೇಗಾ ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ ಅಭಿಯಾನ: ಆಗೇರ್

ಕಾರವಾರ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದ ಲಕ್ಷಾಂತರ ಕುಟುಂಬಗಳ ಜೀವನೋಪಾಯಕ್ಕೆ ದಾರಿಯಾಗಿದೆ. ಮಹಿಳೆಯರ ಸಬಲೀಕರಣಕ್ಕೂ ಯೋಜನೆ ಒತ್ತು ನೀಡಿದೆ ಎಂದು ತಾಲೂಕು ಪಂಚಾಯತಿಯ ಸಹಾಯಕ ನಿರ್ದೇಶಕ ಮಂಜುನಾಥ ಬಿ. ಆಗೇರ್ ಹೇಳಿದರು.

ಯಲ್ಲಾಪುರ ತಾಲೂಕಿನ ಇಡಗುಂದಿ ಗ್ರಾಮ ಪಂಚಾಯತ್ ಮತ್ತು ಕುಂದರಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಂಗಳವಾರ, 2025-26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸುವ ನಿಟ್ಟಿನಲ್ಲಿ ಯೋಜನೆಯ ಬಗ್ಗೆ ವ್ಯಾಪಕ ಜನಜಾಗೃತಿ ಮತ್ತು ಕಾಮಗಾರಿ ಬೇಡಿಕೆ ಸಂಗ್ರಹಿಸುವ ಸಲುವಾಗಿ ಆರಂಭಿಸಲಾದ ಉದ್ಯೋಗ ಖಾತರಿ ನಡಿಗೆ ಸಬಲತೆಯಡೆಗೆ ಅಭಿಯಾನದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಂದಿನ ಆರ್ಥಿಕ ಮುಂದಿನ ಆಯವ್ಯಯ ತಯಾರಿಸಲು ಅಭಿಯಾನದ ಮೂಲಕ ಸಾರ್ವಜನಿಕರಿಂದ ಕಾಮಗಾರಿ ಬೇಡಿಕೆ ಸಂಗ್ರಹಿಸಲಾಗುತ್ತಿದ್ದು, ಅರ್ಹ ಫಲಾನುಭವಿಗಳು ತಮಗೆ ಅಗತ್ಯವಿರುವ ಕಾಮಗಾರಿಗಳಿಗೆ ಹೆಸರು ನೀಡಿದರೆ, ಗ್ರಾಮ ಸಭೆಯಲ್ಲಿ ವಿಷಯ ಮಂಡಿಸಿ, ಕ್ರಿಯಾ ಯೋಜನೆ ತಯಾರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಐಇಸಿ ಸಂಯೋಜಕರಾದ ಕಿರಣ ಜೋತೆಪ್ಪನವರ ಮಾತನಾಡಿ, ಯೋಜನೆಯಡಿ ಲಭ್ಯವಿರುವ ಉದ್ಯೋಗ ಅವಕಾಶ, ಕೂಲಿ ಮೊತ್ತ, ಹಿರಿಯ ನಾಗರಿಕರು ಮತ್ತು ವಿಶೇಷ ಚೇತನರಿಗೆ ಕೆಲಸದ ರಿಯಾಯಿತಿ, ಕಾಮಗಾರಿ ಸ್ಥಳದಲ್ಲಿರುವ ಸೌಲಭ್ಯ, 2025-26ನೇ ಸಾಲಿಗೆ ಕಾಮಗಾರಿಗಳ ಬೇಡಿಕೆ ಸಲ್ಲಿಸುವ ವಿಧಾನ, ವೈಯಕ್ತಿಕ ಕಾಮಗಾರಿಗಳಾದ ದನದ ಕೊಟ್ಟಿಗೆ, ಕುರಿ ಶೆಡ್, ಬಚ್ಚಲುಗುಂಡಿ, ಕೋಳಿ ಶೆಡ್, ಎರೆಹುಳು ಘಟಕ, ತೆರೆದ ಬಾವಿ ಸೇರಿದಂತೆ ವಿವಿಧ ಸೌಲಭ್ಯಗಳ ಕುರಿತು ವಿಸ್ತೃತ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಇಡಗುಂದಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಚೆನ್ನವೀರ ಕುಂಬಾರ, ಕುಂದರಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವಿ ಎಂ. ಪಟಗಾರ, ಗ್ರಾ.ಪಂ. ಸದಸ್ಯೆ ರೇಣುಕಾ, ಮನರೇಗಾ ತಾಂತ್ರಿಕ ಸಂಯೋಜಕ ನಾರಾಯಣ ತಾನೋಜಿ, ತಾಂತ್ರಿಕ ಸಹಾಯಕರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಚೈತ್ರಾ, ಮಾಲತೇಶ, ಗ್ರಾಮ ಪಂಚಾಯತ್ ಸಿಬ್ಬಂದಿ, ಬಿಎಫ್‌ಟಿ, ಗ್ರಾಮ ಕಾಯಕ ಮಿತ್ರ, ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ನ. 13ರಿಂದ ಗವಿಸಿದ್ಧೇಶ್ವರ ಶ್ರೀಗಳಿಂದ ಪ್ರವಚನ

ಬ್ಯಾಡಗಿ: ನ.13 ರಿಂದ 24 ವರೆಗೆ 12 ದಿನಗಳ ಕಾಲ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳಿಂದ ಪಟ್ಟಣದ ತಾಲೂಕಾ ಕ್ರೀಡಾಂಗ ಣದಲ್ಲಿ ಪ್ರವಚನ ಕಾರ್ಯಕ್ರಮ ನಡೆಸಲು ತಿರ್ಮಾನಿಸಲಾಗಿದೆ ಎಂದು ಮಾಜಿ ಶಾಸಕ ಸುರೇಶಗೌಡ ಪಾಟೀಲ ಹೇಳಿದರು.

ಪಟ್ಟಣದ ಸಿದ್ದೇಶ್ವರ ಕಲ್ಯಾಣ ಮಂಟಪದಲಿ ಮಂಗಳವಾರ ನಡೆದ ಪ್ರವಚನ ಕರ್‌ಯಕ್ರಮ ಆಯೋಜನೆ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ತಾಲೂಕು ಹಾಗೂ ಜಿಲ್ಲೆಯ ಬಹುದಿನಗಳ ಆಸೆ ಮುಂದಿನ ತಿಂಗಳು ನೇರವೇರಲಿದೆ, ಕಳೆದ ಎರಡು ವರ್ಷದಿಂದ ಪಟ್ಟಣದಲ್ಲಿ ಶ್ರೀಗಳ ಪ್ರವಚನ ಕಾರ್ಯಕ್ರಮ ನಡೆಸಲು ಸಾಕಷ್ಟು ಜನ ಭಕ್ತರು ನಿರಂತರವಾಗಿ ಪ್ರಯತ್ನ ನಡೆಸಿದ್ದರು, ಇದರ ಪ್ರತಿಫಲವಾಗಿ ಗವಿಸಿದ್ದೇಶ್ವರ ಶ್ರೀಗಳು ಕಾರ್ಯಕ್ರಮ ಕ್ಕೆ ಬರಲು ಒಪ್ಪಿದ್ದು ಮುಂದಿನ ತಿಂಗಳು ಬ್ಯಾಡಗಿ ಜನರ ಪಾಲಿಗೆ ಅವಿಸ್ಮರಣೀಯ ತಿಂಗಳಾಗಲಿದೆ ಎಂದರು.

ಗಂಗಣ್ಣ ಯಲಿ ಮಾತನಾಡಿ, ನಮ್ಮಗಳ ಪಾಲಿಗೆ ಇದೊಂದು ಸುಂದರ ಘಳಿಗೆಯಾಗಲಿದೆ, ಜೀವನದ ಜಂಜಾಟದಲ್ಲಿ ಸಿಲುಕಿ ದುಡ್ಡಿನ ಹಿಂದೆ ಬಿದ್ದಿರುವ ಮನುಷ್ಯರು ಆಧ್ಯಾತ್ಮಿಕ ಚಿಂತನೆಗಳಿಂದ ದೂರ ಉಳಿದಿದ್ದಾರೆ, ಎಲ್ಲರನ್ನು ಮತ್ತೆ ನಿಸ್ವಾರ್ಥ ಜೀವನದ ಹಾದಿಯಲ್ಲಿ ನಡೆಸಲು ಶ್ರೀಗಳ ಆಶೀರ್ವಚನ ಸಹಕಾರಿಯಾಗಲಿದೆ ಆದ್ದರಿಂದ ಪ್ರತಿಯೊಬ್ಬರು ಕರ್ ಯಕ್ರಮದಲ್ಲಿ ಭಾಗಿಯಾಗಿ ಶ್ರೀಗಳ ಆಶೀರ್ವಾದ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಗವಿಮಠದ ಪ್ರತಿನಿಧಿ ಸಂಗಪ್ಪ ಗಡಗಿ ಮಾತನಾಡಿ, ಕರ್‌ಯಕ್ರಮವನ್ನ ಅತ್ಯಂತ ಸರಳವಾಗಿ ಆಯೋಜನೆ ಮಾಡುವುದು ಕಡ್ಡಾಯ, ಪಟ್ಟಣ ಸೇರಿದಂತೆ ಸುತ್ತಮುತ್ತಲ ಹಳ್ಳಿಗಳಲ್ಲಿ ಯಾವುದೇ ಬ್ಯಾನರ್ ಅಳವಡಿಕೆಗೆ ಅವಕಾಶವಿಲ್ಲ. ಅಲ್ಲದೇ ಡೊಳ್ಳು ಬ್ಯಾಂಡ್ ಬಾಜಾ ಸೇರಿ ದಂತೆ ಇನ್ನಿತರೆ ಯಾವುದೇ ರೀತಿಯ ಪ್ರಚಾರ ಮಾಡುವಂತಿಲ್ಲ, ಮತ್ತು ಶ್ರೀಗಳು ಮಾಡುವ ಪಾದಯಾತ್ರೆಯಲ್ಲಿ ಭಕ್ತರು ಪಾಲ್ಗೊಳ್ಳು ವುದು ಬಿಟ್ಟರೆ ಕುಂಭ ಮೆರವಣಗೆ ಮಾಡುವಂತಿಲ್ಲ, ಶ್ರೀಗಳು ಬರುವ ಹಾದಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು ನೀವುಗಳು ಶ್ರೀಗಳಿಗೆ ಸಲ್ಲಿಸುವ ಗೌರವವಾಗಿದೆ. ದೂರದ ಊರುಗಳಿಂದ ಬರುವ ಭಕ್ತಾಧಿಗಳಿಗೆ ಸಮಿತಿ ಸೂಚಿಸಿದ ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡ ಲಾಗುತ್ತದೆ ಎಂದರು.

ಪ್ರಾಸ್ತಾವಿಕ ಮಾತನಾಡಿದ ನಿವೃತ್ತ ಪ್ರೊ.ಸಿ.ಶಿವಾನಂದಪ್ಪ ನಮ್ಮೆಲ್ಲರಿಗೂ ಜ್ಞಾನ ದಾಸೋಹದ ಸವಿಯನ್ನ ಉಣಬಡಿಸಲು ಶ್ರೀಗಳು ಬರುತ್ತಿರುವುದು ಅತ್ಯಂತ ಖುಷಿಯ ವಿಚಾರವಾಗಿದೆ, ಪಟ್ಟಣದಲ್ಲಿ ಈ ಹಿಂದೆ ಸಾಕಷ್ಟು ಆಧ್ಯಾತ್ಮಿಕ ಕರ್‌ಯಕ್ರಮಗಳು ಜರುಗಿದ್ದು ಜನರು ಎಲ್ಲವನ್ನು ಯಶಸ್ವಿಗೊಳಿಸಿದ್ದಾರೆ, ಈ ಕಾರ್ಯಕ್ರಮ ವನ್ನು ಸಹ ಎಲ್ಲರು ಸೇರಿ ಯಶಸ್ವಿಗೊಳಿಸೋಣ ಎಂದರು.

ಕರ್ಯಯಕ್ರಮದಲ್ಲಿ ಗವಿಮಠದ ಕಿರಿಯ ಶಾಂತವೀರ ಶ್ರೀಗಳು ಸೇರಿದಂತೆ ಮುಪ್ಪಿನೇಶ್ವರ ಮಠದ ಚೆನ್ನಾಮಲ್ಲಿಕಾರ್ಜುನ ಶ್ರೀಗಳು, ಪ್ರಚಾರ ಸಮಿತಿಯ ಪ್ರಭು ಬಾಲಪ್ಪನವರ, ರಾಚಯ್ಯ ಓದೋಸಿಮಠ, ಕುಮಾರಗೌಡ್ರ ಪಾಟೀಲ್, ಬಸವರಾಜ ಛತ್ರದ, ಲಿಂಗಯ್ಯ ಹಿರೇಮಠ, ಬಾಲಚಂದ್ರಗೌಡ ಪಾಟೀಲ, ಮುರಿಗೆಪ್ಪ ಶೆಟ್ಟರ್ ಸೇರಿದಂತೆ ಇನ್ನಿತರು ಉಪಸ್ಥಿತರಿದ್ದರು. ಎಂ.ಎಫ್.ಕರಿಯಣ್ಣನವರ ನಿರೂಪಿಸಿದರು.

ಬ್ಯಾಡಗಿ-ಪಟ್ಟಣದ ಸಿದ್ದೇಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಪ್ರವಚನ ಕಾರ್‌ಯಕ್ರಮ ಆಯೋಜನೆ ಅಂಗ ವಾಗಿ ನಡೆದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾಜಿ ಶಾಸಕ ಸುರೇಶಗೌಡ ಪಾಟೀಲ ಮಾತನಾಡಿದರು

ಪ್ರತಿದಿನ ಸಂಜೆ ಪ್ರವಚನ

ಕಾರ್ಯಯಕ್ರಮದ ಅಂಗವಾಗಿ ಪ್ರತಿ ದಿನ ಬೆಳಗ್ಗೆ ತಾಲೂಕಿನ 7 ಗ್ರಾಮಗಳಲ್ಲಿ ಎಳು ದಿನಗಳ ಕಾಲ ಗವಿಸಿದ್ಧೇಶ್ವರ ಶ್ರೀಗಳು ಪಾದಯಾತ್ರೆ ಮಾಡಲಿದ್ದಾರೆ. ಪಾದಯಾತ್ರೆ ಬೆಳಗ್ಗೆ 6.30 ರಿಂದ ಆರಂಭವಾಗದ್ದು, ಪಟ್ಟಣದಲ್ಲಿಯೂ ಕೂಡಾ 4 ದಿನಗಳ ಕಾಲ ಪಾದಯಾತ್ರೆ ನಡೆಯಲಿದೆ, ಶ್ರೀಗಳ ಪ್ರವಚನ ಕರ್ಯಯಕ್ರಮ ಪ್ರತಿ ದಿನ ಸಂಜೆ 6 ರಿಂದ 7 ಘಂಟೆಯವೆಗೆ ತಾಲೂಕಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸಮಾಚಾರ ಸಣ್ಣದಲ್ಲ

ನವಲಗುಂದದಲ್ಲಿ ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: ನವಲಗುಂದದ 110 ಕೆವಿ ವಿದ್ಯುತ್ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಿನ್ನೆಲೆ ಅಕ್ಟೋಬರ್ 16 ರಂದು ವಿವಿದೇಡೆ ವಿದ್ಯುತ್ ವ್ಯತ್ಯಯವಾಗಲಿದೆ. ಬಳಗ್ಗೆ 9 ರಿಂದ ಸಂಜೆ 4ರವರೆಗೆ ನವಲಗುಂದ, ಅಳಗವಾಡಿ, ಯಮನೂರ, ಶಾನವಾಡ, ಕುಮಾರಕೊಪ್ಪ, ಇಬ್ರಾಹ್ಮಪುರ, ಕಡದಳ್ಳಿ, ಅಮರಗೋಳ, ಸೊಟಕನಾಳ, ಶಲವಡಿ, ಬಳ್ಳೂರು, ಚೆನ್ನಮ್ಮ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ಕೋರಿದೆ.

ಪ್ರವಾಸಿ ಮಂದಿರಗಳ ವಶಕ್ಕೆ ಆದೇಶ

ಹಾವೇರಿ: ಭಾರತ ಚುನಾವಣಾ ಆಯೋಗವು ಶಿಗ್ಗಾಂವ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಜರುಗಿಸಲು ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದು, ಅ. 15 ರಿಂದ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ನಿರೀಕ್ಷಣಾ ಮಂದಿರ ಹಾಗೂ ಪ್ರವಾಸಿ ಮಂದಿರಗಳನ್ನು ಕೂಡಲೇ ವಶಕ್ಕೆ ಪಡೆಯಲು ತಹಸೀಲ್ದಾರಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಉಪ ಚುನಾವಣೆ; ವಾಹನಗಳ ವಶಕ್ಕೆ ಆದೇಶ

ಹಾವೇರಿ: ಜಿಲ್ಲೆಯ 83-ಶಿಗ್ಗಾಂವ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ಜರುಗಿಸಲು ಭಾರತ ಚುನಾವಣಾ ಆಯೋಗವು ವೇಳಾಪಟ್ಟಿ ಪ್ರಕಟಿಸಿದ್ದು, ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಇಲಾಖೆಯಲ್ಲಿ ಅಧಿಕಾರೇತರರಿಗೆ ನೀಡಿದ ಸರ್ಕಾರಿ ವಾಹನಗಳನ್ನು ತಕ್ಷಣ ವಶಕ್ಕೆ ಪಡೆಯಲು ಆಯಾ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ. ತಾಲೂಕಿನಲ್ಲಿರುವ ಇನ್ನತರೆ ನಿಗಮ ಮಂಡಳಿ, ಸರ್ಕಾರಿ ಸಂಸ್ಥೆಗಳ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸರ್ಕಾರಿ ವಾಹನಗಳನ್ನು ನೀಡಿದ್ದಲ್ಲಿ ಸಂಬಂಧಪಟ್ಟ ತಹಶೀಲ್ದಾರರು ತಕ್ಷಣ ತಮ್ಮ ವಶಕ್ಕೆ ಪಡೆದು ವರದಿ ನೀಡಲು ಸೂಚನೆ ನೀಡಲಾಗಿದೆ.

ಸ್ಕ್ಯಾನ್ ಮಾಡಿ ನರೇಗಾ ಕಾಮಗಾರಿ ಬೇಡಿಕೆ ಸಲ್ಲಿಸಿ

ಗದಗ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ, ಪ್ರಸಕ್ತ ಸಾಲಿನ ಕ್ರಿಯಾ ಯೋಜನೆ ತಯಾರಿಕೆ ಪ್ರಕ್ರಿಯೆ ಅಕ್ಟೋಬರ 2 ರಿಂದ ಪ್ರಾರಂಭವಾಗಿದ್ದು, ಡ.ಸ.ಹಡಗಲಿ ಗ್ರಾಮಸ್ಥರು ನರೇಗಾ ಕಾಮಗಾರಿ ಬೇಡಿಕೆಯನ್ನು ಕ್ಯೂ ಆರ್ ಕೋಡ್ ಸ್ಕಾನ್ ಮಾಡುವ ಮೂಲಕವೂ ಸಲ್ಲಿಸಬಹುದು ಎಂದು ಸಹಾಯಕ ನಿರ್ದೇಶಕ ಚಂದ್ರಶೇಖರ ಬಿ.ಕಂದಕೂರ ಹೇಳಿದರು.

ಡ.ಸ ಹಡಗಲಿ ಗ್ರಾಮ ಪಂಚಾಯತಿ ಅಲ್ಲಿ ಉದ್ಯೋಗ ಖಾತ್ರ ನಡಿಗೆ ಸಬಲತೆಯಡೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ನರೇಗಾ ಯೋಜನೆಯ ಗ್ರಾಮೀಣ ಬಾಗದ ಜನರಿಗೆ ಆಶಾಕಿರಣವಾಗಿದೆ. ವೈಯಕ್ತಿಕ ಕಾಮಗಾರಿಗಳ ಬೇಡಿಕೆ ಸಲ್ಲಿಸುವ ಮೂಲಕ ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು. ನರೇಗಾ ಯೋಜನೆಯಡಿ ಓರ್ವ ವ್ಯಕ್ತಿಯು 3 ಕಾಮಗಾರಿಗಳ ವರೆಗೆ ಅರ್ಜಿ ಸಲ್ಲಿಸಬಹುದು. ಒಟ್ಟು 5 ಲಕ್ಷದ ವರೆಗೂ ಲಾಭ ಪಡೆದುಕೊಳ್ಳಬಹುದು. ಯಾವುದೇ ಕಾಮಗಾರಿಯ ಲಾಭ ಪಡೆಯಲು ಫಲಾನುಭವಿಗಳು ತಮ್ಮ ಮೊಬೈಲ್ ನಲ್ಲಿಯೇ ಅರ್ಜಿ ಸಲ್ಲಿಸಬಹುದು ಎಂದರು. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಈಶ್ವರಗೌಡ ಪಾಟೀಲ ಮಾತಾನಾಡಿ, ಗ್ರಾಮದಲ್ಲಿ ಈಗಾಗಲೇ ಐ.ಇ.ಸಿ ಚಟುವಟಿಕೆಗಳ ಮೂಲಕ ಮನೆ ಮನೆ ಭೇಟಿ ಮಾಡಿ ಕಾಮಗಾರಿ ಬೇಡಿಕೆ ಪೆಟ್ಟಿಗೆಯಲ್ಲಿ ಕಾಮಗಾರಿಗಳನ್ನು ಸಂಗ್ರಹಿಸಲಾಗುತ್ತಿದ್ದು, ನರೇಗಾ ಫಲಾನುಭವಿಗಳು ಕಾಮಗಾರಿಗಳನ್ನು ಪೆಟ್ಟಿಗೆಯಲ್ಲಿ ಹಾಕಬಹುದು. ಈ ಕಾಮಗಾರಿಗಳನ್ನು ತಾಂತ್ರಿಕ ಸಂಯೋಜಕರು ಪೂರ್ವಭಾವಿಯಾಗಿ ವೀಕ್ಷಣೆ ಮಾಡಿ ಅಂದಾಜು ಪತ್ರಿಕೆ ತಯಾರಿಸುತ್ತಾರೆ ಎಂದರು. ಗ್ರಾಮ ಪಂಚಾಯತ ಅಧ್ಯಕ್ಷ ಗಂಗಾಧರ ಕಮ್ಮಾರ, ಸದಸ್ಯರು, ತಾಲೂಕ ಪಂಚಾಯತಿ ತಾಂತ್ರಿಕ ಸಂಯೋಜಕ ಪ್ರವೀಣ ಸೂಡಿ, ಐಇಸಿ ಸಂಯೋಜಕ ಮಂಜುನಾಥ ಎಸ್, ಬಿ ಎಫ್ ಟಿ ಪ್ರಕಾಶ ಅಂಬಕ್ಕಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಾಗೂ ಗ್ರಾಮಸ್ಥರು ಹಾಜರಿದ್ದರು.

ವಾಕರಸಾಸಂ ಯುಪಿಐ ಕಾರ್ಯ ಯಶಸ್ವಿ

ಸಾರಿಗೆ ವ್ಯವಸ್ಥೆಯಲ್ಲಿ ಆಧುನಿಕ ತಂತ್ರಜ್ಞಾನ ವ್ಯವಸ್ಥೆ | ಕ್ಯಾಶ್‌ಲೆಸ್ ವ್ಯವಹಾರ ಉತ್ತಮ

ಮಾಳಿಂಗರಾಯ ಪೂಜಾರ

ಗದಗ: ನಗದು ರಹಿತ ವ್ಯವಹಾರಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿದ್ದು, ಅದರಂತೆ ದೇಶದಲ್ಲಿ ಗರಿಷ್ಠ ಮುಖ ಬೆಲೆಯ ನೋಟುಗಳನ್ನು ಅಮಾನ್ಯ ಮಾಡಿದ ಬಳಿಕ ಕೇಂದ್ರ ಸರಕಾರ ನಗದು ರಹಿತ ವ್ಯವಹಾರಕ್ಕೆ ಪ್ರೋತ್ಸಾಹ ನೀಡುತ್ತಿದೆ.

ಅದರಂತೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ರಾಜ್ಯದಲ್ಲಿಯೇ ಪ್ರಥಮವಾಗಿ ಪ್ರಾಯೋಗಿಕವಾಗಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಈ ಮೊದಲು ನಗದು ವ್ಯವಹಾರ ಮಾಡಲು ಒಂದು ಹೊಸ ಪ್ರಯತ್ನ ಮಾಡಿ ಯಶಸ್ಸು ಸಾಧಿಸಿದ್ದಾರೆ.

ಸಾರ್ವಜನಿಕ ಪ್ರಯಾಣಿಕರಿಗೆ ಚಿಲ್ಲರೆ ಸಮಸ್ಯೆಯನ್ನು ಬಗೆಹರಿಸಿ, ಸಾರಿಗೆ ವ್ಯವಸ್ಥೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಕಾರ್ಯಾಚರಣೆಯನ್ನು ಉತ್ತಮಪಡಿಸಲು ನಗದುರಹಿತ ಸಂಸ್ಥೆಯ ವಾಹನಗಳಲ್ಲಿ ಯುಪಿಐ ವಹಿವಾಟುಗಳ ಮೂಲಕ ಟಿಕೇಟ ವಿತರಣೆಯನ್ನು ಪ್ರಾಯೋಗಿಕವಾಗಿ

2023 ಸೆ. 1 ರಂದು ಮೊದಲು ಹುಬ್ಬಳಿಯ ಗ್ರಾಮೀಣ ಘಟಕ 3 ರಲ್ಲಿ ಮೊದಲು ಪ್ರಾರಂಭ ಮಾಡಲಾಯಿತು ಇದು ಪ್ರಾರಂಭವಾಗಿ ಈಗ ವರ್ಷ ಕಳೆದಿದೆ.

ನಂತರ ಇದನ್ನು 2024 ಫೆಬ್ರವರಿ ತಿಂಗಳಲ್ಲಿ ರಾಜ್ಯ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಪೂರ್ಣ ಪ್ರಮಾಣದಲ್ಲಿ ಸಂಸ್ಥೆಯ ಅಂದರೆ 50 ಘಟಕಗಳಲ್ಲಿ ಅಳವಡಿಸಲು ಗದಗ ನಗರದಲ್ಲಿ ಅಧಿಕೃತವಾಗಿ ಚಾಲನೆ ನೀಡಿದರು ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಸಹ ಅಂದು ಉಪಸ್ಥಿತರಿದ್ದು ಇದನ್ನು ಇಲ್ಲಿ ಸ್ಮರಿಸಬಹುದು.

ನಗದು ರಹಿತ ವ್ಯವಹಾರ ಯುಪಿಐ ವಹಿವಾಟಿನಿಂದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಯಶಸ್ಸು ಸಾಧಿಸಿ ಎರಡನೇ ವರ್ಷಕ್ಕೆ ದಾಪುಗಾಲು ಇಟ್ಟಿದೆ. ಈ ವರೆಗೂ ಒಟ್ಟು 55.96 ಲಕ್ಷ ವಹಿವಾಟು ಗಳಿಂದ ರೂ. 50.53 ಕೋಟಿ ಸಂಗ್ರಹವಾಗಿರುತ್ತದೆ. ಪ್ರಸ್ತುತ ಪ್ರತಿ ದಿನ ಸರಾಸರಿ 27000 ವಹಿವಾಟುಗಳಿಂದ ರೂ.22.52 ಲಕ್ಷಗಳಷ್ಟು ಸಂಗ್ರಹವಾಗುತ್ತಿದೆ.

ತರಕಾರಿ, ಹಣ್ಣು, ಕಾಯಿ ವ್ಯಾಪಾರ ಸೇರಿದಂತೆ ಎಲ್ಲಾ ಚಿಲ್ಲರೆ ವ್ಯಾಪಾರದಲ್ಲಿಯೂ ನಗದು ರಹಿತ ವ್ಯವಹಾರ ಹೆಚ್ಚಾಗಿದೆ ಗ್ರಾಮೀಣ ಪ್ರದೇಶಗಳಲ್ಲಿಯು ಸಹ ಈ ವ್ಯವಹಾರ ನಡೆಯುತ್ತಿದೆ ಇದನ್ನು ನಮ್ಮ ಸಾರಿಗೆ ಸಂಸ್ಥೆಗಳಲ್ಲಿ ಅಳವಡಿಸಲು ಮೊದಲು ತಂದಿದ್ದು, ಅಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಲ್ಲಿ ಯುಪಿಐ ಮೂಲಕ ಟಿಕೆಟ್ ಪಡೆಯುತ್ತಿರುವುದು.

ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಭರತ್ ಎಸ್ ಅವರು ಬಹಳಷ್ಟು ಪ್ರಯತ್ನ ಮಾಡಿದ್ದರು ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರು, ಸಿಬ್ಬಂದಿ, ಮಾರ್ಗ ತನಿಖಾ ತಂಡ ಸೇರಿ ಸುಮಾರು 21 ಸಾವಿರ ಸಿಬ್ಬಂದಿಗಳಿಗೆ ಈ ಕುರಿತು ತರಬೇತಿ ನೀಡಿ ಯಾವುದೇ ಬಂಡವಾಳ ಹಾಕದೆ ಇರುವ ಟಿಕೆಟ್ ಕೊಡುವ ಯಂತ್ರದಲ್ಲಿಯೇ ಯುಪಿಐ ಟಿಕೆಟ್ ನೀಡುವ ಹೊಸ ಪ್ರಯತ್ನ ಮಾಡಿ ಯಶಸ್ಸು ಕಂಡಿರುವ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಪ್ರಸ್ತುತ 50 ಘಟಕಗಳ 4159 ಅನುಸೂಚಿಗಳಲ್ಲಿ ಯುಪಿಐ ಮೂಲಕ ಟಿಕೆಟ್ ಸೌಲಭ್ಯ ಲಭ್ಯವಿದೆ.

ಅದಲ್ಲದೆ ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಯುಪಿಐ ಪಾವತಿ ಪಾಕ್ಷಿಕ ಸಹ 2024 ಮಾರ್ಚ್ 3 ರಿಂದ 16 ರವರೆಗೆ ಮಾಡಲಾಗಿತ್ತು ಅಲ್ಲದೆ ಬಹುಮಾನ ಸಹ ನೀಡಲಾಗಿತ್ತು.

ಒಂದೇ ಟಿಕೆಟ್ ನಲ್ಲಿ ಅತಿ ಹೆಚ್ಚು ಮೊತ್ತ ವಹಿವಾಟು ರು.8100 ನೀಡಲಾಗಿದೆ. ಇದು ಪ್ರಯೋಗಕವಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಯಶಸ್ಸು ಕಂಡಿದ್ದು, ಪ್ರಯಾಣಿಕರ ಮತ್ತು ನಿರ್ವಾಹಕರ ಮಧ್ಯ ಚಿಲ್ಲರೆ ಹಣದ ಸಲುವಾಗಿ ನ್ಯಾಯ ಕಡಿಮೆಯಾಗಿದೆ.

ಇದರಿಂದ ಪ್ರಯಾಣಿಕ ಬೇಡಿಕೆ ಬಹಳ ಇದೆ ಇದು ಎಲ್ಲ ರಾಜ್ಯದ ಎಲ್ಲ ಸಂಸ್ಥೆಗಳಲ್ಲಿ ಆಗಬೇಕು ಎನ್ನುವದು ಪ್ರಯಾಣಿಕರ ಒತ್ತಾಯವಾಗಿದೆ.

ನಗದು ರಹಿತ ವ್ಯವಹಾರ ಮಾಡುವದು ಆರ್.ಬಿ.ಐ.ನಿಂದ ನಿರ್ದೇಶನ ಇದೆ ರಾಜ್ಯದಲ್ಲಿ ಪ್ರಥಮ ಬಾರಿಗೆ ಈ ಹೊಸ ಯೋಜನೆ ಮಾಡಿ ಯಶಸ್ಸು ಕಂಡಿದ್ದು ಈ ಕುರಿತು ಆರ್.ಬಿ.ಐ.ನವರು ಸಹ ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಈ ಯೋಜನೆಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಲು ಪ್ರಯತ್ನ ಮಾಡುತ್ತೇವೆ.

-ಪ್ರಿಯಾಂಗಾ ಎಂ, ವ್ಯವಸ್ಥಾಪಕ ನಿರ್ದೇಶಕರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಕೇಂದ್ರ ಬಿಜೆಪಿ ಸಚಿವರ ಮೇಲೆ ಮೂವತ್ತೊಂಬತ್ತು ಕೇಸ್‌ಗಳಿವೆ

ಧಾರವಾಡ: ಹಳೇ ಹುಬ್ಬಳ್ಳಿ ಕೇಸ್ ವಾಪಸ್ ಪಡೆದ ಪ್ರಕರಣದಲ್ಲಿ ಬಿಜೆಪಿಯವರು ಪ್ರತಿಭಟನೆ ಮಾಡಿದರೆ ಮಾಡಕೊಳ್ಳಿ ಬಿಡ್ರಿ. ಕೋರ್ಟ್ ಗೆ ಹೋಗಲಿ, ಕೋರ್ಟ್ ಇರೊದೇ ಅದಕ್ಕೆ. ಬಿಜೆಪಿಯವರು ಮೂಡಾ ಕೇಸ್‌ನಲ್ಲಿ ಪಾದಯಾತ್ರೆ ಮಾಡಿದರು. ಬಿಜೆಪಿಯವರ ಎಷ್ಟು ಜನರ ಮೇಲೆ ಎಫ್ಐಆರ್ ಇದೆ. ಕೇಂದ್ರದ ಸಚಿವರ ಮೇಲೆಯೇ 39ರಷ್ಟು ಕೇಸ್ ಇವೆ.

ಅವರನ್ನ ಒಳಗೆ ಹಾಕಬೇಕಿತ್ತು, ಅವರನ್ನ ರಾಜೀನಾಮೆ ಕೇಳಬೇಕಿತ್ತು. ಯಾರು ಪಾದಯಾತ್ರೆ ಮಾಡಿದ್ದಾರೋ, ಅವರ ಎಲೆಕ್ಷನ್ ಅಫಿಡವಿಟ್ ನೋಡಿ.

ನಮ್ಮ ದೇಶದಲ್ಲಿ ಕಾನೂನಿದೆ, ಕಾನೂನಿನ ರಕ್ಷಣೆ ಪಡೆಯುವ ಅಧಿಕಾರ ಎಲ್ಲರಿಗೆ ಇದೆ.

ಅದನ್ನ ಎಲ್ಲರೂ ಮಾಡ್ತಾರೆ, ಮಾಡಿಕೊಳ್ಳಲಿ ಎಂದು ಸಚಿವ ಮಧು ಬಂಗಾರಪ್ಪ ಬಿಜೆಪಿ ನಾಯಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಪ್ರಶ್ನೆ ಮಾಡಿದರು.

ಧಾರವಾಡದಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ ಗಲಭೆ ಇರಲಿ, ಯಾವುದೇ ಇರಲಿ. ಯಾವುದೇ ಪಕ್ಷ ಅನ್ನೊದು ಬೇರೆ ಕಡೆ ಇರಲಿ. ನಮ್ಮ ದೇಶದಲ್ಲಿ ಕಾನೂನು ಗೆಲ್ಲಬೇಕು, ಅದಕ್ಕೆ ಅವಕಾಶ ಕೊಡಬೇಕು, ಅವಕಾಶ ತಗೊತಾರೆ. ಅದಕ್ಕೆ ಎಲ್ಲರಿಗೆ ಅವಕಾಶ ಇದೆ. ನಮ್ಮಸರಕಾರವು ಹುಬ್ಬಳ್ಳಿ ಕೇಸ್ ವಾಪಸ್ ಪಡೆಯುತಿದೆ ಅದನ್ನ ತಪ್ಪು ಎಂದು ಹೇಳೊಕೆ ಆಗುತ್ತಾ, ಸದ್ಯ ಕೇಸ್ ನಡೆದಿದೆ. ಎಷ್ಟೊ ಕೇಸ್ ಗಳಲ್ಲಿ ಅಮಾಯಕರನ್ನ ಒಳಗೆ ಹಾಕಿರತಾರೆ. ಮನೆ ಹುಡುಕಿಕೊಂಡು ಬಂದು ಕೇಸ್ ಹಾಕಿರೊದು ಉದಾಹರಣೆ ಇವೆ. ಅವರ ಅಡ್ರೆಸ್ ಕೂಡಾ ಅಲ್ಲಿ ಇರಲ್ಲ ಎಂದು ತಿಳಿಸಿದರು. ಇನ್ನು ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಕುಟುಂಬ ಸೈಟ್ ವಾಪಸ್ ಕೊಟ್ಟ ಪ್ರಕರಣ ಬಗ್ಗೆ ಮಾತನಾಡಿದ್ ಸಚಿವ ಮಧು ಬಂಗಾರಪ್ಪ, ಅದು ಖರ್ಗೆ ಅವರ ದೊಡ್ಡ ಗುಣ, ಖುಷಿ ಆಗಬೇಕು. ಅದಕ್ಕೆ, ರಾಜೀನಾಮೆ ಯಾಕೆ ಕೊಡಬೇಕು ಎಂದರು.

ಪ್ರೇರಣಾ ಟ್ರಸ್ಟಗೆ ದುಡ್ಡು ಬಂದ ಮೇಲೆ ಕೂಡಾ ಯಡಿಯೂರಪ್ಪ ಅವರಿಗೆ ಸಿಎಂ ಮಾಡಿದ್ರು. ಯಾಕೆ ಮಾಡಿದ್ದು ಅಂದರೆ, ಅವರ ಬಳಿ ವಾಶಿಂಗ್ ಮಷಿನ್ ಇದೆ. ಅದರಲ್ಲಿ ಹಾಕಿದ ತಕ್ಷಣ ಎಲ್ಲರೂ ಬೆಳ್ಳಗೆ ಆಗ್ತಾರೆ ಎಂದು ಲೇವಡಿ ಮಾಡಿದರು. ಸಿಎಂ ಜೊತೆ ಹೈಕಮಾಂಡ್ ಇದೆ, ವೇಣುಗೋಪಾಲ ಕೂಡಾ ಇದನ್ನ ಹೇಳಿದಾರೆ. ಅತಿಥಿ ಶಿಕ್ಷಕರ ವೇತನ ಹೆಚ್ಚಳಕ್ಕಾಗಿ ಬೇಡಿಕೆ ಹಿನ್ನೆಲೆ, ಅದು ಹೆಚ್ಚು ಮಾಡಬೇಕಿದೆ, ಸಿಎಂ ಜೊತೆ ಮಾತಾಡಿದ್ದೇನೆ. ಉಪನ್ಯಾಸಕರ ವೇತನ ಹೆಚ್ಚಳ ಮಾಡಿದ್ದಾರೆ. ನಮ್ಮವರದು ಮಾಡುತ್ತಾರೆ. ಯಾಕಂದ್ರೆ ಶ್ರಮ ಪಟ್ಟು ನಮ್ಮವರು ಕೆಲಸ ಮಾಡುತ್ತಾರೆ. ಬಿಸಿಯೂಟ ಸಹಾಯಕರದು ಮಾಡಬೇಕು ಎಂದು ಸಿಎಂ ಬಳಿ ಹೇಳಿದ್ದೇನೆ ಎಂದರು. ಉಪಚುನಾವಣೆ ಹಿನ್ನೆಲೆಯಲ್ಲಿ, ಹೈಕಮಾಂಡ್ ಒಳ್ಳೆ ನಿರ್ಮಾನ ತಗೊತಾರೆ, ನಾವು ಹೋಗಿ ಚುನಾವಣೆ ಗೆಲ್ಲಿಸಿಕೊಂಡು ಬರಬೇಕು ಅಷ್ಟೆ. ನಾವು ಪ್ರಯತ್ನ ಪಟ್ಟು ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ ಎಂದು ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಗಾಜಿನ ಮನೆಯಿಂದ ಕಲ್ಲು ಹೊಡೆಯುವ ಕೆಲಸ ಬಿಡಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಅರವಿಂದ ಏಗನಗೌಡರ್

ಧಾರವಾಡ: ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಮಾಡುತ್ತಿರುವ ಶಾಸಕ ವಿನಯ ಕುಲಕರ್ಣಿ ಅವರ ಬಗ್ಗೆ ಧಾರವಾಡ ಜಿಲ್ಲೆಯ ಇಬ್ಬರು ನಾಯಕರು ಸುಖಾ ಸುಮ್ಮನೆ ಆರೋಪ ಮಾಡುತ್ತಿದ್ದಾರೆ. ಮೊದಲು ಗಾಜಿನ ಮನೆಯಲ್ಲಿ ಕುಳಿತು ಶಾಸಕ ಬೆಲ್ಲದ ಹಾಗೂ ಮಾಜಿ ಶಾಸಕ ಅಮೃತ ದೇಸಾಯಿ ಕಲ್ಲು ಹೊಡೆಯುವ ಕೆಲಸ ಬಿಡಬೇಕು ಎಂದು ಧಾರವಾಡ ಗ್ರಾಮೀಣ 71 ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಗೂ ವಿನಯ ಕುಲಕರ್ಣಿ ಅಭಿಮಾನಿ ಬಳಗದ ಮುಖಂಡ ಅರವಿಂದ ಏಗನಗೌಡರ್ ಹೇಳಿದರು.

ಧಾರವಾಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಲೆ ಪ್ರಕರಣದಲ್ಲಿ ವಿನಯ ಕುಲಕರ್ಣಿ ಅವರ ಕೇಸ್ ಕೊನೆ ಹಂತದಲ್ಲಿ ಇದ್ದು, ಅದು ಮುಗಿಯುವ ಹಂತಕ್ಕೆ ಬಂದಿದ್ದು, ವಿನಾಕಾರಣ ವಿನಯ ಕುಲಕರ್ಣಿ ಅವರನ್ನು ಬೇರೆ ಕೇಸಗಳಲ್ಲಿ ಸಿಗಿಸುವ ಕೆಲಸ ಮಾಡುತ್ತಾ ಕೆಲವೊಂದಿಷ್ಟು ಶಕ್ತಿಗಳು ಮುಂದಾಗಿವೆ.

ಶಾಸಕ ವಿನಯ ಕುಲಕರ್ಣಿ ಅವರು ಸಾಕಷ್ಟು ಅಭಿವೃದ್ಧಿ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ.

500 ಕಿಮೀ ಉದ್ದದ 33 ಅಡಿ ಅಗಲದ ಚಕ್ಕಡಿ ರಸ್ತೆಯನ್ನು ಮಾಡಿ ರಾಜ್ಯಕ್ಕೆ ಮಾದರಿಯಾಗಿದ್ದಾರೆ ಎಂದರು. ಅಭಿವೃದ್ಧಿ ಪರ ಕೆಲಸ ಮಾಡಿಕೊಂಡು ಬಂದಿರುವ ವಿನಯ ಕುಲಕರ್ಣಿ ಅವರ ಬಗ್ಗೆ ರಾಜಕೀಯ ಷಡ್ಯಂತ್ರ ನಡೆಯುತ್ತಿದೆ ಎಂದರು.

2022 ರಲ್ಲಿ ಆಗಿರುವ ಕೆಲಸವನ್ನು ಮುಂದಿಟ್ಟುಕೊಂಡು, ಇದೀಗ ಅವರಿಗೆ ಮಾನಸಿಕ ಹಿಂಸೆ ನೀಡುವ ಉದ್ದೇಶದಿಂದ ಅವರ ಕುಟುಂಬವನ್ನು ವಿಚಲಿತ ಮಾಡಲಿಕ್ಕೆ ಈ ರೀತಿ ಮಾಡಲಾಗುತ್ತಿದೆ. ಶಾಸಕ ವಿನಯ ಕುಲಕರ್ಣಿ ಅವರ ಬಗ್ಗೆ ಶಾಸಕ ಅರವಿಂದ ಬೆಲ್ಲದ ಹಾಗೂ ಮಾಜಿ ಶಾಸಕ ಅಮೃತ ದೇಸಾಯಿ ಅವರು ಪ್ರಕರಣವನ್ನ ಸಿಬಿಐಗೆ ಕೊಡಬೇಕೆಂದು ಒತ್ತಾಯಿಸಿದ್ದಾರೆ. ಅವರಿಬ್ಬರಿಗೂ ನಾನು ಕೇಳಲು ಬಯಸುತ್ತೇನೆ. ನಮ್ಮ ನೆಲದ ಕಾನೂನಿನ ಬಗ್ಗೆ

ಅವರಿಗೆ ತಿಳವಳಿಕೆ ಇರಲಿ. ಅಭಿವೃದ್ಧಿ ಬಗ್ಗೆ ಮೊದಲು ಮಾತನಾಡಲಿ ಅದನ್ನು ಬಿಟ್ಟು, ಸುಖಾ ಸುಮ್ಮನೆ ವಿನಯ ಕುಲಕರ್ಣಿ ಅವರ ಬಗ್ಗೆ ಬೈಯುವ ಕೆಲಸ ಮಾಡ್ತಾ ಇದ್ದಾರೆ. ರಾಜ್ಯದ ಪೊಲೀಸರು ಸಿಐಡಿ ತನಿಖೆ ನಡೆಸುತ್ತಿದ್ದಾರೆ.

ಕಾರ್ಯಕರ್ತರ ಜತೆಗೆ ಮಾತನಾಡುವಾಗ ಶಾಸಕರಾದ ವಿನಯ ಕುಲಕರ್ಣಿ ಅವರು, ರೈತರ ಸಮಸ್ಯೆ ಬಗ್ಗೆ ವಿಡಿಯೋ ಕಾಲ್ ಮಾಡಿದ್ದು, ಅದನ್ನು ಬ್ಲ್ಯಾಕ್ ಮೇಲ್ ಮಾಡುವ ಕೆಲಸ ನಡೆಯುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಪ್ರತಿಪಕ್ಷದ ನಾಯಕ ರಾಜು ಕಮತಿ, ಸದಸ್ಯರಾದ ದೀಪಾ ಸಂತೋಷ ನೀರಲಕಟ್ಟಿ, ಪ್ರಕಾಶ ಘಾಟಗೆ, ಮುಖಂಡರಾದ ಪರಮೇಶ ಕಾಳೆ, ಚನ್ನಬಸಪ್ಪ ಮಟ್ಟಿ, ಸಿದ್ದಣ್ಣ ಪ್ಯಾಟಿ, ಸಂಜೀವ ಲಕಮನಹಳ್ಳಿ, ಗಿರೀಶ ಕಲ್ಲಾಪೂರ, ಉಪಸ್ಥಿತರಿದ್ದರು.

ಹಳ್ಳಗಳ ಪ್ರವಾಹ; ಪರಿಹಾರ ಒದಗಿಸದಿದ್ದರೇ ಹೋರಾಟ

ನವಲಗುಂದ: ಬೆಣ್ಣೆಹಳ್ಳ ಮತ್ತು ತುಪ್ಪರಿಹಳ್ಳದ ಪ್ರವಾಹ ಮತ್ತು ಮಳೆಯಿಂದ ನಲುಗಿ ಹೋದವರಿಗೆ ತಕ್ಷಣವೇ ಸರಕಾರ ಪರಿಹಾರ ಒದಗಿಸಬೇಕೆಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಆಗ್ರಹಿಸಿದ್ದಾರೆ.

ಭಾರತೀಯ ಜನತಾ ಪಕ್ಷ ರಾಜ್ಯದಲ್ಲಿ ಅಧಿಕಾರ ಹೊಂದಿದ ಸಮಯದಲ್ಲಿ ಮಳೆ ಮತ್ತು ಪ್ರವಾಹದಿಂದ ನೊಂದವರಿಗೆ ತಕ್ಷಣವೇ ಪರಿಹಾರ ನೀಡಲಾಗಿತ್ತು. ಅದೇ ಎಬಿಸಿ ಮಾದರಿಯಲ್ಲಿ 10, 5 ಮತ್ತು 2.5ಲಕ್ಷ ರು.ಪಾಯಿ ಹಣವನ್ನ ಪರಿಹಾರ ನೀಡಬೇಕು. ಸಂಪೂರ್ಣ ಹಾನಿಯಾದ ಮನೆಗಳಿಗೆ ಹತ್ತು ಲಕ್ಷ ರು. ಭಾಗಶಃ ಜಖಂಗೊಂಡ ಮನೆಗಳಿಗೆ ಐದು ಲಕ್ಷ ರು. ಹಾಗೂ ಅಲ್ಪ ಪ್ರಮಾಣದಲ್ಲಿ ಬಿದ್ದಿರುವ ಮನೆಗಳಿಗೆ ಎರಡೂವರೆ ಲಕ್ಷ ರುಪಾಯಿ ನೀಡಬೇಕೆಂದು ಸರಕಾರವನ್ನ ಒತ್ತಾಯಿಸಿದ್ದಾರೆ. ಪ್ರವಾಹ ಮತ್ತು ಮಳೆಯಿಂದ ನೊಂದ ರೈತ ಕುಟುಂಬಗಳಿಗೆ ತಕ್ಷಣವೇ ಹಣ ಬಿಡುಗಡೆ ಮಾಡದೇ ಹೋದಲ್ಲಿ ರೈತ ಸಮೂಹದೊಂದಿಗೆ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಎಚ್ಚರಿಕೆ ನೀಡಿದ್ದಾರೆ.

ಶ್ರದ್ಧಾಪೂರ್ವಕವಾಗಿ ಸಂಪನ್ನಗೊಂಡ ಉರುಸ್

ಗಜೇಂದ್ರಗಢ: ಹಿಂದು ಮುಸ್ಲಿಂ ಭಾಂಧವರ ಭಾವೈಕ್ಯತೆ ಬೆಸೆಯುವ ಸ್ಥಳೀಯ ಬೆಟ್ಟದ ಮೇಲಿರುವ ಐತಿಹಾಸಿಕ ಹಜರತ್ ಸೈಯ್ಯದ ಶಹಾ ಮೆಹಬೂಬ ಸುಬ್ಹಾನಿ ಅವರ ಉರುಸ್ ಮಂಗಳವಾರ ಅಪಾರ ಭಕ್ತ ಸಮೂಹದ ಹರ್ಷೊದ್ಘಾರದ ಮಧ್ಯೆ ಸಂಭ್ರಮದಿಂದ ನಡೆಯಿತು.

ಬೆಳಗ್ಗೆ ದರ್ಗಾದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದವು. ಹಲವಾರು ರೋಗ ರುಜಿನಗಳ ನಿವಾರಕ ಶಕ್ತಿ ಹೊಂದಿ ಅಸಂಖ್ಯಾತ ಭಕ್ತರ ಆರಾಧ್ಯ ದೈವ ವೆನಿಸಿರುವ ಹಜರತ್ ಮೆಹಬೂಬ ಸುಬ್ಹಾನಿ ಅವರ ಭಾವೈಕ್ಯತಾ ಉರುಸ್ ಗೆ ಪಟ್ಟಣ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಭಕ್ತರು ಉರುಸನಲ್ಲಿ ಪಾಲ್ಗೊಂಡು ತಮ್ಮ ಇಷ್ಟಾರ್ಥ ಸಿದ್ದಿಗಾಗಿ ದೇವರಿಗೆ ಹರಕೆ, ಪೂಜೆ ಸಲ್ಲಿಸಿ ಭಕ್ತಿಯ ಪರಾಕಾಷ್ಟೆ ಮೆರೆದರು. ಬಳಿಕ ಸಾಮೂಹಿಕ ಅನ್ನಸಂತರ್ಪಣೆ ಜರುಗಿತು.

ಗಜೇಂದ್ರಗಢ ಬೆಟ್ಟದ ಮೇಲಿರುವ ಹಜರತ್ ಸೈಯ್ಯದ ಶಹಾ ಮೆಹಬೂಬ ಸುಬ್ಹಾನಿ ಅವರ ಗದ್ದುಗೆ ಉರುಸ್ ಪ್ರಯುಕ್ತ ಪುಷ್ಪಗಳಿಂದ ಅಲಂಕರಿಸಿರುವುದು.

ಧಾರವಾಡ ಸ್ತಬ್ದಚಿತ್ರಕ್ಕೆ ರಾಜ್ಯಮಟ್ಟದ ದ್ವಿತೀಯ ಪ್ರಶಸ್ತಿ

ಧಾರವಾಡ: ಪ್ರಸಕ್ತ ಸಾಲಿನ ಮೈಸೂರು ದಸರಾ ಮಹೋತ್ಸದಲ್ಲಿ ಭಾಗವಹಿಸಿದ್ದ ಧಾರವಾಡ ಜಿಲ್ಲಾ ಪಂಚಾಯತ ಸ್ತಬ್ದಚಿತ್ರಕ್ಕೆ ರಾಜ್ಯಮಟ್ಟದ ದ್ವಿತೀಯ ಪ್ರಶಸ್ತಿ ಲಭಿಸಿದ್ದು, ದಸರಾ ಮಹೋತ್ಸವದ ಸ್ತಬ್ದಚಿತ್ರ ಉಪ ಸಮಿತಿ ಫಲಿತಾಂಶ ಪ್ರಕಟಿಸಿದೆ.

ಇಸ್ರೋ ಗಗನಯಾನದಲ್ಲಿ ಹಣ್ಣಿನ ನೋಣಗಳ ಕುರಿತು ಧಾರವಾಡ ಜಿಲ್ಲಾ ಪಂಚಾಯತಿಯಿಂದ ಸ್ತಬ್ದ ಚಿತ್ರ ರೂಪಿಸಲಾಗಿತ್ತು. ಅತ್ಯುತ್ತಮ ಸ್ತಬ್ದಚಿತ್ರ ಆಯ್ಕೆಗಾಗಿನ ತಜ್ಞರ ಸಮಿತಿ ದಸರಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಎಲ್ಲ ಜಿಲ್ಲೆಗಳ ಸ್ತಬ್ದ ಚಿತ್ರಗಳನ್ನು ಪರುಶೀಲಿಸಿ, ವಿನೂತನವಾದ ಮತ್ತು ಹೊಸ ವೈಜ್ಞಾನಿಕ ಸಂದೇಶ ಹೊಂದಿದ್ದ ಧಾರವಾಡ ಜಿಲ್ಲೆಯ ಸ್ತಬ್ದಚಿತ್ರವನ್ನು ದ್ವಿತೀಯ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಸ್ತಬ್ದಚಿತ್ರ ವಿಭಾಗದಲ್ಲಿ ದ್ವಿತೀಯ ಪ್ರಶಸ್ತಿ ಪಡೆಯುವ

ಮೂಲಕ ಜಿಲ್ಲೆಗೆ ಗೌರವ ತಂದಿರುವ ಜಿಲ್ಲಾ ಪಂಚಾಯತ ಸಿಇಓ ಸ್ವರೂಪ ಟಿ.ಕೆ ಅವರು ಮತ್ತು ಅವರ ನೇತೃತ್ವದ ಅಧಿಕಾರಿಗಳ ತಂಡವನ್ನು ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್, ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಅಭಿನಂದಿಸಿದ್ದಾರೆ.

ಕಲ್ಯಾಣವೃಷ್ಟಿ ಸ್ತೋತ್ರ ಸಮರ್ಪಣೆ ಇಂದು

ಧಾರವಾಡ: ಉಭಯ ಜಗದ್ಗುರುಗಳ ಆಶೀರ್ವಾದದಿಂದ ಅ.16 , 2024 ರಂದು ಶ್ರೀ ವಿದ್ಯಾಭಾರತೀ ಸಭಾಭವನ ಶ್ರೀಶೃಂಗೇರಿ ಶಂಕರಮಠ ಧಾರವಾಡ ದಲ್ಲಿ ಜಿಲ್ಲಾಮಟ್ಟದ ಕಲ್ಯಾಣವೃಷ್ಟಿ ಮಹಭಿಯಾನ ಸ್ತೋತ್ರ ಸಮರ್ಪಣೆ ಮಹೋತ್ಸವ ಕಾರ್ಯಕ್ರಮ ಅತಿ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ಈ ಕಾರ್ಯಕ್ರಮಕ್ಕೆ ಶೃಂಗೇರಿ ಜಗದ್ಗುರುಗಳ ಪ್ರತಿನಿಧಿಯಾಗಿ ಉಮೇಶ್ ಹರಿಹರ, ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನದ ಜಿಲ್ಲಾಧ್ಯಕ್ಷರಾದ ರವಿ ದೇಶಪಾಂಡೆ, ಮುಖ್ಯ ಅತಿಥಿಯಾಗಿ ಜಿ.ಆರ್ ಪಾಟೀಲ್ ಹಾಗೂ ಧಾರವಾಡ ಶೃಂಗೇರಿ ಶಾಕಾ ಮಠದ ವ್ಯವಸ್ಥಾಪಕರಾದ ವಿಠ್ಠಲ್ ನಾರಾಯಣ ಶೆಟ್ಟಿ ಹಾಗೂ ವಿವಿಧ ಮಹಿಳಾ ಮಂಡಳ ಮತ್ತು ಆಸ್ತಿಕ ಮಹಾಜನರ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನೆರವೇರುವುದು.

ಶೃಂಗೇರಿ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ 50ನೇ ವರ್ಷ ಸನ್ಯಾಸ ಸ್ವೀಕಾರ ಮಹೋತ್ಸವ ನಿಮಿತ್ತ ಇದನ್ನು ಆಯೋಜನೆ ಮಾಡಲಾಗಿದೆ.

ಅಲ್ಲದೆ ಶ್ರೀಮಠದ ಆದೇಶದಂತೆ ಎಲ್ಲಾ ಶಾಖಾಮಠದಲ್ಲಿ ಸುವರ್ಣ ಭಾರತಿ ಮಹೋತ್ಸವದ ಅಡಿಯಲ್ಲಿ ಅನೇಕ ಸಾಮಾಜಿಕ ಸೇವೆಯನ್ನು ಈಗಾಗಲೇ ಕೈಗೊಳ್ಳಲಾಗಿದೆ ಅದರಂತೆ ಶೃಶೃಂಗೇರಿ ಶಂಕರ ಮಠ ಧಾರವಾಡ ಶಾಖ ಮಠವು ವಿದ್ಯಾರ್ಥಿಗಳಿಗೆ ಶಾಲಾ ಫೀ, ಪುಸ್ತಕ ವಿತರಣೆ, ಆರೋಗ್ಯ ಶಿಬಿರ, ವನಮಹೋತ್ಸವ, ಅನಾಥಾಶ್ರಮದ ಮಕ್ಕಳಿಗೆ ಫುಟ್ ಕಿಟ್, ಹಾಟ್ ವಾಟರ್ ಡಿಸ್ಪೆನ್ಸರ್, ಪ್ರವಚನ ಮಾಲಿಕೆ, ವಿವಿಧ ಮಹಿಳಾ ಮಂಡಳಿಯಿಂದ ಭಜನಾ ಸಮರ್ಪಣೆ ಹಾಗೂ ವಾನಪ್ರಸ್ಥಾಶ್ರಮಕ್ಕೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳು ಈಗಾಗಲೇ ಸಂಪನ್ನಗೊಂಡಿದೆ ಮತ್ತೆ ಮುಂಬರುವ ದಿನಗಳಲ್ಲಿ ಹೆಚ್ಚಿನ ಸೇವೆ ಮಾಡಲು ತೀರ್ಮಾನಿಸಲಾಗಿದೆ.

ಶ್ರೀಗಳ ಸಂನ್ಯಾಸ ಸ್ವೀಕಾರದ ಐವತ್ತನೆಯ ವರ್ಷದ ಸ್ವರ್ಣಮಹೋತ್ಸವವನ್ನು ಸುವರ್ಣಭಾರತೀ ಎಂಬ ಹೆಸರಿನಲ್ಲಿ ವರ್ಷಪೂರ್ತಿ ಆಚರಿಸಬೇಕೆಂದು ತತ್ಕರಕಮಲ ಸಂಜಾತರಾದ ಜಗದ್ಗುರು ಶ್ರೀ ವಿಧುಶೇಖರಭಾರತೀ ಮಹಾಸ್ವಾಮಿಗಳವರು ಸಂಕಲ್ಪಿಸಿದ್ದಾರೆ. ತದನುಸಾರ ಲೋಕಕ್ಷೇಮಾರ್ಥವಾಗಿ ಪಂಚಾಯತನ ದೇವತಾರಾಧನೆ ಮೊದಲಾದ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಲಿದ್ದು, ಅವುಗಳಲ್ಲಿ ಶಾಂಕರ ಸ್ತೋತ್ರ ಸಮರ್ಪಣೆಯೂ ಒಂದಾಗಿದೆ.

ಉಭಯ ಜಗದ್ಗುರುಗಳವರ ಅಪ್ಪಣೆ ಹಾಗೂ ಅನುಗ್ರಹದೊಂದಿಗೆ ಶ್ರೀಮಠದ ಶ್ರೀಶಾಂಕರ ತತ್ತ್ವ ಪ್ರಸಾರ ಅಭಿಯಾನ ಮತ್ತು ವೇದಾಂತಭಾರತೀ ಸ್ತೋತ್ರಗಳ ವಿಶೇಷ ಮಹಾಭಿಯಾನವನ್ನು ಕೈಗೊಂಡಿವೆ. ಶ್ರೀಶಂಕರಭಗವತ್ಪಾದರಿಂದ ರಚಿತವಾದ ಈ ಮೂರು ಸ್ತೋತ್ರಗಳು ಪ್ರತಿಯೊಬ್ಬರಿಗೂ ಅತ್ಯಂತ ಪುಣ್ಯವನ್ನುಂಟುಮಾಡಿ, ವಿಶೇಷ ಫಲಗಳನ್ನು ನೀಡುವ ಸಾಮರ್ಥ್ಯವುಳ್ಳದ್ದಾಗಿವೆ.

ಶ್ರೀವಿದ್ಯಾ ಪಂಚದಶಾಕ್ಷರಿ ಮಹಾಮಂತ್ರದ ಅಕ್ಷರಗಳಿಂದ ಪ್ರತಿ ಶ್ಲೋಕವೂ ಪ್ರಾರಂಭವಾಗುತ್ತದೆ. ಜಗನ್ಮಾತೆಯನ್ನು ಸ್ತುತಿಸುವ ಈ ಸ್ತೋತ್ರವು ಕಲ್ಯಾಣವೃಷ್ಟಿಯನ್ನು ಸುರಿಸಬಲ್ಲದು. ಲಕ್ಷ್ಮೀನರಸಿಂಹ ಸ್ವಾಮಿಯನ್ನು ಸ್ತುತಿಸುವ ಕರಾವಲಂಬಸ್ತೋತ್ರವು ಸಂಸಾರದುಃಖವನ್ನು ದಾಟಿಸುತ್ತದೆ. ಪ್ರತಿ ಶ್ಲೋಕದ ನಾಲ್ಕು ಪಂಕ್ತಿಗಳಲ್ಲಿ ಶಿವಪಂಚಾಕ್ಷರೀ ಮಂತ್ರವನ್ನು ಹೊಂದಿರುವ ಶಿವಪಂಚಾಕ್ಷರ ನಕ್ಷತ್ರಮಾಲಾಸ್ತೋತ್ರದಲ್ಲಿ 108 ಬಾರಿ ಶಿವಪಂಚಾಕ್ಷರೀ ಮಂತ್ರವನ್ನು ಉಲ್ಲೇಖಿಸಿ, ಸರಳವಾಗಿ ಶಿವತತ್ತ್ವವನ್ನು ಆಚಾರ್ಯರು ಉಪದೇಶಿಸಿದ್ದಾರೆ. ಈ ಮಂತ್ರದ ಉಚ್ಚಾರಣೆಯಿಂದ ಸಾಧಕನ ಮನೋಭೀಷ್ಟಗಳು ನೆರವೇರುವುದರಲ್ಲಿ ಸಂದೇಹವಿಲ್ಲ.

ಈ ಮಹಾಭಿಯಾನದಲ್ಲಿ ಆಸ್ತಕರೆಲ್ಲರೂ ಭಾಗವಹಿಸಿ, ಶ್ರೀ ಆದಿ ಶಂಕರಾಚಾರ್ಯರ ಹಾಗೂ ಉಭಯ ಜಗದ್ಗುರು ಮಹಾಸ್ವಾಮಿಗಳವರ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಕಟಣೆಯಲ್ಲಿ ಕೋರಲಾಗಿದೆ.

ರೈತರಿಗೆ ಕೈಗೆ ಬಂದ ತುತ್ತು ಬಾಯಿಗೆ ಇಲ್ಲ

ಕಲಘಟಗಿ: ಧಾರವಾಡ ಜಿಲ್ಲೆಯಲ್ಲಿ ರೈತನ ಸ್ಥಿತಿ ಹೇಗಿದೆ ಎಂದರೆ, ಮಳೆಯನ್ನು ನಂಬಿ ಜೀವನ ನಡೆಸುವ ರೈತನಿಗೆ ಮಳೆಯೇ ಕಂಟಕವಾಗುತ್ತಿದೆ.

ರೈತನಿಗೆ ಮಳೆ ಬರದಿದ್ದರೆ ಒಂದು ಕಷ್ಟ. ಅತಿಯಾಗಿ ಮಳೆ ಬಂದರೆ ಇನ್ನೊಂದು ಕಷ್ಟ. ಇವೆರಡರ ನಡುವೆ ರೈತ ಸಂಕಷ್ಟಕ್ಕೆ ಇಡಾಗಿದ್ದಾನೆ. ಕಲಘಟಗಿ ತಾಲ್ಲೂಕಿನ ರೈತರ ಸ್ಥಿತಿ ಅಯೋಮಯವಾಗಿದೆ.

ಇಲ್ಲಿಯ ರೈತರು ಪ್ರಕೃತಿಯ ಬದಲಾವಣೆಗೆ ಬೇಸತ್ತು ಹೋಗಿದ್ದಾನೆ. ಯಾಕೆಂದರೆ ವರ್ಷದಂತೆ ವರ್ಷವು ಇಲ್ಲಿ ಮಳೆಯ ಬದಲಾವಣೆಗೆ ರೈತನಿಗೆ ದಿಕ್ಕು ತೋಚದಂತಾಗಿದೆ.

ಕಲಘಟಗಿ ತಾಲ್ಲೂಕಿನ ರೈತರು ಹಲವು ವರ್ಷಗಳಿಂದ ತಮ್ಮ ಹೊಲಗಳಲ್ಲಿ ಕಬ್ಬಿಗೆ ಮೊರೆ ಹೋಗಿದ್ದಾರೆ ಕಳೆದ ವರ್ಷ ಮಳೆ ಕಡಿಮೆ ಯಾಗಿದ್ದರಿಂದ ಕಬ್ಬಿನ ಬೆಳೆ ಇಳುವರಿ ಬಾರದೆ ಇರುವುದರಿಂದ ರೈತ ಸಂಕಷ್ಟ ಎದುರಿಸಿದ್ದಾನೆ.

ಈ ವರ್ಷ ಅದೇ ರೀತಿ ನಷ್ಟ ಅನುಭವಿಸಬಾರದು ಎಂದು ಬಹಳಷ್ಟು ರೈತರು ಕಬ್ಬುಗಳನ್ನು ತೆಗೆದು ಗೋವಿನ ಜೋಳಕ್ಕೆ ಮೊರೆ ಹೋಗಿದ್ದಾರೆ.

ಆದರೆ ರೈತನ ದುರದೃಷ್ಟಕ್ಕೆ ಈ ವರ್ಷ ಹೆಚ್ಚು ಮಳೆ ಆಗಿರುವ ಕಾರಣ ಹೊಲಗಳಲ್ಲಿ ನೀರು ನಿಂತು ಗೋವಿನ ಜೋಳ ಬೆಳೆ ಸಂಪೂರ್ಣ ಹಾಳು ಆಗಿರುವ ಕಾರಣ ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಗಿದೆ.

ರಾಜ್ಯ ಹಾಗೂ ಕೇಂದ್ರ ಸರಕಾರುಗಳು ಇತ್ತಕಡೆ ಗಮನ ಹರಿಸಿ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಶೀಘ್ರವಾಗಿ ಪರಿಹಾರ ನೀಡಬೇಕು ಎಂದು ಇಲ್ಲಿಯ ರೈತರು ಮನವಿ ಮಾಡಿದ್ದಾರೆ.

ಕಳೆದಬಾರಿ ಸರಿಯಾಗಿ ಮಳೆ ಬಾರದೆ ಕಬ್ಬಿನ ಇಳುವರಿ ಬಾರದೆ ನಷ್ಟ ಅನುಭವಿಸಿದ್ದೇನೆ. ಈ ಬಾರಿ ಅರ್ಧ ಹೊಲದಲ್ಲಿ ಗೋವಿನ ಜೋಳ ಹಾಕಿದ್ದೆ. ಆದರೆ ಅತಿಯಾದ ಮಳೆ ಇಂದಾಗಿ ಸಂಪೂರ್ಣ ನಷ್ಟವಾಗಿದೆ. ಸರಕಾರವೂ ನಷ್ಟ ಅನುಭವಿಸಿರುವ ತಾಲೂಕಿನ ಎಲ್ಲ ರೈತರಿಗೆ ಪರಿಹಾರ ಘೋಷಣೆ ಮಾಡಬೇಕು.

-ಸಹದೇವ ಹರಮಣ್ಣವರ ರೈತ

ಮಳೆಗೆ ನಾಲ್ವರು ಸಾವು | ತಗ್ಗು ಪ್ರದೇಶಗಳು ಜಲಮಯ | ನಿರಂತರ ಮಳೆಯಿಂದ ಕಂಗೆಟ್ಟ ಜನ

ರಾಜ್ಯಾದ್ಯಂತ ಬೆಂಬಿಡದ ಮಳೆ ರಗಳೆ

ಬೆಂಗಳೂರು: ರಾಜ್ಯಾದ್ಯಂತ ಬಿಟ್ಟು ಬಿಡದೆ ಮಳೆ ಸುರಿಯುತ್ತಿರುವ ಕಾರಣ ದಿನನಿತ್ಯದ ಕೆಲಸ -ಕಾರ್ಯಗಳಿಗೆ ವರುಣ ಅಡ್ಡಿಯಾಗಿದ್ದಾನೆ. ಬೆಂಗಳೂ ರು ನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಮೈಸೂರು ಹಾಗೂ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಹಾಸನ , ಚಾಮರಾಜನಗರ, ಕೊಡಗು, ಉಡುಪಿ, ದಕ್ಷಿಣ ಕನ್ನಡ, ಉತ್ತರಕನ್ನಡಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆಯಿದೆ.ಈ ಜಿಲ್ಲೆಗಳಿಗೆ ಬುಧವಾರ ಯೆಲ್ಲೋ ಅಲರ್ಟ್ ಹಾಗೂ ಅ. 17ರಂದು ಆರೆಂಜ್ ಅಲರ್ಟ್ ಘೋಷಣೆ ಮಾಡಲಾಗಿದೆ.

ಮಲೆನಾಡು ಶಿವಮೊಗ್ಗದಲ್ಲೂ ಬೆಳಗ್ಗೆಯಿಂದಲೇ ಧಾರಾಕಾರ ಮಳೆ ಸುರಿಯುತ್ತಿದೆ. ಎಡಬಿಡದೆ ಸುರಿ ಯುತ್ತಿರುವ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ನದಿ, ಹಳ್ಳ-ಕೊಳ್ಳಗಳು ಜೀವಕಳೆ ಪಡೆದುಕೊಂಡಿವೆ.

ದಾವಣಗೆರೆಯಲ್ಲಿ ಮಲೆನಾಡು ವಾತಾವರಣ: ದಾವಣಗೆರೆ ಜಿಲ್ಲೆಯಲ್ಲಿ ಜಿಟಿಜಿಟಿ ಮಳೆಯಿಂದಾಗಿ ಕಳೆದ ಒಂದು ವಾರದಿಂದ ಬಹುತೇಕ ಕಡೆ ಮಲೆನಾಡಿನ ವಾತಾವರಣ ನಿರ್ಮಾಣವಾಗಿದೆ. ರಾತ್ರಿಯಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಜನರು ಮನೆ ಬಿಟ್ಟು ಹೊರಗೆ ಬಾರದಂತಾಗಿದೆ.ಅಣ್ಣಾಪುರ, ನರಗನಹಳ್ಳಿ, ಹೊನ್ನಾಯಕನಹಳ್ಳಿ , ಸುಲ್ತಾನಿಪುರ ಮೊದಲಾದ ಗ್ರಾಮಗಳಲ್ಲಿ ನಿರಂತರ ಮಳೆಯಾಗಿದೆ. ಮಳೆಯಿಂದ ಅಡಕೆ ,ತೆಂಗಿನ ತೋಟಗಳ ರೈತರಲ್ಲಿ ಸಂತಸ ಮೂಡಿದೆ.

ಅತಿವೃಷ್ಟಿಯಿಂದ ಕಾಫಿನಾಡು ಹೈರಾಣು: ಚಿಕ್ಕಮಗಳೂರಿನಲ್ಲಿ ವರುಣನ ಅಬ್ಬರ ಜೋರಾಗಿದ್ದು ಜನಜೀವನ ಅಸ್ತವ್ಯಸ್ತಗೊಂಡಿದೆ. ಮಂಗಳವಾರ ಬೆಳಗ್ಗೆಯಿಂದಲೂ ಕಳಸ, ಕುದುರೆಮುಖ, ಹೊರನಾಡು ಭಾಗದಲ್ಲಿ ಭಾರಿ ಮಳೆಯಾಗುತ್ತಿದ್ದು ವಾಣಿಜ್ಯ ಬೆಳೆ ಕಾಫಿ, ಅಡಕೆ, ಮೆಣಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತಾಗಿದೆ. ನಿರಂತರ ಮಳೆಯಿಂದ ಗುಡ್ಡಗಾಡು ತಪ್ಪಲಿನ ಗ್ರಾಮಗಳ ಜನರಲ್ಲಿ ಆತಂಕ ಹೆಚ್ಚಾಗಿದೆ.

ಬಿರುಗಾಳಿ ಮಳೆಗೆ ನೆಲಕ್ಕುರುಳಿದ ಟೆಂಟ್: ಬಿರುಗಾಳಿ ಸಹಿತ ಭಾರೀ ಮಳೆಗೆ ಡ್ರಾಮಾ ಟೆಂಟ್ ನೆಲಕ್ಕುರುಳಿದೆ. ಗದಗ ಜಿಲ್ಲೆಯ ಮುಂಡರಗಿಯಲ್ಲಿ ಘಟನೆ ನಡೆದಿದೆ. ಚಿತ್ತರಗಿಯ ಶ್ರೀ ಕುಮಾರವಿಜಯ ನಾಟಕ ಸಂಘದ ಬೃಹತ್ ಗಾತ್ರದ ಟೆಂಟ್‌ಗೆ ಹಾನಿಯಾಗಿದೆ. ಪಟ್ಟಣದ ಅನ್ನದಾನೀಶ್ವರ ಮಠದಲ್ಲಿ ಹಾಕಲಾಗಿದ್ದ ನಾಟಕದ ಬೃಹತ್ ರಂಗಮಂದಿರ ಸಜ್ಜಿಕೆ, ಬಿರುಗಾಳಿಸಹಿತ ಮಳೆ ಬಂದ ಹಿನ್ನೆಲೆಯಲ್ಲಿ ಧರೆಗುರುಳಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಇಲ್ಲ. ಕಲೆಯನ್ನೇ ನಂಬಿ ಜೀವನ ಸಾಗಿಸುತ್ತಿದ್ದ ಕಲಾವಿದರ ಬದುಕು ಬೀದಿಗೆ ಬಿದ್ದಿದೆ. ನಾಟಕದ ಹಿನ್ನೆಲೆ ದೃಶ್ಯ,ಧ್ವನಿವರ್ಧಕ ವ್ಯವಸ್ಥೆ, ಲೈಟಿಂಗ್, ಕುರ್ಚಿ ಸೇರಿದಂತೆ 12 ಲಕ್ಷಕ್ಕೂ ಹೆಚ್ಚು ಹಾನಿಯಾಗಿದೆ. ಒಂದು ಕಾರು, ಎರಡು ಬೈಕ್‌ಗಳು ಜಖಂಗೊಂಡಿದೆ.

ಸಿಡಿಲು ಬಡಿದು ರೈತ ಸಾವು

ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಯಲಸತ್ತಿಯಲ್ಲಿ ಮಂಗಳವಾರ ಸಿಡಿಲು ಬಡಿದು ರೈತ ದೇವಪ್ಪ (35) ಮೃತಪಟ್ಟಿದ್ದಾರೆ. ಸಂಜೆ ವೇಳೆ ಜಮೀನಿನಲ್ಲಿ ಬಿಡಿಸಿದ್ದ ಹತ್ತಿ ಬೆಳೆಯನ್ನು ವಾಹನದಲ್ಲಿ ಲೋಡ್ ಮಾಡುವಾಗ ಸಿಡಿಲು ಬಡಿದು ರೈತ ದೇವಪ್ಪ ಸಾವಿಗೀಡಾದ್ದಾರೆ. ಮೂವರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಗೋಡೆ ಕುಸಿತ

ಚಾಮರಾಜನಗರ ಜಿಲ್ಲೆಯಲ್ಲಿ ಎಡೆಬಿಡದೆ ಸುರಿಯುತ್ತಿರುವ ಧಾರಾಕಾರ ಮಳೆಗೆ ತಾಲೂಕಿನ ತೆಳ್ಳನೂರು, ಗುಂಡ್ಲುಪೇಟೆ ತಾಲೂಕಿನ ಬೇಗೂರು ಗ್ರಾಮಗಳಲ್ಲಿ ಮನೆಗಳ ಗೋಡೆ ಕುಸಿದಿದ್ದು, ಯಾವುದೇ ಜೀವಹಾನಿ ಸಂಭವಿಸಿಲ್ಲ. ತೆಳ್ಳನೂರು ಗ್ರಾಮದ ಸುಬ್ಬಮ್ಮ, ಬೇಗೂರಿನ ರತ್ನಮ್ಮ ಎಂಬವರ ಮನೆ ಗೋಡೆ ಮಳೆಗೆ ನೆಲಕ್ಕುರುಳಿವೆ.

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ

ಸಂ. ಎ2/ಬಜೆಟ್/ಟೆಂಡರ/ವಿವ-55/2024-25 ದಿನಾಂಕ: 08.10.2024.

ಟೆಂಡರ ಪ್ರಕಟಣೆ

2024-25 ನೇ ಸಾಲಿಗೆ ಹೊನ್ನಾವರ ಅರಣ್ಯ ವಿಭಾಗದಲ್ಲಿ ಅತಿಕ್ರಮಣ ತಡೆಗಟ್ಟುವ ಕುರಿತಂತೆ ರಕ್ಷಣಾ ಕಾಮಗಾರಿ ಕೆಲಸಗಳ 2ನೇ ಬಾರಿ ದಿನಾಂಕ: 18.10.2024 ರಂದು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ ಕರೆಯಲಾಗಿದೆ. ಸದರ ಕಾಮಗಾರಿಗಳ ಅಂದಾಜು ಮೊತ್ತ ರೂ. 36.00 ಲಕ್ಷ ಆಗಿರುತ್ತದೆ.

ಆಸಕ್ತ ಟೆಂಡರುದಾರರು https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387-295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ

DIPR/ADK/KSMCA/425/24-25 Dt.15.10.2024

ಅತ್ತಿಬೆಲೆ ಪುರಸಭೆ ಕಾರ್ಯಾಲಯ

ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562107
ದೂರವಾಣಿ ಸಂಖ್ಯೆ: 080-27821501, ಇ-ಮೇಲ್: itstaff_ulb_attibele@yahoo.com
ವೆಬ್‌ಸೈಟ್: www.attibeletown.mrc.gov.in

ಸಂಖ್ಯೆ: ಅಪುಸ:ಕಾವಿ:ಟೆಂಡರ್/ಎಸ್.ಬಿ.ಎಂ 06/2024-25 ದಿನಾಂಕ: 15.10.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 1999-2000 ಪ್ರಕಾರ ಆಕ್ಟ್ 2000ರ ನಿಯಮದಂತೆ ಅತ್ತಿಬೆಲೆ ಪುರಸಭೆಯ 2024-25ನೇ ಸಾಲಿನ ಪುರಸಭಾ ನಿಧಿ, ಎಸ್.ಬಿ.ಎಂ (2.0) ನಿಧಿಯಡಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ.2 ರಂತೆ ಈ ಕೆಳಕಂಡ ಕಾಮಗಾರಿಗಳಂತೆ ಇಂಡೆಂಟ್ ಸಂಖ್ಯೆ: DMA/2024-25/OW/WORK_INDNET31030 & DMA/2024-25/OW/WORK_INDNT28601(CALL-2) ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಈ ಕಛೇರಿಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಕೆ.ಪಿ.ಪಿ. ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಕಛೇರಿಯ ಅಭಿಯಂತರರ ಶಾಖೆಯಿಂದ ಪಡೆಯಹುದಾಗಿದೆ.

ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

- * ಕೆ.ಪಿ.ಪಿ ಪ್ರೊರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ ಕೆ.ಪಿ.ಪಿ ಪೋರ್ಟಲ್‌ನಂತೆ.
- * ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಕೆ.ಪಿ.ಪಿ ಪೋರ್ಟಲ್‌ನಂತೆ
- * ಟೆಂಡರ್ ತೆರೆಯುವ ದಿನಾಂಕ ಕೆ.ಪಿ.ಪಿ ಪೋರ್ಟಲ್‌ನಂತೆ

ಸಹಿ/- ಮುಖ್ಯಾಧಿಕಾರಿ ಪುರಸಭೆ, ಅತ್ತಿಬೆಲೆ

ವಾಸಾಸಂಇ/ವಾ.ಪ್ರ/2535/ಎಸ್‌ಎಸ್‌ಸಿ/2024-25

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
59, ರಿಚ್‌ಮಂಡ್ ರಸ್ತೆ, (ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ), ಬೆಂಗಳೂರು - 25.
ದೂ: 080 - 25584102/25594893. ವೆಬ್‌ಸೈಟ್: www.ksphc.org
ಕಾರ್ಯನಿರ್ವಾಹಕ ಅಭಿಯಂತರರು - ಗುತ್ತಿಗೆ ಇ ಮೇಲ್ : eecontractksphc@gmail.com

ಸಂಖ್ಯೆ ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್ಸ್/ಟಿಎನ್‌ಡಿ/07/2024-25/289 ದಿನಾಂಕ: 15.10.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ ಮತ್ತು ಮೂಸೌಅನಿನಿ ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ದಾಖಲಾತಿ ಪ್ರಕಾರ https://kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

1. **ಬೆಂಗಳೂರಿನ ಎನ್‌ಟಿ ರಸ್ತೆ ಡಿಜಿ & ಐಜಿಪಿ ಕಛೇರಿಯ 7ನೇ ಮಹಡಿಯಲ್ಲಿರುವ ಸಭಾಂಗಣದ ಹವಾ ನಿಯಂತ್ರಣಗಳನ್ನು ಬದಲಾಯಿಸುವುದು** (ಕೆಡಬ್ಲ್ಯೂ-2) (ಎರಡು ಟೆಂಡರ್ ದಾಖಲಾತಿ ವ್ಯವಸ್ಥೆ). (ಟೆಂಡರಿಗಿಟ್ಟ ಮೊತ್ತ ರೂ. 30.60 ಲಕ್ಷಗಳು - ಜಿಎಸ್‌ಟಿ ಹೊರತುಪಡಿಸಿ).
2. **ಮೈಸೂರಿನ ಕೆಎಸ್‌ಆರ್‌ಪಿ ಪೆರೇಡ್ ಮೈದಾನದಲ್ಲಿ ಆಸನದ ಗ್ಯಾಲರಿ ಮತ್ತು ಫ್ಲಾಗ್ ಪೋಸ್ಟ್ ನಿರ್ಮಾಣ ಹಾಗೂ ಕೆಎಸ್‌ಆರ್‌ಪಿಯ ಶಸ್ತ್ರಾಗಾರ ಕಟ್ಟಡದ ಸುತ್ತಮುತ್ತ ತಂತಿ ಬೇಲಿ ಒದಗಿಸುವುದು** (ಕೆಡಬ್ಲ್ಯೂ-2) (ಎರಡು ಟೆಂಡರ್ ದಾಖಲಾತಿ ವ್ಯವಸ್ಥೆ). (ಟೆಂಡರಿಗಿಟ್ಟ ಮೊತ್ತ ರೂ. 32.41 ಲಕ್ಷಗಳು - ಜಿಎಸ್‌ಟಿ ಹೊರತುಪಡಿಸಿ).

ಮತ್ತು

3. **ವಾರ್ಷಿಕ 2024-25 ಸಾಲಿಗೆ ಕರಾಪೊವ ಮತ್ತು ಮೂಸೌಅನಿನಿಕ್ಕೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವುದು.** (ಸೇವೆಗಳು).

ಆಸಕ್ತಿವುಳ್ಳ ಅರ್ಹ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳು, ಇತ್ಯಾದಿ ಮುಂತಾದ ವಿವರಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಕೆಪಿಪಿಪಿ ನಲ್ಲಿ 18.10.2024 ರಿಂದ ಲಭ್ಯವಿರುವುದು.

"ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ".

ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಕೆಪಿಪಿಪಿನಲ್ಲಿ ಮಾತ್ರ ಪ್ರಕಟಿಸಲಾಗುವುದು.

ವಾ.ಸಾ.ಸಂ.ಇ/ವಾಪ್ರ/2533/ಆಕಾರ್/2024-25 ಸಹಿ/- ಕಾರ್ಯನಿರ್ವಾಹಕ ಅಭಿಯಂತರರು - ಗುತ್ತಿಗೆ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, (ಜಿಲ್ಲಾ ನಗರಾಭಿವೃದ್ಧಿ ಕೋಶ ಚಿತ್ರದುರ್ಗ-577501)

ಸಂಖ್ಯೆ ಜಿನಕೋ(2)ಇಂದಿರಾ ಕ್ಯಾ/ಸಿ.ಆರ್ 171/2023-24 ದಿನಾಂಕ:10/10/2024

ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಪ್ರದೇಶಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸಲು ಅರ್ಹ ಟೆಂಡರುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಈ ಕೆಳಕಂಡಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ.

ಸಂಕ್ಷಿಪ್ತ ವಿವರ:- ಚಿತ್ರದುರ್ಗ ಜಿಲ್ಲೆಯ ಪಟ್ಟಣ ಪಂಚಾಯಿತಿ ಮೊಳಕಾಲ್ಮುರು-01 ಸಂಖ್ಯೆ ಮತ್ತು ಪಟ್ಟಣ ಪಂಚಾಯಿತಿ ನಾಯಕನಹಟ್ಟಿ-01 ಸಂಖ್ಯೆಯ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸುವುದು. Indent No. DMA/2024-25/IND3704. **ವರ್ಷಕ್ಕೆ ಸರಕು ಮತ್ತು ಸೇವೆಗಳ ಅಂದಾಜು ಮೊತ್ತ:-** 90.52. **ಇಎಂಡಿ:-** 1.81. **ವಿತರಣಾ ವೇಳಾಪಟ್ಟಿ:-** ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ. ಆಸಕ್ತಿಯುಳ್ಳ ಆಹಾರ ಸರಬರಾಜು ಮಾಡುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://www.kppp.karnataka.gov.in ರಲ್ಲಿ ಟೆಂಡರ್ ದಸ್ತಾವೇಜುಗಳನ್ನು ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಸಹ ವಿದ್ಯುನ್ಮಾನವಾಗಿಯೇ ಸಲ್ಲಿಸುವುದು.

ಟೆಂಡರ್ ವೇಳಾಪಟ್ಟಿ :- 1) ಟೆಂಡರ್‌ನ ಬಗ್ಗೆ ವಿಚಾರಿಸಲು ಕೊನೆ ದಿ: 21-10-2024 17.30 ಘಂಟೆ 2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 28-10-2024 17.30 ಘಂಟೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 29-10-2024 17.30 ಘಂಟೆ 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಟೆಂಡರ್ ಕುರಿತಾದ ಹೆಚ್ಚಿನ ಮಾಹಿತಿಗಳನ್ನು ಮೇಲೆ ತಿಳಿಸಲಾದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಮತ್ತು ದಿನಪತ್ರಿಕೆ ಜಾಹಿರಾತು ಪ್ರಕಟಣೆಯಲ್ಲಿ ನೀಡಲಾಗುವುದಿಲ್ಲ.

DIPR/CTA/KSMCA/ 311/2024-25

ಸಹಿ/- ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ. ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ-583105.

ಸಂಖ್ಯೆ:ವಿಶ್ರೀಕೃವಿಬ/ಕಟ್ಟಡ/ಟೆಂಡರ್-57/2024-25/585 ದಿನಾಂಕ:09-10-2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ) 2ನೇ ಕರೆ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಕ್ರ.ಸಂ: 01) ಪ್ಯಾಕೇಜ್ ಸಂ: 02:ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಪ.ಜಾ&ಪ.ಪಂ. ಹುಡುಗರ ಹಾಸ್ಟೆಲ್ ಕಟ್ಟಡ 1ನೇ ವರ್ಷ, ಪ.ಜಾ&ಪ.ಪಂ. ಹುಡುಗರ ಹಾಸ್ಟೆಲ್ ಕಟ್ಟಡ 2ನೇ ವರ್ಷ, ಪ.ಜಾ&ಪ.ಪಂ. ಹುಡುಗಿಯರ ಹಾಸ್ಟೆಲ್ ಕಟ್ಟಡ 1ನೇ ವರ್ಷ, ಪ.ಜಾ&ಪ.ಪಂ. ಹುಡುಗಿಯರ ಹಾಸ್ಟೆಲ್ ಕಟ್ಟಡ 2ನೇ ವರ್ಷ, ವಿ.ವಿ.ಐ.ಪಿ ಗೆಸ್ಟ್ ಹೌಸ್ & ರಾಜ್ಯಪಾಲರ ಸೂಟ್ ಹಾಗೂ ಉದ್ಯೋಗಸ್ಥ ಮಹಿಳೆಯರ ಹಾಸ್ಟಲ್ ಬ್ಲಾಕ್ ಸಂಖ್ಯೆ:06 ಕಟ್ಟಡಗಳ ಸಂರಕ್ಷಣೆ ಮತ್ತು ವಿಶೇಷ ದುರಸ್ಥಿ ಕೆಲಸಗಳ ಕಾಮಗಾರಿ. (2ನೇ ಕರೆ) ರೂ. 89.06 ಲಕ್ಷಗಳು (ಜಿ.ಎಸ್.ಟಿ. ಸೇರಿದಂತೆ) ಕಾಮಗಾರಿಯನ್ನು ನಿರ್ವಹಿಸಲು (Standard Bid Documents, KW-3) ನಿಯಮಾನುಸಾರ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇ-ಪ್ರೋಕ್ಯೂರ್ ಮೆಂಟ್ ಮುಖಾಂತರ ಮಾತ್ರ ಟೆಂಡರನ್ನು ಸ್ವೀಕರಿಸಲಾಗುವುದು. ವಿವರಗಳಿಗೆ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ kppp.karnataka.gov.in. ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಸಂಪೂರ್ಣ ವಿವರಗಳನ್ನು ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/-ಕುಲಸಚಿವರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/484/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

ಇ-ಮೇಲ್: ceo_zp_mys@nic.in ದೂ.ಸಂ: 0821-2526301,330
ಸಂಖ್ಯೆ: ಇಎಸ್ ಟಿ (5)/25429/2022-23 ದಿನಾಂಕ: 14.10.2024

(ಇ-ಪ್ರೊಕ್ಯೂರ್‌ಮೆಂಟ್) ಟೆಂಡರ್ ಅಧಿಸೂಚನೆ

ವಿಷಯ: ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಜರುಗುವ ವಿವಿಧ ಸಭೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಉಪಹಾರ, ಊಟ, ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಕರೆಯುವ ಬಗ್ಗೆ. ವೆಬ್ ಸೈಟ್: https://Kppp.karnataka.gov.in/ ಅಲ್ಪಾವಧಿ ಟೆಂಡರ್ ಮೊತ್ತ ರೂ.12.00 ಲಕ್ಷ, ಇ.ಎಂ.ಡಿ.ಮೊತ್ತ - ರೂ.30,000/- (ಮೂವತ್ತು ಸಾವಿರ ರೂ ಗಳು ಮಾತ್ರ). ಟೆಂಡರ್ ಸಲ್ಲಿಸಲು ಕೊನೆಯ ದಿ: 28.10.2024ರ ಸಂಜೆ 05-00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿ: 29.10.2024ರ ಸಂಜೆ 05-00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/- ಟೆಂಡರ್ ಕರೆಯುವ ಪ್ರಾಧಿಕಾರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

DIPR/DDMYS-671/KSMCA-457/2024-25

ಸಣ್ಣ ನೀರಾವರಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಐ.ಎಫ್.ಟಿ. ಸಂ: 07/2024-25 ದಿನಾಂಕ: 15.10.2024

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್)-ಕೆ.ಡಬ್ಲ್ಯೂ-3 - 2ನೇ ಕರೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-3 ರ ಅನ್ವಯ 09 ಸಂಖ್ಯೆಯ ಶಿಕಾರಿಪುರ/ಸೊರಬ/ಶಿವಮೊಗ್ಗ ಉಪವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಕನಿಷ್ಟ ಮೊತ್ತ ರೂ.45.71 ಲಕ್ಷಗಳು ರಿಂದ 84.66 ಲಕ್ಷಗಳು, ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿನಾಂಕ:15.10.2024 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:25.10.2024, 16:30ಘಂಟೆ. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/24-25/53/10/843

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
ನಿಗಮ ಕಚೇರಿ, ಪಿ.ಬಿ. ರಸ್ತೆ, ನವನಗರ, ಹುಬ್ಬಳ್ಳಿ - 580025. ದೂರವಾಣಿ: 0836-2322771, ಫ್ಯಾಕ್ಸ್: 0836-2324307
ಇ-ಮೇಲ್ ಐಡಿ: md.hescom.kn@gmail.com / md.hescom@co.in CIN : U31401KA2002SGC030437

ಸಂಖ್ಯೆ:ಹು.ವಿ.ಸ.ಕಂ.ನಿ/ಅ.ಇ(ಕಾ)/ಸಕಾಇಂ(ಕಾ)/ಸಇಂ(ಕಾ)/ಕ-51/2024-25/ಸಿವೈಎಸ್-4809 ದಿನಾಂಕ: 14-10-2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಅಧೀಕ್ಷಕ ಇಂಜಿನೀಯರ್ (ಕಾ), ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ನಿಗಮ ಕಛೇರಿಗೆ Diesel Generator Set ಒದಗಿಸಲು ದ್ವಿ-ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ.ಪಿ ಮೂಲಕ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಯ ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಮೊತ್ತ (ಲಕ್ಷಗಳಲ್ಲಿ) ತೆರಿಗೆಗಳನ್ನು ಹೊರತುಪಡಿಸಿ	ಅವಧಿ	ಷರಾ
1	Providing, Installation and Commissioning of Diesel Generator Set at HESCOM Corporate Office, Navanagar, Hubballi.	9.48	2 (ತಿಂಗಳು)	ಸಾಮಾನ್ಯ

ಸದರಿ ಟೆಂಡರಿನ ಪೂರ್ಣ ವಿವರಗಳನ್ನು ವೆಬ್‌ಸೈಟ್: **https://www.kppp.karnataka.gov.in** ರಲ್ಲಿ ದಿನಾಂಕ: **15-10-2024 ರ ನಂತರ ಪಡೆಯಬಹುದು.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: **0836-2223323** ಮೂಲಕ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನೀಯರರು (ಕಾ), ನಿಗಮ ಕಛೇರಿ, ಹು.ವಿ.ಸ.ಕಂ.ನಿ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/514/ಅಡ್ವರ್ಟೋರ್/2024-25

ಉಪಸಮರಕ್ಕೆ ಅಖಾಡ ಸಜ್ಜು

← ಮೊದಲಪುಟದಿಂದ

ಶಿಗ್ಗಾವಿಯಿಂದ ಯಾಸೀರ್ ಅಹ್ಮದ್ ಪಠಾಣ್, ಸಂಜೀವ್ ಕುಮಾರ್ ನೀರಲಿ, ರಾಜೇಶ್ವರಿ ಪಾಟೀಲ್ ಹೆಸರು ಓಡುತ್ತಿದ್ದು, ಈ ಮೂವರಲ್ಲಿ ಯಾರಿಗೆ ಟಿಕೆಟ್ ನೀಡಬೇಕು ಎನ್ನುವುದನ್ನು ಪಕ್ಷದ ವರಿಷ್ಠರು ತೀರ್ಮಾನಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯೋಗೇಶ್ವರ ನಡೆ ಮೇಲೆ ಕೈ ತೀರ್ಮಾನ: ಈ ಉಪಚುನಾವಣೆಯಲ್ಲಿ ಎನ್‌ಡಿಎಗೆ ತಲೆಬಿಸಿಯಾಗಿರುವುದು ಚನ್ನಪಟ್ಟಣ ಕ್ಷೇತ್ರ. ಜೆಡಿಎಸ್ ಹಾಗೂ ಯೋಗೇಶ್ವರ ನಡುವೆ ಟಿಕೆಟ್ ಪೈಪೋಟಿ ಶುರುವಾಗಿದೆ. ಆದ್ದರಿಂದ ಎನ್‌ಡಿಎ ಅಭ್ಯರ್ಥಿ ಯಾರಾಗಲಿದ್ದಾರೆ ಎನ್ನುವುದರ ಮೇಲೆ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಘೋಷಿಸಲಿದೆ. ಒಂದು ವೇಳೆ ಎನ್‌ಡಿಎಯಿಂದ ನಿಖಿಲ್ ಸ್ಪರ್ಧಿಸಿದರೆ, ಯೋಗೇಶ್ವರ ಬಂಡಾಯ ಸ್ಪರ್ಧೆ ಖಚಿತವಾಗಲಿದೆ. ಆಗ ಅವರನ್ನು ಕಾಂಗ್ರೆಸ್‌ನತ್ತ ಸೆಳೆಯಬೇಕೋ ಅಥವಾ ಡಿ.ಕೆ.ಸುರೇಶ್ ಅವರನ್ನು ನಿಲ್ಲಿಸಬೇಕೋ ಎನ್ನುವ ಲೆಕ್ಕಾಚಾರಗಳು ನಡೆಯುತ್ತವೆ. ಒಂದು ವೇಳೆ ಜೆಡಿಎಸ್ ನಿಂದ ನಿಖಿಲ್ ನಿಲ್ಲದೇ, ಬೇರೆಯವರು ಸ್ಪರ್ಧಿಸಿದರೆ ಆಗಲೂ ಪುನಃ ತಂತ್ರಗಾರಿಕೆಯನ್ನು ಬದಲಿಸಬೇಕಾಗುತ್ತದೆ ಎನ್ನುವ ಆಲೋಚನೆ ಯಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ. ಈ ನಡುವೆ ಡಿ.ಕೆ.ಸುರೇಶ್ ಅವರೊಂದಿಗೆ ರಘುನಂದನ್ ರಾಮಣ್ಣ ಹೆಸರು ಓಡಾಡುತ್ತಿದೆ.

ವರಿಷ್ಠರ ನಿರ್ಧಾರಕ್ಕಾಗಿ ಕಾಯುತ್ತಿರುವ ಬಿಜೆಪಿ: ಚನ್ನಪಟ್ಟಣ ಟಿಕೆಟ್‌ಗೆ ಮೈತ್ರಿ ಪಕ್ಷದ ನಡುವೆ ಪೈಪೋಟಿಯಿದೆ. ಆದರೆ ಸಂಡೂರಿನಲ್ಲಿ ಯಾರಿಗೆ ಟಿಕೆಟ್ ನೀಡಬೇಕು ಎನ್ನುವ ಅಭ್ಯರ್ಥಿಯ ಹುಡುಕಾಟ ನಡೆಯುತ್ತಿದೆ. ಮಾಜಿ ಸಚಿವ ಶ್ರೀರಾಮುಲು ಹೆಸರು ಕೇಳಿಬಂದರೂ, ವರ್ಷದ ಅವಧಿಯಲ್ಲಿ ಎರಡು ಸೋಲನ್ನು ಅನುಭವಿಸಿರುವುದರಿಂದ ಟಿಕೆಟ್ ನೀಡಬೇಕೇ ಬೇಡವೇ ಎನ್ನುವ ಗೊಂದಲವಿದೆ. ಇನ್ನು ಶಿಗ್ಗಾವಿಯಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಪುತ್ರನ ಹೆಸರು ಓಡಾಡುತ್ತಿದ್ದರೂ, ವರಿಷ್ಠರ ಒಪ್ಪಿಗೆ ಸಿಕ್ಕಿಲ್ಲ. ಆದ್ದರಿಂದ 3 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮ ಗೊಳಿಸುವುದಕ್ಕೆ ದೆಹಲಿ ನಾಯಕರ ನಿರ್ಧಾರವನ್ನು ರಾಜ್ಯ ಬಿಜೆಪಿ ಕಾಯುತ್ತಿದೆ ಎನ್ನಲಾಗಿದೆ.

ಬೃಹತ್ ಬಂಡೆ ಉರುಳಿ ಮೂವರು ಸಾವು

ರಾಯಚೂರು: ಬೃಹತ್ ಬಂಡೆಗಲ್ಲು ಉರುಳಿ ಬಿದ್ದು ಇಬ್ಬರು ಬಾಲಕರು, ಮತ್ತೊಬ್ಬ ಯುವಕ ಮೃತಪಟ್ಟ ಧಾರುಣ ಘಟನೆ ರಾಯಚೂರು ಜಿಲ್ಲೆಯ ಹಟ್ಟಿ ಸಮೀಪದ ಗೌಡೂರು ತಾಂಡಾದಲ್ಲಿ ಮಂಗಳವಾರ ಜರುಗಿದೆ. ಮೂರನೇ ತರಗತಿ ವಿದ್ಯಾರ್ಥಿಗಳಾದ ಮಂಜುನಾಥ, ವೈಶಾಲಿ ಸ್ಥಳದಲ್ಲಿ ಮೃತಪಟ್ಟಿದ್ದು, ರಘು (23) ಲಿಂಗಸಗೂರಿನ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಶಾಲೆ ರಜೆ ಇರುವ ಹಿನ್ನೆಲೆಯಲ್ಲಿ ಪೋಷಕರ ಜೊತೆಗೆ ಮಕ್ಕಳು ಜಮೀನಿಗೆ ಹೋಗಿದ್ದರು. ಜಮೀನು ಬದಿಯಲ್ಲಿ ಹಾಕಿದ ಕಲ್ಲು ಬಂಡೆಗಳ ಸುತ್ತಮುತ್ತ ಆಟವಾಡುತ್ತಿದ್ದರು. ಈ ವೇಳೆ ಕಲ್ಲು ಬಂಡೆ ಜಾರಿ ಬಿದ್ದಿದೆ. ಮಳೆಯಿಂದ ನೆನೆದು ಮಣ್ಣು ಕುಸಿತಗೊಂಡು ಬಂಡೆ ಉರುಳಿದೆ ಎಂದು ಹೇಳಲಾಗುತ್ತಿದೆ.

2 ವರ್ಷದ ಮಗು ಸಾವು: ಪಾಟೀಲ್ ಸಾಂತ್ವನ

ವಿಜಯಪುರ: ನಗರದ ಜೆಎಂ ರಸ್ತೆಯಲ್ಲಿರುವ ರಾಜಕಾಲುವೆಗೆ ಬಿದ್ದು ಎರಡು ವರ್ಷ ಮಗು ಸಾವನ್ನಪ್ಪಿದ ಘಟನೆ ಮಂಗಳವಾರ ಸಂಭವಿಸಿದೆ. ಯಾಸೀನ್ ಸದ್ದಾಂ ಮುಲ್ಲಾ (2) ಮೃತ ಮಗು. ಸ್ಥಳಕ್ಕೆ ವಿಜಯಪುರ ಜಿಲ್ಲಾಧಿಕಾರಿ ಟಿ.ಭೂಬಾಲನ್, ಎಸ್‌ಪಿ ಋಷಿಕೇಶ ಸೋನಾವಣೆ, ಪಾಲಿಕೆ ಆಯುಕ್ತ, ಮೇಯರ್, ಉಪಮೇಯರ್ ಮೊದಲಾದವರು ಭೇಟಿನೀಡಿದ ವೇಳೆ, ಅವಘಡಕ್ಕೆ ಮಹಾನಗರ ಪಾಲಿಕೆಯ ನಿರ್ಲಕ್ಷ್ಯವೇ ಕಾರಣ ಎಂದು ಬಾಲಕನ ಕುಟುಂಬದವರು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್ ಘಟನಾಸ್ಥಳಕ್ಕೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ, ವೈಯುಕ್ತಿಕವಾಗಿ 2ಲಕ್ಷ ರು. ಪರಿಹಾರದ ಭರವಸೆ ನೀಡಿದರು.

ರಾಜಧಾನಿ ಬಾಯಾರಿಕೆ ನೀಗಿಸಲು ಹೋರಾಟ

← ಮೊದಲಪುಟದಿಂದ

ಇದರೊಂದಿಗೆ ವಿದ್ಯುತ್ ಉಪಯೋಗವಾಗಲಿದೆ. ಇದರೊಂದಿಗೆ ಅಂತರ್ಜಲ ವೃದ್ಧಿಯಾಗುತ್ತದೆ. ಆದ್ದರಿಂದ ಮಳೆಯಿಂದ ಯಾರಿಗೂ ಸಮಸ್ಯೆಯಾಗುವುದಿಲ್ಲ.

- **ಜನರಿಗೆ ನೀರು ಯಾವಾಗ ತಲುಪಬಹುದು?**
- ಈವರೆಗೆ ಬೆಂಗಳೂರಿಗೆ ನಾಲ್ಕು ಹಂತದಲ್ಲಿ ಕಾವೇರಿ ಪೂರೈಕೆಯಾಗಿತ್ತು. ಈ ನಾಲ್ಕು ಹಂತಗಳನ್ನು ಸೇರಿ 1500 ಎಂಎಲ್‌ಡಿ ಬರುತ್ತಿತ್ತು. ಆದರೀಗ ಐದನೇ ಹಂತ ಒಂದರಲ್ಲಿಯೇ 775 ಎಂಎಲ್‌ಡಿ ನೀರು ಸಿಗುತ್ತಿದೆ. ಈ ನೀರು ಏಳು ವಿಧಾನಸಭಾ ಕ್ಷೇತ್ರಗಳ 55 ಲಕ್ಷ ಜನರಿಗೆ ಲಭಿಸಲಿದೆ. ಈ ಹಿಂದೆ ಬಿಜೆಪಿ ಅವಧಿಯಲ್ಲಿ ಏಳು ಕ್ಷೇತ್ರಗಳನ್ನು ಸೇರಿದ್ದ 100 ಹಳ್ಳಿಗಳಲ್ಲಿಯೇ ಇಂದು ಬೆಂಗಳೂರು ಬೆಳೆದಿದೆ. ಉದಾಹರಣೆಗೆ, ಮಹದೇವಪುರ, ಹೆಬ್ಬಾಳ, ರಾಜರಾಜೇಶ್ವರಿ ನಗರ, ಬನಶಂಕರಿ, ಕೆ.ಆರ್ .ಪುರ ಸೇರಿ ಏಳರಿಂದ ಒಂಬತ್ತು ವಿಧಾನಸಭಾ ಕ್ಷೇತ್ರಗಳಿಗೆ ನೀರು ಸಿಗಲಿದೆ. ಬುಧವಾರ ಉದ್ಘಾಟನೆಯಾಗಲಿರುವ ನೀರು ಅಂದೇ ಮನೆಗಳಿಗೆ ತಲುಪಲಿದೆ.
- **ಐದನೇ ಹಂತದಿಂದ ಯಾವ ಮಟ್ಟಕ್ಕೆ ಲಾಭವಾಗಲಿದೆ?**
- ಸದ್ಯ ಬೆಂಗಳೂರಿಗೆ 2200 ಎಂಎಲ್‌ಡಿ ನೀರು ಅಗತ್ಯವಿದೆ. ಈಗ ಲಭ್ಯವಿರುವ ನೀರಿನಲ್ಲಿ ಮುಂದಿನ 10 ವರ್ಷ ನಿಭಾಯಿಸಬಹುದು. ಭವಿಷ್ಯದ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಬೆಂಗಳೂರಿನ ಕೆರೆಗಳನ್ನು ತುಂಬಿಸುವುದಕ್ಕೆ ಅಗತ್ಯ ಕ್ರಮವಹಿಸಲು ತೀರ್ಮಾನಿಸಲಾಗಿದೆ.

> **ಕಾವೇರಿಯಿಂದ ಬೆಂಗಳೂರಿಗೆ ನೀರು ತರುವ ಜತೆಯಲ್ಲಿ ಬೆಂಗಳೂರಿನ ಅಂತರ್ಜಲ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ಸರಕಾರ ಚಿಂತನೆ ನಡೆಸುತ್ತಿದೆ. ಈ ನಿಟ್ಟಿನಲ್ಲಿ ಕೆರೆಗಳನ್ನು ತುಂಬಿಸುವ ನಿಟ್ಟಿನಲ್ಲಿ ಈಗಾಗಲೇ ವೇಗ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಇದಕ್ಕೆ ಇನ್ನಷ್ಟು ಸ್ಪಷ್ಟ ಯೋಜನೆ ರೂಪಿಸಲಾಗುವುದು.**
> **- ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಏಕೆಂದರೆ ಈಗಾಗಲೇ ಕಳೆದ ವರ್ಷದ ಬೇಸಿಗೆ ನಮಗೆ ಪಾಠ ಕಲಿಸಿದೆ. ಕಳೆದ ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಸಂಪೂರ್ಣ ಕುಸಿದಿದ್ದರಿಂದ 7100 ಬೋರ್‌ವೆಲ್‌ಗಳು ಖಾಲಿಯಾಗಿದ್ದವು. ಆದ್ದರಿಂದ ಈ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು. ಇನ್ನು ಬೆಂಗಳೂರಿಗೆ ಪ್ರತಿ ತಿಂಗಳು 1.58 ಟಿಎಂಸಿ ಅಗತ್ಯವಿದ್ದು, ವರ್ಷಕ್ಕೆ 30 ಟಿಎಂಸಿ ನೀರಿನ ಅಗತ್ಯವಿದೆ. ಈ ನಿಟ್ಟಿನಲ್ಲಿ ನಾವು ಕಾರ್ಯಪ್ರವೃತರಾಗಬೇಕಿದೆ.

- **ಐದನೇ ಹಂತ ತಡವಾಗಿದ್ದು ಏಕೆ?**
- ಈ ಯೋಜನೆಯನ್ನು ಹಿಂದಿನ ನಮ್ಮ ಸರಕಾರವೇ ಆರಂಭಿಸಿದ್ದು, ಆಗ 4200 ಕೋಟಿ ರು. ಅಂದಾಜಿಸಲಾಗಿತ್ತು. ಆದರೀಗ ಅದು 5000 ಕೋಟಿಗೆ ಏರಿಕೆಯಾಗಿದೆ. ಬಳಿಕ ಸರಕಾರಗಳು, ಸಚಿವರು ಹೆಚ್ಚು ಕಾಳಜಿವಹಿಸದೇ ಇದ್ದಿದ್ದರಿಂದ ಹಾಗೂ ಸಮಸ್ಯೆಯಿದ್ದ ಸ್ಥಳಗಳಿಗೆ ಭೇಟಿ ನೀಡದೇ ಇದ್ದರಿಂದ ತಡವಾಗಿತ್ತು. ಆದರೆ ನಾನು ಇಲಾಖೆಯ ಅಧಿಕಾರ ವಹಿಸಿಕೊಂಡ ಬಳಿಕ ಎತ್ತಿನಹೊಳೆ ಹಾಗೂ ಕಾವೇರಿ ಐದನೇ ಹಂತಕ್ಕೆ ವೇಗ ನೀಡಿ ಪೂರೈಸುವ ಕೆಲಸ ಮಾಡಿದ್ದೇನೆ.
- **ಐದನೇ ಹಂತದ ಸಂಪರ್ಕಕ್ಕೆ ಅನೇಕರು ಅರ್ಜಿಯನ್ನೇ ಸಲ್ಲಿಸಿಲ್ಲ ಎನ್ನುವ ಮಾತಿದೆ?**
- ಈಗಾಗಲೇ ನೋಂದಣಿ ಕಾರ್ಯ ಆರಂಭವಾಗಿದೆ. ಆದರೆ ಬುಧವಾರದ ಕಾರ್ಯಕ್ರಮದ ಬಳಿಕ ಎಲ್ಲ ಕ್ಷೇತ್ರಗಳಲ್ಲಿ ಎರಡು ದಿನಗಳ ಕಾಲ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಈಗಾಗಲೇ 10.50 ಲಕ್ಷ ಸಂಪರ್ಕವಿದ್ದು, ಈ ಹಂತದಿಂದ ಹೆಚ್ಚುವರಿ ನಾಲ್ಕರಿಂದ ಐದು ಲಕ್ಷ ಹೊಸ ಸಂಪರ್ಕ ಸೇರುವ ಸಾಧ್ಯತೆಯಿದೆ. ಇನ್ನು ಸೋರಿಕೆ ಹಾಗೂ ಕಳ್ಳತನಕ್ಕೆ ಸಂಬಂಧಿಸಿದಂತೆಯೂ ಕ್ರಮವಹಿಸಲಾಗುತ್ತಿದೆ. ಈಗಾಗಲೇ ಅನೇಕ ಭಾಗದಲ್ಲಿ ಸೋರಿಕೆಯನ್ನು ತಡೆಯಲಾಗಿದೆ. ಇನ್ನು ಕೆಲ ಭಾಗದಲ್ಲಿ ಪೈಪ್‌ಗಳನ್ನು ಬದಲಾಯಿಸಬೇಕಿದ್ದು, ಅದಕ್ಕೆ ಸೂಕ್ತ ಕ್ರಮವಹಿಸಲಾಗುವುದು. ಆದರೆ ಕಾವೇರಿ ಐದನೇ ಹಂತದಲ್ಲಿ ಇದಕ್ಕೆ ಸೋರಿಕೆಗೆ ಅವಕಾಶವಿಲ್ಲ.
- **ಬ್ರ್ಯಾಂಡ್ ಬೆಂಗಳೂರಿಗೆ ಸಹಾಯವಾಗುವುದೇ?**
- ಯಾವುದೇ ನಗರದಲ್ಲಿ ಕುಡಿಯುವ ನೀರು, ಮೂಲಸೌಕರ್ಯವಿದ್ದರೆ ಆ ನಗರದತ್ತ ಜನ ಆಕರ್ಷಿತರಾಗುತ್ತಾರೆ. ಆದ್ದರಿಂದ ಬೆಂಗಳೂರಿನಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎನ್ನುವುದು ನನ್ನ ಆಶಯವಾಗಿದೆ. ಇದು ಸಾಧ್ಯವಾದರೆ ನಿಶ್ಚಿತವಾಗಿ ಬ್ರ್ಯಾಂಡ್ ಬೆಂಗಳೂರಿಗೆ ಸಹಕಾರಿಯಾಗಲಿದೆ.

ಮಳೆ ಶಾಲೆಗೆ ರಜೆ

← ಮೊದಲಪುಟದಿಂದ

ಮಲೆನಾಡು ಶಿವಮೊಗ್ಗದಲ್ಲೂ ಬೆಳಗ್ಗೆಯಿಂದಲೇ ಧಾರಾಕಾರ ಮಳೆ ಸುರಿ ಯುತ್ತಿದೆ. ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತ ವಾಗಿದೆ. ಮಳೆಯ ಅಬ್ಬರದಿಂದ ಮತ್ತೆ ನದಿ, ಹಳ್ಳಕೊಳ್ಳಗಳು ಜೀವಕಳೆ ಪಡೆದುಕೊಂಡಿವೆ.

ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ

ದೆಹಲಿ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಇನ್ನೂ ಎರಡು ದಿನಗಳ ಕಾಲ ಅದೇ ಸ್ಥಿತಿ ಮುಂದುವರಿಯಲಿದೆ. ಪರಿಣಾಮ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಂಗಳವಾರ ಮುನ್ಸೂಚನೆ ಪ್ರಕಟಿಸಿದೆ. ಚೆನ್ನೈ, ಪುದುಚೇರಿ ಸೇರಿದಂತೆ 9 ಜಿಲ್ಲೆಗಳಿಗೆ ಬುಧವಾರ ರೆಡ್ ಅಲರ್ಟ್ ಘೋಷಿಸಲಾಗಿದೆ.

ಇಂದು ಹೈ ಮೀಟಿಂಗ್

← ಮೊದಲಪುಟದಿಂದ

ಬುಧವಾರ ಬೆಳಗ್ಗೆ ಸಿಎಂ, ಡಿಸಿಎಂ ಕಾವೇರಿ ಐದನೇ ಹಂತದ ಕಾಮಗಾರಿಯನ್ನು ಉದ್ಘಾಟಿಸಲು ಮಂಡ್ಯ ಪ್ರವಾಸ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬುಧವಾರ ಸಂಜೆ 5 ಗಂಟೆ ಬಳಿಕ ಸಭೆ ನಡೆಸಲಿದ್ದಾರೆ. ಸದ್ಯದ ಮಾಹಿತಿ ಪ್ರಕಾರ ತಾಜ್ ವೆಸ್ಟ್ ಎಂಡ್ ಅಥವಾ ಕುಮಾರಕೃಪಾ ಗೆಸ್ಟ್‌ಹೌಸ್‌ನಲ್ಲಿ ಸಭೆ ನಡೆಯಲಿದೆ ಎಂದು ತಿಳಿದುಬಂದಿದೆ. ಸಭೆಯಲ್ಲಿ ಪ್ರಮುಖವಾಗಿ ಮುಖ್ಯಮಂತ್ರಿ ಬದಲಾವಣೆಯ ಪ್ರಸ್ತಾಪ ಹೈಕಮಾಂಡ್ ಮುಂದಿಲ್ಲ. ಆದ್ದರಿಂದ ಯಾವುದೇ ಕಾರಣಕ್ಕೂ ಈ ರೀತಿಯ ಹೇಳಿಕೆಗಳಿಗೆ ಅವಕಾಶ ನೀಡುವಂತಿಲ್ಲ. ಈಗಾಗಲೇ ಹೈಕಮಾಂಡ್ ಹೇಳಿದಂತೆ, ಇನ್ನು ಮುಂದೆ ಯಾರಾದರೂ ಸಿಎಂ ಬದಲಾವಣೆಯ ಹೇಳಿಕೆ ನೀಡಿದರೆ ಅಂತಹವರ ವಿರುದ್ಧ ಕಠಿಣ ಕ್ರಮವಹಿಸುವುದಾಗಿ ಎಚ್ಚರಿಕೆ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.ಈ ಭೇಟಿಯ ವೇಳೆಯೇ ಪದೇಪದೆ ವಿವಾದಾತ್ಮಕ ಹೇಳಿಕೆ ನೀಡುತ್ತಿರುವ, ಗೌಪ್ಯ ಸಭೆ ನಡೆಸುತ್ತಿರುವ ಸಚಿವರನ್ನು ಪ್ರತ್ಯೇಕವಾಗಿ ಭೇಟಿಯಾಗುವ ಸಾಧ್ಯತೆಯಿದೆ. ಈ ಎಲ್ಲ ನಾಯಕರಿಗೂ ಪಕ್ಷಕ್ಕೆ ಹಾಗೂ ಸರಕಾರಕ್ಕೆ ಮುಜುಗರವಾಗುವ ಹೇಳಿಕೆ ನೀಡುವಂತಿಲ್ಲ ಎಂದು ಖಡಕ್ ಸೂಚನೆ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ಕಾಡುಗಳ್ಳ ವೀರಪ್ಪನ್ ಇಂದು ಬದುಕಿದ್ದರೆ, ಭ್ರಷ್ಟ ಕಾಂಗ್ರೆಸ್ಸಿಗರ ರೀತಿ ತಾನೂ ಆನೆ ದಂತ , ಗಂಧದ ಮರ ವಾಪಸ್ ನೀಡುತ್ತೇನೆ. ನನ್ನನ್ನು ನಿರಪರಾಧಿ ಎಂದು ಘೋಷಿಸಿ ಎನ್ನುತ್ತಿದ್ದ ಅಲ್ವಾ..?

ಗಂಗಾಧರ ಬೆಂಗಳೂರು

ರೀ ಬಿಜೆಪಿಯವರೇ..ನಮ್ಮ ಪ್ರೀತಿಯ ಮುಖ್ಯಮಂತ್ರಿಯವರು ನಿವೇಶನ ಹಿಂತಿರುಗಿಸಿದ್ದು, ತಪ್ಪು ಮಾಡಿದ್ದೇನೆ ಅಂತಲ್ಲ. ಜನರ ಮನಸ್ಸಿನಲ್ಲಿ ಪಾರದರ್ಶಕ ಆಡಳಿತದ ಬಗ್ಗೆ ನಂಬಿಕೆ ಬರಲಿ ಅಂತ ಅಷ್ಟೇ. ಹೇಗೆಂದರೆ ಶ್ರೀರಾಮಚಂದ್ರ, ಸೀತಾಮಾತೆ ತಪ್ಪು ಮಾಡಿಲ್ಲ ಅಂತ ಗೊತ್ತಿದ್ದರೂ ಜನರ ನಂಬಿಕೆಗಾಗಿ ಕಾಡಿಗೆ ಕಳುಹಿಸಿದ ಹಾಗೆ.

ಸಮಾಚಾರ ಸಣ್ಣದಲ್ಲ

ಮಾಂಸಾಹಾರ ಸೇವಿಸಿ ಮೂವರು ಅಸ್ವಸ್ಥ

ಮಸ್ಕಿ: ದೇವರ ಕಾರ್ಯಕ್ಕೆ ಮಾಡಿದ ಮಾಂಸದ ಆಹಾರ ಸೇವಿಸಿ ಮೂವರು ಅಸ್ವಸ್ಥಗೊಂಡ ಘಟನೆ ತಾಲೂಕಿನ ಮಾರಲದಿನ್ನಿ ತಾಂಡಾದಲ್ಲಿ ಮಂಗಳವಾರ ನಡೆದಿದೆ. ಶಿವು, ಸುಮಿತ್ರಾ ಮತ್ತು ಅಜಯ ಅಸ್ವಸ್ಥರಾದವರು. ದಸರಾ ಹಿನ್ನೆಲೆಯಲ್ಲಿ ದುರ್ಗಾದೇವಿ ಜಾತ್ರೆಯ ಅಂಗವಾಗಿ ಮನೆಯಲ್ಲಿ ಮಾಂಸದೂಟ ಮಾಡಿದ್ದರು. ಬೆಳಗ್ಗೆ ಏಳಲಾಗದೇ ತಲೆ ತಿರುಗಿಬಿದ್ದು, ವಾಂತಿಯಾಗಿ ಒಂದೇ ಕುಟುಂಬದಲ್ಲಿ ಮೂವರು ಅಸ್ವಸ್ಥರಾಗಿದ್ದಾರೆ. ಗ್ರಾಮಸ್ಥರ ಸಹಕಾರದಿಂದ ಲಿಂಗಸೂಗೂರಿನ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ನೀಡಲಾಗಿದೆ. ಎಲ್ಲರೂ ಅಪಾಯದಿಂದ ಪಾರಾಗಿದ್ದಾರೆ. ಮಸ್ಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಕಾರ ಹೊಸದಾಗಿ ಜಾತಿಗಣತಿ ಮಾಡಲಿ

ಹುಬ್ಬಳ್ಳಿ: ಈ ಹಿಂದೆ ಸರಕಾರ ಮಾಡಿದ್ದು ಆರ್ಥಿಕ-ಸಾಮಾಜಿಕ ಸಮೀಕ್ಷೆಯೇ ಹೊರತು ಜಾತಿ ಗಣತಿ ಅಲ್ಲ. ಎಲ್ಲ ಜಾತಿಯ ಜನರ ನಿಖರ ಸಂಖ್ಯೆ

ತಿಳಿಯಲು ವೈಜ್ಞಾನಿಕ ಗಣತಿ ಅಗತ್ಯವಿದೆ. ಸರಕಾರ ಹೊಸದಾಗಿ ಜಾತಿ ಗಣತಿ ಮಾಡಲಿ ಎಂದು ಕೂಡಲಸಂಗಮ ಪಂಚಮಸಾಲಿ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಜಾತಿ ಗಣತಿ ವಿರೋಧಿಸಲ್ಲ. ಸಂವಿಧಾನ ಬದ್ಧ ವೈಜ್ಞಾನಿಕ ರೀತಿ ಗಣಪತಿ ಪ್ರಕ್ರಿಯೆ ನಡೆಯಬೇಕು ಎಂಬುದಷ್ಟೇ ನಮ್ಮ ಆಶಯ. ಪ್ರತಿಯೊಂದು ಮನೆಗೂ ತೆರಳಿ ನಿಖರ ಮಾಹಿತಿ ಸಂಗ್ರಹಿಸಿ ಜಾತಿ ಗಣತಿ ಮಾಡಬೇಕು. ಈ ಹಿಂದೆ ಎಷ್ಟೋ ಮನೆಗಳಿಗೆ ಭೇಟಿ ನೀಡದೇ, ಯಾವುದೋ ಕಚೇರಿಯಲ್ಲಿ ಕೂತು ಗಣತಿ ಮಾಡಲಾಗಿತ್ತು . ಗಣತಿಯ ಅಂಕಿ ಅಂಶಗಳು ಬಹಿರಂಗ ಆಗಿರದಿದ್ದರೂ ಕೆಲ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯದವರು ಆಕ್ಷೇಪಿಸಿದ್ದಾರೆ. ತಮ್ಮ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ ಎಂಬ ಅಸಮಾಧಾನ ಅವರಲ್ಲಿದೆ ಎಂದರು.

ಅಪಘಾತ: ಇಬ್ಬರ ಸಾವು

ಹುಬ್ಬಳ್ಳಿ: ಬೈಕ್‌ಗೆ ವಾಹನವೊಂದು ಡಿಕ್ಕಿ ಹೊಡೆದು ಸ್ಥಳದಲ್ಲೇ ಇಬ್ಬರು ಸಾವನ್ನಪ್ಪಿದ ಘಟನೆ ಗೋಕುಲ ಗ್ರಾಮದ ಧಾರಾವತಿ ಹನುಮಂತ ದೇವಸ್ಥಾನದ

ಬೈಪಾಸ್ ಬಳಿ ನಡೆದಿದೆ. ಮೃತ ವ್ಯಕ್ತಿಗಳ ಗುರುತು ಪತ್ತೆಯಾಗದ ರೀತಿಯಲ್ಲಿ , ಪೊಲೀರು ಮಾಹಿತಿ ಕಲೆ ಹಾಕುತ್ತಿದ್ದಾರೆ. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಬಳಿ ಅವಘಡ ಸಂಭವಿಸಿದ್ದು, ಅಪರಿಚಿತ ವಾಹನ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಸ್ಥಳಕ್ಕೆ ಹುಬ್ಬಳ್ಳಿಯ ಉತ್ತರ ಸಂಚಾರಿ ಪೊಲೀಸರು ಭೇಟಿ ನೀಡಿದ್ದರು. ಈ ಹೆದ್ದಾರಿಯಲ್ಲಿ ಪ್ರತಿದಿನವೂ ಸಂಚರಿಸುವಾಗ ಜೀವ ಕೈಯಲ್ಲಿ ಹಿಡಿದು ಸಂಚರಿಸಬೇಕು. ಹೆದ್ದಾರಿ-1400 ಅಗಲೀಕರಣವಾಗಬೇಕು. ಕಾಮಗಾರಿಗೆ ಚಾಲನೆ ಸಿಕ್ಕಿ ಮೂರು ವರ್ಷ ಕಳೆದಿದ್ದರೂ, ಇನ್ನೂ ಜನರಿಗೆ ಉಪಯೋಗವಾಗಿಲ್ಲ. ಇದೇ ಕಾರಣಕ್ಕಾಗಿ ರಾಷ್ಟ್ರೀಯ ಹೆದ್ದಾರಿ ದಿನೇ ದಿನೇ ಜನರನ್ನು ಬಲಿ ಪಡೆದುಕೊಳ್ಳುತ್ತಿದೆ ಎಂದು ಸವಾರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್ ಕಾರ್ನರ್
16.10.2024
ಬುಧವಾರ
06.55 ರಿಂದ
08.05 ರವರೆಗೆ

ಅತಿಥಿ:
ಶ್ರೀ ರಾಜ್ ಆಚಾರ್ಯ
ವಿಷಯ:
ಬೇಂದ್ರೆ
ಕಾವ್ಯದಲ್ಲಿ ಸ್ತ್ರೀ
vishwavani.news

ಹಿಂದೂ ಸಮಾಜದ ಒಗ್ಗಟ್ಟಿಗೆ ಧಾರ್ಮಿಕ ಕೇಂದ್ರಗಳು ಸಹಕಾರಿ

ಶ್ರೀಶರನ್ನವರಾತ್ರಿಯ ಮಹೋತ್ಸವದಲ್ಲಿ ಸಚ್ಚಿದಾನಂದ ಭಾರತೀ ಶ್ರೀ ಪ್ರತಿಪಾದನೆ

- ಹೊರನಾಡು ಕ್ಷೇತ್ರದಲ್ಲಿ ಜೀವನಸಂಜೆ ವೃದ್ಧಾಶ್ರಮಕ್ಕೆ ಪ್ರಶಸ್ತಿ ಪ್ರದಾನ
- ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಭಾಗಿ

ಮೂಡಿಗೆರೆ: ಭಗವತ್ಪಾದರು ಹಾಕಿಕೊಟ್ಟ ಆತ್ಮ-ಪರಮಾತ್ಮರ ಮಧ್ಯೆ ವೇದದ ಕಲ್ಪನೆ ಇದೆ. ಅದರ ಅನುಷ್ಠಾನ ಈ ಕ್ಷೇತ್ರದಲ್ಲಿ ನಡೆಯುತ್ತಿದೆ. ಸನಾತನ ಧರ್ಮದಲ್ಲಿ ನಮ್ಮ ಕ್ಷೇತ್ರಗಳು ಯಾವುದೇ ರೀತಿಯ ಜಾತಿಭೇದವಿಲ್ಲದೆ, ಮೇಲು-ಕೀಳು ಎನ್ನುವ ಭೇದವಿಲ್ಲದೆ ಹಾಗೂ ಬಡವ-ಬಲ್ಲಿದ ಎಂಬ ಭೇದವಿಲ್ಲದೆ ಹಿಂದೂ ಸಮಾಜ ಒಟ್ಟಾಗುವ ಕೇಂದ್ರ, ಧಾರ್ಮಿಕ ಕೇಂದ್ರಗಳು ಎಂದು ಜಗದ್ಗುರು ಕಾಸರಗೋಡಿನ ಎಡನೀರು ಮಠದ ಶ್ರೀಶಂಕರಾ ಚಾರ್ಯ ಸಂಸ್ಥಾನದ ಪೀಠಾಧಿಪತಿ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಪ್ರತಿಪಾದಿಸಿದರು.

ಹೊರನಾಡು ಶ್ರೀಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಮಂಗಳವಾರ ಶ್ರೀಲಲಿತ ಕಲಾಮಂಟಪದಲ್ಲಿ ನಡೆದ ಶ್ರೀಶರನ್ನವರಾತ್ರಿಯ ಮಹೋತ್ಸವದ ಜೀವ-ಭಾವ ಶ್ರೀ ನವಗ್ರಹ ಹೋಮ ಮತ್ತು ಧರ್ಮಕರ್ತರ 34ನೇ ವರ್ಷದ ಪಟ್ಟಾಭಿಷೇಕೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಆತ್ಮದಲ್ಲಿ ಪರಮಾತ್ಮನನ್ನು ಕಂಡಾಗ ಇನ್ನೊಬ್ಬರ ಕಷ್ಟ ನಮ್ಮ ಕಷ್ಟ ಎನ್ನುವುದ ಭಾಸವಾಗುತ್ತದೆ. ಆದ್ದರಿಂದ ಬಹಳಷ್ಟು ಸಾಮಾಜಿಕ ಕಾರ್ಯಗಳು ಕ್ಷೇತ್ರದಲ್ಲಿ ನಡೆಯಲು ಕಾರಣವಾಗುತ್ತದೆ ಎಂದು ಹೇಳಿದರು.

ಶ್ರೀಮಾತಾ ಪ್ರಶಸ್ತಿ ಪ್ರದಾನ: ಈ ಸಂದರ್ಭದಲ್ಲಿ ಶಿವಮೊಗ್ಗದ ಜ್ಞಾನೇಶ್ವರಿ ಜನಸೇವಾ ಟ್ರಸ್ಟ್‌ನ ಜೀವನ ಸಂಜೆ ವೃದ್ಧಾಶ್ರಮಕ್ಕೆ ಒಂದು ಲಕ್ಷ ರು. ಬಹುಮಾನ ಸಹಿತ ಶ್ರೀಮಾತಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮೊದಲು ಬೆಳಗ್ಗೆ ಪಟ್ಟಾಭಿಷೇಕ ಮಹೋತ್ಸವದ ದಿನದ ಅಂಗವಾಗಿ ಧರ್ಮಕರ್ತರಿಂದ ಶ್ರೀಮಾತೆಗೆ ಅಭಿಷೇಕ ಮತ್ತು ಪೂಜೆ ಮತ್ತು ಶ್ರೀ ಕ್ಷೇತ್ರದಲ್ಲಿ ಸಪ್ತಶತಿ ಪಾರಾಯಣ, ನಾಲ್ಕು ವೇದಗಳ ಪಾರಾಯಣ, ಸುಂದರಕಾಂಡ ಪಾರಾಯಣ, ಶ್ರೀದೇವಿಭಾಗವತಾ ಪಾರಾಯಣ, ಕುಂಕುಮಾರ್ಚನೆ ಮತ್ತು ಸಪರಿವಾರ ದೇವರುಗಳಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಜಿ.ರಾಮನಾರಾಯಣ ಜೋಷಿ, ಟ್ರಸ್ಟಿಗಳಾದ ರಾಜಲಕ್ಷ್ಮೀ ಭೀ. ಜೋಷಿ, ಗಿರಿಜಾಶಂಕರ ಜೋಷಿ, ಜೀವನ ಸಂಜೆ ವೃದ್ಧಾಶ್ರಮದ ಅಧ್ಯಕ್ಷ ಎಂ.ಹಾಲಪ್ಪ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀಸುಧೀರ್ ಭಟ್ ಪೆರ್ಡೂರು ಮತ್ತು ಬಳಗದವರಿಂದ ಚಂದ್ರಾವಳಿ ವಿಲಾಸ ಎಂಬ ಯಕ್ಷಗಾನ ಪ್ರಸಂಗ ನಡೆಯಿತು.



ಶ್ರೀಕ್ಷೇತ್ರ ಹೊರನಾಡಿನಲ್ಲಿ ಶಿವಮೊಗ್ಗದ ಜ್ಞಾನೇಶ್ವರಿ ಜನಸೇವಾ ಟ್ರಸ್ಟ್‌ನ ಜೀವನ ಸಂಜೆ ವೃದ್ಧಾಶ್ರಮದ ಅಧ್ಯಕ್ಷ ಎಂ.ಹಾಲಪ್ಪ ಅವರಿಗೆ ಶ್ರೀಮಾತಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಡನೀರು ಮಠದ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು, ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಹೊರನಾಡು ದೇವಸ್ಥಾನದ ಧರ್ಮಕರ್ತ ಜಿ.ಭೀಮೇಶ್ವರ ಜೋಷಿ, ಜಿ.ರಾಮನಾರಾಯಣ ಜೋಷಿ ಹಾಗೂ ಇತರ ಗಣ್ಯರು ಹಾಜರಿದ್ದರು.

ಉತ್ತರ ಭಾರತ ಪ್ರವಾಸದಿಂದ ಪ್ರೇರಣೆ

ಹೊರನಾಡು ದೇವಸ್ಥಾನದ ಧರ್ಮಕರ್ತ ಜಿ.ಭೀಮೇಶ್ವರ ಜೋಷಿ ಮಾತನಾಡಿ, ಉತ್ತರ ಭಾರತ ಪ್ರವಾಸ ಮಾಡಿದ ಸಂದರ್ಭದಲ್ಲಿ ಅಲ್ಲಿ ನೋಡಿದ ಅನುಭವ ನನಗೆ ಈ ಜೀವಭಾವ ಕಾರ್ಯಕ್ರಮ ಮಾಡಲು ಪ್ರೇರಣೆಯಾಯಿತು. ದೇಹದ ಹೊರಭಾಗವನ್ನು ನಾವು ಎಷ್ಟು ಶುದ್ಧವಾಗಿಟ್ಟುಕೊಳ್ಳುತ್ತೇವೇಯೋ ಹಾಗೆಯೇ ಅಂತರಂಗದ ಭಾವನೆಯನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಯಾವತ್ತೂ ಭಾವ ಕೆಡುವ ವ್ಯವಸ್ಥೆಗೆ ಕಾರಣವಾಗುತ್ತದೋ ಅದರಿಂದ ಬದುಕು ಕಷ್ಟ ಕಾರ್ಪಣ್ಯಕ್ಕೆ ಒಳಗಾಗುತ್ತದೆ. ಭಾವನಾತ್ಮಕವಾಗಿ ನಮ್ಮ ಬದುಕನ್ನು ಸೃಜನಶೀಲವನ್ನಾಗಿ ಮಾಡಿಕೊಳ್ಳಬೇಕು.ಅಂತರಂಗದ ಶುದ್ಧತೆಯಲ್ಲಿ ನಮ್ಮ ಜೀವನ ಸಾಗಬೇಕು ಎಂದರು.

ಸಂಸ್ಕಾರಯುತ ವ್ಯಕ್ತಿಗೆ ಮಾತೃಹೃದಯ ಅಗತ್ಯ

ವಿಶ್ವವಾಣಿ ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮಾತನಾಡಿ, ಯಾವುದೇ ಕ್ಷೇತ್ರಕ್ಕೆ ತನ್ನದೇ ಆದ ತಾಯಿಯ ಆಶೀರ್ವಾದ, ಅನುಗ್ರಹ ಇರುತ್ತದೆ. ಇದರ ಜೊತೆಗೆ ಆ ಕ್ಷೇತ್ರಕ್ಕೆ ಧೀಮಂತ ನಾಯಕತ್ವ ಇರುತ್ತದೆಯೋ, ಯಾವ ಕ್ಷೇತ್ರದಲ್ಲಿ ಪರಂಪರೆ ಹಾಗೂ ಅನುಗ್ರಹದ ಜೊತೆಗೆ ಧಾರ್ಮಿಕ ನಾಯಕತ್ವ ಸಿಗುತ್ತೋ ಆ ಕ್ಷೇತ್ರ ಸಹಜವಾಗಿ ಅಭಿವೃದ್ಧಿಯಾಗು ತ್ತದೆ, ತೊಡಗಿಸಿಕೊಳ್ಳುತ್ತದೆ. ಭೀಮೇಶ್ವರ ಜೋಷಿ ಕ್ಷೇತ್ರಕ್ಕೆ ನಾಯಕತ್ವ ಕೊಡುವುದರ ಜೊತೆಗೆ ಸಮಾಜಕ್ಕೂ ನಾಯಕತ್ವವನ್ನು ಕೊಟ್ಟಿದ್ದಾರೆ. ಸಂಸ್ಕಾರಯುತ ವ್ಯಕ್ತಿಗೆ ಜೀವಮಾತ್ರ ಮುಖ್ಯವಲ್ಲ ಭಾವ, ಮಾತೃಹೃದಯ ಬೇಕು. ಕ್ಷೇತ್ರದ ನಾಯಕತ್ವ ಯಾರು ವಹಿಸಿಕೊಳ್ಳುತ್ತಾರೋ ಅವರಿಗೆ ಮಾತೃಹೃದಯ ಅಗತ್ಯ. ಅದನ್ನು ಈ ಕ್ಷೇತ್ರದಲ್ಲಿ ಕಾಣಬಹುದು ಎಂದರು.

ಹುಬ್ಬಳ್ಳಿ ಗಲಭೆ ಕೇಸ್ ವಾಪಸ್ ಪಡೆದಿದ್ದು ಸರಿ

ಸರಕಾರದ ನಿರ್ಧಾರಕ್ಕೆ ಸಚಿವ ಮಧು ಬಂಗಾರಪ್ಪ ಸಮರ್ಥನೆ

ಧಾರವಾಡ: ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್ ಪಡೆದ ಸರಕಾರದ ನಿರ್ಧಾರ ಸರಿಯಾಗಿದೆ. ಬಿಜೆಪಿಯವರು ಬೇಕಾದರೆ ಪ್ರತಿಭಟನೆ ಮಾಡಿಕೊಳ್ಳಲಿ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಸ್ ವಾಪಸ್ ಪಡೆದಿದ್ದಕ್ಕೆ ಬಿಜೆಪಿಯವರು ಪ್ರತಿಭಟನೆ ಮಾಡಲಿ, ಬೇಡ ಎಂದವರಾರು? ವಕೀಲರು ಕೋರ್ಟ್‌ಗೆ ಹೋಗಲಿ. ಕೋರ್ಟ್ ಇರುವುದೇ ವಿಚಾರಣೆ ಮಾಡುವುದಕ್ಕೆ ಎಂದರು.

ಮುಡಾ ವಿಚಾರವಾಗಿ ಬಿಜೆಪಿಯವರು ಪಾದಯಾತ್ರೆ ಮಾಡಿದರು. ಇದೇ ಬಿಜೆಪಿಯವರ ಮೇಲೆ ಎಷ್ಟು ಎಫ್ ಐಆರ್ ಆಗಿದೆ ನೋಡಿಕೊಳ್ಳಲಿ. ಕೇಂದ್ರ ಸಚಿವರ ಮೇಲೆ ಶೇ.39 ರಷ್ಟು ಕೇಸ್‌ಗಳು ಇವೆ. ಅವರನ್ನು ಒಳಗೆ ಹಾಕಬೇಕಿತ್ತು. ಅವರಿಂದ ರಾಜೀನಾಮೆ ಕೇಳಬೇಕಿತ್ತು ಎಂದು ಮಧು ಬಂಗಾರಪ್ಪ ವಾಗ್ದಾಳಿ ನಡೆಸಿದರು.

ಕಾಯಿದೆ ಗೆಲ್ಲಬೇಕು

ಯಾರು ಮುಡಾ ವಿಚಾರವಾಗಿ ಪಾದಯಾತ್ರೆ ಮಾಡಿದ್ದಾರೋ ಅವರು ತಮ್ಮ ಚುನಾವಣಾ ಪ್ರಮಾಣಪತ್ರ ತೆರೆದು ನೋಡಿಕೊಳ್ಳಲಿ. ನಮ್ಮ ದೇಶದಲ್ಲಿ ಕಾಯಿದೆ ಇದೆ. ಕಾಯಿದೆ ರಕ್ಷಣೆ ಪಡೆಯುವ ಅಧಿಕಾರ ಎಲ್ಲರಿಗೂ ಇದೆ. ಹುಬ್ಬಳ್ಳಿ ಗಲಭೆ ಇರಲಿ, ಮುಡಾ ಇರಲಿ ಯಾವುದೇ ಇರಲಿ ನಮ್ಮ ದೇಶದಲ್ಲಿ ಕಾಯಿದೆ ಗೆಲ್ಲಬೇಕು. ಅದಕ್ಕೆ ಅವಕಾಶ ಕೊಡಬೇಕು ಹಾಗೂ ತೆಗೆದುಕೊಳ್ಳಬೇಕು ಎಂದು ಸಚಿವರು ಪ್ರತಿಪಾದಿಸಿದರು.

ಅತಿಥಿ ಶಿಕ್ಷಕರು ಹಾಗೂ ಅಡುಗೆ ಸಹಾಯಕರ ವೇತನ ಹೆಚ್ಚಿಸಬೇಕಿದೆ. ಸಿಎಂ ಜೊತೆ ಮಾತನಾಡಿದ್ದೇನೆ. ಶಿಕ್ಷಕರು ಶ್ರಮಪಟ್ಟು ಕೆಲಸ ಮಾಡುತ್ತಾರೆ. ಅವರ ವೇತನ ಹೆಚ್ಚಿಸುತ್ತೇವೆ. ಬರುವ ಉಪಚುನಾವಣೆಯಲ್ಲಿ ಹೈಕಮಾಂಡ್ ಒಳ್ಳೆಯ ತೀರ್ಮಾನ ತೆಗೆದುಕೊಳ್ಳುತ್ತದೆ. ನಾವು ಹೋಗಿ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ.

-ಮಧುಬಂಗಾರಪ್ಪ ಶಿಕ್ಷಣ ಸಚಿವ

ಹಿಂದುತ್ವಕ್ಕಾಗಿ ರಾಜಕಾರಣ

ಕಾಂಗ್ರೆಸ್ ವಿರುದ್ಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಸಮರ

ವಿಜಯಪುರ: ವಿಧಾನಸಭೆಯಲ್ಲಿ ಮೊದಲು ವಕ್ಫ್ ವಿರುದ್ಧ ಹೋರಾಟ ಆರಂಭಿಸಿದ್ದು ನಾನು. ನನ್ನದು ರಾಜಕಾರಣಕ್ಕಾಗಿ ಹಿಂದುತ್ವವಲ್ಲ, ಹಿಂದುತ್ವಕ್ಕಾಗಿ ರಾಜಕಾರಣ. ರಾಜ್ಯದಲ್ಲಿ ಮುಂದಿನ ಬಾರಿ ಹಿಂದುತ್ವಕ್ಕಾಗಿ ಹೋರಾಟ ಮಾಡುವವರ ಕೈಯಲ್ಲಿ ನಾಯಕತ್ವ ಇರಬೇಕೇ ಹೊರತು ಹೊಂದಾಣಿಕೆ ಮಾಡಿಕೊಳ್ಳುವವರ ಬಳಿ ಇರಬಾರದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ವಾಗ್ದಾಳಿ ಮಾಡಿದರು.

ವಕ್ಫ್ ಕಾಯ್ದೆ ಸಂಪೂರ್ಣ ರದ್ದತಿಗೆ ಆಗ್ರಹಿಸಿ ನಗರದ ಸಿದ್ದೇಶ್ವರ ದೇವಸ್ಥಾನ ಮುಂಭಾಗ ಆಯೋಜಿಸಿದ್ದ ಬೃಹತ್ ಪ್ರತಿಭಟನಾ ಹೋರಾಟ ಸಭೆಯ ನೇತೃತ್ವವಹಿಸಿಯತ್ನಾಳ ಮಾತನಾಡಿ, ವಿಜಯಪುರ ನಗರ ಮತಕ್ಷೇತ್ರದಲ್ಲಿ ಮುಸ್ಲಿಮರು ಪ್ರಾಬಲ್ಯವಿದ್ದರೂ ಏನೂ ಮಾಡಲಾಗಲ್ಲ, ನಾನು ಗೆದ್ದೇ ಗೆಲ್ಲುತ್ತೇನೆ. ನನಗೆ ಮುಸ್ಲಿಂ ಮತಗಳೇ ಬೇಡ. ಹಿಂದೆಯೂ ಅದನ್ನೇ ಹೇಳಿದ್ದೇನೆ ಎಂದರು.

ವಿಧಾನಸೌಧದಲ್ಲೂ ಜಮೀರ್ ಅಹ್ಮದ್ ಖಾನ್ ಗೂ ಇದನ್ನೇ ಹೇಳಿದ್ದೇನೆ. ಐಎಂಎ ಹಗರಣ ಆಯಿತು. ಅದರಲ್ಲಿ ಸಿದ್ದರಾಮಯ್ಯ 5 ಕೋಟಿ, ರೋಷನ್ ಬೇಗ್ 5 ಕೋಟಿ, ಕೃಷ್ಣ ಬೈರೇಗೌಡಗೆ 5 ಕೋಟಿ, ಜಮೀರ್ 25 ಕೋಟಿ, ಹೋಂ ಮಿನಿಸ್ಟರ್ ಗೆ 2 ಕೋಟಿ ನೀಡಿದ್ದಾಗಿ ಹೇಳಿದ್ದಾರೆ. ಇನ್ನುಂದೆ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಇಲ್ಲ. ಏನಿದ್ದರೂ ಹಿಂದೂವೊಂಕಾ ಸಾಥ್ ಎನ್ನುತ್ತೇವೆ ಎಂದು ಕಿಡಿಕಾರಿದರು.

ಎಂ.ಬಿ.ಪಾಟೀಲರ ವಿರುದ್ಧ ವಾಗ್ದಾಳಿ

ಜಮೀರ್ ಹೋದ ಕಡೆಯಲ್ಲಾ ಹೋಗಿ ಜಾಗೃತಿ ಮೂಡಿಸುತ್ತೇವೆ. ವಕ್ಫ್ ಹೊಸ ಕಾಯ್ದೆಯಂತೆ ವಕ್ಫ್

ಬೋರ್ಡ್‌ನಲ್ಲಿ ಇಬ್ಬರು ಸಂಸದರು ಇರುತ್ತಾರೆ, ಹಿಂದೂಗಳು ಇರುತ್ತಾರೆ. ನಿಮ್ಮ ಆಸ್ತಿ ಯಾರು ಏನು ಮಾಡಲಾಗಲ್ಲ ರಾಜ್ಯಸಭೆಯಲ್ಲಿ ಈಗ ಬಹುಮತ ಆಗಿದೆ. ಭ್ರಷ್ಟಾಚಾರ ಬಹಿರಂಗವಾಗುವ ಭಯದಲ್ಲಿ ಸೋಮವಾರ ವಕ್ಫ್ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಓವೈಸಿ ಬರದೇ ಬಹಿಷ್ಕಾರ ಮಾಡಿದರು. ಸಚಿವ ಎಂಬಿ ಪಾಟೀಲ್ ರನ್ನು ಹೆದರಿಸಿ ರೌಡಿ ಶೀಟರ್ ಎಸ್. ಎಸ್. ಖಾದ್ರಿ ಸರಕಾರಿ ಅಭಿಯೋಜಕ ಆಗಿದ್ದಾನೆ. ಎಂ.ಬಿ. ಪಾಟೀಲರೇ ಒಳ್ಳೆಯ ಮುಸ್ಲಿಂರನ್ನು ಬೆಳೆಸಿ ಎಂದು ಯತ್ನಾಳ ಸಲಹೆ ನೀಡಿದರು.

ಬಿಜೆಪಿಯಲ್ಲಿ ಪ್ರಧಾನಿ ಹುದ್ದೆಗೆ ಪೈಪೋಟಿ ಆರಂಭವಾಗಿದೆ

ಸಿಎಂ ರಾಜೀನಾಮೆ ಹೇಳಿಕೆಗೆ ಶರಣಬಸಪ್ಪ ದರ್ಶನಾಪುರ ತಿರುಗೇಟು

ಯಾದಗಿರಿ: ಪ್ರಧಾನಿ ನರೇಂದ್ರ ಮೋದಿ ಅವರು ರಾಜೀನಾಮೆ ಕೊಡ್ತಾರೆ ಅಂತ ಸುದ್ದಿಯಿದೆ. ಅವರ ಜಾಗಕ್ಕೆ ಈಗಾಗಲೇ ಅಮಿತ್ ಶಾ, ನಿತಿನ್ ಗಡ್ಕರಿ ನಡುವೆ ಪೈಪೋಟಿ ಆರಂಭವಾಗಿದೆ ಎಂದು ಸಚಿವ ಶರಣಬಸಪ್ಪ ದರ್ಶನಾಪುರ ಬಾಂಬ್ ಸಿಡಿಸಿದ್ದಾರೆ.

ದಸರಾ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುತ್ತಾರೆ ಎಂಬ ಬಿಜೆಪಿ ನಾಯಕರ ಹೇಳಿಕೆ ಪ್ರತಿಕ್ರಿಯೆ ನೀಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರೇ ಹೇಳಿರುವಂತೆ ಬಿಜೆಪಿಯಲ್ಲಿ 75 ವರ್ಷದ ದಾಟಿದ ನಂತರ ಅಧಿಕಾರದಲ್ಲಿ ಇರಬಾರದು ಎನ್ನುವ ನಿಯಮದಂತೆ ತಮ್ಮ ಜನ್ಮ ದಿನಾಚರಣೆಯ ಆಚರಣೆ ಮಾಡಿಕೊಂಡ ನಂತರ ರಾಜೀನಾಮೆ ಕೊಡುತ್ತಾರೆ. ಏಕೆಂದರೆ 75 ವಯಸ್ಸು ಆದ ಮೇಲೆ ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ತೆಗೆದಿರುವಂತೆ ಈಗ ಮೋದಿ ಕೂಡಾ ಇಳಿಯಬೇಕು ಎಂದರು.

ಸಿಎಂ ಬದಲಾವಣೆ ವಿಚಾರ ಬಗ್ಗೆ ಯಾವುದೇ ಚರ್ಚೆ ಆಗಿಲ್ಲ, ಸಿಎಂ ಕುರ್ಚಿ ಖಾಲಿ ಇಲ್ಲ ಖಾಲಿಯಾದ ನಂತರ ಈ ಬಗ್ಗೆ ಚರ್ಚೆ ಆಗುತ್ತದೆ ಆದರೆ ಪಿಎಂ ಬದಲಾವಣೆ ಬಗ್ಗೆ ಈಗ ಚರ್ಚೆ ನಡೆದಿದೆ. ನಾಳೆ ಪಿಎಂ ರಿಸೈನ್ ಕೊಡುತ್ತಾರೆ ಎಂಬ ಸುದ್ದಿಯಿದೆ.

-ಶರಣಬಸಪ್ಪ ದರ್ಶನಾಪುರ ಸಚಿವ

ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ

ದರ್ಶನಾಪುರ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿರುವ ಮಾಜಿ ಸಚಿವ ಸಿ.ಟಿ.ರವಿ, ಹರಿಯಾಣ ಚುನಾವಣೆ ಸೋತ ಬಳಿಕ ಕಾಂಗ್ರೆಸ್ ನವರಿಗೆ ದೊಡ್ಡ ಶಾಕ್ ಆಗಿದೆ. ಹೀಗಾಗಿ ಸ್ವಲ್ಪ ಬುದ್ಧಿ ಭ್ರಮಣೆ ಒಳಗಾದವರ ತರಹ ಮಾತನಾಡುತ್ತಿದ್ದಾರೆ. ಇದು ಮೆಂಟಲ್ ಹೆಲ್ತ್ ಪ್ರಾಬ್ಲಂ. ಹೆಲ್ತ್ ಮಿನಿಸ್ಟರಿಗೂ ಅದೇ ಇರಬಹುದು ಅಂತಿದೆ. ನನಗೆ ಅವರ ಆರೋಗ್ಯದ ಬಗ್ಗೆ ಕಾಳಜಿ ಇದೆ. ವೈದ್ಯರ ಹತ್ತಿರ ಹೋಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳುವುದು ಒಳ್ಳೆಯದು ಎಂದರು.

ಸರಕಾರ ವಜಾಗೊಳಿಸಲು ರಾಷ್ಟ್ರಪತಿಗೆ ಬಿಜೆಪಿ ಮನವಿ: ವಿಜಯೇಂದ್ರ

ಬಂಟ್ವಾಳ: ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು. ಆದರೆ ಅಧಿಕಾರಕ್ಕೆ ಬಂದ ಒಂದೂವರೆ ವರ್ಷದಲ್ಲಿ ರಾಜ್ಯ ಸರಕಾರದ ಬಗ್ಗೆ ಜನತೆ ಭ್ರಮನಿರಸನಗೊಂಡಿದ್ದಾರೆ. ರಾಜ್ಯದಲ್ಲಿರುವ ಹಿಂದೂ ವಿರೋಧಿ ಸರಕಾರವನ್ನು ವಜಾಗೊಳಿಸುವುದಕ್ಕಾಗಿ ಬಿಜೆಪಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮನವಿ ಮಾಡಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಸರಕಾರ ಅವ್ಯಾಹತವಾಗಿ ಭ್ರಷ್ಟಾಚಾರದಲ್ಲಿ ತೊಡಗಿದೆ. ದಲಿತರ ಅಭಿವೃದ್ಧಿಗಾಗಿ ಮೀಸಲಿಡಲಾಗಿದ್ದ ಹಣವನ್ನು ದುರುಪಯೋಗಪಡಿಸಿಕೊಂಡು ಅಹಿಂದ ಸಮುದಾಯಕ್ಕೆ ಅನ್ಯಾಯ ಮಾಡಿದೆ ಎಂದು ವಿಜಯೇಂದ್ರ ಆರೋಪಿಸಿದ್ದಾರೆ.

ವಾಲ್ಮೀಕಿ ನಿಗಮದಲ್ಲಿ 87 ಕೋಟಿ ಹಗರಣ ನಡೆದಿರುವುದನ್ನು ಸಿದ್ದರಾಮಯ್ಯ ಒಪ್ಪಿಕೊಂಡಿದ್ದಾರೆ. ಮುಡಾ ಹಗರಣದಲ್ಲಿ ತಮ್ಮ ಪಾತ್ರವನ್ನು ನಿರಾಕರಿಸುತ್ತಲೇ ಬಂದಿರುವ ಸಿದ್ದರಾಮಯ್ಯ ಈಗ ನಿವೇಶನ ವಾಪಸ್ ಕೊಡಿಸುವ ಮೂಲಕ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂದು ಟೀಕಿಸಿದರು.

ಹುಬ್ಬಳ್ಳಿಯಲ್ಲಿ 25ಕ್ಕೆ ಪ್ರತಿಭಟನೆ: ಹುಬ್ಬಳ್ಳಿಯಲ್ಲಿ ನಡೆದ ಗಲಭೆಯಲ್ಲಿ ಭಾಗಿಯಾದವರ ಮೇಲಿನ ಆರೋಪಗಳನ್ನು ಹಿಂಪಡೆದಿರುವುದನ್ನು ವಿರೋಧಿಸಿ ಅ. 25ರಂದು ಹುಬ್ಬಳ್ಳಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಲಿದೆ. ಎನ್ಐಎ ಪ್ರಕರಣದ ತನಿಖೆ ನಡೆಸಿದ್ದು, ಇಂತಹ ಗಲಭೆಕೋರರ ವಿರುದ್ಧ ಆರೋಪ ವಾಪಸ್ ಪಡೆದಿದ್ದು ತಪ್ಪು ಎಂದು ವಿಜಯೇಂದ್ರ ಖಂಡಿಸಿದರು.

20ರಂದು ಬ್ರಿಗೇಡ್ ಹೆಸರು ಘೋಷಣೆ

ಶಿವಮೊಗ್ಗ: ಬಾಗಲಕೋಟೆಯಲ್ಲಿ ಅ.20ರಂದು ಉತ್ತರ ಕರ್ನಾಟಕದ ಪ್ರಮುಖ ಕಾರ್ಯಕರ್ತರ ಸಮಾವೇಶ ನಡೆಯಲಿದೆ. ಅಲ್ಲಿ ಬ್ರಿಗೇಡ್‌ಗೆ ನಾಮಕರಣ, ಮುಂದಿನ ಕಾರ್ಯಕ್ರಮಗಳ ಬಗ್ಗೆ ಘೋಷಿಸಲಾಗುವುದು ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ. ರಾಜ್ಯದಲ್ಲಿ ಹಿಂದುಳಿದ ವರ್ಗ ದಲಿತ ವರ್ಗದ ಜತೆಗೆ ಎಲ್ಲಾ ಸಮುದಾಯದ ದೊಡ್ಡ ಸಂಘಟನೆ ಮಾಡಬೇಕು ಎಂದು ಸಾಧು -ಸಂತರ ಅಪೇಕ್ಷೆಯಿದೆ. ಇದಕ್ಕಾಗಿ ಹುಬ್ಬಳ್ಳಿಯಲ್ಲಿ ಒಂದು ಸಭೆ ಆಗಿದೆ. ಬಾಗಲಕೋಟೆಯ ಚರಂತಿಮಠ ಸಭಾಂಗಣದಲ್ಲಿ ಸಮಾವೇಶ ಆಯೋಜಿಸಲಾಗಿದೆ ಎಂದರು.

ಅತ್ಯಾಚಾರ ಯತ್ನ ಆರೋಪಿಗಳ ಪಾಸ್‌ಪೋರ್ಟ್‌ಗೆ ಪೊಲೀಸ್ ಸಾಥ್

ಕೋರ್ಟ್ ವಿಚಾರಣೆ ನಡೆಯುತ್ತಿದ್ದರೂ ಗ್ರಾಮಾಂತರ ಪೊಲೀಸರ ದೃಢೀಕರಣ | ಪೊಲೀಸ್ ಠಾಣೆಗೆ ಮಾಹಿತಿ ಇಲ್ಲದಿರುವುದು ಅಚ್ಚರಿಗೆ ಕಾರಣ

ಜಿತೇಂದ್ರ ಕುಂದೇಶ್ವರ ಮಂಗಳೂರು

ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿರುವಂತೆಯೇ ಮಾನಭಂಗ ಯತ್ನ ಆರೋಪಿಗಳಿಗೆ ಗ್ರಾಮಾಂತರ ಪೊಲೀಸರು ಯಾವುದೇ ಕೇಸ್ ಇಲ್ಲ ಎಂದು ಪಾಸ್‌ಪೋರ್ಟ್ ಸಿಗುವಂತೆ ಮಾಡಿದ ಪ್ರಕರಣ ಬೆಳಕಿಗೆ ಬಂದಿದೆ.

ಬಾಂಗ್ಲಾ ವಲಸಿಗರಿಗೆ ಪಾಸ್‌ಪೋರ್ಟ್ ನೀಡಿದ ಪ್ರಕರಣ ಬೆಳಕಿಗೆ ಬರುತ್ತಿರುವ ಸಂದರ್ಭದಲ್ಲಿ ಕ್ರಿಮಿನಲ್‌ಗಳಿಗೆ ಪಾಸ್‌ಪೋರ್ಟ್ ಸಿಗುವಂತೆ ಮಾಡುವಲ್ಲಿ ಪೊಲೀಸರು ಶಾಮೀಲಾಗಿರುವುದು ಆತಂಕಕ್ಕೆ ಕಾರಣವಾಗಿದೆ.

2023ರ ಮೇ 13ರಂದು ಕುಲಶೇಖರ ಬಳಿ ಸಿದ್ದಿಕಿ ಮತ್ತು ನಾಲ್ವರ ವಿರುದ್ಧ ಮಾನಭಂಗ ಯತ್ನ ಪ್ರಕರಣ ಕದ್ರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಆದರೆ 2024ರ ಫೆಬ್ರವರಿ ವೇಳೆಗೆ ಮೊದಲನೇ ಆರೋಪಿ ಸಿದ್ದಿಕಿ ಮತ್ತು ನಾಲ್ಕನೇ ಆರೋಪಿಗೆ ಪಾಸ್‌ಪೋರ್ಟ್ ಮಂಜೂರಾಗಿದೆ.

ಆರೋಪಿಗಳು ಯಾರೂ ತಮ್ಮ ಹೆಸರು ಊರು ಬದಲಾಯಿಸಿ ಪಾಸ್‌ಪೋರ್ಟ್‌ಗೆ ಅರ್ಜಿ ನೀಡಿರಲಿಲ್ಲ. ಎಲ್ಲ ಗೊತ್ತಿದ್ದೇ ಗ್ರಾಮಾಂತರ ಪೊಲೀಸರು ಮಾಡಿ ಯಾವುದೇ ಪ್ರಕರಣ ಇಲ್ಲ ಎಂದು ಪಾಸ್‌ಪೋರ್ಟ್ ಅಧಿಕಾರಿಗಳಿಗೆ ದೃಢೀಕರಣ ವರದಿ ನೀಡಿದ್ದಾರೆ. ಈ ಆರೋಪಿಗಳ ವಿರುದ್ಧ ಮಂಗಳೂರಿನ ಜೆಎಂಎಫ್‌ಸಿ 6ನೇ ಕೋರ್ಟ್‌ನಲ್ಲಿ ವಿಚಾರಣೆ ಆರಂಭವಾಗಿತ್ತು. ಕದ್ರಿ ಠಾಣೆಯಲ್ಲಿ ದಾಖಲಾದ ಪ್ರಕರಣ ಪಕ್ಕದ ಗ್ರಾಮಾಂತರ ಪೊಲೀಸ್ ಠಾಣೆಯವರಿಗೆ ಮಾಹಿತಿ ಇಲ್ಲದಿರುವುದು ಅಚ್ಚರಿಗೆ ಕಾರಣವಾಗಿದೆ.

ಇ-ಕೋರ್ಟ್ ಸರ್ವೀಸ್ ನೋಡಿದ್ದರು!: ಅರ್ಜಿದಾರರ ಪಾಸ್‌ಪೋರ್ಟ್ ದೃಢೀಕರಣ ವೇಳೆಗೆ ಯಾವುದಾದರೂ ಪ್ರಕರಣ ಇದ್ದರೆ ಅದನ್ನು ಪತ್ತೆ ಹಚ್ಚಲು ಅನುಕೂಲವಾಗುವ ವ್ಯವಸ್ಥೆ ಪೊಲೀಸರಲ್ಲಿದೆ. ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದ್ದರೆ ಇ-ಕೋರ್ಟ್ ಸರ್ವೀಸ್ ಆ್ಯಪ್ ತೆರೆದು ನೋಡಿದರೆ ಕೇಸ್‌ನ ಎಲ್ಲ ಹಂತದ ವಿವರಗಳು ಇರುತ್ತವೆ. ಸಂತ್ರಸ್ತರು ದೂರುಕೊಡಲು ಬಂದಾಗ ಎಫ್‌ಐಆರ್ ಹಾಕುವ ಮುನ್ನ ಸಾವಿರ ದಾಖಲೆ, ಸಾಕ್ಷ್ಯಾಧಾರ ಪರಿಶೀಲಿಸುವ ಮಂಗಳೂರಿನ ಪೊಲೀಸರಿಗೆ ಪಾಸ್‌ಪೋರ್ಟ್ ವೆರಿಫಿಕೇಶನ್ ಮಾಡುವ ಕ್ರಮ ಕಲಿಸಿಕೊಡುವ ಅಗತ್ಯ ಇಲ್ಲ.

ಅಕ್ರಮ ತನಿಖೆ ಯಾವಾಗ?: ಗ್ರಾಮಾಂತರ ಇನ್‌ಸ್ಪೆಕ್ಟರ್ ಯಾವುದೇ ಪ್ರಕರಣ ಇಲ್ಲ ಎಂದು ದೃಢೀಕರಿಸಿ ಸಹಿ ಹಾಕಿದ್ದಾರೆ. ಕೆಳಹಂತದ ಅಧಿಕಾರಿಗಳ ಎಡವಟ್ಟಿಗೆ ಮೇಲಧಿಕಾರಿಗಳೂ ಮುದ್ರೆ ಒತ್ತಿದ್ದಾರೆ. ಪಾಸ್‌ಪೋರ್ಟ್ ಪಡೆದ ಬಳಿಕ ಇಬ್ಬರೂ ಆರೋಪಿಗಳು ವಿದೇಶಯಾತ್ರೆ ಸಹ ಮಾಡಿ ಬಂದಿದ್ದಾರೆ. ಜನಸಾಮಾನ್ಯರು ಪಾಸ್‌ಪೋರ್ಟ್ ಮಾಡಲು ಪಡಿಪಾಟಲು ಪಡೆಯುವ ಹೊತ್ತಿನಲ್ಲಿ ಆರೋಪಿಗಳು ಪ್ರಭಾವ ಬಳಸಿ ಪಾಸ್‌ಪೋರ್ಟ್ ಮಾಡಿಸಿಕೊಂಡಿರುವುದು ಆತಂಕಕ್ಕೆ ಎಡೆಮಾಡಿದೆ. ಈ ಬಗ್ಗೆ ಪೊಲೀಸ್ ಲಾಖೆ ತನಿಖೆ ನಡೆಸಿದರೆ ಇದರ ಹೂರಣ ಬಹಿರಂಗವಾಗಬಹುದು.

ಕರಾವಳಿಯಲ್ಲಿ ನಕಲಿ ಪಾಸ್‌ಪೋರ್ಟ್ ದಂಧೆ

ನಕಲಿ ದಾಖಲೆ ನೀಡಿ ಪಾಸ್‌ಪೋರ್ಟ್ ಮಾಡಿಸಿ ದುಬೈಗೆ ವಿಮಾನದಲ್ಲಿ ಪ್ರಯಾಣಿಸಲು ಯತ್ನಿಸಿದ ಬಾಂಗ್ಲಾದೇಶದ ಪ್ರಜೆ ಮಾಣಿಕ್ ಹುಸೈನ್‌ನನ್ನು ಬಂಧಿಸಿದ ಪ್ರಕರಣದಲ್ಲಿ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಲಸೆ ವಿಭಾಗದ ಸಿಬ್ಬಂದಿಯ ಸಮಯಪ್ರಜ್ಞೆ ಕಾರಣವಾಗಿದೆ. ಆರೋಪಿ ಇಮಿಗ್ರೇಶನ್ ಕೌಂಟರ್‌ನಲ್ಲಿ ಪಾಸ್‌ಪೋರ್ಟ್ ಹಾಗೂ ಇತರ ದಾಖಲೆಗಳನ್ನು ಹಾಜರುಪಡಿಸಿದಾಗ ಅಲ್ಲಿದ್ದ ಅಧಿಕಾರಿ ಕೆ.ಸಿ.ಸರಸ್ವತಿ ಪಾಸ್ ಪೋರ್ಟ್ ಮತ್ತು ದಾಖಲೆ ಪರಿಶೀಲನೆ ವೇಳೆ ಸಂಶಯದಿಂದ ಆರೋಪಿಯನ್ನು ವಿಚಾರಣೆ ಮಾಡಿದಾಗ ಬಾಂಗ್ಲಾದೇಶದ ಪ್ರಜೆ ಎನ್ನುವುದು ಖಚಿತವಾಯಿತು. ಉಡುಪಿಯಲ್ಲಿ ಭಾರತೀಯ ನಿವಾಸಿ ಪರ್ವೇಝ್ ಎಂಬಾತನ ಮೂಲಕ ಪಾಸ್ ಪೋರ್ಟ್ ಮಾಡಿಸಿರುವುದು ಬೆಳಕಿಗೆ ಬಂದಿದೆ. ಇದೇ ರೀತಿ ಹಲವು ವಿದೇಶಿಯರಿಗೂ ಪಾಸ್‌ಪೋರ್ಟ್ ಮಾಡಿಸಿರುವುದು ಆತಂಕಕ್ಕೆ ಕಾರಣವಾಗಿದೆ.

ಅನುಮತಿ ಪಡೆಯದಿದ್ದರೆ ಅಪರಾಧ: ಡಿಸಿಪಿ ಸಿದ್ಧಾರ್ಥ್

ಕೇಸ್ ಇದ್ದರೆ ಕೋರ್ಟ್ ಅನುಮತಿ ಪಡೆದು ಪಾಸ್‌ಪೋರ್ಟ್ ಮಾಡಿಸಿ ವಿದೇಶಕ್ಕೂ ಹೋಗಬಹುದು. ಈ ಪ್ರಕರಣದಲ್ಲಿ ಕೋರ್ಟ್ ಅನುಮತಿ ಪಡೆಯಲಾಗಿದೆಯೇ, ಪಾಸ್‌ಪೋರ್ಟ್‌ನಲ್ಲಿ ಕ್ರಿಮಿನಲ್ ಪ್ರಕರಣದ ಉಲ್ಲೇಖ ಇದೆಯೇ ಎಂದು ಪರಿಶೀಲನೆ ಮಾಡಬೇಕು. ಅನುಮತಿ ಪಡೆಯದೆ ಪಾಸ್‌ಪೋರ್ಟ್ ಮಾಡಿಸಿದ್ದರೆ ಅದು ಅಪರಾಧ ಎಂದು ಕಾನೂನು ಸುವ್ಯವಸ್ಥೆ ಡಿಸಿಪಿ ಸಿದ್ಧಾರ್ಥ್ ವಿಶ್ವವಾಣಿಗೆ ಸ್ಪಷ್ಟಪಡಿಸಿದ್ದಾರೆ.

ಉಗ್ರನಿಗೂ ಪಾಸ್‌ಪೋರ್ಟ್!

ಹೈದರಾಬಾದ್‌ನಲ್ಲಿ ಹತ್ತು ವರ್ಷದ ಹಿಂದೆ ನಡೆದ ಸ್ಫೋಟ ಪ್ರಕರಣದ ಉಗ್ರನಿಗೆ ಮಂಗಳೂರಿಂದ ಪಾಸ್‌ಪೋರ್ಟ್ ಮಾಡಿಸಲಾಗಿತ್ತು. ಆಗ ಕದ್ರಿ (ಪೂರ್ವ) ಪೊಲೀಸರು ಹೆಸರು ವಿಳಾಸ ವಿಚಾರಣೆ ಮಾಡದೆ ಪಾಸ್‌ಪೋರ್ಟ್ ದೃಢೀಕರಿಸಿದ್ದರು. ತನಿಖೆ ಬಳಿಕ ಕರ್ತವ್ಯ ಲೋಪ ಎಸಗಿದ ಪೊಲೀಸರನ್ನು ಅಮಾನತುಗೊಳಿಸಲಾಗಿತ್ತು.

ವಿಶ್ವವಾಣಿ

ಸಂಪಾದಕೀಯ

ಧರೆ ಹೊತ್ತಿ ಉರಿದಡೆ ನಿಲಬಹುದೇ?

ಒಬ್ಬ ವ್ಯಕ್ತಿ, ಒಂದು ಸಮಾಜ ಅಥವಾ ಒಂದು ರಾಷ್ಟ್ರ ತನ್ನ ಹಲವು ಹನ್ನೊಂದು ಕಾರ್ಯಚಟುವಟಿಕೆಗಳು ಅಥವಾ ಲೌಕಿಕ ವ್ಯವಹಾರಗಳ ಫಲಶ್ರುತಿಯಾಗಿ ಕಾಣಬಯಸುವುದು ಸಮಾಧಾನ-ಸಂತೃಪ್ತಿ, ಶಾಂತಿ-ನೆಮ್ಮದಿಗಳನ್ನು. ಆದರೆ, 'ಸಮಷ್ಟಿಯ ಹಿತ'ಕ್ಕಿಂತ 'ವ್ಯಷ್ಟಿಹಿತ'ಕ್ಕೇ ಒತ್ತುಕೊಡುವವರು ದಿನೇದಿನೆ ಹೆಚ್ಚುತ್ತಿರುವ ಕಾರಣದಿಂದಾಗಿ, ಈ ಸಮಾಧಾನ-ಸಂತೃಪ್ತಿ, ಶಾಂತಿ-ನೆಮ್ಮದಿಗಳಿಗೆ ಕೊಳ್ಳಿಯಿಡುವ ಪರಿಪಾಠವೂ ತಾರಕಕ್ಕೇರುತ್ತಿದೆ. ದ್ವಿಪಕ್ಷೀಯ ಬಾಂಧವ್ಯಕ್ಕೆ ಧಕ್ಕೆಯಾದರೂ ಪರವಾಗಿಲ್ಲ ಎಂಬ ಧೋರಣೆಯಲ್ಲಿ ಕಾಲುಕೆರೆದುಕೊಂಡು ಭಾರತದ ಮೇಲೆ ವಾಗ್ದಾಳಿಗೆ ನಿಂತಿರುವ ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ, ತೀರದ ರಕ್ತದಾಹದ ದ್ಯೋತಕವಾಗಿ ಕಾಣಿಸುತ್ತಿರುವ ರಷ್ಯಾ-ಉಕ್ರೇನ್ ಮತ್ತು ಇಸ್ರೇಲ್-ಹಮಾಸ್ ಸಂಘರ್ಷಗಳು ಇದಕ್ಕೆ ಒಂದೆರಡು ನಿದರ್ಶನಗಳು. ಇನ್ನು, ನಮ್ಮ ನೆಲದಲ್ಲೇ ನೋಡುವುದಾದರೆ, ಏರ್ ಇಂಡಿಯಾದ ಒಂದು ವಿಮಾನ ಹಾಗೂ ಇಂಡಿಗೋ ಸಂಸ್ಥೆಯ ಎರಡು ವಿಮಾನಗಳಿಗೆ ಒಂದೇ ದಿನ ಬಾಂಬ್ ಬೆದರಿಕೆ ಬಂದಿದೆ; ರೈಲನ್ನು ಹಳಿ ತಪ್ಪಿಸಿ ಭಾರಿ ಪ್ರಮಾಣದಲ್ಲಿ ಅಪಘಾತ ಉಂಟುಮಾಡಿ ಜನರ ಸಾವು-ನೋವುಗಳನ್ನು ಸಂಭ್ರಮಿಸುವ 'ಹಿಂಸಾವಿನೋದಿ'ಗಳ ರಣಕೇಕೆಯೂ ನಿಲ್ಲುತ್ತಿಲ್ಲ; ಉತ್ತರಪ್ರದೇಶದ ಗ್ರಾಮವೊಂದರಲ್ಲಿ ದಸರೆಯ ಸಮಾರೋಪ ಸಮಾರಂಭದ ಅಂಗವಾಗಿ ದುರ್ಗಾಮಾತೆಯ ವಿಗ್ರಹದ ವಿಸರ್ಜನೆಗೂ ಮುನ್ನಿನ ಮೆರವಣಿಗೆಯ ವೇಳೆ ಯುವಕನೊಬ್ಬನ ಹತ್ಯೆಯಾಗಿದೆ. 'ವ್ಯಷ್ಟಿ' ನೆಲೆಯ ಸ್ವಾರ್ಥವು 'ಸಮಷ್ಟಿಯ ಹಿತ'ವನ್ನೇ ಆಪೋಶನ ತೆಗೆದುಕೊಳ್ಳುವ ಪರಿಯ ಇಂಥ ಘಟನೆಗಳು ಯಾವುದೇ ಸಮಾಜಕ್ಕೆ ಅಪಥ್ಯವಾಗಬೇಕು. ಸಣ್ಣದೊಂದು ಬೆಂಕಿಯ ಕಿಡಿಯನ್ನು ನಿರ್ಲಕ್ಷಿಸಿದರೆ ಅದು ಒಂದಿಡೀ ಮನೆಯನ್ನೇ ಸುಟ್ಟು ಭಸ್ಮಮಾಡುತ್ತದೆ ಎಂಬ ಅಪ್ರಿಯ ಸತ್ಯವನ್ನು ನಾವ್ಯಾರೂ ಮರೆಯಬಾರದು. 'ಒಲೆ ಹೊತ್ತಿ ಉರಿಯುವುದು' ಜೀವಪೋಷಣೆಯ ದ್ಯೋತಕ, ಆದರೆ 'ಧರೆ ಹೊತ್ತಿ ಉರಿಯುವುದು' ಜೀವನಾಶದ ಸೂಚಕ. ಪ್ರಪಂಚದ ಯಾವೊಂದು ದೇಶವೂ ಯುದ್ಧವನ್ನಾಗಲೀ, ಸಂಘರ್ಷವನ್ನಾಗಲೀ, ಹಿಂಸಾಚಾರ-ರಕ್ತದೋಕುಳಿಗಳನ್ನಾಗಲೀ ಜೀರ್ಣಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಈ ಕಹಿಸತ್ಯದ ಅರಿವಿದ್ದೂ ಕೆಲವೊಂದು 'ಬಲಿಷ್ಠ' ದೇಶಗಳ ನಾಯಕರು ಯುದ್ಧೋನ್ಮಾದದ ಬೆಂಕಿಗೆ ತುಪ್ಪ ಸುರಿಯುತ್ತಿದ್ದಾರೆ. 'ಒಲೆ ಹೊತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹೊತ್ತಿ ಉರಿದಡೆ ನಿಲಲಾಗದು' ಎಂದು ಇವರಿಗೆ ಬುದ್ಧಿ ಹೇಳೋರ್‍ಯಾರು?

ಸೊಂಪಾದಕೀಯ

ಮಳೆ ಮತ್ತು ಟ್ರಾಫಿಕ್ ಜಾಮ್

ಬೆಂಗಳೂರಿನ ಮಳೆ ಮತ್ತು ಟ್ರಾಫಿಕ್ ಜಾಮ್ ಅನ್ನೋದು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮಳೆಯ ಆರ್ಭಟಕ್ಕೆ ಬೆಂಗಳೂರು ಅದುರಿ ಕಂಗಾಲಾಗಿದೆ. ಮನೆಯಿಂದ ಏರ್‌ಪೋರ್ಟ್‌ಗೆ ಹೊರಟ ಅನೇಕರು ಫ್ಲೈಟ್ ಸಿಗದೇ ಮತ್ತೆ ಮನೆಗೆ ವಾಪಸ್ ಸಾಗುವಂತಾದ ಪರಿಸ್ಥಿತಿ ನಿನ್ನೆಯದ್ದು. ಇಲ್ಲಿನ ವಾತಾವರಣ ನೋಡಿದ್ರೆ 'ವೆದರ್ ಇಟ್ಸ್ ಎ ಗುಡ್ ವೆದರ್ ಟುಡೇ?' ಅಂತ ಯಾರಾದ್ರೂ ಕೇಳಿದ್ರೆ ಉತ್ತರ ಕೊಡೋದು ಕಷ್ಟ ಆಗುತ್ತೆ. ಯಾಕಂದ್ರೆ ಬಿಸಿಲಿಗೆ ಕೈ ಅಡ್ಡ ಇಟ್ಟುಕೊಂಡು ಓಡಾಡುತ್ತಿದ್ದ ಜನ ಮಳೆಗೆ ಅಡ್ಡವಾಗಿ ಕೈಯನ್ನು ತಲೆ ಮೇಲೆ ಇಟ್ಟುಕೊಂಡು ಹೋಗಬೇಕಾದ ಪರಿಸ್ಥಿತಿ. ಹಾಗಾಗಿ ಇಲ್ಲಿ ಮಳೆರಾಯನದ್ದು 'ಕ್ಷಣಚಿತ್ತ-ಕ್ಷಣಪಿತ್ತ' ಡಿಪಾರ್ಟ್‌ಮೆಂಟು. ಮಳೆ ಬಂದ್ರೆ ಖುಷಿನೇ ಅಂತ ನೀವು ಅನ್ನಬಹುದು. ಆದರೆ ಬೆಂಗಳೂರಿಗರು ಮಾತ್ರ ಖಂಡಿತಾ ಹಾಗನ್ನೋದಿಲ್ಲ. ಯಾಕಂದ್ರೆ, ಫ್ಲೈ ಓವರ್ ಇರಲಿ, ಅಂಡರ್‌ಪಾಸ್ ಇರಲಿ, ಸುರಂಗ ಮಾರ್ಗ ಇರಲಿ ಮಳೆಗೆ ಸಿಕ್ಕರೆ ಜನರದ್ದು ಅಧೋಗತಿ. 'ಲೈಟ್ ಅಟ್ ದ ಎಂಡ್ ಆಫ್ ದ ಟನೆಲ್' ಅನ್ನೋದು ಸುಳ್ಳಾಗುತ್ತೆ. ಇಲ್ಲಿ ಕೊನೆಗೂ ಎಂಡ್ ಆಫ್ ದ ಟನೆಲ್‌ನಲ್ಲೂ ಮಳೆನೀರೇ ತುಂಬಿಕೊಂಡಿರುತ್ತದೆ. ಬೇಸರ ಆಗೋದು ಅಂದ್ರೆ ರಾಜ್ಯದ ಅನೇಕ ಕಡೆ ಬರಗಾಲ ಬಂದರೂ ಬೆಂಗಳೂರಿಗರು, 'ಬರಗಾಲ, ಹಂಗಂದ್ರೆ ಏನು?' ಅಂತ ಕೇಳ್ತಾರೆ. ಮಳೆರಾಯನಿಗೆ, 'ನೋಡಪ್ಪಾ, ಟಾರ್ ರೋಡ್, ಸಿಮೆಂಟ್ ರೋಡ್ ಮೇಲೆ ಬೆಳೆ ಬೆಳೆಯಲ್ಲ' ಅಂತ ತಿಳಿಸಿ ಹೇಳೋರು ಯಾರು? ಇಲ್ಲಿ ಮಳೆ, ಇತರ ಕಡೆ ಬರ ಇರುವಾಗ ಹಳೆಯ ಜನಪದ ಹಾಡೊಂದು ನೆನಪಾಗುತ್ತದೆ. 'ಬರ ಬಂದು ತಿನ್ನೋಕೆ ಅನ್ನ ಇಲ್ಲದೆ, ಪಟ್ಟದಾನೆಯಂಥ ಸ್ತ್ರೀಯರು ಸೂರಗಿ ಸೀರೆ ನಿಲ್ಲೋದಿಲ್ಲ ಸೊಂಟದಲಿ' ಅನ್ನುವ ಅವರು ಹೆಣ್ಣುಮಕ್ಕಳ ಕೈಗಳು ಬಳಲಿ ಬಳೆಗಳು ಮೊಳಕೈ ಮೇಲಕ್ಕೆ ಏರುತ್ತವೆ ಅಂತ ತಮ್ಮ ದುಃಖವನ್ನೂ ಆಸಕ್ತಿಕರವಾಗಿ ವರ್ಣಿಸುತ್ತಾರೆ. ಬೇಕಿಲ್ಲದಿದ್ದಾಗ ಬೆಂಕಿಯ ಮಳೆ ಬರುತ್ತೆ, ಆದ್ರೆ ಬೇಕು ಅಂದ್ರೆ ಪತ್ತೆನೇ ಇರಲ್ಲ ಅನ್ನುವ ಅಳಲು ಅವರದ್ದು. ಒಟ್ಟಿನಲ್ಲಿ ಯಾತಕ್ಕೆ ಮಳೆ ಹೋದವೋ ಅಂತ ಬರಗಾಲ ಪೀಡಿತರು ಹಾಡಿದರೆ, ಬೆಂಗಳೂರಿನ ಜನ ಯಾತಕ್ಕೆ ಮಳೆ ಹೊಯ್ದವೋ ಅಂತ ಹಾಡಬೇಕಾಗಿದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಹೀಗಿದ್ದರು ಡಾ.ಅಬ್ದುಲ್ ಕಲಾಂ

ಕೆಲವರನ್ನು ಅರ್ಥ ಮಾಡಿಕೊಳ್ಳಲು ಅವರ ಜತೆ 20-30 ವರ್ಷ ಒಡನಾಡಬೇಕಿಲ್ಲ. ಮುಖತಃ ಭೇಟಿ ಮಾಡಿ ಅರ್ಧ ಗಂಟೆ ಮಾತಾಡಿದರೂ ಸಾಕು. ಅಂದಿನ ರಾಷ್ಟ್ರಪತಿ ಡಾ.ಅಬ್ದುಲ್ ಕಲಾಂ ಅವರು ನಿವೃತ್ತರಾಗುವುದಕ್ಕಿಂತ (2007ರಲ್ಲಿ) ಕೆಲ ದಿನಗಳ ಮೊದಲು, ಪತ್ರಕರ್ತ ಮತ್ತು ಸಾಹಿತಿ ಖುಷವಂತ್ ಸಿಂಗ್ ಅವರನ್ನು ಭೇಟಿ ಮಾಡಿದ್ದರು. ಆ ಭೇಟಿಯ ಬಗ್ಗೆ ಖುಷವಂತ್ ಸಿಂಗ್ ತಮ್ಮ ಅಂಕಣದಲ್ಲಿ ಬರೆದಿದ್ದರು. ಇತ್ತೀಚೆಗೆ ನನ್ನ ಹಳೆಯ ಕಡತದಲ್ಲಿ ಸಿಂಗ್ ಬರೆದ ಆ ಬರಹ ಸಿಕ್ಕಿತು. ಅವರು ಡಾ.ಕಲಾಂ ಕುರಿತು ಹೀಗೆ ಬರೆದಿದ್ದರು: ಇನ್ನು ಕೆಲವೇ ತಿಂಗಳುಗಳಲ್ಲಿ ಭಾರತದ ಹನ್ನೊಂದನೇ ರಾಷ್ಟ್ರಪತಿಯಾಗಿ ಐದು ವರ್ಷ ಪೂರ್ಣ ಅವಧಿ ಅಧಿಕಾರ ಪೂರೈಸಲಿರುವ ಡಾ.ಅಬ್ದುಲ್ ಕಲಾಂ ನಿವೃತ್ತರಾಗಲಿದ್ದಾರೆ. ಈ ಹುದ್ದೆಯನ್ನು ಅಲಂಕರಿಸಿದ ಮುಸ್ಲಿಮರ ಪೈಕಿ ಡಾ.ಕಲಾಂ ಮೂರನೆಯವರಾಗಿದ್ದಾರೆ. ಸೆಕ್ಯುಲರ್ ಡೆಮಾಕ್ರಸಿ ಎಂದು ಭಾರತ ಕರೆಯಿಸಿಕೊಂಡಿದ್ದು ಸಾರ್ಥಕವಾಯಿತು. ಅಲ್ಲದೇ ಇದರಿಂದ ನಮ್ಮ ನೆರೆಹೊರೆಯವರಿಗೆ ಒಂದು ಉತ್ತಮ ಸಂದೇಶವೂ ಹೋದಂತೆ ಆಗಿದೆ. ನಿವೃತ್ತರಾದ ಬಳಿಕ ಡಾ.ಕಲಾಂ ತಮ್ಮ ವೈಜ್ಞಾನಿಕ ಸಂಶೋಧನೆಯನ್ನು ಮುಂದುವರಿಸುತ್ತಾರಾ, ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕ ಸೇವೆ ಕೈಗೆತ್ತಿಕೊಳ್ಳುತ್ತಾರಾ ಅಥವಾ ಸನ್ಯಾಸತ್ವ ಹೊಂದುತ್ತಾರಾ ಎಂಬ ಬಗ್ಗೆ ನನಗೇನೂ ಗೊತ್ತಿಲ್ಲ. ನನಗೆ ಅವರ ಜತೆ ಅರ್ಧ ಗಂಟೆ ಕಳೆಯುವ ಸದವಕಾಶ ಸಿಕ್ಕಿತ್ತು. ಅವರು ನಾನು ವಾಸಿಸುವ ಅಪಾರ್ಟ್‌ಮೆಂಟಿಗೆ ಬಂದಿದ್ದು ನನಗೆ ನೀಡಿದ ಗೌರವ ಎಂದು ಭಾವಿಸುವೆ. ನನ್ನಂಥ ಪೆನ್ನು-ಪುಸ್ತಕ ನೆಚ್ಚಿಕೊಂಡಿರುವವನ ಮನೆಗೆ ಈ ದೇಶದ ಅತ್ಯುನ್ನತ ಹುದ್ದೆಯಲ್ಲಿರುವ ರಾಷ್ಟ್ರದ ಮುಖ್ಯಸ್ಥರೊಬ್ಬರು ಬರುವುದು ಅವರ ನಮ್ರತೆಯನ್ನು ತೋರಿಸುತ್ತದೆ. ನಮ್ಮಿಬ್ಬರ ನಡುವೆ ಸಾಮಾನ್ಯ ಎನಿಸುವ ಸಂಗತಿಗಳು ಕೆಲವೇ ಕೆಲವಿರಬಹುದು. ಅವರು ತಮಿಳಿಗ. ನನಗೆ 'ವಣಕ್ಕಮ್' ಮತ್ತು 'ಅಯ್ಯಯ್ಯೋ' ಎಂಬ ಎರಡು ತಮಿಳು ಪದಗಳು ಮಾತ್ರ ಗೊತ್ತು. ವಿಜ್ಞಾನಿಯಾದರೂ ಅವರು ಅಪ್ಪಟ ಧಾರ್ಮಿಕ ವ್ಯಕ್ತಿ. ನಾನು ನಾಸ್ತಿಕ. ವಿಜ್ಞಾನ ಮತ್ತು ಧರ್ಮ ಒಟ್ಟಿಗೆ ಹೋಗಲಾರವು ಎಂದು ನಂಬಿದವನು ನಾನು. ಒಂದು ಕಾರಣ (Reason) ಆಧರಿತ, ಮತ್ತೊಂದು ನಂಬಿಕೆ (Faith) ಆಧರಿತ. ಅವರ ಬರಹಗಳನ್ನು ಓದಿದ ಮತ್ತು ಅವರೊಂದಿಗೆ ಮಾತಾಡಿದ ನಂತರ ನನಗೆ ಮಹಾತ್ಮ ಗಾಂಧಿಯವರ ಧಾರ್ಮಿಕ ನಂಬಿಕೆಗಳಂತೆ ಡಾ.ಕಲಾಂ ಅವರದ್ದೂ ಅದೇ ರೀತಿಯದ್ದು ಎಂದೆನಿಸಿತು. ಬಾಪು ಅವರ ಎಲ್ಲ ವಿಚಾರಗಳನ್ನು ಸ್ವೀಕರಿಸಲು ಅಸಮರ್ಥನಾದರೂ, ನಾನು ನನ್ನನ್ನು ಗಾಂಧಿವಾದಿ ಎಂದು ಕರೆದುಕೊಳ್ಳುತ್ತೇನೆ. ಡಾ.ಕಲಾಂ ಅವರು ವಿಜ್ಞಾನ ಮತ್ತು ಧರ್ಮದ ಮಧ್ಯೆ ಯಾವ ವೈರುಧ್ಯ ಅಥವಾ ಸಂಘರ್ಷಗಳನ್ನು ಕಾಣುವುದಿಲ್ಲ. ಅವರೊಂದಿಗೆ ಮಾತಾಡುವಾಗ, 'ಸ್ವರ್ಗ ಮತ್ತು ನರಕ ಎಂಬುದಿಲ್ಲ. ಅವೇನಾದರೂ ಇದ್ದರೆ ನಮ್ಮ ಮನಸ್ಸಿನಲ್ಲಿ ಮಾತ್ರ' ಎಂದು ಹೇಳಿದರು. ಹಾಗಾದರೆ ಡಾ.ಕಲಾಂ ಅವರ ಪ್ರಕಾರ ದೇವರು ಅಂದರೆ ಯಾರು? ಈ ಪ್ರಶ್ನೆಗೆ ಅವರಲ್ಲಿ ಸ್ಪಷ್ಟತೆ ಇದೆ. ಈಶ್ವರ-ಅಲ್ಲಾಹ್, ಖುದಾ-ಭಗವಾನ್ ಮತ್ತು ಮಸೀದಿ-ದೇವಾಲಯ ಎಂಬ ದ್ವಂದ್ವ ಇಲ್ಲ. ಪ್ರೀತಿಯೊಂದೇ ಅವರ ಉದ್ದೇಶ. ಆದರೆ ನಾವು ದ್ವೇಷಕ್ಕೆ ನಮ್ಮ ಶಕ್ತಿಯನ್ನು ವ್ಯಯಿಸುತ್ತಿದ್ದೇವೆ. ನಮ್ಮ ನಮ್ಮ ಸಂತಸವನ್ನು ಕೊಂದು ಜೀವನವನ್ನು ಹೈರಾಣ ಮಾಡಿಕೊಳ್ಳುತ್ತಿದ್ದೇವೆ. ಖುದಾ ಮತ್ತು ರಾಮ ಇಬ್ಬರೂ ಒಂದೇ. ಪ್ರೀತಿಯಲ್ಲಿ ಮಾತ್ರ ಇವರಿಬ್ಬರೂ ಒಂದೇ ಆಗುತ್ತಾರೆ. ಇದನ್ನು ಡಾ.ಕಲಾಂ ಒಂದು ಕವಿತೆ ಮೂಲಕ ವಿವರಿಸಿದರು. ಡಾ.ಕಲಾಂ ಅವರ ದೈವತ್ವ ಕಲ್ಪನೆಗೆ ಯಾವ ರಾಷ್ಟ್ರೀಯವಾದಿಯೂ ತಕರಾರು ತೆಗೆಯಲಾರ. ಕೆಲವರು ದೇವರು ಅಂದ್ರೆ ಸತ್ಯ ಎಂದು ಪ್ರತಿಪಾದಿಸುತ್ತಾರೆ. ಉಳಿದವರು ಪ್ರೀತಿ ಅಂತಾರೆ. ಆದರೆ ಡಾ.ಕಲಾಂ ಪ್ರಕಾರ ದೇವರೆಂದರೆ ಕಾರುಣ್ಯ. ಡಾ.ಕಲಾಂ ವ್ಯಕ್ತಿತ್ವವನ್ನು ಖುಷವಂತ್ ಸಿಂಗ್ ಕೇವಲ ಐದಾರು ಪ್ಯಾರಗಳಲ್ಲಿ ಕಟ್ಟಿಕೊಟ್ಟಿದ್ದರು.

ಇದು ಸಯನೇಡಿಗಿಂತ ತೀವ್ರ ವಿಷ!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ನಮಗೆ ಪೊಟಾಷಿಯಂ ಸಯನೇಡ್ ಗೊತ್ತು. ಇದು ಉಗ್ರವಿಷ. ಸಾಮಾನ್ಯವಾಗಿ ಭಯೋತ್ಪಾದಕರು ಸಯನೇಡ್ ಗುಳಿಗೆಗಳನ್ನು ತಮ್ಮಲ್ಲಿ ಇಟ್ಟುಕೊಂಡಿದ್ದು, ಪೊಲೀಸರಿಗೆ ಸಿಕ್ಕಿಹಾಕಿಕೊಳ್ಳುವ ಸಮಯದಲ್ಲಿ ಆ ಗುಳಿಗೆಯನ್ನು ನುಂಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ ರಾಜೀವ್ ಗಾಂಧಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಬೇಕಾಗಿದ್ದ ಶಿವರಾಸನ್. ಅರ್ಧ ಗಂಟೆಯಲ್ಲಿ ಆತ ಮರಣಿಸಿದ. ಈ ಸಯನೇಡಿಗಿಂತಲೂ 1000-10,000 ಪಟ್ಟು ತೀಕ್ಷ್ಣವುಳ್ಳ ವಿಷವಿದೆ. ಅದುವೇ 'ಉಕ್ಕರಿ ಮೀನಿನ ವಿಷ'. ಇದನ್ನು 'ಪಫರ್ ಫಿಶ್' ಎನ್ನುವರು. ಈ ಮೀನು ಗಾಳಿಯನ್ನು ತನ್ನ ಉದರದಲ್ಲಿ ಹಿಡಿದಿಟ್ಟುಕೊಂಡು ದುಂಡಗೆ ಉಬ್ಬಿ ನಿಲ್ಲುತ್ತದೆ. ಹಾಗಾಗಿ ಇದನ್ನು ಬ್ಲೋ ಫಿಶ್, ಗ್ಲೋಬ್ ಫಿಶ್, ಬಲೂನ್ ಫಿಶ್, ಬಬಲ್ ಫಿಶ್, ಸ್ವೆಲ್ ಫಿಶ್ ಎಂದೆಲ್ಲ ಕರೆಯುವುದುಂಟು. ಇದರಲ್ಲಿ ಸುಮಾರು 100 ಪ್ರಭೇದಗಳಿವೆ. ಇದು ಅಟ್ಲಾಂಟಿಕ್, ಪೆಸಿಫಿಕ್ ಹಾಗೂ ಹಿಂದುಮಹಾಸಾಗರದಲ್ಲಿ ವಾಸಿಸುತ್ತವೆ. ಜಪಾನಿ ಭಾಷೆಯಲ್ಲಿ ಈ ಉಕ್ಕರಿ ಮೀನಿಗೆ ಹಾಗೂ ಆ ಮೀನಿನಿಂದ ತಯಾರಿಸುವ ಭಕ್ಷ್ಯಕ್ಕೆ 'ಫುಗು' ಎಂಬ ಹೆಸರಿದೆ. ಕ್ರಿ.ಪೂ.300ರ ಕಾಲಕ್ಕೆ ಸೇರಿದ ಚೀನಿ ವೈದ್ಯಕೀಯ ಗ್ರಂಥಗಳು ಫುಗು ಅತ್ಯಂತ ಅಪಾಯಕಾರಿಯಾದ ಮೀನು, ಇದನ್ನು ತಿನ್ನಬಾರದು, ತಿಂದವರು ಹೇಗೆಲ್ಲ ಯಾತನೆಪಟ್ಟು ಸಾಯುತ್ತಾರೆ ಎನ್ನುವುದನ್ನು ವರ್ಣಿಸುತ್ತವೆ. ಆದರೆ ಇದು ಅತ್ಯಂತ ರುಚಿ ರುಚಿಯಾದ ಮೀನು. ಇದನ್ನು ತಿನ್ನಲು ಜನರು ಹಾತೊರೆಯುತ್ತಾರೆ. ಇದೇ ಅವಧಿಯ ಜಪಾನಿ ಬರಹಗಳು ಉಕ್ಕರಿಮೀನಿನಿಂದ ತಿನಿಸನ್ನು ತಯಾರಿಸುವುದು ಒಂದು ವಿಜ್ಞಾನವೂ ಹೌದು, ಕಲೆಯೂ ಹೌದು ಎಂದು ವರ್ಣಿಸುತ್ತವೆ. ಜಪಾನ್ ದೇಶವನ್ನು 'ಎಡೊ ವಂಶಜರು' ಆಳುತ್ತಿದ್ದಾಗ (1603-1868) ಫುಗುವನ್ನು ತಿನ್ನಲೇ

ಬಾರದು, ಅದರಲ್ಲೂ ಸಮುರಕಲೆಯಲ್ಲಿ ನಿಷ್ಣಾತರಾದ ಸಮುರಾಯ್ ಯೋಧರು ಇದನ್ನು ಯಾವ ಕಾರಣಕ್ಕೂ ತಿನ್ನಬಾರದು ಎಂದು ಕಟ್ಟಾಜ್ಞೆಯನ್ನು ಮಾಡಿದ್ದರು. ಆದರೂ ಜನರು ಈ ಮೀನಿನ ರುಚಿಗೆ ಮನಸೋತು, ಸತ್ತರೂ ಪರವಾಗಿಲ್ಲ ಇದನ್ನೊಂದು ತಿನ್ನಲೇಬೇಕು ಎಂದು ಹಾತೊರೆಯುತ್ತಿದ್ದರು. ಇಂದಿನ ಜಪಾನಿನಲ್ಲಿ 'ಫುಗು' ಭಕ್ಷ್ಯವನ್ನು ಸಿದ್ಧಪಡಿಸಲೆಂದೇ ವಿಶೇಷ ಅಡುಗೆ ಭಟ್ಟರಿರುತ್ತಾರೆ. ಇವರಿಗೆ ಉಕ್ಕರಿ ಮೀನಿನ ಯಾವ ಭಾಗದಲ್ಲಿ ವಿಷವಿರುತ್ತದೆ ಎನ್ನುವುದು ಗೊತ್ತು. ಅವುಗಳನ್ನು ಎಚ್ಚರಿಕೆಯಿಂದ ಛೇದಿಸಿ ಎಸೆಯುತ್ತಾರೆ. ಉಳಿದುದನ್ನು ಅಡುಗೆ ಮಾಡುತ್ತಾರೆ. ಫುಗು ಭಕ್ಷ್ಯವನ್ನು ತಯಾರಿಸುವುದನ್ನು ಕಲಿಯಲು ಅಡುಗೆ ಭಟ್ಟರು ಕನಿಷ್ಠ 4 ವರ್ಷಗಳ ಕಾಲ ತರಬೇತಿಯನ್ನು ಪಡೆಯುತ್ತಾರೆ.

ಅಯಾನ್ ಫ್ಲೆಮಿಂಗ್, ಜೇಮ್ಸ್ ಬಾಂಡ್ ಪಾತ್ರವನ್ನು ಸೃಜಿಸಿ ಬರೆದ ಪತ್ತೇದಾರಿ ಕಾದಂಬರಿಗಳು ವಿಶ್ವ ವಿಖ್ಯಾತವಾಗಿವೆ. ಅವು ಚಲನಚಿತ್ರಗಳಾಗಿ ಅಪಾರ ಜನಪ್ರಿಯತೆಯನ್ನು ಗಳಿಸಿವೆ. 'ಫ್ರಮ್ ರಷ್ಯಾ ವಿತ್ ಲವ್' (1957) ಎನ್ನುವ ಕಾದಂಬರಿಯನ್ನು ಆಧರಿಸಿ, ಅದೇ ಹೆಸರಿನ ಚಲನಚಿತ್ರವು 1963ರಲ್ಲಿ ನಿರ್ಮಾಣವಾಯಿತು. ರೋಸ ಕ್ಲೆಬ್ ಎಂಬ ಸುಂದರಿ ರಷ್ಯನ್ ಗೂಢಚಾರಿಣಿ. ಇವಳು ತನ್ನ ಬೂಟಿನೊಳಗೆ ಒಂದು ಹರಿತವಾದ ಚೂರಿಯನ್ನು ಇಟ್ಟುಕೊಂಡಿರುತ್ತಾಳೆ. ಈ ಚೂರಿಗೆ ಉಕ್ಕರಿ ಮೀನಿನ ವಿಷವನ್ನು ಲೇಪಿಸಿರುತ್ತಾಳೆ. ಹೊಡೆದಾಟದಲ್ಲಿ ಚೂರಿಯು ಜೇಮ್ಸ್ ಬಾಂಡ್‌ಗೆ ತಾಗುತ್ತದೆ. ಇದು ನರವಿಷ. ಬಾಂಡ್ ಕೆಳಕ್ಕೆ ಬೀಳುತ್ತಾನೆ. ವಿಷವು ಅವನ ಶರೀರದಾದ್ಯಂತ ಹರಡುತ್ತದೆ. ಅವನು ಕೋಮಾ ಸ್ಥಿತಿಗೆ ಹೊರಟುಹೋಗುತ್ತಾನೆ. ಅಲ್ಲಿಗೆ ಕಾದಂಬರಿಯು ಮುಗಿಯುತ್ತದೆ. ಬಾಂಡ್ ಮುಂದೆ ಏನಾದ ಎನ್ನುವುದನ್ನು ಅಯಾನ್ ಫ್ಲೆಮಿಂಗ್ ಓದುಗರ ಕಲ್ಪನೆಗೆ ಬಿಟ್ಟುಬಿಡುತ್ತಾನೆ. ಚಲನಚಿತ್ರದಲ್ಲಿ ಬಾಂಡ್ ಗಾಯಗೊಳ್ಳುವುದಿಲ್ಲ, ಅವನು ರೋಸ ಕ್ಲೆಬ್‌ಳನ್ನು ಸೋಲಿಸುತ್ತಾನೆ. ಅಯಾನ್ ಫ್ಲೆಮಿಂಗ್ 'ಡಾ.ನೋ' ಎಂಬ ತನ್ನ ಮುಂದಿನ ಕಾದಂಬರಿಯಲ್ಲಿ ಜೇಮ್ಸ್ ಬಾಂಡ್ ಉಕ್ಕರಿ ಮೀನಿನ ವಿಷದಿಂದ ಪಾರಾದಂತೆ ಚಿತ್ರಿಸುತ್ತಾನೆ. ಜೇಮ್ಸ್ ಬಾಂಡ್ ಪಾತ್ರಕ್ಕೆ ಸಾವೇ ಇಲ್ಲ!

ಉಕ್ಕರಿ ಮೀನಿನಲ್ಲಿರುವ ವಿಷದ ಬಗ್ಗೆ ಮೊದಲ ಬಾರಿಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿದವನು ಜಪಾನಿನ 'ಯೋಷಿಜುಮಿ ತಹಾರ' ಎಂಬ ವಿಜ್ಞಾನಿ. ಇವನು 1909ರಲ್ಲಿ ಉಕ್ಕರಿ ಮೀನಿನ ಅಂಡಾಶಯದಿಂದ ಅದರ ವಿಷವನ್ನು ಪ್ರತ್ಯೇಕಿಸಿದ. ಉಕ್ಕರಿ ಮೀನುಗಳ ಗುಂಪಿಗೆ ಸೇರಿದ ಎಲ್ಲ ಜೀವಿಗಳ ಮೇಲ್ದವಡೆ ಹಾಗೂ ಕೆಳದವಡೆಯಲ್ಲಿ ಎರಡೆರಡು ಹಲ್ಲುಗಳು ಉಬ್ಬಿಕೊಂಡು ಕೊಕ್ಕಿನಂತೆ ಕಾಣುತ್ತವೆ. ಹಾಗಾಗಿ ಅವುಗಳಿಗೆ ನಾಲ್ಕು ಹಲ್ಲಿನ ಜೀವಿಗಳು ಎನ್ನುವ ಅರ್ಥದಲ್ಲಿ 'ಟೆಟ್ರೊಡಾಂಟಿಡೆ' ಎಂಬ ಹೆಸರನ್ನು ನೀಡಿದರು. ಅವು ಉತ್ಪಾದಿಸುವ ವಿಷಕ್ಕೂ 'ಟೆಟ್ರಡೋಟಾಕ್ಸಿನ್' ಎಂದು ಹೆಸರನ್ನಿಟ್ಟರು. 1960ರ ದಶಕದ ವೇಳೆಗೆ ಡಾ.ರಾಬರ್ಟ್ ಬಿ. ವುಡ್ವರ್ಡ್ ಎಂಬ ನೊಬೆಲ್ ಪುರಸ್ಕೃತ ರಸಾಯನ ಶಾಸ್ತ್ರಜ್ಞ ಟೆಟ್ರಡೋಟಾಕ್ಸಿನ್ನಿನ ರಾಸಾಯನಿಕ ಸ್ವರೂಪವನ್ನು ಅನಾವರಣ ಮಾಡಿದ. 1970-80ರ ದಶಕದಲ್ಲಿ ಸಿ.ವೈ.ಕಾವೊ ಮತ್ತು ಬ್ರೂಸ್ ಹಿಲ್ ಎಂಬ ವಿಜ್ಞಾನಿಗಳು ಟೆಟ್ರಡೋ ಟಾಕ್ಸಿನ್ ಹೇಗೆ ತನ್ನ ವಿಷ ಪ್ರಭಾವವನ್ನು ಬೀರುತ್ತದೆ ಎಂಬ ಬಗ್ಗೆ ಅಧ್ಯಯನವನ್ನು ಮಾಡಿದರು. 1950ರ ದಶಕದಲ್ಲಿ ಟೆಟ್ರಡೋಟಾಕ್ಸಿನ್ ವಿಷವು ಉಕ್ಕರಿ ಮೀನಿನಲ್ಲಿ ಮಾತ್ರವಲ್ಲ, ಅಷ್ಟಪದಿ, ನಕ್ಷತ್ರಮೀನು, ಕೆಲವು ಕಪ್ಪೆ, ಏಡಿಗಳಲ್ಲೂ ಇರುತ್ತದೆ ಎನ್ನುವ ವಿಚಾರವು ಕಾಲಕ್ರಮೇಣ ತಿಳಿದುಬಂದಿತು. ಉಕ್ಕರಿ ಮೀನಿನ ಯಾವ ಯಾವ ಭಾಗಗಳಲ್ಲಿ ವಿಷವಿದೆ ಎನ್ನುವುದನ್ನು ವಿಜ್ಞಾನಿಗಳು ಹುಡುಕಲಾರಂಭಿಸಿದರು. ವಿಷವು ಪ್ರಧಾನವಾಗಿ ಯಕೃತ್ತು, ಅಂಡಾಶಯ ಹಾಗೂ ಚರ್ಮ ದಲ್ಲಿದೆ ಎನ್ನುವ ವಿಚಾರವು ತಿಳಿಯಿತು. ವಿಜ್ಞಾನಿಗಳು ಮತ್ತಷ್ಟು ಕುತೂಹಲಿಗಳಾಗಿ ವಿಷವು ಹೇಗೆ ಉತ್ಪಾದನೆ ಯಾಗುತ್ತದೆ ಎನ್ನುವುದರ ಬಗ್ಗೆ ಸಂಶೋಧನೆಯನ್ನು ನಡೆಸಿದಾಗ, ಅವರಿಗೆ ಅಚ್ಚರಿಯಾಯಿತು. ವಾಸ್ತವದಲ್ಲಿ ಉಕ್ಕರಿ ಮೀನು ವಿಷವನ್ನೇ ಉತ್ಪಾದಿಸುವುದಿಲ್ಲ ಎನ್ನುವ ಕುತೂಹಲಕರ ಮಾಹಿತಿಯು ಹೊರಬಿದ್ದಿತು. ಇ.ಜೆ.ಕ್ರಾಸ್ಲೆ ಎಂಬ ವಿಜ್ಞಾನಿಯು ಉಕ್ಕರಿ ಮೀನಿನ ಜತೆಯಲ್ಲಿ ಸಹಜೀವನವನ್ನು ನಡೆಸುವ ಹಲವು ಸೂಕ್ಷ್ಮಜೀವಿಗಳು ವಿಷವನ್ನು ಉತ್ಪಾದಿಸುತ್ತವೆ ಎನ್ನುವ ರೋಚಕ ಸುದ್ದಿಯನ್ನು ಬಹಿರಂಗಗೊಳಿಸಿದ. ವಿಶೇಷ ಗುಣಲಕ್ಷಣಗಳ ವಿಬ್ರಿಯೊ, ಸ್ಯೂಡೋಮೊನಾಸ್, ಫಾಸ್ಫೋರಿಯಮ್, ಏರೋ ಮೊನಾಸ್, ಪ್ಲೀಸೋಮೊನಾಸ್, ಆಲ್ಟೆರೋಮೊನಾಸ್, ಶೆವಾ ನೆಲ್ಲ, ಮೈಕ್ರೋಕಾಕಸ್, ಸೆರಾಶಿಯ, ಬ್ಯಾಸಿಲ್ಲಸ್, ರೋಸಿಯೋಬ್ಯಾಕ್ಟರ್, ಎಂಟರೋಬ್ಯಾಕ್ಟರ್ ಮುಂತಾದ ಬ್ಯಾಕ್ಟೀರಿಯಗಳು ಟೆಟ್ರಡೋಟಾಕ್ಸಿನ್ ಅನ್ನು ಉತ್ಪಾದಿಸುತ್ತವೆ. ಸಮುದ್ರದ ನೀರಿನಲ್ಲಿ ಈ ಬ್ಯಾಕ್ಟೀರಿಯಗಳ ಸಂಪರ್ಕಕ್ಕೆ ಬರದ ಹಾಗೆ ಉಕ್ಕರಿ ಮೀನನ್ನು ಬೆಳೆಸಿದರೆ, ಆ ಉಕ್ಕರಿಮೀನು ವಿಷರಹಿತವಾಗಿರುತ್ತದೆ. ಅದನ್ನು ಯಾವುದೇ ಭೀತಿಯಿಲ್ಲದೆ ತಿನ್ನಬಹುದು. ಹಾಗಾಗಿ ಬ್ಯಾಕ್ಟೀರಿಯಾಗಳ ಸಂಪರ್ಕಕ್ಕೆ ಬರದ ಹಾಗೆ ಸಿಹಿನೀರು ಮತ್ತು ಸಮುದ್ರ ನೀರಿನಲ್ಲಿ ಉಕ್ಕರಿಮೀನನ್ನು ಬೆಳೆಸುವ ಪ್ರಯತ್ನಗಳು ನಡೆದಿವೆ.

ನಮ್ಮ ನರಮಂಡಲವು ಕೆಲಸ ಮಾಡಬೇಕಾದರೆ ಸೋಡಿಯಂ ಮತ್ತು ಪೊಟಾಷಿಯಂ ಅಯಾನುಗಳು ಬೇಕು. ಈ ಅಯಾನುಗಳು ನರಗಳ ಒಳಗೆ ಹೋಗಲು ಮತ್ತು ಹೊರಗೆ ಬರಲು ವಿಶೇಷ ಪಂಪ್‌ಗಳಿರುತ್ತವೆ ಹಾಗೂ ಇವುಗಳ ಚಲನವಲನಕ್ಕೆ ಅನುವು ಮಾಡಿಕೊಡುವ ವಿಶೇಷ ಪಥ/ಕಾಲುವೆಗಳಿರುತ್ತವೆ. ಟೆಟ್ರಡೋಟೋಟಾಕ್ಸಿನ್ ಸೋಡಿಯಂ ಅಯಾನುಗಳ ಪಥ/ಕಾಲುವೆಗಳನ್ನು ಸ್ಥಗಿತಗೊಳಿಸುತ್ತದೆ. ಹಾಗಾಗಿ ಆ ನರವು ಕಾರ್ಯವಿಹೀನವಾಗುತ್ತದೆ. ನಿಶ್ಚೇಷ್ಟಿತವಾಗುತ್ತದೆ. ಟೆಟ್ರಡೋಟಾಕ್ಸಿನ್ನಿನ ಈ ಗುಣವು ಅನೇಕ ವೈದ್ಯಕೀಯ ಉಪಯೋಗಗಳ ಬಗ್ಗೆ ಭರವಸೆಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಟೆಟ್ರಡೋಟಾಕ್ಸಿನ್ ಎಷ್ಟೇ ವಿಷಮಯವಾಗಿದ್ದರೂ, ಅದನ್ನು ಎಚ್ಚರಿಕೆಯಿಂದ ಬಳಸುವುದರ ಮೂಲಕ ಹಲವು ಅನಾರೋಗ್ಯಗಳಲ್ಲಿ ತಡೆಯಬಹುದು ಎನ್ನುವುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಅಂಥವುಗಳಲ್ಲಿ ನೋವು ನಿರ್ವಹಣೆಯು ಮುಖ್ಯವಾದದ್ದು.

ನೋವುಗಳಲ್ಲಿಯೇ ಅತ್ಯಂತ ಉಗ್ರ ನೋವೆಂದರೆ ಕ್ಯಾನ್ಸರ್ ರೋಗಿಗಳಲ್ಲಿ ಕಂಡುಬರುವ ನರಬೇನೆ ಹಾಗೂ ಅರ್ಧತಲೆನೋವಿನ ಬೇನೆ. ಈ ನೋವುಗಳನ್ನು ಸಹಿಸಿಕೊಳ್ಳುವುದು ಕಷ್ಟ. ಇಂಥ ರೋಗಿಗಳಲ್ಲಿ ನೋವಿನ ಸಂವೇದನೆಗಳನ್ನು ಕೊಂಡೊಯ್ಯುವ ನರವನ್ನು ಗುರುತಿಸಿ, ಅದಕ್ಕೆ ಟೆಟ್ರಡೋಟಾಕ್ಸಿನ್ ಅನ್ನು ನಿಗದಿತ ಪ್ರಮಾಣದಲ್ಲಿ ಚುಚ್ಚಿದಾಗ, ನೋವು ಸಂಪೂರ್ಣವಾಗಿ ಮಾಯವಾಗುತ್ತದೆ. ಆದರೆ ಡೋಸ್ ಬಹಳ ಮುಖ್ಯ. ಏಕೆಂದರೆ ಡೋಸ್ ಹೆಚ್ಚಾದರೆ ಆ ನರವು, ಹಾಗೂ ಆ ನರವು ನಿಯಂತ್ರಿಸುವ ಸ್ನಾಯುವು ನಿಶ್ಚೇಷ್ಟಿತವಾಗುವ ಅಪಾಯವಿರುತ್ತದೆ.

ಟೆಟ್ರಡೋಟಾಕ್ಸಿನ್ ಸ್ಥಳೀಯ ಅರಿವಳಿಕೆಯಾಗಿ (ಲೋಕಲ್ ಅನಸ್ತೇಸಿಯ) ಉಪಯುಕ್ತ ಎನ್ನಲಾಗಿದೆ. ಅದರಲ್ಲೂ ಹಲ್ಲುನೋವಿನಂಥ ಪ್ರಕರಣಗಳಲ್ಲಿ ಟೆಟ್ರಡೋಟಾಕ್ಸಿನ್ ಅನ್ನು ಪ್ರಯೋಗಿಸಿದಾಗ, ಅದು ನಿಗದಿತ ನರವನ್ನು ಮಾತ್ರ ನಿಶ್ಚೇಷ್ಟಿತಗೊಳಿಸುವ ಕಾರಣ, ದಂತಚಿಕಿತ್ಸೆಯನ್ನು ಕೊಡುವುದು ಸುಲಭವಾಗುತ್ತದೆ. ಟೆಟ್ರಡೋಟಾಕ್ಸಿನ್ ಸುದೀರ್ಘಕಾಲ ನೋವನ್ನು ನಿವಾರಿಸಬಲ್ಲದು.

ಅಪಸ್ಮಾರ (ಎಪಿಲೆಪ್ಸಿ) ಮಲ್ಟಿಪಲ್ ಸ್ಕ್ಲಿರೋಸಿಸ್ ಮತ್ತು ಏಮಯೋಟ್ರೋಫಿಕ್ ಲ್ಯಾಟರಲ್ ಸ್ಕ್ಲಿರೋಸಿಸ್ ಮುಂತಾದ ಗಂಭೀರ ನರಬೇನೆಗಳಲ್ಲಿ ಟೆಟ್ರಡೋಟಾಕ್ಸಿನ್ ಉಪಯುಕ್ತವಾಗಬಹುದು. ಹಾಗೆಯೇ ಹೃದಯಕ್ಕೆ ಸಂಬಂಧಿಸಿದಂತೆ ಮಿಡಿತ ವೈಪರೀತ್ಯವು (ಅರಿದ್ಮಿಯ) ಕಂಡುಬರುತ್ತದೆ. ಕೆಲವು ಸಲ ಇದು ಜೀವಹಾರಕವಾಗಬಲ್ಲದು. ಇದನ್ನು ನಿಯಂತ್ರಿಸಲು ಟೆಟ್ರಡೋಟಾಕ್ಸಿನ್ ಉಪಯುಕ್ತವಾಗಬಹುದು ಎಂಬ ನಿರೀಕ್ಷೆಯಿದೆ. ಈ ದಿಶೆಯಲ್ಲಿ ಸಂಶೋಧನೆಗಳು ನಡೆದಿವೆ.

ಟೆಟ್ರಡೋಟಾಕ್ಸಿನ್ ಸುತ್ತಮುತ್ತಲೂ ಹಲವು ದಂತಕಥೆಗಳು ಹರಡಿವೆ. ಅವುಗಳಲ್ಲಿ ಮುಖ್ಯವಾದದ್ದು ವೇಡ್ ಡೇವಿಸ್ ಬರೆದ ಕಥೆ. ಈತನು ಮಾನವಶಾಸ್ತ್ರಜ್ಞ ಹಾಗೂ ಸಸ್ಯಶಾಸ್ತ್ರಜ್ಞ. ಇವನು ಹೈಟಿ ಪ್ರದೇಶದಲ್ಲಿ ಹಲವು ವರ್ಷಗಳವರೆಗೆ ಇದ್ದು 'ದಿ ಸರ್ಪೆಂಟ್ ಆ್ಯಂಡ್ ದಿ ರೈನ್‌ಬೋ' (1985) ಎನ್ನುವ ಕಾದಂಬರಿಯನ್ನು ಬರೆದ. ಈ ಕಾದಂಬರಿಯಲ್ಲಿ 'ಝೂಂಬಿ'ಗಳನ್ನು ಪ್ರಸ್ತಾಪಿಸಿದ. ಝೂಂಬಿಗಳೆಂದರೆ ಜೀವಚ್ಛವಗಳು. ಝೂಂಬಿಗೆ ಒಳಗಾದ ಜನರು ಎಲ್ಲರಂತೆಯೇ ಇರುತ್ತಾರೆ. ಆದರೆ ಅವರಿಗೆ ಸ್ವಪ್ರಜ್ಞೆ ಇರುವುದಿಲ್ಲ. ಅವರ ಇಚ್ಛಾಶಕ್ತಿಯು ನಾಶವಾಗಿರುತ್ತದೆ. ಯಾರು ಝೂಂಬಿಯನ್ನು ನಡೆಸಿರುತ್ತಾರೋ, ಅವರು ಹೇಳಿದ್ದನ್ನು ಮಾತ್ರ ಯಾಂತ್ರಿಕವಾಗಿ ಮಾಡುತ್ತಾರೆ. ಇದು ಒಂದು ರೀತಿಯ 'ಹೈಟಿಯನ್ ವೂಡು' ಎಂದರೆ 'ಹೈಟಿ ಜನರು ಮಾಡುವ ಮಾಟ'. ಈ ಮಾಟದಲ್ಲಿ ಹೈಟಿ ಜನರು ಹಲವು ಚಿತ್ತಭ್ರಾಮಕ ವಸ್ತುಗಳ ಜತೆಯಲ್ಲಿ ಟೆಟ್ರಡೋಟಾಕ್ಸಿನ್ ವಿಷವನ್ನು ಬಳಸುತ್ತಾರೆ ಎಂದು ವಿವರವಾಗಿ ಬರೆದಿದ್ದಾನೆ. ಪಾಶ್ಚಾತ್ಯ ವಿಜ್ಞಾನಿಗಳು ಡೇವಿಸ್ ಬರೆದಿರುವ ಈ ಕಥೆಯಲ್ಲಿ ಯಾವುದೇ ಹುರುಳಿಲ್ಲ ವೆಂದಿದ್ದಾರೆ, ಕಪೋಲಕಲ್ಪಿತ ಎಂದು ವಾದಿಸಿದ್ದಾರೆ. ಆದರೆ ಡೇವಿಸ್ ಕಥನವು 'ಪರಮಸತ್ಯ' ಎಂದು ವಾದಿಸುವ ಸಾಕಷ್ಟು ಜನರು ಪಶ್ಚಿಮ ಗೋಳದಲ್ಲಿದ್ದಾರೆ.

ಪ್ರಸ್ತುತ ಟೆಟ್ರಡೋಟಾಕ್ಸಿನ್ ಯುಕ್ತವಾದ ಯಾವುದೇ ಔಷಧವು ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಏಕೆಂದರೆ ಇದನ್ನು ಎಚ್ಚರಿಕೆಯಿಂದ ಬಳಸುವುದೇ ಒಂದು ಸವಾಲಾಗಿದೆ. ಆದರೆ ಟೆಟ್ರಡೋಟಾಕ್ಸಿನ್ ರಚನೆಯಲ್ಲಿ ಅಲ್ಪಸ್ವಲ್ಪ ಮಾರ್ಪಾಟನ್ನು ಮಾಡಿ, ಒಂದು ಹೊಸ ಔಷಧವನ್ನು ತಯಾರಿಸುವ ಪ್ರಯತ್ನಗಳು ನಡೆದಿವೆ. ಅದು ಸಾಧ್ಯವಾದಂದು ನೋವು ನಿವಾರಣ ಚಿಕಿತ್ಸೆಯು ಸುಲಭವಾದೀತು.

ಟೆಟ್ರಡೋಟಾಕ್ಸಿನ್, ಸಯನೇಡಿಗಿಂತ 1000-10,000 ಪಟ್ಟು ಹೆಚ್ಚು ವಿಷಕಾರಿ ಎಂದೆವು. ಆದರೆ ಇದುವೇ ಸರ್ವಶ್ರೇಷ್ಠ ವಿಷವಲ್ಲ! ನಮ್ಮ ಭೂಮಿಯ ಮೇಲಿರುವ ವಿಷಗಳಲ್ಲಿಯೇ ಅತ್ಯುಗ್ರವಾದ ವಿಷವನ್ನು ಕೊಲಂಬಿಯದಲ್ಲಿರುವ ಗೋಲ್ಡನ್ ಪಾಯ್ಸನ್ ಫ್ರಾಗ್ ಉತ್ಪಾದಿಸುತ್ತದೆ.

ಉನ್ನತ ಶಿಕ್ಷಣ: ಬಗೆಹರಿಯದ ಗೊಂದಲಗಳು

ನಮ್ಮ ಸರಕಾರಗಳು ಅತಿ ಕಡಿಮೆ ಗಮನ ಕೊಟ್ಟು, ಅತಿ ಕಡಿಮೆ ಬಜೆಟ್ ವಿತರಿಸಿ, ಆಯಕಟ್ಟಿನ ಜಾಗಗಳಿಗೆ ಅಪಾತ್ರರನ್ನು ನೇಮಿಸಿ, ಅತಿ ದೊಡ್ಡ ಮಟ್ಟದಲ್ಲಿ ನಿರೀಕ್ಷೆಯಿಟ್ಟುಕೊಂಡು, ದೊಡ್ಡ ದೊಡ್ಡ ಭಾಷಣ ಬಿಗಿಯುವ ಯಾವುದಾದರೂ ಇಲಾಖೆಯಿದ್ದರೆ ಅದು ಉನ್ನತ ಶಿಕ್ಷಣ ಕ್ಷೇತ್ರ.

ಕಳಕಳಿ

ಸಾಗರ್ ಮುಧೋಳ
vveditoped@gmail.com

ಉತ್ತರ ಪ್ರದೇಶ ಮೂಲದ ವಿದ್ಯಾರ್ಥಿಯೊಬ್ಬ ಇತ್ತೀಚೆಗೆ ದೇಶದ ಪ್ರತಿಷ್ಠಿತ ಜೆಇಇ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಐಐಟಿ ಧನಬಾದ್‌ಗೆ ಪ್ರವೇಶವನ್ನು ಪಡೆದಿದ್ದ. ಆದರೆ, 17,500 ರುಪಾಯಿ ಪ್ರವೇಶಾತಿ ಶುಲ್ಕವನ್ನು ಪಾವತಿಸುವಲ್ಲಿ ತಡಮಾಡಿದ ಕಾರಣ ಅವನಿಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಆ ವಿದ್ಯಾರ್ಥಿ ಸರ್ವೋಚ್ಚ ನ್ಯಾಯಾಲಯದ ಕದ ತಟ್ಟಿದ. ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡ ಮುಖ್ಯ ನ್ಯಾಯಾಧೀಶ ನ್ಯಾ. ಡಿ.ವೈ.ಚಂದ್ರಚೂಡ್‌ರನ್ನು ಒಳಗೊಂಡ ತ್ರಿಸದಸ್ಯ ನ್ಯಾಯಪೀಠವು ಒಂದು ಮಹತ್ವದ ಆದೇಶವನ್ನು ನೀಡಿತು. ''ಈ ಪ್ರತಿಭಾವಂತ ವಿದ್ಯಾರ್ಥಿಯು ಅವಕಾಶ ವಂಚಿತನಾಗಲು ನಾವು ಬಿಡುವುದಿಲ್ಲ; ಸಮಾಜದ ಕೆಳಸ್ತರದ ಸಮುದಾಯಕ್ಕೆ ಸೇರಿದ್ದರೂ ಆತ ಎಲ್ಲ ಹಂತಗಳನ್ನೂ ದಾಟಿ ಐಐಟಿಗೆ ಪ್ರವೇಶ ಪಡೆದಿದ್ದಾನೆ. ಇಂಥ ಪ್ರತಿಭಾವಂತರಿಗೆ ಈ ಹಂತದಲ್ಲಿ ಅವಕಾಶ ತಪ್ಪಬಾರದು'' ಎಂಬುದಾಗಿ ನ್ಯಾಯಾಧೀಶರು ಅಭಿಪ್ರಾಯಪಟ್ಟು, ಸಂವಿ



ಧಾನದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆ ವಿದ್ಯಾರ್ಥಿಗೆ ಹಾಲಿ ಸೆಮಿಸ್ಟರ್‌ನಲ್ಲಿಯೇ ಪ್ರವೇಶ ನೀಡುವಂತೆ ಸದರಿ ಶಿಕ್ಷಣ ಸಂಸ್ಥೆಗೆ ನಿರ್ದೇಶನವನ್ನು ನೀಡಿದರು. ತದನಂತರ, ಈ ವಿದ್ಯಾರ್ಥಿಯ ವಿದ್ಯಾಭ್ಯಾಸದ ಶುಲ್ಕವನ್ನು ಭರಿಸಲು ಉತ್ತರ ಪ್ರದೇಶ ಸರಕಾರ ಒಪ್ಪಿಕೊಂಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಇಲ್ಲೊಂದು ಮಹತ್ವದ ಅಂಶವನ್ನು ಗಮನಿಸಬೇಕು: ವಿದ್ಯಾರ್ಥಿಯೊಬ್ಬ ಕಷ್ಟಪಟ್ಟು ಓದಿ, ಮೆರಿಟ್ ಆಧಾರದ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರವೂ ಓದಿನ ಅವಕಾಶಕ್ಕಾಗಿ ಸುಪ್ರೀಂ ಕೋರ್ಟ್‌ವರೆಗೆ ಹೋಗಿ ಹೋರಾಟ ಮಾಡಬೇಕೇ? ಶುಲ್ಕ ಕಟ್ಟಲಾಗದ ಆರ್ಥಿಕ ಅಸಹಾಯಕತೆಯು ಅವನ ಪ್ರತಿಭೆಯನ್ನು ತಿಂದುಹಾಕಬಹುದೇ? ಹಾಗಂತ ಅವನು ಪ್ರವೇಶಾತಿ ಬಯಸಿದ್ದು ಯಾವುದೋ ಉದ್ಯಮಿಗಳು ನಡೆಸುವ ಖಾಸಗಿ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಅಲ್ಲ; ಸರಕಾರಗಳು ತಮ್ಮ ಸಾಧನೆಯ ದ್ಯೋತಕ ಎಂದು ಶ್ರೇಯಸ್ಸನ್ನು ತೆಗೆದುಕೊಳ್ಳಲು ಹಾತೊರೆಯುವ ಐಐಟಿಯಲ್ಲಿ! ಕೇಂದ್ರ ಸರಕಾರದ ಶಿಕ್ಷಣ ಸಚಿವಾಲಯಕ್ಕೆ ನೇರವಾಗಿ ಒಳಪಡುವ ಐಐಟಿಯಲ್ಲಿ ಈ ತರಹದ ಅಚಾತುರ್ಯಕ್ಕೆ ಅಲ್ಲಿಯೇ ಕಡಿವಾಣ ಹಾಕಲು ಕನಿಷ್ಠಪಕ್ಷ ಒಂದು ತಜ್ಞರ ಸಮಿತಿಯಿಲ್ಲದಿರುವುದು, ಒಂದೊಮ್ಮೆ ಇದ್ದರೂ ಅದು ಕೆಲಸಕ್ಕೆ ಬಾರದಿರುವುದು ಈ ದೇಶದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕೈಗನ್ನಡಿ.

Institutes of National Importance ದರ್ಜೆಯ ಐಐಟಿ, ಎನ್‌ಐಟಿ, ಐಐಎಮ್, ಐಐಐಟಿ, ಎನ್‌ಎಲ್‌ಯುಗಳಲ್ಲಿ ಅಧ್ಯಯನ ಮಾಡಬೇಕೆಂದರೆ ತಲೆಯ ತುಂಬಾ ಜ್ಞಾನವಿದ್ದರಷ್ಟೇ ಸಾಲದು, ಕಿಸೆಯ ತುಂಬಾ ದುಡ್ಡೂ ಇರಬೇಕು ಎಂಬುದು ಅಚ್ಚರಿಯಾದರೂ ಸತ್ಯ. ಆದರೆ, ಈ ಸಂಸ್ಥೆಗಳ ಶುಲ್ಕದ ವಿವರಗಳನ್ನು ಗಮನಿಸಿದರೆ, ಕಡುಬಡತನದ ಹಾಗೂ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ ವಿದ್ಯಾರ್ಥಿಗಳು ಇವುಗಳಲ್ಲಿ ಏಗಲು ಸಾಧ್ಯವೇ? ಎಂಬ ಪ್ರಶ್ನೆ ಮೂಡುವುದು ಅತ್ಯಂತ ಸಹಜ. ಇದಕ್ಕೆ ಸಲೀಸಾಗಿ ಹೇಳುವ ಒಂದು ಉಪಾಯ- 'ಶೈಕ್ಷಣಿಕ ಸಾಲ'. ಇದು ಕೂಡ ಕೆಲವು ಶಿಕ್ಷಣ ಸಂಸ್ಥೆಗಳು ಬ್ಯಾಂಕುಗಳೊಂದಿಗೆ ಮಾಡಿಕೊಳ್ಳುತ್ತಿರುವ ಅಪವಿತ್ರ ಮೈತ್ರಿ ಎನ್ನಬೇಕಾಗುತ್ತದೆ. Job Placement ಹೆಸರಿನಲ್ಲಿ ಪ್ರತಿಭಾವಂತರ ತಲೆಗೆ ಬೆಲೆಕಟ್ಟಿ ಮಾರಾಟ ಮಾಡುವ ಹುನ್ನಾರವಿದು. ನಂತರ ಇವರುಗಳೇ, ''ಈ ದೇಶದಲ್ಲಿ ಪ್ರತಿಭಾ ಪಲಾಯನವಾಗುತ್ತಿದೆ, ಕೌಶಲ ಆಧರಿತ ಶಿಕ್ಷಣ ಬೇಕು, ಮತ್ತೊಂದು- ಮಗದೊಂದು'' ಅಂತ ಹೇಳಿ ಬೊಬ್ಬೆ ಹೊಡೆಯುತ್ತಾರೆ. ಇದು ಸರಕಾರಿ ಶಿಕ್ಷಣ ಸಂಸ್ಥೆಗಳಿಗೆ ಮಾತ್ರವೇ ಸೀಮಿತವಾಗಿಲ್ಲ; ಮಹಾನ್ ಸಮಾಜಸೇವೆಯ ಸೋಗು ಹಾಕಿಕೊಂಡು ಮೆರೆಯುವ ಒಂದಷ್ಟು ಖಾಸಗಿ ವಿಶ್ವವಿದ್ಯಾಲಯಗಳೂ ಇದಕ್ಕೆ ಹೊರತಾಗಿಲ್ಲ. ಈ ವಿಶ್ವವಿದ್ಯಾಲಯಗಳ ಶುಲ್ಕಗಳೇ ಈ ಮಾತಿಗೆ ಸಾಕ್ಷಿ. 'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಡ್ಡಾಯ ಹಾಗೂ ಉಚಿತ' ಎಂದು ಘೋಷಿಸುವ ನಮ್ಮ ಸರಕಾರಗಳ ಶಿಕ್ಷಣಪ್ರೇಮವು ಉನ್ನತ ಶಿಕ್ಷಣಕ್ಕೆ ಯಾಕೆ ಅನ್ವಯವಾಗುವುದಿಲ್ಲ?

ಶಿಕ್ಷಣರಂಗವು ಸಂಪೂರ್ಣವಾಗಿ ಖಾಸಗಿ ದೊರೆಗಳ ಕೈವಶವಾಗಿಬಿಟ್ಟಿದೆ. ಖಾಸಗಿ ವಿಶ್ವವಿದ್ಯಾಲಯಗಳು, 'ಡೀಮ್ಡ್ ಟು ಬಿ' ಹಣೆಪಟ್ಟಿಯ ಯೂನಿವರ್ಸಿಟಿಗಳು ಸಿಕ್ಕಸಿಕ್ಕ ಹಾಗೆ ತಲೆಯೆತ್ತುತ್ತಿವೆ. ದೇಶದಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ನೋಡಿಕೊಳ್ಳುವ ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ಹಾಗೂ ವೃತ್ತಿಪರ ಪದವಿಗಳ ಮಾನದಂಡಗಳನ್ನು ನಿರ್ಧರಿಸುವ AICTE, BCI, PCI, MCIಗಳ ನಡುವಿನ ಪರಸ್ಪರ ಯೋಜನೆ ಮತ್ತು ನಿರ್ಣಯಗಳ ಕೊರತೆಯಂಥ ಸಮಸ್ಯೆಗಳು ಈ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿವೆ. ಯುಜಿಸಿ ಅಧಿನಿಯಮದ ಸೆಕ್ಷನ್ 2(ಎಫ್) ಮತ್ತು 12-ಬಿ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮಾನ್ಯ ಮಾಡುವ ಪ್ರಕ್ರಿಯೆಯು ಹಲವು ನ್ಯೂನತೆಗಳಿಂದ ಕೂಡಿದೆ. National Assessment and Accreditation Council (NAAC) ನಡೆಸುವ ಶಿಕ್ಷಣ ಸಂಸ್ಥೆಗಳ ಪರಿವೀಕ್ಷಣೆಯು ಹಲವು ಬಾರಿ ಬೇರೆ ಬೇರೆ ರೀತಿಯ ಒತ್ತಡಗಳಿಗೆ ಒಳಗಾಗುತ್ತಲೇ ಇರುತ್ತದೆ. NIRF (National Institutional Ranking Framework)ನ ಮಾನದಂಡಗಳಿಗೂ, ಜಾಗತಿಕ ಮಟ್ಟದಲ್ಲಿನ ಶಿಕ್ಷಣಸಂಸ್ಥೆಗಳ 'ರ್‍ಯಾಂಕಿಂಗ್' ಮಾನದಂಡಗಳಿಗೂ ತುಂಬಾ ಅಂತರವಿರುವುದು ಸುಸ್ಪಷ್ಟ.

ನಮ್ಮ ಸರಕಾರಗಳು ಅತಿ ಕಡಿಮೆ ಗಮನ ಕೊಟ್ಟು, ಅತಿ ಕಡಿಮೆ ಬಜೆಟ್ ವಿತರಿಸಿ, ಆಯಕಟ್ಟಿನ ಜಾಗಗಳಿಗೆ ಅಪಾತ್ರರನ್ನು ನೇಮಿಸಿ, ಅತಿ ದೊಡ್ಡ ಮಟ್ಟದಲ್ಲಿ ನಿರೀಕ್ಷೆಯಿಟ್ಟುಕೊಂಡು, ದೊಡ್ಡ ದೊಡ್ಡ ಭಾಷಣ ಬಿಗಿಯುವ ಯಾವುದಾದರೂ ಇಲಾಖೆಯಿದ್ದರೆ ಅದು ಉನ್ನತ ಶಿಕ್ಷಣ ಕ್ಷೇತ್ರ ಎನ್ನಲಡ್ಡಿಯಿಲ್ಲ. ಅಂದು ಉಚಿತ ಬಸ್‌ಪಾಸ್‌ಗೆ ಆಗ್ರಹಿಸಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದ, ಬರಬೇಕಾದ ಶಿಷ್ಯವೇತನಕ್ಕೆ ಸ್ವಲ್ಪ ತಡವಾದರೂ ಅಧಿಕಾರಿಗಳಿಗೆ ಘೇರಾವ್ ಹಾಕುತ್ತಿದ್ದ ವಿದ್ಯಾರ್ಥಿ ಸಂಘಟನೆಗಳು, ಯುಜಿಸಿ ಎನ್‌ಇಟಿ ಪರೀಕ್ಷೆಗಳ ಸತತ ಮುಂದೂಡಿಕೆ, ನೀಟ್ ಹಗರಣ, ಯುಪಿಎಸ್‌ಸಿ ಗೊಂದಲಗಳಂಥ ಗಂಭೀರ ಸಮಸ್ಯೆಗಳಿಂದಾಗಿ ಪ್ರಖರ ಪ್ರತಿಭೆ ಮತ್ತು ಶಕ್ತಿಯುಳ್ಳ ಕಾಲೇಜು ವಿದ್ಯಾರ್ಥಿಗಳ ಬದುಕೇ ಅಸ್ತವ್ಯಸ್ತಗೊಳ್ಳುತ್ತಿದ್ದರೂ, ಕನಿಷ್ಠಪಕ್ಷ ತಮ್ಮ ದನಿಯನ್ನು ಜೋರುಮಾಡದಿರುವುದು ಯಾವುದರ ಸೂಚನೆಯೋ?

(ಲೇಖಕರು ನ್ಯಾಯವಾದಿಗಳು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರೀಲು ಮತ್ತು ರಿಯಲ್ಲು!

ರಂಗಸ್ವಾಮಿ ಮೂಕನಹಳ್ಳಿ ಅವರ 'ವಿಶ್ವರಂಗ' ಅಂಕಣವನ್ನು (ವಿಶ್ವವಾಣಿ ಅ.15) ಓದಿ ನನಗಂತೂ ಸಖತ್ ಖುಷಿಯಾಯಿತು. 'ಜಗತ್ತಿನ ಮೇಲೆ ಹಿಡಿತ ಸಾಧಿಸುವ ಹೊಡೆದಾಟದಲ್ಲಿ ರಷ್ಯಾ ಛಿದ್ರವಾದ ಹಾಗೆ ಅಕಸ್ಮಾತ್ ಚೀನಾ ಛಿದ್ರವಾದರೆ, ನಿಮ್ಮ ಮನೆಯಲ್ಲಿ ಮುಸುರೆ ತಿಕ್ಕಲು ನಿಂಗಮ್ಮ-ಗಂಗಮ್ಮರ ಜಾಗದಲ್ಲಿ ಚೀನಿ ಹುಡುಗಿ ಇರುತ್ತಾಳೆ, ಖಂಡಿತ!' ಎಂಬ ಅಂಕಣದ ಕೊನೆಯ ಸಾಲುಗಳು ಆಪ್ಯಾಯಮಾನವಾಗಿವೆ.

ಆದರೆ, ಅದೇ ವೇಳೆಗೆ, 1962ರ ಭಾರತ-ಚೀನಾ ಯುದ್ಧದ ನೆನಪು ಮರುಕಳಿಸಿತು. 'ಯುದ್ಧದಲ್ಲಿ ಭಾರತವು ಅಮೋಘ ಗೆಲುವು ಸಾಧಿಸುತ್ತಿದೆ' ಎಂದು ನೆಹರು ಸರಕಾರವು ಬಿಡುಗಡೆ ಮಾಡಿದ ಸುದ್ದಿಯನ್ನು ನಂಬಿ ಜನಕೋಟಿಯು ಸಂಭ್ರಮಿಸುತ್ತಿದ್ದರೆ, ವಾಸ್ತವದಲ್ಲಿ ಭಾರತವು ಹೀನಾಯವಾಗಿ ಸೋಲತೊಡಗಿತ್ತು! 'ಚೀನಿ ಯೋಧರು ಹೊಟ್ಟೆಗಿಲ್ಲದೆ ಜಿರಲೆ-ಕಪ್ಪೆಗಳನ್ನು ಹಿಡಿದು ತಿನ್ನುತ್ತಿದ್ದಾರೆ' ಎಂದು ಭಾರತದಾದ್ಯಂತ ಸುಳ್ಳುಸುದ್ದಿ ಹಬ್ಬಿಸಲಾಗಿತ್ತು ಕೂಡ! ಸರಕಾರದ ಸುದ್ದಿ ಬಿಡುಗಡೆ 'ರಿಯಲ್' ಅಲ್ಲ, 'ಬರೀ ರೀಲು' ಎಂಬುದು ನಮಗೆ ಗೊತ್ತಾಗುವಷ್ಟರಲ್ಲಿ ಭಾರತವಾಗಲೇ ಸೋತು ಸುಣ್ಣವಾಗಿತ್ತು. ಅಲ್ಲಿಂದೀಚೆಗೆ ಬಲಿಷ್ಠವಾಗುತ್ತಲೇ ಸಾಗಿರುವ ಚೀನಾ ಇಂದು ಭಾರತಕ್ಕಿಂತ ಬಹುಪಟ್ಟು ಬಲಶಾಲಿಯಾಗಿದೆ, ಎಲ್ಲ ಕ್ಷೇತ್ರಗಳಲ್ಲೂ ನಮಗಿಂತ ಬಹಳ ಮುಂದಿದೆ.

ಸದ್ಯಕ್ಕೆ ಮುಸುರೆ ತಿಕ್ಕಲು ನಮಗೆ ನಿಂಗಮ್ಮ-ಗಂಗಮ್ಮರೇ ಇರಲಿ ಅಥವಾ ನಾವೇ ತಿಕ್ಕಿಕೊಳ್ಳುತ್ತೇವೆ. ಸ್ವದೇಶಿ ವಸ್ತುಗಳನ್ನು ಕಡೆಗಣಿಸಿ, 'ಸೋವಿ' ಎಂದು ಚೀನಾ ನಿರ್ಮಿತ ವಸ್ತುಗಳನ್ನೇ ಖರೀದಿಸುವುದನ್ನು ನಾವು ಕೈಬಿಟ್ಟರೆ ಅಥವಾ ಕಡಿಮೆ ಮಾಡಿದರೆ, ಅಷ್ಟರ ಮಟ್ಟಿಗಾದರೂ ಚೀನಿ ಹುಡುಗಿಯ ನಿರೀಕ್ಷೆ ಹೊಂದಬಹುದೇನೋ! ಅಂದಹಾಗೆ, ಚೀನಿ ಮುಖ ಹೋಲುವ ನೇಪಾಳಿ ಹುಡುಗಿಯರು ಬೆಂಗಳೂರಿನಲ್ಲಿ ಮುಸುರೆ ತಿಕ್ಕಿ 'ಗಟ್ಟಿ'ಯಾಗುತ್ತಿರುವುದು ಇಲ್ಲಿ ಗಂಭೀರವಾಗಿ ಗಮನಿಸಬೇಕಾದ ಬೆಳವಣಿಗೆ!

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಅನುಕರಣೀಯ ಸೇವೆ

ಕಿರಣ್ ಉಪಾಧ್ಯಾಯ ಅವರ 'ವಿದೇಶವಾಸಿ' ಅಂಕಣವು (ವಿಶ್ವವಾಣಿ ಅ.14) 'ಟಾಟಾ' ಕುಟುಂಬಸ್ಥರ ಸೇವಾ ಮನೋಭಾವದ ಮತ್ತೊಂದು ಆಯಾಮವನ್ನು ಅನಾವರಣಗೊಳಿಸಿದೆ ಎನ್ನಬೇಕು. ಟಾಟಾ ಕುಟುಂಬಿಕರು ಭಾರತದ ಉದ್ಯಮ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ಕೊಟ್ಟು ಶ್ರೀಮಂತಗೊಳಿಸಿದ್ದಾರೆ ಎಂಬುದು ಅತಿಶಯೋಕ್ತಿಯಲ್ಲ. ಅಂಕಣಕಾರರು ಉಲ್ಲೇಖಿಸಿರುವಂತೆ, ಉದ್ಯಮ ಆರಂಭಿಸುವ, ಬೆಳೆಸುವ, ಸಿಬ್ಬಂದಿಯನ್ನು ತಮ್ಮ ಮನೆಯವರಂತೆ ಕಾಪಾಡುವ, ದೇಶ-ವಿದೇಶಗಳಲ್ಲಿ ಮೌಲ್ಯಾಧಾರಿತ ವ್ಯವಹಾರ ಮಾಡುವುದರ ಜತೆಗೆ ಗಳಿಸಿದ್ದರಲ್ಲಿ ಒಂದು ಭಾಗವನ್ನು ಸಮಾಜದ ಉದ್ಧಾರಕ್ಕೆ ದಾನದ ರೂಪದಲ್ಲಿ ನೀಡುವ ವಿಷಯದಲ್ಲಿ ಟಾಟಾ ಕುಟುಂಬಿಕರ ಶೈಲಿ ಅದ್ವಿತೀಯ, ಅನುಕರಣೀಯ. ಭಾರತದ ಉದ್ಯಮ ಕ್ಷೇತ್ರಕ್ಕೆ ಟಾಟಾ ಸಮೂಹವು ಇನ್ನಷ್ಟು ಉತ್ತಮ ಸೇವೆ ನೀಡುವಂತಾಗಲಿ ಎಂದು ಹಾರೈಸುವೆ.

-ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಮುಚ್ಚಿಡುವುದೂ ತಪ್ಪಲ್ಲವೇ?

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಹಣ ಪಡೆದು ಕಡತಕ್ಕೆ ಸಹಿ ಹಾಕಿದ್ದಾರೆ ಎಂದು ರಾಮನಗರದ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಕರ್ಪೂರ ಹಚ್ಚಿ ಆಣೆ ಮಾಡಲು ತಾವು ಸಿದ್ಧ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಅವರು ಸವಾಲು ಹಾಕಿರುವುದರ ಜತೆಗೆ, ಅದಕ್ಕೆ ಪೂರಕವಾದ ದಾಖಲೆಗಳನ್ನು ನೀಡಲೂ ತಯಾರಿರುವುದಾಗಿ ಹೇಳಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಾನ್ಯ ಶಾಸಕರಲ್ಲಿ ಒಂದಿಷ್ಟು ಪ್ರಶ್ನೆಗಳು- ಹೀಗೆ ಲಂಚ ಪಡೆದ ದಾಖಲೆಗಳು ನಿಮ್ಮಲ್ಲಿ ಇರುವುದೇ ಹೌದಾದಲ್ಲಿ ಇಷ್ಟು ವರ್ಷ ಏಕೆ ಸುಮ್ಮನಿದ್ದಿರಿ? ಒಬ್ಬ ಜನಪ್ರತಿನಿಧಿಯಾಗಿ ಇಂಥ ಲಂಚ ಪ್ರಸಂಗವು ಗಮನಕ್ಕೆ ಬಂದಿದ್ದರೆ ಪೊಲೀಸರಿಗೋ, ಲೋಕಾಯುಕ್ತಕ್ಕೋ ಅಥವಾ ನ್ಯಾಯಾಲಯಕ್ಕೋ ನೀವು ಕೂಡಲೇ ದೂರು ನೀಡಬಹುದಿತ್ತಲ್ಲ? ಲಂಚ ಸ್ವೀಕಾರದ ಪ್ರಸಂಗವನ್ನು ಮುಚ್ಚಿಡುವುದು ಕೂಡ ತಪ್ಪಲ್ಲವೇ?

ಈಗಲೂ ಕಾಲ ಮಿಂಚಿಲ್ಲ. ಬಾಲಕೃಷ್ಣ ಅವರಲ್ಲಿ ದಾಖಲೆಗಳಿದ್ದಲ್ಲಿ ದೂರು ನೀಡಿ, ಎಚ್‌ಡಿಕೆ ವಿರುದ್ಧ ಕ್ರಮ ಜರುಗಿಸಲು ಅನುವುಮಾಡಿಕೊಡಲಿ ಅಥವಾ ಬಾಲಕೃಷ್ಣ ಅವರು ದಾಖಲೆಗಳಿಲ್ಲದೆ ವೃಥಾ ಅಪವಾದ ಹೊರಿಸುತ್ತಿದ್ದಾರೆ ಎಂದಾದಲ್ಲಿ ಎಚ್.ಡಿ.ಕುಮಾರಸ್ವಾಮಿಯವರೇ ಅವರ ಮೇಲೆ ದೂರು ನೀಡಲಿ, ಮಾನನಷ್ಟ ಮೊಕದ್ದಮೆ ಹೂಡಲಿ. ದೇವರ ಮೇಲೆ ಮಾಡುವ ಆಣೆ-ಪ್ರಮಾಣಗಳಿಗೆ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ ಎನ್ನುವ ಕಾಲವಿದು; ಕಾರಣ, ಹಣ ಸಿಗುತ್ತದೆ ಎಂದಾರೆ ದೇವರನ್ನೇ ಮಾರುವ ಜನರು ನಮ್ಮಲ್ಲಿದ್ದಾರೆ!

ಯಾರೊಬ್ಬರೂ ದೂರು ನೀಡದೆ ಹೀಗೆ ಹೇಳಿಕೆಗಳಲ್ಲೇ ಕಾಲ ಕಳೆದರೆ, 'ನಾನು ಹೊಡೆದಂತೆ ಮಾಡ್ತೀನಿ, ನೀನು ಅತ್ತಂತೆ ಮಾಡು' ಎಂದು ಇಬ್ಬರೂ ನಾಟಕ ಆಡಿದಂತೆ ಆಗುತ್ತದೆ, ಅಷ್ಟೇ. ಜತೆಗೆ ಇಬ್ಬರ ಮೇಲೂ ಜನರಿಗೆ ಅನುಮಾನಗಳು ಹುಟ್ಟುತ್ತವೆ. ಒಂದೊಮ್ಮೆ ಯಾರೊಬ್ಬರೂ ದೂರು ನೀಡದಿದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮಕ್ಕೆ ಮುಂದಾಗಲಿ. ಆಗಲಾದರೂ ಇಂಥ ನಾಲಿಗೆಚಪಲದ ವೀರರಿಗೆ ಕಡಿವಾಣ ಬೀಳುತ್ತದೆ.

-ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಸೂಕ್ತ ಕ್ರಮ ಕೈಗೊಳ್ಳಿ

ಸರಕಾರವು ರಾಜ್ಯದ ಎಲ್ಲಾ ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗುವಂತೆ, 2024-25ರ ಶೈಕ್ಷಣಿಕ ವರ್ಷದಲ್ಲಿ ಅಕ್ಟೋಬರ್ 3ರಿಂದ 20ರವರೆಗೆ ದಸರಾ ರಜೆಯನ್ನು ನೀಡಿ ಆದೇಶಿಸಿದೆ. ಆದರೆ ಕೆಲವು ಖಾಸಗಿ ಶಾಲೆಗಳು ಸರಕಾರದ ಈ ಆದೇಶವನ್ನು ಗಾಳಿಗೆ ತೂರಿ, ಈ ರಜೆಯನ್ನು ಕಡಿತಗೊಳಿಸಿ ಏಳೆಂಟು ದಿನಗಳಿಗಷ್ಟೇ ಸೀಮಿತಗೊಳಿಸಿ ಈಗಾಗಲೇ ಶಾಲೆಗಳನ್ನು ಪುನರಾರಂಭಿಸಿವೆ. ಶಾಲಾವಧಿಯಲ್ಲಿ ಮಕ್ಕಳು ಪಠ್ಯ ವಿಷಯಕ್ಕೆ ಸಂಬಂಧಿಸಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು ಇದ್ದೇ ಇರುತ್ತದೆ; ಆದರೆ ದಸರಾ ರಜೆಯ ಮಜವನ್ನು ಅವರು ಅರ್ಥಪೂರ್ಣವಾಗಿ ಅನುಭವಿಸದೆ ಇದ್ದರೆ ಹೇಗೆ? ಮಕ್ಕಳು ಹೀಗೆ ಒತ್ತಡರಹಿತವಾಗಿ ಒಂದಷ್ಟು ದಿನ ಕಾಲ ಕಳೆದರೆ, ಅವರ ಚಿಂತನಾ ಕ್ರಮಕ್ಕೆ ತಾಜಾತನ ಒದಗಿ ಅರಿವಿನ ಪರಿಧಿಯು ಮತ್ತಷ್ಟು ವಿಸ್ತಾರವಾಗುತ್ತದೆ. ಸಮವಯಸ್ಕರು, ಸಮಾನ ಮನಸ್ಕರು ಮತ್ತು ಕುಟುಂಬಿಕರೊಂದಿಗಿನ ಒಡನಾಟದಿಂದಾಗಿ ಮಕ್ಕಳ ಏಕಾಂಗಿತನವೂ ದೂರವಾಗಿ ಮನಸ್ಸು ಪ್ರಫುಲ್ಲಿತವಾಗುತ್ತದೆ. ಸಂಬಂಧಿಕರ ಊರುಗಳಿಗೆ ಭೇಟಿ ನೀಡುವುದರಿಂದ ವಿವಿಧ ಸ್ಥಳಗಳ ಪರಿಚಯ ಹಾಗೂ ಸಾಮಾಜಿಕ ಸ್ಥಿತಿಗಳ ಅರಿವು ಅವರಿಗಾಗುತ್ತದೆ. ಆದರೆ, ರಜೆಯನ್ನು ಮೊಟಕುಗೊಳಿಸುವ ಮೂಲಕ ಮಕ್ಕಳನ್ನು ಈ ಎಲ್ಲ ಕ್ಷಣಗಳಿಂದ ವಂಚಿತರಾಗುವಂತೆ ಮಾಡಿದ್ದು ತರವೇ? ಸರಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಿ.

-ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- ವೆಂಕಣ್ಣ ಆಚಾರ ಹಿತ್ತಲಮನಿ, ಮೈಸೂರು
ಬ್ಯಾಟ್ಸ್‌ಮನ್‌ಗಳು ತೊಂಬತ್ತು ದಾಟುತ್ತಿದ್ದಂತೆ ನರ್ವಸ್ ಆಗ್ತಾರೆ, ರಾಜಕಾರಣಿಗಳು?
- ಬೇರೆಯವರನ್ನು ನರ್ವಸ್ ಮಾಡ್ತಾರೆ!

- ಬೆಂ.ಮು.ಮಾರುತಿ, ಬೆಂಗಳೂರು
ಭಟ್ರೇ, ನಾರಿಮಣಿಗೆ ಇರಲೇಬೇಕಾಗಿದ್ದೇನು?
- ಕರಿಮಣಿ!

- ಸತೀಶ ಎಲ್.ವಿ., (ಇಮೇಲ್ ಮೂಲಕ)
ಭಟ್ರೇ, ಹೆಣ್ಣಿನ ಕಣ್ಣಿನ ನೋಟಕ್ಕೆ ಸೋಲದವರು ಯಾರಾದರೂ ಇದ್ದಾರಾ?
- ಕಣ್ಣು ಮಂಜಾದವರು!

- ಶ್ರೀದೇವಿ ತಾಳಗುಪ್ಪ, ಸಾಗರ
ಭಟ್ರೇ, ಹೆಂಡತಿಯನ್ನು ನೋಯಿಸಿದರೆ ಏನು ಸಿಗುತ್ತದೆ?
- ಯಾರ ಹೆಂಡತಿಯನ್ನು ನೋಯಿಸಿದರೆ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು ಮೇಡಂ!

- ರಾಜು ಪತ್ತಾರ, ಹುಬ್ಬಳ್ಳಿ
ಭಟ್ರನ್ನು ಕೇಳಿದ್ದರೆ ಸರಿ ಹೋಗ್ತಾ ಇತ್ತು ಅಂತಾಳಲ್ಲ, ಹಾಗಂದ್ರೆ ಏನು?
- 'ಆಸ್ಕ್ ದಿ ಎಡಿಟರ್' ಅಂಕಣದ ಪರಿಣಾಮವಿದು!

- ಗುಣವಂತ ವಾಲಿಶೆಟ್ಟರ, ಗದಗ
ಭಟ್ರೇ, ನೀವು ಯಾವ ಪಕ್ಷದ ಟಿಕೆಟ್ ಕೇಳಿದ್ರೂ ಕೊಡ್ತಾರೆ ಅಂತಾನಲ್ಲ, ನನ್ನ ಸ್ನೇಹಿತ?
- ಟಿಕೆಟ್ ಅಷ್ಟು ಕೆಟ್ಟೋಯ್ತು ಅಂತೀಯಾ ?!

- ಜಯಶ್ರೀ ಬಿ., (ಇಮೇಲ್ ಮೂಲಕ)
ರೆಸ್ಲಿಂಗ್ ಪಂದ್ಯದಲ್ಲಿ ಇಬ್ಬರೂ ಹೊಡೆದಾಡುವುದಿಲ್ಲ ಅಂತ ನಿಮಗೆ ಅನಿಸ್ತಾ ಇಲ್ಲವಾ, ಭಟ್ರೇ?
- ಇಬ್ಬರು ಬೆಲ್ಟ್‌ಗಾಗಿ ಬಡಿದಾಡ್ತಾರೆ ಅಂತ ಅನಿಸುತ್ತೆ!

- ರಾಮಸ್ವಾಮಿ ಪಿ.ಕೆ., ಮಂಗಳೂರು
ಭಟ್ರೇ, ಅವನ ಜತೆ ಮಾತಾಡೋದು ಅಂದ್ರೆ, ಗೋಡೆ ಜತೆ ಮಾತಾಡಿದಂತೆ ಅಂತಾರಲ್ಲ, ಹಾಗಂದರೇನು?
- ಫೇಸ್‌ಬುಕ್ ವಾಲ್‌ನಲ್ಲಿ ಸದಾ ಪೋಸ್ಟ್ ಮಾಡುವವರನ್ನು ನೋಡಿ ಹಾಗೆ ಹೇಳಿರಬಹುದು!

- ಬಿ.ರಾಮರಾವ್, ಬೆಂಗಳೂರು
ಭಟ್ರೇ, ಜೀವನದಲ್ಲಿ ಎಲ್ಲರೂ ಪ್ರೀತಿಗಾಗಿ ಹಾತೊರೆಯುತ್ತಾರಲ್ಲ?
- ಹಾಗೇನಿಲ್ಲ, ಪಬ್‌ನಲ್ಲಿ ಬಿಯರ್‌ಗೆ ಹಾತೊರೆಯುವವರನ್ನು ನೋಡಿದ್ದಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ!

- ಹರಿಪ್ರಕಾಶ ಭಟ್, ಸಿದ್ದಾಪುರ
ಭಟ್ರೇ, ಪ್ರೀತಿ ಅಂದ್ರೆ ನಿಮ್ಮ ದೃಷ್ಟಿಯಲ್ಲಿ ಕೆರೆ ನೀರಾ, ಹರಿವ ನೀರಾ?
- ನಾವು ಅಂದುಕೊಂಡ ಹೊತ್ತಿಗೆ ಥಟ್ ಅಂತ ಬರುವ ನಲ್ಲಿ ನೀರಾದರೂ ಆಗಬಹುದು!

ಗೌಡಾಗೆ ಗೌರವಸ್ಥರು ಬೇಕಾಗಿದ್ದಾರೆ!

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

ವರ್ಷಕ್ಕೊಮ್ಮೆ ಘಟಿಕೋತ್ಸವ ಸಮಯ ಬಂದಾಗ ನಮ್ಮ ವಿಶ್ವವಿದ್ಯಾಲಯಗಳಿಗೆ ಈ ತಲೆನೋವು ತಪ್ಪಿದ್ದಲ್ಲ. ಈ ವರ್ಷ ಯಾರಿಗೆ ಗೌರವ ಡಾಕ್ಟರೇಟ್ ನೀಡುವುದು? ನಮ್ಮವರು ಯಾರಿದ್ದಾರೆ? ಅವರು ಆಗಬಹುದಾ? ಇವರನ್ನು ಆಯ್ಕೆ ಮಾಡಿದರೆ ಸರಕಾರದವರು ಏನಂತಾರೋ ಏನೋ? ಅವರೊಬ್ಬರು ಇದ್ದರು, ಆದರೆ ಆ ಯುನಿವರ್ಸಿಟಿಯವರು ಆಗಲೇ ಡಾಕ್ಟರೇಟ್ ಕೊಟ್ಟುಬಿಟ್ಟಿದ್ದಾರೆ... ಹೀಗೆ ಆಡಳಿತ ಮಂಡಳಿಗೆ ತರಹೇವಾರಿ ಚಿಂತೆ. ಹಿಂದೆ ಬೆರಳೆಣಿಕೆಯ ವಿ.ವಿ.ಗಳಷ್ಟೇ ಇದ್ದಾಗಲೂ ಗೌರವ ಡಾಕ್ಟರೇಟ್‌ಗೆ 'ಅರ್ಹರ' ಆಯ್ಕೆ ಸರಳವಾಗಿರಲಿಲ್ಲ. ಆಯ್ಕೆಯಾದವರ ಹೆಸರಿಗೆ ವಿರೋಧ ವ್ಯಕ್ತ ಪಡಿಸಿ ಕತ್ತೆಗೆ ಡಾಕ್ಟರೇಟ್ ಪ್ರದಾನ ಮಾಡಿ ಪ್ರತಿಭಟನೆ ನಡೆಸಿದ ಘಟನೆಗಳು ಅಂದೂ ನಡೆದಿದ್ದವು. ವಿ.ವಿ.ಗಳ ಸಂಖ್ಯೆ ಹೆಚ್ಚಿದಂತೆ ಅವು ನೀಡುವ ಡಾಕ್ಟರೇಟ್ ಪದವಿಗಳ ಸಂಖ್ಯೆಯೂ ಹೆಚ್ಚಿದೆ. ಅದಕ್ಕೆ ತಕ್ಕಂತೆ ಈ ಪದವಿಗಾಗಿ ಹಂಬಲಿಸುವವರ ಸಂಖ್ಯೆಯೂ ಹಲವು ಪಟ್ಟು ಏರಿದೆ. ಆದರೆ ಇಂದಿನ ಸನ್ನಿವೇಶ ಹೇಗಿದೆ ಎಂದರೆ 'ಗೌರವ ಡಾಕ್ಟರೇಟ್‌ಗೆ ಗೌರವಸ್ಥರು ಬೇಕಾಗಿದ್ದಾರೆ' ಎಂದು ಜಾಹೀರಾತು ನೀಡಬೇಕಾಗಿದೆ!

ಮೂರು ದಶಕಗಳ ಹಿಂದೆ ಮೈಸೂರು, ಬೆಂಗಳೂರು, ಧಾರವಾಡ, ಮಂಗಳೂರು, ಗುಲ್ಬರ್ಗ, ಹಂಪಿ, ಶಿವಮೊಗ್ಗ ಮೊದಲಾದ ಸಾಂಪ್ರದಾಯಿಕ ವಿ.ವಿ.ಗಳನ್ನು ಹೊರತುಪಡಿಸಿದರೆ ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ, ಮೀನುಗಾರಿಕೆ ಸೇರಿ ಒಂದಷ್ಟು ವೃತ್ತಿಪರ ಕೋರ್ಸ್‌ಗಳ ವಿ.ವಿ.ಗಳಷ್ಟೇ ಇದ್ದವು. ಇಂದು ಬೆಂಗಳೂರು ವಿ.ವಿ.ಯೊಂದೇ ಮೂರು ವಿ.ವಿ.ಗಳಾಗಿ ಕವಲೊಡೆದಿದೆ. ಮಹಿಳಾ ವಿ.ವಿ., ಸಂಸ್ಕೃತ ವಿ.ವಿ., ಕಾನೂನು ವಿ.ವಿ., ಜಾನಪದ ವಿ.ವಿ., ಗ್ರಾಮೀಣಾಭಿವೃದ್ಧಿ ವಿ.ವಿ. ಸೇರಿ ಹೊಸದಾಗಿ ಸ್ಥಾಪನೆಯಾದ ಹತ್ತಾರು ಸರಕಾರಿ ವಿ.ವಿ.ಗಳು ಮತ್ತು 'ಉದಾರ ಶಿಕ್ಷಣ ನೀತಿ'ಯ ಫಲವಾಗಿ ವಿ.ವಿ. ದರ್ಜೆಗೆ ಬಡ್ತಿ ಪಡೆದ ಹತ್ತಾರು ಖಾಸಗಿ ಕಾಲೇಜುಗಳು ಸೇರಿದರೆ ರಾಜ್ಯದಲ್ಲಿ ಈಗ 60ಕ್ಕೂ ಹೆಚ್ಚು ವಿ.ವಿ.ಗಳಿವೆ. ವರ್ಷಕ್ಕೆ ಸರಾಸರಿ ಮೂವರನ್ನು ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಬೇಕೆಂದರೂ ರಾಜ್ಯ ಅಥವಾ ರಾಷ್ಟ್ರದ ಕನಿಷ್ಠ 180 ಗಣ್ಯರಿಗೆ 'ಗೌಡಾ' ಪೇಟ ತೊಡಿಸಬೇಕು. ರಾಜ್ಯೋತ್ಸವ ಪ್ರಶಸ್ತಿ 'ವಿಜೇತರ' ಪಟ್ಟಿ ಇಟ್ಟುಕೊಂಡು ಹುಡುಕಿದರೂ ಇಷ್ಟೊಂದು ಗಣ್ಯರನ್ನು ಹುಡುಕುವುದು ಕಷ್ಟದ ಕೆಲಸ!

ಹಾಗೆಂದು ಗೌರವ ಡಾಕ್ಟರೇಟ್‌ಗಾಗಿ ನಡೆಯುತ್ತಿರುವ ಲಾಬಿಯೇನೂ ಕಡಿಮೆಯಾಗಿಲ್ಲ. ಗೌರವ ಡಾಕ್ಟರೇಟ್ ಪಡೆಯುವುದಕ್ಕಾಗಿಯೇ ಇಡೀ ವರ್ಷ ವಿ.ವಿ. ಆಡಳಿತ ಮಂಡಳಿ, ಸಿಂಡಿಕೇಟ್ ಸದಸ್ಯರನ್ನು ಓಲೈಸುವ ಕೆಲಸ ಈಗಲೂ ನಡೆಯುತ್ತಿವೆ. ವಿ.ವಿ.ಗಳು ಆಯ್ಕೆ ಮಾಡಿದ ಒಂದಷ್ಟು ಗಣ್ಯರ ಪಟ್ಟಿ ನೋಡಿದರೆ ಅಲ್ಲಿ ಅರ್ಹತೆಗಿಂತ ಇನ್ನೇನೋ ಹೆಚ್ಚಿರುವುದನ್ನು ಮೇಲ್ನೋಟಕ್ಕೆ ಕಾಣಬಹುದು. ಈ ಹಿಂದೆ ಗೌರವ ಡಾಕ್ಟರೇಟ್ ಲಾಬಿ ಉದ್ಯಮ ವಲಯಕ್ಕೆ ಸೀಮಿತವಾಗಿರುತ್ತಿತ್ತು. 'ಇವರು ಖ್ಯಾತ ಉದ್ಯಮಿ ಮತ್ತು ಸಮಾಜ ಸೇವಕರು' ಎಂಬ ಒಕ್ಕಣೆಯೊಂದಿಗೆ ವಿ.ವಿ.ಗಳು ಇಂಥ ಆಯ್ಕೆಯನ್ನು ಸಮರ್ಥಿಸಿಕೊಳ್ಳುತ್ತಿದ್ದವು. ನಂತರ ಈ ಸಾಲಿನಲ್ಲಿ ಸ್ವಾಮೀಜಿಗಳನ್ನು ಸೇರಿಸಿಕೊಳ್ಳಲಾಯಿತು. ಆಯಾ ಭಾಗದ, ಪ್ರಭಾವಿ ಸ್ವಾಮೀಜಿಗಳಿಗೆ ಗೌರವ ಡಾಕ್ಟರೇಟ್ ಘೋಷಿಸಿದಾಗ ಹೆಚ್ಚಿನವರು ಬಹಿರಂಗವಾಗಿ ವಿರೋಧಿಸುವುದಿಲ್ಲ ಎನ್ನುವುದು ವಿ.ವಿ.ಗಳ ಪಾಲಿಗೆ ರಕ್ಷಣೆಯಾಗಿತ್ತು.

ಇದೀಗ ಸಿನಿಮಾ ನಟರನ್ನು ಕರೆತಂದು ಡಾಕ್ಟರೇಟ್ ಪೇಟ ತೊಡಿಸುವ ಸುಲಭದ ಮಾರ್ಗ ಕಂಡುಕೊಳ್ಳಲಾಗಿದೆ. ಇದರಲ್ಲಿ ತಪ್ಪೇನಿಲ್ಲ. 1973ರಲ್ಲಿ ಮೈಸೂರು ವಿ.ವಿ. ವರನಟ ರಾಜ್‌ಕುಮಾರ್ ಅವರಿಗೆ ಡಾಕ್ಟರೇಟ್ ನೀಡಿದಾಗ ಇಡೀ ನಾಡು ಸಂಭ್ರಮಿಸಿತ್ತು. ಅಂದು ಅವರು ಮಾಡಿದ ಭಾಷಣ, ಅವರ ವಿದ್ವತ್ತು ಮತ್ತು ವಿನಮ್ರತೆಗೆ ಸಾಕ್ಷಿಯಾಗಿತ್ತು. ಗೌರವ ಡಾಕ್ಟರೇಟ್ ಆಗಿದ್ದರೂ 'ಡಾಕ್ಟರ್ ರಾಜ್‌ಕುಮಾರ್' ಎಂದು ಕನ್ನಡಿಗರು ಮನದುಂಬಿ ಕರೆಯುವ ಹೆಸರದು. ಆದರೆ ಇಂದಿನ ತಾರಾಗಣದ ಆಯ್ಕೆಯನ್ನು ಇದೇ ತಕ್ಕಡಿಯಲ್ಲಿಟ್ಟು ತೂಗುವಂತಿಲ್ಲ. 'ಜನಪ್ರಿಯ' ಹೆಸರುಗಳಿಗಿಂತ ಹೆಚ್ಚು ಮೌಲಿಕವಾದ, ಹಿರಿತನ, ಅರ್ಹತೆಯುಳ್ಳ 'ತೂಕ'ದ ವ್ಯಕ್ತಿಗಳು ಸಿನಿ ಉದ್ಯಮದಲ್ಲಿ ಇಲ್ಲವೇ ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಒಂದು ಕಲೆಯಾಗಿ ಸಿನಿಮಾವನ್ನು ಸಮರ್ಥವಾಗಿ ದುಡಿಸಿಕೊಂಡ ಹತ್ತಾರು ಹಿರಿಯ ಕಲಾವಿದರು, ನಿರ್ದೇಶಕರು, ಸಂಗೀತಜ್ಞರು ನಮ್ಮಲ್ಲಿದ್ದಾರೆ. ಆದರೆ ಹೆಸರು ಮಂದೊತ್ತುವ ಲಾಬಿ ಇಲ್ಲದ ಕಾರಣಕ್ಕೆ ಇಂಥವರಿಗೆ ಗೌರವ ದಕ್ಕುವುದಿಲ್ಲ.

ಯಾರು ಅರ್ಹರು?

ಗೌರವ ಡಾಕ್ಟರೇಟ್ ವಿಚಾರದಲ್ಲಿ ಅರ್ಹರ ಆಯ್ಕೆಯೇ ನಮ್ಮ ವಿ.ವಿ.ಗಳ ಮುಂದಿರುವ ದೊಡ್ಡ ಸವಾಲು. ಸರಕಾರವಾಗಲಿ, ನಮ್ಮ ವಿ.ವಿ.ಗಳಾಗಲಿ ಈ ಆಯ್ಕೆಗೆ ಇದುವರೆಗೆ ಯಾವುದೇ ಮಾನದಂಡ ರೂಪಿಸಿಲ್ಲ. ಘಟಿಕೋತ್ಸವ ಎಂಬ ಬ್ರಿಟಿಷರ ಕಾಲದ ಪದ್ಧತಿಯನ್ನು ವಾರ್ಷಿಕ ವಿಧಿ ಎಂಬಂತೆ ನಮ್ಮ ವಿ.ವಿ.ಗಳು ಪಾಲಿಸಿಕೊಂಡು ಬಂದಿವೆ. ನೂರಾರು ವಿದ್ಯಾರ್ಥಿಗಳ ಮುಂದೆ ವಿ.ವಿ.ಯೊಂದರ ಗೌರವಕ್ಕೆ ಪಾತ್ರರಾದವರು ಮುಂದೆಯೂ ಈ ಗೌರವ ಉಳಿಸಿಕೊಳ್ಳಬೇಕು. ಇಲ್ಲವಾದರೆ ವಿ.ವಿಯ ಗೌರವವೂ ಮಣ್ಣು ಪಾಲಾಗುತ್ತದೆ. ಆದರೆ ವಿ.ವಿ.ಯ ಆಯಕಟ್ಟಿನ ಸ್ಥಾನದಲ್ಲಿ ಕುಳಿತವರು ಈ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಅವರಿಗೆ ಮೊದಲು ನೆನಪಾಗುವುದು, ಆ ಹುದ್ದೆಗೇರಲು ತಮಗೆ ನೆರವಾದವರು. ಕೆಲ ವರ್ಷಗಳ ಹಿಂದೆ ಮಂಗಳೂರು ಮತ್ತು ಗುಲ್ಬರ್ಗ ವಿ.ವಿ.ಗಳು ಕೇಂದ್ರ ಮತ್ತು ರಾಜ್ಯ ಸಚಿವರಿಗೆ ಡಾಕ್ಟರೇಟ್ ನೀಡಿ ಋಣ ಸಂದಾಯ ಮಾಡಿದ್ದವು. ಮಂಗಳೂರು ವಿ.ವಿ. ಮೂರು ದಶಕಗಳ ಹಿಂದೆಯೇ ಉದ್ಯಮಿ ವಿಜಯ ಮಲ್ಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತ್ತು. ಇಂದು ಮಲ್ಯ ಘೋಷಿತ ಅಪರಾಧಿ. ಇಂಥ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ವಾಪಸ್ ಪಡೆಯುವ ಘೋಷಣೆಯನ್ನಾದರೂ ಮಾಡಬೇಕು. ಆದರೆ ಕೊಲೆ ಪ್ರಕರಣದಲ್ಲಿ ಪೋಕ್ಸೋ ಪ್ರಕರಣದಲ್ಲಿ ಜೈಲು ಸೇರಿದ ಹಲವು ಗಣ್ಯರ ಮನೆಯ ಕಪಾಟುಗಳಲ್ಲಿ ಫ್ರೇಮ್ ಹಾಕಿದ 'ಗೌಡಾ' ಪದವಿ ಪತ್ರ ಇಂದಿಗೂ ನಳನಳಿಸುತ್ತಿದೆ.

ಇನ್ನು ಖಾಸಗಿ ವಿ.ವಿ.ಗಳು ಆಡಳಿತ ಮಂಡಳಿ ಸಂಬಂಧಿಕರು, ಜಾತಿ ಬಾಂಧವರು ಸೇರಿದಂತೆ ತಮಗೆ ಬೇಕಾದವರಿಗೆ ಗೌರವ ಡಾಕ್ಟರೇಟ್ ನೀಡಲಾರಂಭಿಸಿವೆ. ಹೀಗೆ ಡಾಕ್ಟರೇಟ್ ಗಿಟ್ಟಿಸಿಕೊಂಡವರು ತಮ್ಮ ಹೆಸರಿನ ಮುಂದೆ 'ಡಾಕ್ಟರ್' ಎಂದು ನೇಮ್ ಪ್ಲೇಟ್ ಹಾಕಿಸಿಕೊಂಡು, ಊರಿಡೀ ಫ್ಲೆಕ್ಸ್ ಹಾಕಿಕೊಂಡು, ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತು ಹಾಕಿಸಿಕೊಂಡು ಮೆರೆಯುತ್ತಿದ್ದಾರೆ. ಇವರ ಪ್ರಚಾರದ ಅಬ್ಬರದ ನಡುವೆ ಜೀವನಪೂರ್ತಿ ಸಮಾಜದ ಒಳಿತಿಗಾಗಿ ದುಡಿದ ಅದೆಷ್ಟೋ ಮಂದಿ ಎಲೆ ಮರೆಯ ಕಾಯಿಯಾಗಿಯೇ ಉಳಿದಿದ್ದಾರೆ. ಗೌರವ ಡಾಕ್ಟರೇಟ್‌ಗೆ ಚಾಲ್ತಿಯಲ್ಲಿರುವ ಹೆಸರುಗಳನ್ನೇ ಆಯ್ಕೆ ಮಾಡಬೇಕೆಂಬ ನಿರ್ಬಂಧಗಳಿಲ್ಲ. ಆದರೆ ಇದುವರೆಗೆ ಯಾವುದೇ ವಿ.ವಿ., ತಮ್ಮ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದು ಅನಾಮಿಕರಾಗಿ ಉಳಿದವರನ್ನು ಗುರುತಿಸಿ ಗೌರವಿಸುವ ಸಾಹಸ ಮಾಡಿಲ್ಲ. ಒಂದು ವೇಳೆ ಈ ರೀತಿಯ ಕೆಲಸ ಮಾಡಿದ್ದರೆ, ಹೊಲಗದ್ದೆಗಳಲ್ಲಿಯೇ ದುಡಿದು, ಸಂಶೋಧಕರಿಗಿಂತ ಹೆಚ್ಚು ಸಾಧನೆ ಮಾಡಿದ ಅದೆಷ್ಟೋ ರೈತರು ಡಾಕ್ಟರ್ ಗೌರವಕ್ಕೆ ಪಾತ್ರರಾಗುತ್ತಿದ್ದರು. ತಮ್ಮ ನಾಟಿ ಔಷಧಿಗಳಿಂದಲೇ ಅದೆಷ್ಟೋ ಜನರ ಕಾಯಿಲೆ ವಾಸಿ ಮಾಡಿದ ಜನಪದ ವೈದ್ಯರು, ಒಂದೇ ಒಂದು ಅವಘಡವಿಲ್ಲದೆ ಸಾವಿರಾರು ಹೆರಿಗೆ ಮಾಡಿಸಿದ ಸೂಲಗಿತ್ತಿಯರನ್ನು ಗುರುತಿಸಿ ಗೌರವಿಸಬಹುದಿತ್ತು.

ಸುಪ್ರೀಂಕೋರ್ಟ್ ಆದೇಶದ ಉಲ್ಲಂಘನೆ

'ಗೌಡಾ' ಪುರಸ್ಕೃತರಲ್ಲಿ ಹಲವರಿಗೆ ತಮ್ಮ ಹೊಸ ಬಿರುದನ್ನು ಮೆರೆಸುವ ಹಂಬಲ. ಗೊತ್ತಿದ್ದೋ,



ಗೊತ್ತಿಲ್ಲದೆಯೋ ಅವರು ಸುಪ್ರೀಂಕೋರ್ಟ್ ತೀರ್ಪನ್ನು ಉಲ್ಲಂಘಿಸುತ್ತಿದ್ದಾರೆ. ಸುಪ್ರೀಂಕೋರ್ಟ್ 1995ರ ಡಿಸೆಂಬರ್‌ನಲ್ಲಿ ನೀಡಿದ ತೀರ್ಪಿನ ಪ್ರಕಾರ 'ಭಾರತ ರತ್ನ', 'ಪದ್ಮ' ಪ್ರಶಸ್ತಿಗಳನ್ನು ಪಡೆದವರು ತಮ್ಮ ಹೆಸರಿನ ಹಿಂದೆ, ಮುಂದೆ ಅವುಗಳನ್ನು ಬರೆಯುವಂತಿಲ್ಲ. ಅಧಿಕೃತ ಪತ್ರವ್ಯವಹಾರಗಳಲ್ಲಿ ತಾವು ಈ ಗೌರವಕ್ಕೆ ಪಾತ್ರರಾದವರು ಎಂದು ತಿಳಿಸಬಹುದು. ಆದರೆ ಹೆಸರಿನ ಮುಂದೆ ಈ ಗೌರವವನ್ನು ಮೆರೆಸುವಂತಿಲ್ಲ. ಗೌರವ ಡಾಕ್ಟರೇಟ್ ಪಡೆದವರು ಕೂಡ ತಮ್ಮ ಹೆಸರಿನ ಮುಂದೆ ಇದನ್ನು ಬಳಸುವುದು ಸುಪ್ರೀಂಕೋರ್ಟ್ ತೀರ್ಪಿನ ಉಲ್ಲಂಘನೆ. ಅಭಿಮಾನಿಗಳು, ಹಿತೈಷಿಗಳು ಪ್ರೀತಿಯಿಂದ 'ಡಾಕ್ಟರ್' ಎಂದು ಸಂಬೋಧಿಸಿದರೆ ಅದಕ್ಕೆ ಅವರನ್ನು ಹೊಣೆ ಮಾಡಲು ಸಾಧ್ಯವಿಲ್ಲ. ಆದರೆ ತಾವಾಗಿಯೇ ಹೆಸರಿನ ಮುಂದೆ ಡಾಕ್ಟರ್ ಎಂದು ನೇಮ್‌ಪ್ಲೇಟ್ ಹಾಕಿಸುವುದು, ಲೆಟರ್‌ಹೆಡ್ ಬಳಸುವುದು ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ. ನಮ್ಮ ವಿ.ವಿ.ಗಳು ಗೌರವ ಡಾಕ್ಟರೇಟ್ ನೀಡುವ ವೇಳೆ ಅದಕ್ಕೆ ಪಾತ್ರರಾದವರು 'ಡಾಕ್ಟರ್' ಎಂಬ ಪದವನ್ನು ಎಲ್ಲಿ ಬಳಸಬಹುದು, ಎಲ್ಲಿ ಬಳಸಬಾರದು, ಹೇಗೆ ಬಳಸಬೇಕು ಎಂಬ ಸಣ್ಣ ಟಿಪ್ಪಣಿಯನ್ನು ನೀಡಬೇಕು. ಇಲ್ಲವಾದರೆ ಈಗ ಕಾಣುತ್ತಿರುವ ಅಪಸವ್ಯಗಳು ಮುಂದುವರಿಯಲಿವೆ. ಇತ್ತೀಚೆಗೆ ಅಧಿಕೃತವಾಗಿ 'ಗೌಡಾ' ಪದವಿಗೆ ಪಾತ್ರರಾದವರು ಮಾತ್ರವಲ್ಲ ನಕಲಿ ಡಾಕ್ಟರೇಟ್ ಪಡೆದವರು ಕೂಡ ಡಾಕ್ಟರ್ ಹೆಸರನ್ನು ಯದ್ವಾತದ್ವಾ ಬಳಸುತ್ತಿದ್ದಾರೆ.

ನಕಲಿಗಳ ಹಾವಳಿ

ಗೌರವ ಡಾಕ್ಟರೇಟ್‌ನದ್ದು ಒಂದು ಕಥೆಯಾದರೆ ಇದೇ ಹೆಸರಿನಲ್ಲಿ ನಡೆಯುವ ನಕಲಿ ವಿ.ವಿ.ಗಳ ಡಾಕ್ಟರೇಟ್ ಪ್ರದಾನ ಮತ್ತೊಂದು ದಂಧೆ. ಇತ್ತೀಚೆಗೆ 'ಸ್ವಾಮೀಜಿ'ಯೊಬ್ಬರ ಹೆಸರಿನ ಮುಂದೆ 'ಡಾಕ್ಟರ್' ಕಾಣಿಸಿಕೊಂಡಿದೆ. ಇವರಿಗೆ ಭಾರತ ದೇಶದ ಯಾವ ವಿ.ವಿ.ಯೂ ಗೌರವ ಡಾಕ್ಟರೇಟ್ ನೀಡಿಲ್ಲ, ಆದರೆ ಲೆಟರ್‌ಹೆಡ್‌ನಲ್ಲಷ್ಟೇ ಅಸ್ತಿತ್ವದಲ್ಲಿರುವ ನಕಲಿ ವಿ.ವಿ.ಯೊಂದು ಸ್ವಾಮೀಜಿಯಿಂದಲೇ ಕಾಣಿಕೆ ಪಡೆದು ಗೌರವ ಡಾಕ್ಟರೇಟ್ ದಯಪಾಲಿಸಿದೆ. ಇದರ ಅರಿವಿದ್ದೋ, ಅರಿವಿಲ್ಲದೆಯೋ ಅವರು ಈಗ ಡಾಕ್ಟರ್ ಸ್ವಾಮೀಜಿಯಾಗಿದ್ದಾರೆ.

'ನಿಮಗೆ ಕ್ರೆಡಿಟ್ ಕಾರ್ಡ್ ಬೇಕೇ' ಎಂದು ಕೇಳುವಷ್ಟು ಸಹಜವಾಗಿ ಡಾಕ್ಟರೇಟ್ ಬೇಕೇ ಎಂದು ಕೇಳುವ ದಲ್ಲಾಳಿಗಳಿದ್ದಾರೆ. ಪ್ರಚಾರ ಪ್ರಿಯರ ದೇಶದಲ್ಲಿ ಯಾರೋ ಕರೆ ಮಾಡಿ, ''ನಿಮ್ಮ ಸೇವೆಯನ್ನು ಪರಿಗಣಿಸಿ ಗೌರವ ಡಾಕ್ಟರೇಟ್‌ಗೆ ಅಥವಾ ಪ್ರಶಸ್ತಿಗೆ ಆಯ್ಕೆ ಮಾಡಿದ್ದೇವೆ'' ಎಂದರೆ ಮರುಳಾಗದವರು ಕಡಿಮೆ. ಉತ್ತರ ಭಾರತದ ಯಾವುದೋ ನಗರದ ವಿಳಾಸ ತೋರಿಸಿ ಅಲ್ಲಿನ ವಿ.ವಿ. ಎಂದಾಗ, ಹಿಂದೆಮುಂದೆ ನೋಡದೇ ಒಪ್ಪಿಕೊಳ್ಳುವವರಿದ್ದಾರೆ. ಬಳಿಕ ಇದೇ ಮಧ್ಯವರ್ತಿಗಳು, ಯಾವುದೋ ಶುಲ್ಕದ ಹೆಸರು ಹೇಳಿ ಹಣಕ್ಕೆ ಬೇಡಿಕೆ ಇಟ್ಟಾಗ ಕೊಡುವವರಿದ್ದಾರೆ. ಇದು ಮಾತ್ರವಲ್ಲ, ವಿದೇಶಿ ವಿ.ವಿ.ಗಳ ಹೆಸರಿನಲ್ಲಿ ಡಾಕ್ಟರೇಟ್ ನೀಡುವ ನಕಲಿ ಸಂಸ್ಥೆಗಳಿವೆ. ವಿದೇಶಕ್ಕೆ ಕರೆಸಿಕೊಂಡು ಲಕ್ಷಗಟ್ಟಲೆ ಹಣ ಪೀಕಿಸಿ, ಅಲ್ಲಿ ನಾಲ್ಕು ಗೋಡೆಗಳ ಮಧ್ಯೆ, ಯಾರದ್ದೋ ಕೈಯಲ್ಲಿ 'ಗೌಡಾ' ಪ್ರದಾನ ಮಾಡಿ ಕಳಿಸಿದ್ದನ್ನೇ ಮಹಾಪ್ರಸಾದ ಎಂದು ನಂಬಿ ಜಾಹೀರಾತು ನೀಡುವ ಅಮಾಯಕರು/ಬುದ್ಧಿವಂತರು ನಮ್ಮ ನಡುವೆ ಇದ್ದಾರೆ. ಎಂದಿನಂತೆ ಇಂಥ ದಂಧೆಯನ್ನು ತಡೆಯುವ ಯಾವುದೇ ವ್ಯವಸ್ಥೆ ನಮ್ಮಲಿಲ್ಲ. ಯುಜಿಸಿ, ಎಐಸಿಟಿಇ ಅಪರೂಪಕ್ಕೊಮ್ಮೆ ನಕಲಿ ವಿವಿಗಳ ಹೆಸರನ್ನು ಬಿಡುಗಡೆ ಮಾಡುತ್ತವೆ. ಆದರೆ ಬೆಳೆ ಬಿತ್ತದೆಯೇ ಫಸಲು ತೆಗೆಯುವ ಈ ದಂಧೆ ಮತ್ತೊಂದು ಹೆಸರಿನಲ್ಲಿ ಮುಂದುವರಿಯುತ್ತಲೇ ಇರುತ್ತದೆ.

ಡಾಕ್ಟರೇಟ್ ಪ್ಯಾಕೇಜ್

ಇದು 'ಗೌಡಾ', ನಕಲಿ ಡಾಕ್ಟರೇಟ್‌ಗಳ ಕಥೆಯಾದರೆ ಅಸಲಿ ಪಿಎಚ್‌ಡಿಗಳ ವ್ಯಥೆ ಬೇರೆಯೇ ಇದೆ. ಪಿಎಚ್‌ಡಿ ಹೆಸರಿನಲ್ಲಿ ವರ್ಷಗಟ್ಟಲೆ ತಮ್ಮ ವಿದ್ಯಾರ್ಥಿಗಳನ್ನು ಸತಾಯಿಸುವ ಮಾರ್ಗದರ್ಶಕರಿದ್ದಾರೆ. ಮಾರ್ಗದರ್ಶಕರ ಕಿರುಕುಳದ ಕಾರಣಕ್ಕೆ ಪಿಎಚ್‌ಡಿ ಅಧ್ಯಯನವನ್ನು ಕೈ ಬಿಟ್ಟ ವಿದ್ಯಾರ್ಥಿ/ವಿದ್ಯಾರ್ಥಿನಿಯರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡವರೂ ಇದ್ದಾರೆ. ದಡ್ಡ ವಿದ್ಯಾರ್ಥಿಗಳ ಮೇಲಿನ ಪ್ರೀತಿಯಿಂದ ಇಡೀ ಪಿಎಚ್‌ಡಿ ಪ್ರಬಂಧವನ್ನು ಬರೆದುಕೊಟ್ಟ ಗುರುಗಳಿದ್ದಾರೆ. ಇವರೆಲ್ಲರ ನಡುವೆ ಪಿಎಚ್‌ಡಿ ನೋಂದಣಿ ಅವಧಿಯಲ್ಲಿಯೇ ಡೀಲ್ ಕುದುರಿಸಿಕೊಂಡು ಯಾರೋ ಬರೆದುಕೊಟ್ಟ ಮಹಾಪ್ರಬಂಧವನ್ನು ವಿ.ವಿ.ಗೆ ಸಲ್ಲಿಸಿ ಡಾಕ್ಟರ್ ಎನಿಸಿಕೊಂಡು ವಿ.ವಿ., ಕಾಲೇಜುಗಳಲ್ಲಿ ಬಡ್ತಿ ಪಡೆದವರಿದ್ದಾರೆ. ಪೂರ್ಣಕಾಲಿಕ ಅಧ್ಯಾಪನ ವೃತ್ತಿ ಬಿಟ್ಟು ಪಿಎಚ್‌ಡಿ ಆಕಾಂಕ್ಷಿಗಳ ಹೆಸರಿನಲ್ಲಿ ಸಂಶೋಧನಾ ಪ್ರಬಂಧ ಬರೆದುಕೊಟ್ಟು ಬಂಗಲೆ ಕಟ್ಟಿಕೊಂಡವರಿದ್ದಾರೆ. ಇನ್ನು ಸಂಶೋಧನಾ ಪ್ರಬಂಧಗಳ ಗುಣಮಟ್ಟ ಮತ್ತು ಸಮಾಜಕ್ಕೆ ಆಗಬಹುದಾದ ಪ್ರಯೋಜನಗಳ ವಿಚಾರಕ್ಕೆ ಬಂದರೆ ಮುಂದಿನ ಒಂದಷ್ಟು ವರ್ಷಗಳ ಕಾಲ ಪಿಎಚ್‌ಡಿ ಅಧ್ಯಯನವನ್ನು ನಿಲ್ಲಿಸುವುದು ಎಷ್ಟೋ ಒಳ್ಳೆಯದು. ಮಾನವಿಕ ವಿಭಾಗಗಳಲ್ಲಿ ಸಂಶೋಧನಾ ನಿರತರ ಪ್ರಬಂಧಗಳ ಹೆಸರು ಕೇಳಿದರೆ ಸಾಕು, ಇವುಗಳನ್ನು ಅರ್ಥೈಸಲು ಮತ್ತೊಂದು ಸಂಶೋಧನೆಯೇ ಬೇಕು. ವಿ.ವಿ.ಗಳಿಗೂ, ಅವುಗಳಲ್ಲಿ ನಡೆಯುವ ಸಂಶೋಧನೆಗಳಿಗೂ, ಅವು ನೀಡುವ ಪದವಿ, ಗೌರವಗಳಿಗೂ ಮೌಲ್ಯ ದಕ್ಕಬೇಕಾದರೆ ಅಲ್ಲಿನ ಪೀಠ ಅಲಂಕರಿಸಿದವರೂ ಮೌಲ್ಯ, ಗೌರವ ಹೊಂದಿರಬೇಕು. ಇಲ್ಲವಾದರೆ ಮುಂದೊಂದು ದಿನ ಸಂಶೋಧನೆಗಳು, ಗೌರವ ಡಾಕ್ಟರೇಟ್‌ಗಳು ಲೇವಡಿಯ ವಸ್ತುವಾಗಬಹುದು.

ವಿಚಾರ ವೇದಿಕೆ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ

ಅವೈಜ್ಞಾನಿಕ ವೀಟೋ ಪವರ್

ವಿಶ್ವಸಂಸ್ಥೆಯು ಕೇವಲ ಬಲಿಷ್ಠ ರಾಷ್ಟ್ರಗಳ ತಾಳಕ್ಕೆ ತಕ್ಕಂತೆ ನರ್ತಿಸಿದರೆ, ಅದರ ಅಸ್ತಿತ್ವಕ್ಕೆ ಅರ್ಥವೇ ಇಲ್ಲದಂತಾಗುತ್ತದೆ. ಅದರ ಸ್ಥಾಪನೆಯ ಉದ್ದೇಶವು ವಿಫಲಗೊಂಡಂತೆ ಆಗುತ್ತದೆ. ಈಗಾಗಲೇ ಆ ಕಾರ್ಯವು ಯಥಾವತ್ತಾಗಿ ಆಗಿದೆ. ಅವೈಜ್ಞಾನಿಕ 'ವೀಟೋ ಪವರ್'ನಿಂದಾಗಿ ವಿಶ್ವಸಂಸ್ಥೆಯು ಒಂದು ಅಸಮರ್ಥ ಅಸ್ತಿತ್ವವಾಗಿದೆ.

ಯುದ್ಧ ಮತ್ತು ಶಾಂತಿ ಇವು ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ಸಂಬಂಧಿಸಿದ ವಿಷಯಗಳಾಗಿದ್ದು ಈ ನಿಟ್ಟಿನಲ್ಲಿ ವಿಶ್ವಸಂಸ್ಥೆಯು ಪರಿಣಾಮಕಾರಿಯಾಗಿ ಪಾತ್ರ ವಹಿಸುತ್ತಿಲ್ಲ. ಇಂದಿನ ಅತ್ಯಾಧುನಿಕ ಯುದ್ಧೋಪಕರಣಗಳು ಒಂದಿಡೀ ಮಾನವ ಕುಲವನ್ನು ಕ್ಷಣಾರ್ಧದಲ್ಲಿ ನಾಶಮಾಡಬಲ್ಲಂಥ ವಿನಾಶಕಾರಿ ಸ್ವರೂಪದ್ದಾಗಿವೆ ಎಂಬ ಅಪ್ರಿಯ ಸತ್ಯವು ವಿಶ್ವಸಂಸ್ಥೆಗೆ ಇನ್ನೂ ಅರ್ಥವಾಗದಿರುವುದು ವಿಷಾದನೀಯ. ವಿಶ್ವಶಾಂತಿಗೆ ಭಂಗ ತರುವ ಸಮಸ್ಯೆಗಳನ್ನು ವಿಶ್ವಸಂಸ್ಥೆಯೇ ಬಗೆಹರಿಸಬೇಕಲ್ಲವೇ? ಎಲ್ಲಕ್ಕೂ ಮೊದಲಾಗಿ, ಲೋಕಕಲ್ಯಾಣದ ಚಿಂತನೆಗಳನ್ನು ಹೊಂದಿರುವ ಮುತ್ಸದ್ದಿ ನಾಯಕರ ಅಗತ್ಯವಿದೆ ಈ ವಿಶ್ವಸಂಸ್ಥೆಗೆ.

ವಿಶ್ವಸಂಸ್ಥೆಯ ಇಂದಿನ ವೈಫಲ್ಯಕ್ಕೆ ಅದರ ಭದ್ರತಾ ಮಂಡಳಿಯೇ ಪ್ರಮುಖ ಕಾರಣವೆಂದರೆ ತಪ್ಪಾಗಲಾರದು. ಈ ಮಂಡಳಿಯಲ್ಲಿನ ಐದು ಕಾಯಂ ಸದಸ್ಯ ರಾಷ್ಟ್ರಗಳ ಹಿತಾಸಕ್ತಿಗಳು ಜಗತ್ತಿನ ಇತರ ಕೆಲವು ದೇಶಗಳ ನಡುವಿನ ವೈಮನಸ್ಸಿಗೂ ಕಾರಣವಾಗಿವೆ. ಈ ಐದು ರಾಷ್ಟ್ರಗಳು ತಮ್ಮ ಹಿತಾಸಕ್ತಿಯನ್ನು ಬಿಟ್ಟುಕೊಡುವ ಕೆಲಸವನ್ನು ಎಂದಿಗೂ ಮಾಡಲೇ ಇಲ್ಲ. ವಿಶ್ವಸಂಸ್ಥೆಯು ಪ್ರಾರಂಭದಿಂದಲೂ ಜಗತ್ತಿನ ಒಂದೂ ಯುದ್ಧವನ್ನು ನಿಲ್ಲಿಸಿಲ್ಲ, ನಿಲ್ಲಿಸಲು ಅದಕ್ಕೆ ಆಗಿಯೂ ಇಲ್ಲ. ಪ್ರಸ್ತುತ ನಡೆಯುತ್ತಿರುವ ಯುದ್ಧಗಳೆಡೆಗೆ ಗಮನ ಹರಿಸುವುದಕ್ಕೂ ಮುನ್ನ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾರ್ಯವೈಖರಿಯ ಬಗ್ಗೆ ಅರಿಯೋಣ. ಇದರಲ್ಲಿರುವ ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳನ್ನು ಬಿಟ್ಟು ಉಳಿದ ಮೂರು ದೇಶಗಳಾದ ಅಮೆರಿಕ, ರಷ್ಯಾ ಮತ್ತು ಚೀನಾದ ಸ್ವಹಿತಾಸಕ್ತಿಗಳು ಇಲ್ಲಿ ಹೆಚ್ಚು ಕೆಲಸ ಮಾಡುತ್ತವೆ.

ಮೊದಲೇ ಉಲ್ಲೇಖಿಸಿದಂತೆ, ವಿಶ್ವಸಂಸ್ಥೆಯ ಅವೈಜ್ಞಾನಿಕ 'ವೀಟೋ ಪವರ್' ಜಾಗತಿಕ ಅಶಾಂತಿಗಿರುವ ಪ್ರಮುಖ ಕಾರಣಗಳಲ್ಲೊಂದು. ವಿಶ್ವಸಂಸ್ಥೆಯನ್ನು ಆಧುನಿಕ ಕಾಲಘಟ್ಟಕ್ಕೆ ತಕ್ಕಂತೆ ವಿಸ್ತರಿಸುವ ಮತ್ತು ಅದರ ಅಂಗಸಂಸ್ಥೆಗಳಲ್ಲಿನ ಪ್ರಾತಿನಿಧ್ಯವನ್ನು ಮತ್ತಷ್ಟು ಹೆಚ್ಚಿಸುವ ಮೂಲಕ, ವಿಶ್ವಸಂಸ್ಥೆಯ ಒಟ್ಟಾರೆ ಕಾರ್ಯವ್ಯಾಪ್ತಿಯಲ್ಲಿ ಸುಧಾರಣೆ ತರುವ ಅಗತ್ಯವಿದೆ. ಜಗತ್ತಿನ ವಿವಿಧ ಸ್ತರಗಳಲ್ಲಿ ಮತ್ತು ಆಯಾಮಗಳಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ವೈಜ್ಞಾನಿಕವಾಗಿ ಅದೆಷ್ಟೋ ಬದಲಾವಣೆಗಳಾಗಿವೆ. ಆದರೆ ವಿಶ್ವಸಂಸ್ಥೆಯಲ್ಲಿ ಯಾವುದೇ ಬದಲಾವಣೆ ಕಾಣುತ್ತಿಲ್ಲ. ವಿಶ್ವಸಂಸ್ಥೆಯಲ್ಲಿ ಬದಲಾವಣೆ ಆಗಬೇಕಿರುವ ಬಗ್ಗೆ ಕೆಲವು ವರ್ಷಗಳಿಂದ ಪ್ರಬಲವಾಗಿ ಪ್ರತಿಪಾದಿಸುತ್ತಾ ಬಂದಿರುವ ಭಾರತವು, ಅದರ ಭದ್ರತಾ ಮಂಡಳಿಯಲ್ಲಿ ತನಗೆ ಕಾಯಂ ಸದಸ್ಯತ್ವವನ್ನು ನೀಡಬೇಕೆಂಬ ಆಗ್ರಹವನ್ನು ಜಾಗತಿಕ ಸಮುದಾಯದ ಮುಂದೆ ಮಂಡಿಸಿದೆ. ಈ ಕುರಿತಾಗಿ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸತತವಾಗಿ ತನ್ನ ಉಮೇದುವಾರಿಕೆ ಯನ್ನು ಮಂಡಿಸುವುದರ ಜತೆಗೆ, ಇತರ ಚುನಾಯಿತ ರಾಷ್ಟ್ರಗಳ ಬೆಂಬಲ ಪಡೆಯುವ ಯತ್ನದಲ್ಲೂ ವ್ಯಸ್ತವಾಗಿದೆ.

ಭಾರತದ ಈ ಮಹತ್ವಾಕಾಂಕ್ಷೆಗೆ ಈಗಾಗಲೇ ತಮ್ಮ ಬೆಂಬಲ ಘೋಷಿಸಿರುವ ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರಗಳಾದ ಅಮೆರಿಕ ಮತ್ತು ರಷ್ಯಾ, ಈ ನಿಟ್ಟಿನಲ್ಲಿನ ಭಾರತದ ಯತ್ನಗಳಿಗೆ ಕೈಜೋಡಿಸಿವೆ. ಭದ್ರತಾ ಮಂಡಳಿ ಏಕೆ ಕಾರ್ಯಕಾರಿ ಆಗಿಲ್ಲ ಎಂಬುದಕ್ಕೆ ಉತ್ತರಿಸುವವರಿಲ್ಲ. ಮಂಡಳಿಯಲ್ಲಿ ಭಾರತ, ಜರ್ಮನಿ, ಜಪಾನ್, ಬ್ರೆಜಿಲ್, ಅರ್ಜೆಂಟೀನಾ, ದಕ್ಷಿಣ ಆಫ್ರಿಕಾಗಳಂಥ ದೇಶಗಳಿಗೆ ಕಾಯಂ ಸದಸ್ಯತ್ವ ನೀಡಬೇಕು ಎಂಬ ವಾದವಿದೆ; ಆದರೆ ಪ್ರತಿಯೊಂದು ದೇಶಕ್ಕೂ ಒಬ್ಬೊಬ್ಬರು ವಿರೋಧಿಗಳಿದ್ದಾರೆ. ಜಪಾನ್ ಮತ್ತು ಭಾರತದ ಕಾಯಂ ಸದಸ್ಯತ್ವದ ಬಗ್ಗೆ ಚೀನಾದ ಆಕ್ಷೇಪ ಇದ್ದೇ ಇದೆ. ಆದರೆ ಇದೇ ಚೀನಾಕ್ಕೇ ತನ್ನ ಸ್ಥಾನವನ್ನು ಕೈಚೆಲ್ಲಿ ಭಾರತ ಬೆಂಬಲಿಸಿತ್ತು ಎಂಬುದು ಗಮನಾರ್ಹ.

ವಿಶ್ವಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ನಡೆಸುತ್ತಿರುವ ಪ್ರಯತ್ನ ಹಾಗೂ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿನ ಸಾಮರ್ಥ್ಯದ ಮೂಲಕ ಭಾರತವು ಜಾಗತಿಕ ಮಟ್ಟದಲ್ಲಿ ತನ್ನ ಪ್ರಾಬಲ್ಯವೇನು ಎಂಬುದನ್ನು ಬಿಂಬಿಸಿದೆ; ತನ್ಮೂಲಕ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಪಡೆಯಲು ತಾನೆಷ್ಟು ಅರ್ಹ ಎಂಬುದನ್ನು ಸಾಬೀತುಪಡಿಸಿದೆ ಎನ್ನಲಡ್ಡಿಯಿಲ್ಲ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದ ಜಾಗತಿಕ ಪ್ರಭಾವವು ವೃದ್ಧಿಸುತ್ತಿದೆ. ಪ್ಯಾರಿಸ್ ಒಪ್ಪಂದ, ಹವಾಮಾನ ಬದಲಾವಣೆ, ನವೀಕರಿಸಬಹುದಾದ ಇಂಧನ ಈ ಎಲ್ಲ ವಿಷಯಗಳಲ್ಲಿನ ಭಾರತ ಆಸಕ್ತಿ ಮತ್ತು ಆಲೋಚನೆಗಳು, ಜಾಗತಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಭಾರತಕ್ಕಿರುವ ಬದ್ಧತೆಯನ್ನು ತೋರಿಸುತ್ತವೆ. ಹೀಗಾಗಿ, ಭಾರತವು ಜಾಗತಿಕ ಮಟ್ಟದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುವಂತಾಗಬೇಕೆಂದು ವಿಶ್ವದ ಇತರ ರಾಷ್ಟ್ರಗಳು ಉತ್ಸುಕತೆಯನ್ನು ತೋರಿಸುತ್ತಿದ್ದು, ಇದು ಭದ್ರತಾ ಮಂಡಳಿಯ ಸದಸ್ಯತ್ವವನ್ನು ಪಡೆಯುವಲ್ಲಿ ಭಾರತಕ್ಕೆ ಪರೋಕ್ಷವಾಗಿ ನೆರವಾಗಬಲ್ಲದು.

ಭದ್ರತಾ ಮಂಡಳಿಯ ವಿಷಯದಲ್ಲಿ ತಾನು 'ಔಟ್‌ಡೇಟೆಡ್' ಆಗಿರುವುದು ವಿಶ್ವಸಂಸ್ಥೆಗೆ ಅರಿವಾದಂತಿಲ್ಲ; ಒಂದೊಮ್ಮೆ ಆ ಪರಿಜ್ಞಾನವಿದ್ದರೂ ಕುರುಡನಂತೆ ವರ್ತಿಸುತ್ತಿದ್ದರೆ ಅದು ಇಡೀ ಜಗತ್ತಿಗೇ ರವಾನೆಯಾಗುತ್ತಿರುವ ಒಂದು ತಪ್ಪು ಸಂದೇಶವಾಗಿದೆ. ಆದ್ದರಿಂದ, ಭದ್ರತಾ ಮಂಡಳಿಯ ಸುಧಾರಣೆಯಾಗಿ, ವೀಟೋ ಅಧಿಕಾರವನ್ನು ತೆಗೆದು, ಪ್ರಜಾಪ್ರಭುತ್ವ ಆಧರಿತವಾಗಿ ಮುನ್ನಡೆದರೆ ಜಾಗತಿಕ ಸಮಸ್ಯೆಗಳಿಗೆ ಕೊಂಚ ಮಟ್ಟಿನ ಪರಿಹಾರವನ್ನಾದರೂ ಹುಡುಕಬಹುದು.

ವಿಶ್ವಸಂಸ್ಥೆಯ ಸ್ಥಾಪನೆಯಾಗಿ 79 ವರ್ಷಗಳು ಕಳೆದಿದ್ದು, ಅಂದಿನಿಂದ ಪ್ರಪಂಚವು ಬಹಳಷ್ಟು ಬದಲಾಗಿದೆ. ಬದಲಾದ ಕಾಲಘಟ್ಟದಲ್ಲಿ ಜಗತ್ತಿನೆದುರು ಸಾಕಷ್ಟು ಸವಾಲುಗಳಿದ್ದು, ವಿಶ್ವಸಂಸ್ಥೆಯ ಹಾಲಿ ವ್ಯವಸ್ಥೆಯಿಂದ ಇದನ್ನು ನಿಭಾಯಿಸುವುದು ಕಷ್ಟಸಾಧ್ಯ. ಆದ್ದರಿಂದ ವಿಶ್ವಸಂಸ್ಥೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಪ್ರಾತಿನಿಧಿಕ ಸಂಸ್ಥೆಯಾಗಿ ರೂಪಿಸಬೇಕು. ಅದರ ಹಳೆಯ ನಿಲುವುಗಳು ಬದಲಾಗಬೇಕು; ಏಕೆಂದರೆ, ಜಗದ ರಾಜಕೀಯ-ಆರ್ಥಿಕ ನಕಾಶೆಗಳು ಬದಲಾಗಿದ್ದರೂ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿಲುವು ಮಾತ್ರ ನಿಂತ ನೀರಾಗಿದೆ!

ವಿಶ್ವಸಂಸ್ಥೆಯ ಸ್ಥಾಪನೆಯಾಗಿದ್ದು ಜಾಗತಿಕ ಶಾಂತಿಗಾಗಿಯೇ; ಕೇವಲ ಯುದ್ಧದ ಮೇಲಷ್ಟೇ ಗಮನವಿಡದೆ ಮಾನವ ಹಕ್ಕುಗಳ ರಕ್ಷಣೆ, ಪರಿಸರ ಸಂರಕ್ಷಣೆ, ಆರೋಗ್ಯ ಸೇರಿದಂತೆ ಎಲ್ಲಾ ರಂಗಗಳಿಗೆ ಸಂಬಂಧಿಸಿದ ವಿಭಾಗಗಳು ರಚನೆಯಾಗಿವೆ. ವಿಶ್ವಶಾಂತಿಯ ಪಾಲನೆ ಎಂಬ ಮಾತು ಬಂದಾಗ ಎಲ್ಲಾ ರಾಷ್ಟ್ರಗಳಿಗೆ ನೆನಪಾಗುವ ದೇಶ ಭಾರತ. ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ, ಜಗತ್ತಿನಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರ ಎನಿಸಿಕೊಂಡಿರುವ ಭಾರತವು ಆರ್ಥಿಕತೆಯಲ್ಲಿ 5ನೇ ಸ್ಥಾನದಲ್ಲಿದೆ; ಜಗತ್ತಿನ 4ನೇ ಅತಿದೊಡ್ಡ ಸೈನ್ಯವನ್ನು ಹೊಂದಿರುವ ಭಾರತವು ಜಿ-20, 'ಕ್ವಾಡ್'ನಂಥ ಜಾಗತಿಕ ಮಟ್ಟದ ಕೂಟಗಳಲ್ಲಿ ಭಾಗೀದಾರ ಎನಿಸಿಕೊಂಡಿದೆ. ಇಷ್ಟಾಗಿಯೂ, ಭಾರತವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸ್ಥಾನವನ್ನೇಕೆ ಪಡೆಯಲಿಲ್ಲ ಎಂಬುದು ಭಾರತೀಯರನ್ನು ಮಾತ್ರವಲ್ಲದೆ ಬಹುತೇಕ ರಾಷ್ಟ್ರಗಳನ್ನು ಕಾಡುತ್ತಿರುವ ಪ್ರಶ್ನೆಯೂ ಹೌದು. ಎಲ್ಲೆಡೆ ಅಶಾಂತಿ, ಯುದ್ಧ, ಆರ್ಥಿಕ ಬಿಕ್ಕಟ್ಟು ಹೆಚ್ಚುತ್ತಿರುವ ಈ ದಿನಗಳಲ್ಲಿ ಪ್ರಬಲ ನಾಯಕತ್ವವೊಂದನ್ನು ಎದುರುನೋಡುತ್ತಿರುವ ಜಗತ್ತಿಗೆ ಭಾರತದ ಪ್ರಾಮುಖ್ಯ ಅರಿವಾಗತೊಡಗಿದೆ. ಭಾರತಕ್ಕೆ ಇಂಥದೊಂದು ಅಧಿಕಾರ ದಕ್ಕಬೇಕಿರುವುದರ ಮಹತ್ವ ಜಗತ್ತಿನ ಇತರ ರಾಷ್ಟ್ರಗಳಿಗೆ ಮನವರಿಕೆಯಾಗಿದೆ. ಸದ್ಯ, ಭದ್ರತಾ ಮಂಡಳಿಯ ಐದು ಕಾಯಂ ರಾಷ್ಟ್ರಗಳ ಪೈಕಿ ಚೀನಾ ಮಾತ್ರವೇ ಭಾರತದ ಈ ಮಹತ್ವಾಕಾಂಕ್ಷೆಗೆ ಅಡ್ಡಗಾಲು ಹಾಕುತ್ತಿದೆ; ಆದರೆ, ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಗಳಲ್ಲಿ ಜಾಗತಿಕ ಸಮುದಾಯದ ಪ್ರಾತಿನಿಧ್ಯ ಹೆಚ್ಚಬೇಕೆಂಬ ಭಾರತದ ಕೂಗಿಗೆ ಸಾರ್ವತ್ರಿಕ ಬೆಂಬಲ ವ್ಯಕ್ತವಾಗುತ್ತಿರುವುದರಿಂದ, ಚೀನಾ ಕೂಡ ಒತ್ತಡಕ್ಕೆ ಸಿಲುಕಿ ಈ ಪ್ರಸ್ತಾವನೆಗೆ ತನ್ನ ಒಪ್ಪಿಗೆ ಸೂಚಿಸುವ ಸಾಧ್ಯತೆಯಿದೆ.

(ಲೇಖಕರು ವಿಜಯಾ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರು)

ಏಕಕಾಲಿಕ ಚುನಾವಣೆಯ ಸಾಧಕ-ಬಾಧಕಗಳು

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಬಿಜೆಪಿಯ 2024ರ ಲೋಕಸಭಾ ಚುನಾವಣಾ ಪ್ರಣಾಳಿಕೆಯಲ್ಲಿ, ಚುನಾವಣಾ ವ್ಯವಸ್ಥೆಯ ಸುಧಾರಣೆಯ ಭಾಗವಾಗಿದ್ದ 'ಒಂದು ದೇಶ, ಒಂದು ಚುನಾವಣೆ' ಎಂಬ ಆಶ್ವಾಸನೆಯನ್ನು ನೀಡಲಾ ಗಿತ್ತು. ಇದನ್ನು ಕಾರ್ಯಗತಗೊಳಿಸಲು ರಚಿಸಲಾದ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್‌ರವರ ನೇತೃ ತ್ವದ ಎಂಟು ಸದಸ್ಯರ ಉನ್ನತ ಮಟ್ಟದ ಸಮಿತಿಯು ಸಲ್ಲಿ ಸಿದ ವರದಿಯನ್ನು ಕೇಂದ್ರ ಸಂಪುಟವು ಒಪ್ಪಿಕೊಂಡಿತು. ತತ್ಪರಿಣಾಮವಾಗಿ 'ಒಂದು ದೇಶ, ಒಂದು ಚುನಾವಣೆ' ಪರಿಕಲ್ಪನೆಯ ಅನುಷ್ಠಾನಕ್ಕೆ ಎನ್‌ಡಿಎ ಸರಕಾರ ಮಹತ್ವದ ಹೆಜ್ಜೆಯನ್ನಿಟ್ಟಿದೆ.

ಕಳೆದ 10 ವರ್ಷಗಳಲ್ಲಿ ಮೋದಿ ಸರಕಾರವು ದೇಶಾ ದ್ಯಂತ ಹಲವಾರು ಏಕೀಕೃತ ಸೇವೆಗಳಿಗೆ ಚಾಲನೆ ನೀಡಿದೆ. ಪ್ರಮುಖವಾಗಿ ಸೇನೆಯಲ್ಲಿ 'ಒಂದು ಶ್ರೇಣಿ, ಒಂದು ಪಿಂಚಣಿ' ಉಪ ಕ್ರಮವನ್ನು ಜಾರಿಗೊಳಿಸಿ, ಸೇನೆಯ ದಶಕಗಳ ಬೇಡಿಕೆಯನ್ನು ಅದು ನೆರವೇರಿಸಿತು. ಇನ್ನು, ಜಿಎಸ್‌ಟಿ ಪದ್ಧತಿಯನ್ನು ಜಾರಿಗೆ ತಂದು 'ಒಂದು ದೇಶ, ಒಂದು ತೆರಿಗೆ' ಪರಿಕಲ್ಪನೆಗೆ ಚಾಲನೆ ನೀಡಿರುವುದು ಗೊತ್ತಿ ರುವಂಥದ್ದೇ. ಇದೇ ರೀತಿಯಲ್ಲಿ, ಆಪತ್ಕಾಲ ಮತ್ತು ಅವಘಡದ ವೇಳೆ ತುರ್ತುಸೇವೆಗಾಗಿ 112 ಸಹಾಯವಾಣಿ ಸಂಖ್ಯೆ ಜಾರಿಗೆ ಬಂದಿದೆ; ವಲಸೆ ಕಾರ್ಮಿಕರ ಹಿತದೃಷ್ಟಿ ಯಿಟ್ಟುಕೊಂಡು 'ಒಂದು ದೇಶ, ಒಂದು ಪಡಿತರ ಚೀಟಿ' ವ್ಯವಸ್ಥೆ ಜಾರಿಯಾಗಿದೆ. ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆಂದು ದೇಶಾದ್ಯಂತ 'ನೀಟ್' ಪರೀಕ್ಷೆಯನ್ನು ನಡೆಸಲಾಗುತ್ತಿದೆ. 'ಆಯುಷ್ಮಾನ್ ಭಾರತ' ಮೂಲಕ ದೇಶಾದ್ಯಂತ ಆರೋಗ್ಯ ವಿಮೆ ಚಾಲ್ತಿಯಲ್ಲಿದೆ. ಹೀಗೆ ಹತ್ತು ಹಲವು ಏಕೀಕೃತ ಸೇವೆಗಳನ್ನು ಒದಗಿಸುವ ಮೂಲಕ ದೇಶವನ್ನು ಜೋಡಿಸುವ ಕೆಲಸವೂ ನಡೆದಿದೆ.

'ಒಂದು ದೇಶ, ಒಂದು ಚುನಾವಣೆ' ಅನುಷ್ಠಾನಕ್ಕೆ ಕೋವಿಂದ್ ನೇತೃತ್ವದ ಸಮಿತಿಯು 11 ಶಿಫಾರಸುಗಳನ್ನು ಮಾಡಿದೆ. ಇವುಗಳಲ್ಲಿ- ಲೋಕಸಭೆ ಮತ್ತು ವಿಧಾನಸಭೆ ಗಳಿಗೆ ಒಟ್ಟಿಗೆ ಮತದಾನ, ಅದಾಗಿ 100 ದಿನದ ತರು ವಾಯ ಸ್ಥಳೀಯ ಸಂಸ್ಥೆ ಮತ್ತು ಪಂಚಾಯಿತಿಗಳಿಗೆ ಚುನಾವಣೆ ನಡೆಸುವುದು; ಏಕಕಾಲಿಕ ಚುನಾವಣೆಗಾಗಿ ಸಂವಿಧಾನದ 83ನೇ ವಿಧಿ (ಸಂಸತ್ತಿನ ಸದನಗಳ ಅವಧಿ) ಮತ್ತು 172ನೇ ವಿಧಿ (ರಾಜ್ಯ ಶಾಸಕಾಂಗಗಳ ಅವಧಿ) ಮತ್ತು 'ಅನುಚ್ಛೇದ 324-ಎ'ಗೆ ಸಂಸತ್ತಿನಲ್ಲಿ ತಿದ್ದುಪಡಿ ವಿಧೇಯಕವನ್ನು ಮಂಡಿಸುವುದು; ಒಂದೇ ಮತದಾರರ ಪಟ್ಟಿ ಮತ್ತು ಫೋಟೋ ಗುರುತಿನ ಚೀಟಿಯನ್ನು ಸಕ್ರಿಯಗೊಳಿಸಲು 325ನೇ ವಿಧಿಗೆ ತಿದ್ದುಪಡಿ; ದೆಹಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ರಾಜಧಾನಿ ಕಾಯ್ದೆಯ ಸೆಕ್ಷನ್ 5ಕ್ಕೆ ಮತ್ತು ಪುದುಚೇರಿಗೆ ಸಂಬಂಧಿಸಿದಂತೆ 'ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆ,1963'ಕ್ಕೆ ತಿದ್ದುಪಡಿ- ಇವು ಪ್ರಮುಖವಾಗಿವೆ. ರಾಜೀವ್ ಗಾಂಧಿಯವರು 1985ರಲ್ಲಿ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಜಾರಿಗೆ ತಂದ ತರುವಾಯ, 'ಒಂದು ದೇಶ, ಒಂದು ಚುನಾವಣೆ' ಅತಿದೊಡ್ಡ ಚುನಾ ವಣಾ ಸುಧಾರಣೆ ಯಾಗಿದೆ. ಇದಕ್ಕಿರುವ ಲಾಭವನ್ನು ಪರಿಗಣಿಸಿದರೆ, ಈ ಉಪಕ್ರಮವು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸುವುದರಲ್ಲಿ ಸಂದೇಹ ವಿಲ್ಲ. 1952ರಿಂದ 1967ರ ತನಕ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳು ಒಟ್ಟಿಗೆ ನಡೆಯುತ್ತಿದ್ದವು. ನಂತರ ಆರಂಭವಾದ ಮಧ್ಯಂತರ ಚುನಾ ವಣೆಗಳ ಹಾವಳಿ ಯಿಂದಾಗಿ ಈ ಸರಪಳಿಯು ಮುರಿದು ಹೋಯಿತು. ಹೀಗೆ ಒಂದು ಕಾಲಕ್ಕೆ 20 ರಾಜ್ಯಗಳಲ್ಲಿ ಒಟ್ಟಿಗೆ ಚುನಾವಣೆ ನಡೆಯುತ್ತಿತ್ತು; ಈ ಸಂಖ್ಯೆಯು 2024ರಲ್ಲಿ 7 ರಾಜ್ಯಗಳಿಗೆ ಕುಸಿದಿದೆ. ಈ ಕುಸಿತವು ರಾಜ್ಯಮಟ್ಟದಲ್ಲಿ ರಾಜಕೀಯ ಅಸ್ಥಿರತೆಗೂ ಕಾರಣವಾಗುತ್ತದೆ.

ದೇಶದಲ್ಲಿ ಸದಾ ಒಂದಿಲ್ಲೊಂದು ಚುನಾವಣೆ ನಡೆಯುತ್ತಲೇ ಇರುವುದು ಸಾಮಾನ್ಯವಾಗಿಬಿಟ್ಟಿದೆ. ಇಂಥ ಪ್ರತಿ ಸಂದರ್ಭದಲ್ಲೂ ಚುನಾವಣಾ ನೀತಿ ಸಂಹಿತೆಯ ಜಾರಿ ಯಾಗಿ ರಾಜ್ಯಗಳಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತ ವಾದರೆ, ಗಟ್ಟಿ ನಿರ್ಧಾರಗಳನ್ನು ಕೈಗೊಳ್ಳಲು ಕೇಂದ್ರವು ಹಿಂಜರಿಯುವಂತಾಗುತ್ತದೆ. ಇದು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. 2009 ರಿಂದ 2024ರ ನಡುವಿನ ಅವಧಿಯಲ್ಲಿ ಒಂದು ಲೋಕ ಸಭಾ ಚುನಾವಣೆ ಮತ್ತು ವಿವಿಧ ಕಾಲಘಟ್ಟಗಳಲ್ಲಿ 30 ರಾಜ್ಯಗಳ ವಿಧಾನಸಭಾ ಚುನಾವಣೆಗಳು ನಡೆದಿದ್ದವು ಎಂಬುದಿಲ್ಲಿ ಗಮನಾರ್ಹ.

1951-52ರಲ್ಲಿ 68 ಹಂತಗಳಲ್ಲಿ ನಡೆದ ಭಾರತದ ಮೊದಲ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಆದ ವೆಚ್ಚವು 10.5 ಕೋಟಿ ರುಪಾಯಿಯಷ್ಟಿದ್ದರೆ, 2019ರಲ್ಲಿ ಈ ವೆಚ್ಚವು 50,000 ಕೋಟಿಗೆ ತಲುಪಿತು. 2024ರ ಚುನಾವಣಾ ವೆಚ್ಚವು 1 ಲಕ್ಷ ಕೋಟಿಯನ್ನು ದಾಟಿದೆ ಎನ್ನ ಲಾಗಿದೆ. ಆನಂತರ ನಡೆಯುವ ವಿಧಾನಸಭಾ ಚುನಾವಣೆ ಗಳಿಗೆ, ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 2.2 ಕೋಟಿ ರು. ವೆಚ್ಚವಾಗುವುದು ಎಂದು ಅಂದಾಜಿಸಲಾಗಿದೆ. ಒಂದು ಅಂದಾಜಿನ ಪ್ರಕಾರ, 2024ರ ಲೋಕಸಭಾ ಚುನಾವಣೆಗೆ ರಾಜಕೀಯ ಪಕ್ಷಗಳಿಂದಾಗಿರುವ ಒಟ್ಟು ವೆಚ್ಚ 1.35 ಲಕ್ಷ ಕೋಟಿಯಷ್ಟಿದ್ದರೆ, ಕರ್ನಾಟಕ ವಿಧಾನಸಭಾ ಚುನಾವಣೆಗೆ ಅವು ಮಾಡಿರುವ ವೆಚ್ಚ 500 ಕೋಟಿಯನ್ನು ದಾಟಿದೆಯಂತೆ (224 ಅಭ್ಯರ್ಥಿಗಳ ವೈಯಕ್ತಿಕ ವೆಚ್ಚವು ಸೇರ್ಪಡೆಯಾದರೆ ಈ ಮೊತ್ತವು ಕನಿಷ್ಠ 3,000 ಕೋಟಿಯನ್ನು ದಾಟುತ್ತದೆ).

ಯಥಾಪ್ರಕಾರ, ಸುಧಾರಣೆಯನ್ನು ವಿರೋಧಿಸುವು ದನ್ನೇ ಹವ್ಯಾಸ ಮಾಡಿಕೊಂಡಿರುವ 'ಇಂಡಿಯ' ಮೈತ್ರಿ ಕೂಟದ ಪಕ್ಷಗಳು ಹಾಗೂ ಸುಧಾರಣಾ ವಿರೋಧಿಗಳು, 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವನೆಗೆ ಅಪಸ್ವರ ತೆಗೆದಿದ್ದಾರೆ. 'ಎರಡೂ ಚುನಾವಣೆಗಳು ಒಟ್ಟಿಗೆ ನಡೆದರೆ ಕೇಂದ್ರದ ಆಡಳಿತ ಪಕ್ಷಕ್ಕೆ ಹೆಚ್ಚು ಅನುಕೂಲವಾಗುತ್ತದೆ ಮತ್ತು ಪ್ರಾದೇಶಿಕ ಹಿತಾಸಕ್ತಿಗೆ ಹಿನ್ನಡೆಯಾಗುತ್ತದೆ ಹಾಗೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತದೆ' ಎಂಬುದು ಇವರ ತಕರಾರು. 'ಈ ಪರಿಕಲ್ಪನೆಯು ಸಂವಿಧಾನ-ವಿರೋಧಿ, ಇದರಿಂದ ಪ್ರಾದೇಶಿಕ ಅಸ್ಮಿತೆಗೆ ಧಕ್ಕೆಯಾಗುತ್ತದೆ' ಎಂಬುದು ಇನ್ನು ಕೆಲವರ ವಾದ.

ಚುನಾವಣಾ ವಿಶ್ಲೇಷಕ ಯೋಗೇಂದ್ರ ಯಾದವ್ ಅವರು ಲೇಖನವೊಂದರಲ್ಲಿ, 'ಈ ಪ್ರಸ್ತಾವನೆಯು ಸಂವಿಧಾನದ ಮೂಲಸ್ವರೂಪಕ್ಕೆ ವಿರುದ್ಧವಾಗಿದೆ. ಇದ ರಿಂದಾಗಿ ರಾಷ್ಟ್ರೀಯ ಪಕ್ಷಗಳಿಗೆ ಹೆಚ್ಚು ಮತ ಹರಿಯುತ್ತದೆ. ಹಾಗಿಲ್ಲವಾದರೆ 2024ರಲ್ಲಿ ಒಡಿಶಾದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತಿರಲಿಲ್ಲ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಒಡಿಶಾದಲ್ಲಿ 2004ರಿಂದ ಲೋಕಸಭೆಯ ಜತೆಗೆ ವಿಧಾನಸಭೆ ಚುನಾವಣೆಯೂ ನಡೆಯುತ್ತಿದ್ದು, ಪ್ರತಿಬಾರಿಯೂ ರಾಜ್ಯದಲ್ಲಿ ಬಿಜೆಡಿ ಅಧಿಕಾರಕ್ಕೆ ಬರುತ್ತಿತ್ತು ಎಂಬ ಸತ್ಯವನ್ನು ಅವರು ಮರೆಮಾಚಿದ್ದಾರೆ. ಈ ಬಾರಿಯೂ 7 ವಿಧಾನಸಭೆಗಳು ಒಟ್ಟಿಗೆ ಚುನಾವಣೆಗೆ ಹೋಗಿದ್ದವು, ಆಗ ಎಲ್ಲಿಯೂ 'ಇದು ಸಂವಿಧಾನ ವಿರೋಧಿ' ಎಂಬ ದನಿಯೇ ಬರಲಿಲ್ಲ. ಚುನಾ ವಣೆಗಳು ಪ್ರತ್ಯೇಕವಾಗಿದ್ದು ವಿಧಾನಸಭೆಗಳ ವಿಸರ್ಜನೆ ಯಿಂದ. ಜತೆಗೆ, 1998 ಮತ್ತು 99ರಲ್ಲಿ ಲೋಕಸಭೆಗೆ ಸತತ ವಾಗಿ 2 ಬಾರಿ ಚುನಾವಣೆ ನಡೆದು ಎಲ್ಲವನ್ನೂ ಅಸ್ತವ್ಯಸ್ತ ಗೊಳಿಸಿತು. ಪ್ರಾದೇಶಿಕ ಅಸ್ಮಿತೆಯ ಬಗ್ಗೆ ಪ್ರಶ್ನಿಸುವವರು ಕರ್ನಾಟಕದಲ್ಲಿ 1999 ಮತ್ತು 2004ರಲ್ಲಿ ಎರಡೂ ಚುನಾವಣೆಗಳು ಒಟ್ಟಿಗೆ ನಡೆದಿದ್ದನ್ನು ಮರೆಯುತ್ತಾರೆ; ಆಗ ಯಾವ ಅಸ್ಮಿತೆಗೂ ಧಕ್ಕೆಯಾಗಿರಲಿಲ್ಲ. ಏಕಕಾಲಿಕ ಚುನಾವಣೆ ವ್ಯವಸ್ಥೆ ಜಾರಿಗೆ ಬಂದರೆ, ಇರುವ ಸರಕಾರವನ್ನು ಬೀಳಿಸಿ ಮತ್ತೆ ಚುನಾವಣೆಗೆ ಹೋಗುವುದು ಕಷ್ಟಕರವಾದದ್ದು. ಯಾಕೆಂದರೆ, ಹೊಸ ಪದ್ಧತಿಯಲ್ಲಿ ಮಧ್ಯಂತರ ಚುನಾವಣೆ ನಡೆದ ಸರಕಾರದ ಅವಧಿಯು ಬಾಕಿ ಉಳಿದ ಅವಧಿವರೆಗೆ ಮಾತ್ರವಿರು ವುದು, ಈಗಿನ ಹಾಗೆ ಮತ್ತೆ ಪೂರ್ಣಾವಧಿ ದೊರೆಯುವು ದಿಲ್ಲ. ಸರಕಾರದ ನೀತಿ-ನಿರ್ಧಾರಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳಬಹುದು, ಇದರಿಂದ ಪ್ರಗತಿಗೆ ವೇಗ ದೊರೆಯು ತ್ತದೆ. ಬಹುಮುಖ್ಯವಾಗಿ, ಏಕಕಾಲಿಕ ಚುನಾವಣೆ ನಡೆಸು ವುದರಿಂದ ಸರಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರುಪಾಯಿ ಹಣದ ಉಳಿತಾಯವಾಗುತ್ತದೆ. ಪದೇಪದೆ ಚುನಾವಣಾ ಪ್ರಚಾರ ಕೈಗೊಳ್ಳಲು ಹಾಕಬೇಕಾದ ಶ್ರಮ ಕಡಿಮೆಯಾಗಿ, ರಾಜಕೀಯ ನಾಯಕರ/ಕಾರ್ಯಕರ್ತರ ಆರೋಗ್ಯವು ಸುಧಾರಿಸುತ್ತದೆ. ಪದೇಪದೆ ಚುನಾವಣೆ ನಡೆಯ ದಿದ್ದರೆ, ಉದ್ಯಮಿಗಳಿಂದ ಹಣ ಸಂಗ್ರಹಿಸ ಬೇಕಾದ ಒತ್ತಡವು ತಗ್ಗುವ ಸಾಧ್ಯತೆಯುಂಟು, ಕಪ್ಪುಹಣದ ಚಲಾವಣೆಯಲ್ಲೂ ಇಳಿಕೆಯಾಗುವುದುಂಟು.

ಏಕಕಾಲಿಕ ಚುನಾವಣೆಯಿಂದ ಬಿಜೆಪಿಗೆ ಅನುಕೂಲವಾಗುವುದು ಎಂಬ ಟೀಕೆಯು ಅಸಂಬದ್ಧವಷ್ಟೇ. ಮತದಾರನು ತನ್ನ ಆಯ್ಕೆಯನ್ನು ಜಾಣ್ಮೆಯಿಂದ ಮಾಡುವಷ್ಟು ಪ್ರಬುದ್ಧನಿದ್ದಾನೆ. ಆತ ಬದಲಾವಣೆಯನ್ನು ಬಯಸಿದರೆ ಯಾವ ಅಲೆಯಾಗಲೀ ನಾಯಕತ್ವವಾಗಲೀ ನೆರವಿಗೆ ಬರುವುದಿಲ್ಲ ಎಂಬುದಕ್ಕೆ ಇತ್ತೀಚಿನ ಲೋಕಸಭಾ ಚುನಾ ವಣೆಯ ಫಲಿತಾಂಶವೇ ಸಾಕ್ಷಿಯಾಗಿದೆ. ಏಕೆಂದರೆ, ಸ್ವಂತ ಬಲದ ಮೇಲೆ ಸರಕಾರವನ್ನು ರಚಿಸುವ ವಿಶ್ವಾಸದಲ್ಲಿದ್ದ ಬಿಜೆಪಿಯನ್ನು ಮತದಾರ ನಿರಾಸೆಗೊಳಿಸಿದ್ದು ನಿಮಗೆ ಗೊತ್ತೇ ಇದೆ.

ಏಕಕಾಲಿಕ ಚುನಾವಣೆಯನ್ನು ವಿರೋಧಿಸಲು 'ಪ್ರಾದೇಶಿಕತೆಯ ಕಾರ್ಡ್' ಬಳಸುವುದಾಗಲೀ, 'ರಾಜ್ಯಗಳ ಸಮಸ್ಯೆಯು ಹಿನ್ನೆಲೆಗೆ ಸರಿಯುತ್ತದೆ' ಎಂಬ ವಾದ ಮಂಡಿಸುವುದಾಗಲೀ ಅರ್ಥಹೀನ. ಬದಲಿಗೆ, ಏಕ ಕಾಲಿಕ ಚುನಾವಣೆಯ ಪದ್ಧತಿ ಜಾರಿಗೆ ಬಂದರೆ ರಾಜ್ಯಗಳ ಸಮಸ್ಯೆಗೆ ಹೆಚ್ಚು ಒತ್ತು ದೊರೆಕಿ, ರಾಷ್ಟ್ರೀಯ ವಿಚಾರಗಳು ಹಿಂದೆ ಸರಿಯುವ ಸಾಧ್ಯತೆಗಳೇ ಅಧಿಕವಾಗಿವೆ. ನೂರು ಕೋಟಿ ಮತದಾರರಿರುವ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾಲಕಾಲಕ್ಕೆ ಚುನಾವಣಾ ಸುಧಾರಣೆ ನಡೆಯಬೇಕಾದ್ದು ಅಪೇಕ್ಷಣೀಯ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಚುನಾವಣಾ ವೆಚ್ಚದಿಂದಾಗಿ ಬಡವರು ಮತ್ತು ಮಧ್ಯಮ ವರ್ಗದವರಿಗೆ ಚುನಾವಣಾ ಸ್ಪರ್ಧೆಯ ಬಾಗಿಲು ಮುಚ್ಚಿದಂತಾಗಿದೆ. ಏಕಕಾಲಿಕ ಚುನಾವಣೆ ನಡೆದರೆ, ಲೋಕಸಭೆ ಮತ್ತು ವಿಧಾನಸಭೆಯ ಅಭ್ಯರ್ಥಿಗಳು ಪೂರಕವಾಗಿ ಕೆಲಸ ಮಾಡುವುದರಿಂದ ಬದಲಾವಣೆಯನ್ನು ಕಾಣಬಹುದಾಗಿದೆ.

ಕಳೆದ 40 ವರ್ಷದಿಂದ ಚುನಾವಣಾ ಸುಧಾರಣೆಯು ನಿಂತ ನೀರಾಗಿದೆ. ಬಲ ಹೆಚ್ಚಿಸಿಕೊಳ್ಳಲೆಂದು ರಾಜಕೀಯ ಪಕ್ಷಗಳು ಕಂಡುಕೊಂಡಿರುವ 'ರಾಜೀನಾಮೆ ತಂತ್ರ'ವು ಪಕ್ಷಾಂತರ ನಿಷೇಧ ಕಾಯ್ದೆಯನ್ನು ಹಲ್ಲು ಕಿತ್ತ ಹಾವಂತೆ ಮಾಡಿದೆ. ಚುನಾವಣಾ ವೆಚ್ಚಕ್ಕೆ ಅಂಕುಶ ಹಾಕುವಲ್ಲಿನ ಚುನಾವಣಾ ಆಯೋಗದ ಕ್ರಮಗಳು ಫಲಕಾರಿಯಾಗಿಲ್ಲ. ಈಗ 'ಯುಪಿಐ' ಮಾರ್ಗೋಪಾಯದ ಮೂಲಕ ಹಣ ವರ್ಗಾವಣೆ ಸಾಧ್ಯವಿರುವುದರಿಂದ, ಮುಂಬರುವ ದಿನಗಳಲ್ಲಿ ಚುನಾವಣೆಯ ಸಂದರ್ಭದಲ್ಲಿ ಹಣದ ಭೌತಿಕ ಸಾಗಣೆ ನಿಂತು, ಹಣದ ಹಂಚಿಕೆ ನಿರಾತಂಕವಾಗಿ ಸಾಗುತ್ತದೆ. ಈ ಹಿನ್ನೆಲೆಯಲ್ಲಿ 'ಒಂದು ದೇಶ, ಒಂದು ಚುನಾವಣೆ' ವ್ಯವಸ್ಥೆಯು ಅತ್ಯಂತ ಮಹತ್ವಪೂರ್ಣ ಸುಧಾರಣೆಯಾಗಿದ್ದು, ಇದು ಜಾರಿಗೆ ಬರುವಂತಾಗಲು ವಿಪಕ್ಷಗಳು ಸಕಾರಾತ್ಮಕ ನಿಲುವನ್ನು ತಳೆಯಬೇಕಾಗಿದೆ. ಒಂದೊಮ್ಮೆ ವಿಧೇಯಕದಲ್ಲಿ ದೋಷವಿದ್ದರೆ ಅದನ್ನು ಸರಿಪಡಿಸಲು ಅವು ಸಲಹೆ ನೀಡಬೇಕು; ಆದರೆ ಕೇವಲ ವಿರೋಧಕ್ಕಾಗಿ ವಿರೋಧಿಸುವ ಚಾಳಿ ಸಲ್ಲ. ಪೂರ್ಣ ಬಹುಮತವಿಲ್ಲದ ಕೇಂದ್ರ ಸರಕಾರವು ಈ ವಿಧೇಯಕವನ್ನು ಜಾರಿಗೆ ತರಲು ಹಗ್ಗದ ಮೇಲಿನ ನಡಿಗೆಗೆ ಒಡ್ಡಿಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಮೋದಿ ಸರಕಾರವು ಮಸೂದೆಯ ವಿರೋಧಿಗಳೊಂದಿಗೆ ಮುಕ್ತವಾಗಿ ಮಾತನಾಡಿ, ಏಕಕಾಲಿಕ ಚುನಾವಣೆಯ ಪರಿಕಲ್ಪನೆಯನ್ನು ಸಾಕಾರಗೊಳಿಸುವುದು ಅನಿವಾರ್ಯವಾಗಿದೆ.

(ಲೇಖಕರು ಬಿಜೆಪಿ ವಕ್ತಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 160

ಸಮಾಚಾರ ಸಣ್ಣದಲ್ಲ

ಒಡಿಶಾ: ರೈಲು ಡಿಕ್ಕಿ ಮರಿ ಆನೆ ಸಾವು

ಭುವನೇಶ್ವರ: ಒಡಿಶಾದ ಸುಂದರಗಢ ಜಿಲ್ಲೆಯ ಅರಣ್ಯ ಸಮೀಪ ಹಾದು ಹೋಗಿರುವ 'ಹೌರಾ-ಮುಂಬೈ' ಮಾರ್ಗದ ರೈಲು ಹಳಿಯನ್ನು ದಾಟುತ್ತಿದ್ದ 23 ಆನೆಗಳ ಹಿಂಡಿಗೆ ಸರಕು ಸಾಗಣೆ ರೈಲು ಸೋಮವಾರ ಬೆಳಗ್ಗೆ 9.30ರಲ್ಲಿ ಡಿಕ್ಕಿ ಹೊಡೆದಿದ್ದರಿಂದ ಮರಿಯಾನೆಯೊಂದು ಸಾವಿಗೀಡಾಗಿದೆ. ರೂರ್ಕೆಲಾ ಅರಣ್ಯ ಪ್ರದೇಶದಲ್ಲಿ ಬಿಸ್ರಾದ ಬೊಂಡಮುಂಡಾ ಸಮೀಪ ಅಪಘಾತವಾಗಿದ್ದು, ಎರಡು ಹಿರಿಯ ಆನೆಗಳು ಗಾಯಗೊಂಡಿವೆ.

ಟೋಲ್ ವಿನಾಯಿತಿ: 5000 ಕೋಟಿ ಹೊರೆ?

ಮುಂಬೈ: ಮಹಾರಾಷ್ಟ್ರದಲ್ಲಿನ ಶಿವಸೇನೆ(ಶಿಂದೆ ಬಣ), ಬಿಜೆಪಿ ಮತ್ತು ಎನ್‌ಸಿಪಿ(ಅಜಿತ್ ಬಣ) ಮೈತ್ರಿಕೂಟ ಸರಕಾರ ಲಘು ವಾಹನಗಳು ಮುಂಬೈ ಮಹಾ ನಗರ ಪ್ರವೇಶಿಸಲು ಪಾವತಿಸಬೇಕಿದ್ದ ಟೋಲ್(ಪ್ರವೇಶ ಶುಲ್ಕ) ರದ್ದುಗೊಳಿಸಿರುವುದು ಮೂರ್ಖ ನಿರ್ಧಾರವಾಗಿದೆ. ಇದರಿಂದ ರಾಜ್ಯ ಸರಕಾರದ ಬೊಕ್ಕಸಕ್ಕೆ ಏನಿಲ್ಲವೆಂದರೂ 5000 ಕೋಟಿ ರು. ವರಮಾನ ಬರುವುದು ತಪ್ಪಲಿದೆ. ಸರಕಾರ ಖಜಾನೆಗೆ ಇದರಿಂದ ಭಾರೀ ಹೊರೆ ಬೀಳಲಿದೆ ಎಂದು ಶಿವಸೇನೆ(ಉದ್ಧವ್ ಬಣ) ಮಾಧ್ಯಮ ಮುಖವಾಣಿಯಾದ 'ಸಾಮ್ನಾ' ಪತ್ರಿಕೆಯ ಸಂಪಾದಕೀಯದಲ್ಲಿ ಖಂಡಿಸಿ ಬರಹ ಪ್ರಕಟಿಸಲಾಗಿದೆ.

ಕಿರಿ ವೈದ್ಯೆ ಹತ್ಯಾಚಾರ ಗಂಭೀರ ತನಿಖೆ: ಸಿಬಿಐ

ಕೋಲ್ಕತ್ತ: ಕೋಲ್ಕತ್ತ ನಗರದಲ್ಲಿನ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.8ರಂದು ರಾತ್ರಿ ಪಾಳಿಯಲ್ಲಿ ಅತ್ಯಾಚಾರ-ಹತ್ಯೆಗೊಳಗಾದ 31 ವರ್ಷದ ಕಿರಿಯ ವೈದ್ಯೆಯ ಪ್ರಕರಣದಲ್ಲಿ ತನಿಖೆ ಅತ್ಯಂತ ಗಂಭೀರವಾಗಿಯೇ ಸಾಗುತ್ತಿದೆ ಎಂದು ತನಿಖೆಯ ಹೊಣೆ ಹೊತ್ತಿರುವ ಕೇಂದ್ರ ತನಿಖಾ ದಳ(ಸಿಬಿಐ), ಸುಪ್ರೀಂಕೋರ್ಟ್‌ಗೆ ಮಂಗಳವಾರ ಹೇಳಿಕೆ ದಾಖಲಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾ.ಜೆ.ಬಿ.ಪರದಿವಾಲಾ, ನ್ಯಾ.ಮನೋಜ್ ಮಿಶ್ರಾ ಅವರುಗಳ ಪೀಠದೆದುರು ಸಿಬಿಐ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಆರೋಪಿ ಸಂಜಯ್ ರಾಯ್ ವಿರುದ್ಧ ಅ.7ರಂದು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಕೋರ್ಟ್ ವಿಚಾರಣೆಗೆ ತೆಗೆದುಕೊಂಡಿದೆ ಎಂದು ತನಿಖೆಯ ಸ್ಥಿತಿಗತಿಯ ಬಗ್ಗೆ ಅಧಿಕೃತ ಹೇಳಿಕೆ ದಾಖಲಿಸಿದರು.

ಪ್ರಿಯಾಂಕಾ ವಾದ್ರಾ ವಯನಾಡಲ್ಲಿ ಸ್ಪರ್ಧೆ

ದೆಹಲಿ: ನೆಹರು-ಗಾಂಧಿ ಕುಟುಂಬದ ಮತ್ತೊಂದು ಕುಡಿ, ರಾಜೀವ್ ಗಾಂಧಿ-ಸೋನಿಯಾ ಗಾಂಧಿ ದಂಪತಿ ಪುತ್ರಿ ಪ್ರಿಯಾಂಕಾ ವಾದ್ರಾ (52) ಚುನಾವಣಾ ರಾಜಕೀಯ ರಂಗಕ್ಕೆ ಪ್ರವೇಶಿಸಿದ್ದಾರೆ. ಸೋದರ ರಾಹುಲ್ ಗಾಂಧಿ ರಾಜೀನಾಮೆಯಿಂದ ತೆರವಾಗಿರುವ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ನ.13ರಂದು ನಡೆಯಲಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಪ್ರಿಯಾಂಕಾ ವಾದ್ರಾ ಕಣಕ್ಕಿಳಿಯಲಿದ್ದಾರೆ. ಇಲ್ಲಿ ಪ್ರಿಯಾಂಕಾ ಜಯಿಸಿದರೆ ಒಂದೇ ಅವಧಿಯಲ್ಲಿ ಗಾಂಧಿ ಕುಟುಂಬದ ಮೂವರು ಸಂಸದರು ಪ್ರತಿನಿಧಿಸಿದಂತಾಗಲಿದೆ. ಸದ್ಯ ಲೋಕಸಭೆಯಲ್ಲಿ ರಾಹುಲ್ ಗಾಂಧಿ, ರಾಜ್ಯಸಭೆಯಲ್ಲಿ ಸೋನಿಯಾ ಗಾಂಧಿ ಸದಸ್ಯರಾಗಿದ್ದಾರೆ.

ಮಣಿಪುರ ಶಾಸಕರ ಸಭೆ

ದೆಹಲಿ: ಜನಾಂಗೀಯ ಸಂಘರ್ಷಕ್ಕೆ ಒಳಗಾಗಿದ್ದ ಮಣಿಪುರ ರಾಜ್ಯದಲ್ಲಿ ಶಾಶ್ವತ ಶಾಂತಿ ನೆಲೆಸುವಂತೆ ಮಾಡುವ ಸಂಬಂಧ ಕೇಂದ್ರ ಗೃಹ ಸಚಿವಾಲಯದ ಉಸ್ತುವಾರಿಯಲ್ಲಿ ಮಂಗಳವಾರ ದೆಹಲಿಯಲ್ಲಿ ಮಣಿಪುರದ ಶಾಸಕರು ಮಹತ್ವದ ಸಭೆ ನಡೆಸಿದ್ದಾರೆ. ಮುಖ್ಯವಾಗಿ ನಾಗಾ ಸಮುದಾಯದ ಮೂವರು ಶಾಸಕರು, ಮೈಥೇಯಿ ಮತ್ತು ಕುಕಿ ಜನಾಂಗದ ಶಾಸಕರು ಸಭೆಯಲ್ಲಿ ಭಾಗಿಯಾಗಿ ರಾಜ್ಯದ ಪ್ರಗತಿ, ಶಾಂತಿ, ಕಾನೂನು-ಸುವ್ಯವಸ್ಥೆ ಮತ್ತಿತರ ವಿಚಾರಗಳನ್ನು ಚರ್ಚಿಸಿದರು. ಮುಖ್ಯವಾಗಿ ನಾಗಾ, ಕುಕಿ, ಮೈಥೇಯಿ ಸಮುದಾಯಗಳ ನಡುವಿನ ವೈಮನಸ್ಯ, ತಪ್ಪು ತಿಳಿವಳಿಕೆ ದೂರವಾಗಿಸುವುದು, ಆ ಮೂಲಕ ಉತ್ತಮ ಸಹಜೀವನಕ್ಕೆ ದಾರಿ ಮಾಡಿಕೊಡುವುದೇ ಕೇಂದ್ರ ಸರಕಾರ ಆಯೋಜಿಸಿದ್ದ ಈ ಸಭೆಯ ಉದ್ದೇಶವಾಗಿತ್ತು. ಮಣಿಪುರ ವಿಧಾನಸಭೆ ಸ್ಪೀಕರ್ ಥೋಕ್ಚೋಮ್ ಸತ್ಯಬ್ರತಸಿಂಗ್, ಸಚಿವರಾದ ಕುಕಿ ಸಮುದಾಯದ ಲೆಟ್ಪಾವ್ ಹೊಕಿಪ್ ಮತ್ತು ನೇಮ್ಚಾ ಕಿಪ್ಗೆನ್, ಅಲ್ಲದೇ, ತೊಂಗ್‌ಬ್ರಾಮ್ ರೊಬಿಂದ್ರೊ, ಬಸಂತಕುಮಾರ್ ಸಿಂಗ್, ನಾಗಾ ಸಮುದಾಯದ ಶಾಸಕರಾದ ರಾಮ್ ಮುಯಿವಾ, ಅವಾಂಗ್‌ಬೊ ನ್ಯೂಮಾಯಿ, ಎಲ್.ಡಿಖೋ ಮತ್ತಿತರರು ಭಾಗಿಯಾಗಿದ್ದರು. ಸಭೆಯಲ್ಲಿ ಕುಕಿ ಸಮುದಾಯದವರು, ಪ್ರತ್ಯೇಕ ಆಡಳಿತದ ಬೇಡಿಕೆ ಇಟ್ಟರು ಎನ್ನಲಾಗಿದೆ. ಎ.ಕೆ.ಮಿಶ್ರಾ ಅವರ ನೇತೃತ್ವದಲ್ಲಿ ಗೃಹ ಸಚಿವಾಲಯದ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

{ ಧರ್ಮೇಂದ್ರ ಪ್ರಧಾನ್ } ಕೇಂದ್ರ ಶಿಕ್ಷಣ ಸಚಿವ

ದೇಶದಲ್ಲಿ ಆರೋಗ್ಯ, ಕೃಷಿ, ನಗರಗಳ ಸುಸ್ಥಿರತೆ ಸುಧಾರಣೆ ಉದ್ದೇಶಕ್ಕಾಗಿ ಕೃತಕ ಬುದ್ಧಿಮತ್ತೆ(ಎಐ) ಆಧರಿಸಿದ ನಾವೀನ್ಯತೆಯ 3 ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಉದ್ಯಮಗಳ ಪಾಲುದಾರರು, ಸ್ಟಾರ್ಟ್‌ಅಪ್‌ಗಳ ಜತೆಗೂಡಿ ದೇಶದ ಉನ್ನತ ಶಿಕ್ಷಣ ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಕೇಂದ್ರಗಳು ನಡೆಯಲಿವೆ. ಈ ಮೂರೂ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತರಲಿವೆ.

ಮಹಾರಾಷ್ಟ್ರ » 288 ಕ್ಷೇತ್ರ » ನ.20 » 1 ಹಂತ ಮತ

ಜಾರ್ಖಂಡ್ » 81 ಕ್ಷೇತ್ರ » ನ.13-20 » 2 ಹಂತ

ಮಹಾ, ಜಾರ್ಖಂಡ್‌ನಲ್ಲಿ ನ.13-20ಕ್ಕೆ ಚುನಾವಣೆ

ದೆಹಲಿ: ಭಾರೀ ನಿರೀಕ್ಷೆ, ಕಾತರ ಹುಟ್ಟುಹಾಕಿರುವ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳ ವಿಧಾನಸಭೆಗೆ ಚುನಾವಣೆ ದಿನಾಂಕವನ್ನು ಕೇಂದ್ರ ಚುನಾವಣಾ ಆಯೋಗ ಮಂಗಳವಾರ ಪ್ರಕಟಿಸಿದೆ. ಮಹಾರಾಷ್ಟ್ರದಲ್ಲಿ ಒಂದೇ ಹಂತದಲ್ಲಿ, ಜಾರ್ಖಂಡ್‌ನಲ್ಲಿ 2 ಹಂತಗಳಲ್ಲಿ ಮತದಾನಕ್ಕೆ ದಿನ ನಿಗದಿಯಾಗಿದೆ. ಜತೆಗೆ ಹಲವು ಲೋಕಸಭೆ, ವಿಧಾನಸಭೆ ಕ್ಷೇತ್ರಗಳಿಗೂ ಉಪ ಚುನಾವಣೆ ಘೋಷಣೆಯಾಗಿದೆ. ದೆಹಲಿಯ ವಿಜ್ಞಾನ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್, ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳಿಗೆ ನ.20ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. 81 ಕ್ಷೇತ್ರಗಳಿರುವ ಜಾರ್ಖಂಡ್ ವಿಧಾನಸಭೆಗೆ ನ.13 ಮತ್ತು ನ.20ರಂದು 2 ಹಂತಗಳಲ್ಲಿ ಮತದಾನವಾಗಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ನ.23ರಂದು ನಡೆದು ಫಲಿತಾಂಶ ಪ್ರಕಟ ವಾಗಲಿದೆ ಎಂದರು. ಕಾಂಗ್ರೆಸ್ ಮುಖಂಡ, ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಎರಡು ಲೋಕ ಸಭಾ ಕ್ಷೇತ್ರಗಳಲ್ಲಿಯೂ ಗೆಲುವು ಕಂಡ ಬಳಿಕ, ರಾಯ್‌ಬರೇಲಿ ಕ್ಷೇತ್ರದ ಸದಸ್ಯತ್ವ ಉಳಿಸಿಕೊಂಡು ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ರಾಜೀನಾಮೆ ಸಲ್ಲಿಸಿದ್ದರು. ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ನ.13ರಂದು ಉಪ ಚುನಾವಣೆ ನಡೆಯಲಿದೆ.

ಇದೇ ವೇಳೆ, ಮಹಾರಾಷ್ಟ್ರದ ನಾಂದೇಡ್ ಲೋಕಸಭಾ ಕ್ಷೇತ್ರ ಹಾಗೂ ಉತ್ತರಾಖಂಡ್ ರಾಜ್ಯದ ಕೇದಾರ ವಿಧಾನಸಭಾ ಕ್ಷೇತ್ರಕ್ಕೆ ನ.20ರಂದು ಉಪ ಚುನಾವಣೆ ನಿಗದಿಯಾಗಿದೆ. ಹರಿಯಾಣ, ಜಮ್ಮು-ಕಾಶ್ಮೀರದಲ್ಲಿ ಯಾವುದೇ ಉಪ ಚುನಾವಣೆ ಇಲ್ಲ ಎಂದು ಆಯೋಗ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದೆ.



ಮಹಾರಾಷ್ಟ್ರ	ಜಾರ್ಖಂಡ್
9.63 ಕೋಟಿ ಒಟ್ಟು ಮತದಾರರ ಸಂಖ್ಯೆ	1.98 ಕೋಟಿ ಒಟ್ಟು ಮತದಾರರ ಸಂಖ್ಯೆ
4.66 ಕೋಟಿ ಮಹಿಳಾ ಮತದಾರರು	93.74 ಲಕ್ಷ ಮಹಿಳಾ ಮತದಾರರು
4.97 ಕೋಟಿ ಪುರುಷ ಮತದಾರರು	1.04 ಕೋಟಿ ಪುರುಷ ಮತದಾರರು
1.85 ಕೋಟಿ ಯುವ ಮತದಾರರು	15.36 ಲಕ್ಷ ಯುವ ಮತದಾರರು
20.93 ಲಕ್ಷ ಮೊದಲ ಬಾರಿ ಮತದಾನ	18.82 ಲಕ್ಷ ಮೊದಲ ಬಾರಿ ಮತದಾನ
ಅಕ್ಟೋಬರ್ 22 ಚುನಾವಣಾ ಅಧಿಸೂಚನೆ ಪ್ರಕಟ	18-22 ಅ. ಚುನಾವಣಾ ಅಧಿಸೂಚನೆ ಪ್ರಕಟ
ಅಕ್ಟೋಬರ್ 29 ನಾಮಪತ್ರ ಸಲ್ಲಿಕೆಗೆ ಕಡೆದಿನ	25-29 ಅ. ನಾಮಪತ್ರ ಸಲ್ಲಿಕೆಗೆ ಕಡೆದಿನ
ಅಕ್ಟೋಬರ್ 30 ನಾಮಪತ್ರ ಪರಿಶೀಲನೆ	28-30 ಅ. ನಾಮಪತ್ರ ಪರಿಶೀಲನೆ
ನವೆಂಬರ್ 4 ವಾಪಸ್‌ಗೆ ಕಡೆದಿನ	ಅ.30-ನ.4 ವಾಪಸ್‌ಗೆ ಕಡೆದಿನ
ನವೆಂಬರ್ 20 ಮತದಾನ	ನ.13-ನ.20 ಮತದಾನ

ಫಲಿತಾಂಶ » ನವೆಂಬರ್ 23

ಟಿವಿಗಳ ಟ್ರೆಂಡ್ ಪ್ರಕಟಣೆ ನಾನ್‌ಸೆನ್ಸ್

ದೆಹಲಿ: ಮತ ಎಣಿಕೆ ದಿನ ಬೆಳಗ್ಗೆ 8 ಗಂಟೆ 5 ನಿಮಿಷ 10 ನಿಮಿಷಕ್ಕೆಲ್ಲಾ ಸುದ್ದಿವಾಹಿನಿಗಳು 'ಟ್ರೆಂಡ್' ಪ್ರಕಟಿಸುವುದು ಎಷ್ಟು ಸರಿ? ಎಂದು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ರಾಜೀವ್ ಕುಮಾರ್ ಬೇಸರದಿಂದಲೇ ಪ್ರಶ್ನೆ ಮಾಡಿದರು. 'ಎಕ್ಸಿಟ್ ಪೋಲ್'(ಮತದಾನೋತ್ತರ ಸಮೀಕ್ಷೆ)ಗಳು ಪೂರ್ಣ ವಿಫಲವಾಗಿರುವ, ಮತ ಎಣಿಕೆ ದಿನದ ಆರಂಭಿಕ ಟ್ರೆಂಡ್ ನಂತರದಲ್ಲಿ ದಿಢೀರ್ ಬದಲಾವಣೆ ಕಂಡ ಬಗ್ಗೆ ಸುದ್ದಿಗಾರರು ಪ್ರಶ್ನೆ ಮಾಡಿದ್ದಕ್ಕೆ, ಖಾರವಾಗಿಯೇ ಪ್ರತಿಕ್ರಿಯಿಸಿದ ಆಯುಕ್ತರು, ಸರಿಯಾದ ಅಂಕಿ ಅಂಶವೇ ಇಲ್ಲದೇ, ಗೆಲುವು/ಮುನ್ನಡೆಯ ಟ್ರೆಂಡ್ ಪ್ರಕಟಿಸುವುದು ನಿಜಕ್ಕೂ 'ನಾನ್‌ಸೆನ್ಸ್' ಕ್ರಮವಾಗಿದೆ ಎಂದು ಕಿಡಿಕಾರಿದರು.

ವಾಸ್ತವದಲ್ಲಿ ಮತ ಎಣಿಕೆ ದಿನ ಬೆಳಗ್ಗೆ 8 ಗಂಟೆಗೆಲ್ಲಾ ಮತ ಎಣಿಕೆ ಆರಂಭಗೊಳ್ಳುವುದಿಲ್ಲ. ಮತ ಎಣಿಕೆಗೆ ಸಂಬಂಧಿಸಿದ ಸಿದ್ಧತೆಗಳು ಬೆಳಗ್ಗೆ 8 ಗಂಟೆಗೆ ಆರಂಭಗೊಂಡು ನಿಜವಾದ ಮತ ಎಣಿಕೆ ಬೆಳಗ್ಗೆ 8.30ರ ವೇಳೆಗೆ ಶುರುವಾಗುತ್ತದೆ. ಬೆಳಗ್ಗೆ 9.30 ವೇಳೆಗಾದರೆ ಫಲಿತಾಂಶದ ಟ್ರೆಂಡ್ ತಿಳಿದುಬರುತ್ತದೆ. ಅದನ್ನು ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಲಾಗುತ್ತದೆ. ಆದರೆ, ಅದಕ್ಕೂ ಮುನ್ನವೇ ಸುದ್ದಿವಾಹಿನಿಗಳು ಪೈಪೋಟಿಯಿಂದ ಟ್ರೆಂಡ್ ಪ್ರಕಟಿಸುವುದು ತಪ್ಪು ಮಾಹಿತಿ ಆಗಿರುತ್ತದೆ. ಜತೆಗೆ ರಾಜಕೀಯ ಪಕ್ಷಗಳನ್ನೂ, ರಾಜಕೀಯ ಆಸಕ್ತ ಜನರನ್ನು ತಪ್ಪು ದಾರಿಗೆ ಎಳೆದಂತೆ ಆಗುತ್ತದೆ ಎಂದು ಹೇಳಿದರು. ಕಳೆದ ಕೆಲವು ಚುನಾವಣೆಗಳಿಂದ ಎಕ್ಸಿಟ್ ಪೋಲ್ (ಮತದಾನೋತ್ತರ ಸಮೀಕ್ಷೆ)ಗಳು ಉಲ್ಟಾ ಆಗಿರುವುದು ಕಾಣಬರುತ್ತಿದೆ. ಈ ಕುರಿತ ಪ್ರಶ್ನೆಗೆ, 'ಕಡೆ ಹಂತದ ಮತದಾನ ಮುಕ್ತಾಯವಾದ ಮರುಕ್ಷಣವೇ ಮತದಾನೋತ್ತರ ಸಮೀಕ್ಷೆಗಳನ್ನು ಪ್ರಕಟಿಸುವುದೇ ಪ್ರಶ್ನಾರ್ಹ. 2-3 ಚುನಾವಣೆಗಳನ್ನು ಉದಾಹರಣೆಯಾಗಿ ನೋಡುವುದಾದರೆ, ಮೊದಲಿಗೆ ಎಕ್ಸಿಟ್ ಪೋಲ್ ಪ್ರಕಟವಾಗುತ್ತದೆ, ಅಲ್ಲೇ ಒಂದು ಬಗೆಯ 'ಟ್ರೆಂಡ್' ರೂಪಿತವಾಗುತ್ತದೆ. ಅದನ್ನು ನಮ್ಮಿಂದ ನಿಯಂತ್ರಿಸಲಾಗದು. ಮಾಧ್ಯಮಗಳೇ ಆತ್ಮಾವಲೋಕನ ನಡೆಸಿ, ಸ್ವಯಂ ನಿಯಂತ್ರಣ ವಿಧಿಸಿಕೊಳ್ಳಬೇಕಿದೆ ಎಂದರು. ಮಾಧ್ಯಮಗಳು ಎಲ್ಲೆಲ್ಲಿ ಎಂದು ಸಮೀಕ್ಷೆ ನಡೆಸಲು ಸಾಧ್ಯ? ಅದೊಂದು ಮಾದರಿ ಸಮೀಕ್ಷೆ ಆಗಿರಬಹುದು. ಅಷ್ಟರಿಂದಲೇ ಫಲಿತಾಂಶ ಹೇಗೆ ಅರಿಯಲು ಸಾಧ್ಯ? ಎಂದು ಪ್ರಶ್ನಿಸಿದರು.

ಭಾರತ ವಿರುದ್ಧ ಟ್ರುಡೊ ಜಿದ್ದು

- ಉಭಯ ದೇಶಗಳ ದಶಕಗಳ ನಂಟು ಪೂರ್ಣ ಹಾಳು
- ಈಗ ಭಾರತ ವಿರುದ್ಧ ಆರೋಪಕ್ಕಿಳಿದ ಕೆನಡಾ ಪೊಲೀಸ್
- ಸಿದ್ದಿಕಿ ಕೊಲೆಯಲ್ಲಿ ಬಿಷ್ಣೋಯ್‌ಗೆ ಅಧಿಕಾರಿಗಳ ಸಾಥ್

ಬಿಷ್ಣೋಯ್

ಟೊರಂಟೊ/ದೆಹಲಿ: ಖಲಿಸ್ತಾನ್ ಬೆಂಬಲಿಗ, ಸಿಖ್ ತೀವ್ರಗಾಮಿ ಹರ್ದೀಪ್ ಸಿಂಗ್ ನಿಜ್ಜರ್ 2023ರಲ್ಲಿ ಕೊಲೆಯಾದ ಬಳಿಕ ಅದನ್ನೇ ನೆಪವಾಗಿಸಿಕೊಂಡು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, ಭಾರತದ ವಿರುದ್ಧ ಜಿದ್ದಿಗೆ ಬಿದ್ದಂತೆ ಜಗಳ ಕಾಯುತ್ತಿದ್ದಾರೆ. ಖಲಿಸ್ತಾನಿ ಮತಗಳನ್ನು ಗಳಿಸುವುದಕ್ಕಾಗಿಯೇ ಹೀಗೆ ಸರಣಿ ಆರೋಪ ಮಾಡುತ್ತಿದ್ದಾರೆ ಎಂದು ಭಾರತ ತಿರುಗೇಟು ನೀಡಿದೆ.

ಕೆನಡಾ ಪ್ರಜೆ ನಿಜ್ಜರ್ ಕೊಲೆಯಲ್ಲಿ ಭಾರತೀಯ ಏಜೆಂಟ್‌ಗಳ ಕೈವಾಡವಿದೆ ಎಂದು ನೇರವಾಗಿಯೇ ಆರೋಪಿಸುವ ಮೂಲಕ ಭಾರತವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲೆತ್ನಿಸುತ್ತಲೇ ಇದ್ದಾರೆ. ಆರೋಪಕ್ಕೆ ನಿಖರ ಸಾಕ್ಷ್ಯ ಭಾರತ ಕೇಳುತ್ತಿದ್ದರೂ ಮಾಹಿತಿ, ಸಾಕ್ಷ್ಯ ಹಂಚಿಕೊಳ್ಳದ ಕೆನಡಾ, ಆರೋಪ ಮಾಡುವುದಕ್ಕಷ್ಟೇ ಸೀಮಿತ ವಾಗಿದೆ.

ಈಗ ಮತ್ತೊಂದು ಹೆಜ್ಜೆ ಮುಂದೆ ಹೋಗಿರುವ ಟ್ರುಡೊ ಸರಕಾರ, ನಿಜ್ಜರ್ ಕೊಲೆ ತನಿಖೆಯಲ್ಲಿ ಕೆನಡಾದಲ್ಲಿನ ಭಾರತೀಯ ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾರನ್ನು 'ಆಸಕ್ತಿಯ ವ್ಯಕ್ತಿ' ಎಂದು ಹೆಸರಿಸಿದೆ. ಪರಿಣಾಮ ದೆಹಲಿಯಲ್ಲಿದ್ದ ಕೆನಡಾದ 6 ರಾಜತಾಂತ್ರಿಕ ಅಧಿಕಾರಿಗಳಿಗೆ ಶನಿವಾರದೊಳಗೆ ದೇಶ ತೊರೆಯುವಂತೆ ಭಾರತ ಸರಕಾರ ಆದೇಶಿಸಿದೆ. ಈಗ, ಮಹಾರಾಷ್ಟ್ರದ ಮುಂಬೈನಲ್ಲಿ ಕೊಲೆಯಾದ ಮಾಜಿ ಸಚಿವ, ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ನಾಯಕ ಬಾಬಾ ಸಿದ್ದಿಕಿ ಪ್ರಕರಣದಲ್ಲೂ ಕೆನಡಾ ಪೊಲೀಸರು ಮೂಗು ತೂರಿಸುತ್ತಿದ್ದಾರೆ. ಬಾಬಾ ಸಿದ್ದಿಕಿ ಕೊಲೆಯ ಹೊಣೆಯನ್ನು ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೊತ್ತು ಕೊಂಡಿದೆ. ಬಿಷ್ಣೋಯ್ ಗ್ಯಾಂಗ್‌ಗೆ ಈ ಕೃತ್ಯದಲ್ಲಿ ಭಾರತೀಯ ಏಜೆಂಟ್‌ಗಳ ಪಾತ್ರವೂ ಇದೆ ಎಂದು ಕೆನಡಾ ಪೊಲೀಸ್ ಆರೋಪಿಸಿದ್ದಾರೆ. ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೋ, ಖಲಿಸ್ತಾನ್ ವಿರೋಧಿ ಹೋರಾಟಗಾರರೊಂದಿಗೆ ಭಾರತೀಯ ಗೂಢಚಾರ ಅಧಿಕಾರಿಗಳಿಗೆ ಸಂಬಂಧವಿದೆ ಎಂದು ಆರೋಪ ಮಾಡಿದ್ದರು. ಅದರ ಬೆನ್ನಲ್ಲೇ, ಭಾರತ ಸರಕಾರದ ಏಜೆಂಟರು ನುರಿತ ಅಪರಾಧಿಗಳನ್ನು (ಬಿಷ್ಣೋಯ್ ಗ್ಯಾಂಗ್) ತಮ್ಮ ಕಾರ್ಯಕ್ಕೆ ಬಳಸಿಕೊಳ್ಳುತ್ತಿದ್ದಾರೆ ಎಂದು ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್ ಆರೋಪ ಮಾಡಿದೆ. ನಿಜ್ಜರ್ ಕೊಲೆಯಲ್ಲಿ ಭಾರತದ ಏಜೆಂಟರು, ಬಿಷ್ಣೋಯ್ ಗ್ಯಾಂಗ್ ಕೈವಾಡ ತಳ್ಳಿ ಹಾಕುವಂತಿಲ್ಲ ಎಂದು ಕೆನಡಾ ಪೊಲೀಸ್ ಕಮಿಷನರ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

ದಾಳಿಗೆ ಕ್ರಿಮಿನಲ್ಸ್ ಬಳಕೆ: ಟ್ರುಡೊ

ಒಟ್ಟಾವೊ: ಭಾರತ ದೆಹಲಿಯಲ್ಲಿನ ಕೆನಡಾ ರಾಜತಾಂತ್ರಿಕರನ್ನು ಉಚ್ಚಾಟಿಸಿದ ನಂತರ, ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಮರಳಿ ಆರೋಪ ಮಾಡಲಾರಂಭಿಸಿದ್ದಾರೆ. ಕೆನಡಾ ಪ್ರಜೆಗಳ ಮೇಲೆ ದಾಳಿಗೆ ಮತ್ತು ಕೆನಡಾದಲ್ಲಿನ ಭಾರತೀಯರಿಗೆ ಅಸುರಕ್ಷಿತ ಭಾವ ಮೂಡಿಸಲು, ಕೆನಡಾ ನೆಲದಲ್ಲಿ ಹೆಚ್ಚಿನ ಹಿಂಸಾಚಾರ, ಕೊಲೆಗಳನ್ನು ಮಾಡಿಸಲು ಭಾರತ ರಾಜತಾಂತ್ರಿಕರು ಮತ್ತು ಸಂಘಟಿತ ಅಪರಾಧ ಕ್ಷೇತ್ರದವರನ್ನು ಬಳಸುವ ಮೂಲಕ ದೊಡ್ಡ ತಪ್ಪು ಮಾಡುತ್ತಿದೆ ಎಂದಿದ್ದಾರೆ. ಭಾರತ ಸರಕಾರದೊಂದಿಗೆ ನಮ್ಮ ಆತಂಕ ಹಂಚಿಕೊಂಡಿದ್ದೇವೆ. ನಮ್ಮೊಂದಿಗೆ ಕೆಲಸ ಮಾಡುವಂತೆ ಕೇಳಿದ್ದೇವೆ. ಆದರೆ ಭಾರತ ನಮ್ಮ ವಿನಂತಿಗಳನ್ನು ನಿರಾಕರಿಸಿದೆ. ಹಾಗಾಗಿಯೇ ಕೆನಡಾ ಅಧಿಕಾರಿಗಳು 'ರಾಯಲ್ ಕೆನಡಿಯನ್ ಮೌಂಟೆಡ್ ಪೊಲೀಸ್' ಕಲೆಹಾಕಿರುವ ಪುರಾವೆಗಳನ್ನು ಭಾರತದ ಅಧಿಕಾರಿಗಳ ಜತೆ ಹಂಚಿಕೊಂಡಿದ್ದಾರೆ. ಅದರಲ್ಲಿ ಭಾರತ ಸರಕಾರದ ಆರು ಏಜೆಂಟರು ನಿಜ್ಜರ್ ಕೊಲೆ ಪ್ರಕರಣದಲ್ಲಿ ಆಸಕ್ತಿಯ ವ್ಯಕ್ತಿಗಳು ಎಂದು ಹೆಸರಿಸಲಾಗಿದೆ ಎಂದು ಟ್ರುಡೊ ಹೇಳಿದ್ದಾರೆ.

ರಾಜಕೀಯ ಲಾಭಕ್ಕಾಗಿ ಟ್ರುಡೊ ಆರೋಪ: ಭಾರತ ಆಕ್ರೋಶ

ಕೆನಡಾದಲ್ಲಿ ಚುನಾವಣೆ ಸಮೀಪಿಸಿರುವುದರಿಂದ ಖಲಿಸ್ತಾನಿ ಬೆಂಬಲಿಗರ ಮತಗಳನ್ನು ಗಳಿಸುವುದಕ್ಕಾಗಿಯೇ ಜಸ್ಟಿನ್ ಟ್ರುಡೊ, ಭಾರತ ಸರಕಾರದ ವಿರುದ್ಧ ಮತ್ತೆ ಆರೋಪ ಮುಂದುವರಿಸಿದ್ದಾರೆ. ನಿಷೇಧಿತ ಸಿಖ್ ಸಂಘಟನೆ ಪರ ವಕೀಲರ ಹೇಳಿಕೆಗಳನ್ನು ಭಾರತ ಸರಕಾರದ ವಿರುದ್ಧ ವಿದೇಶಿ ಹಸ್ತಕ್ಷೇಪ ಆಯೋಗದ ಬಳಿ ದೋಷಾರೋಪಣೆ ಮಾಡಲು ಬಳಸುತ್ತಿದ್ದಾರೆ. ಪ್ರಧಾನಿ ಜಸ್ಟಿನ್ ಟ್ರುಡೊ ಅ.16 ರಂದು ಆಯೋಗದೆದುರು ಹಾಜರಾಗಲು ನಿರ್ಧರಿಸಿದ್ದಾರೆ. ಇದು ಏಕಪಕ್ಷೀಯ ವಿಚಾರಣೆಯಾಗಿರಲಿದೆ. ಭಾರತ ಸರಕಾರವನ್ನು ದೂಷಿಸುವುದೇ ಈ ಪ್ರಯತ್ನದ ಉದ್ದೇಶವಾಗಿದೆ ಎಂದು ಭಾರತದ ಉನ್ನತ ಭದ್ರತಾ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದ್ದಾರೆ. ಈ ಮಧ್ಯೆ, ಕೆನಡಾದಲ್ಲಿನ ಭಾರತದ ಹೈಕಮಿಷನರ್ ಸಂಜಯ್ ಕುಮಾರ್ ವರ್ಮಾ ಜತೆಗೆ ಭಾರತೀಯ ರಾಜತಾಂತ್ರಿಕರೆಲ್ಲರೂ ಅ.19ರೊಳಗೆ ಭಾರತಕ್ಕೆ ಮರಳಲಿದ್ದಾರೆ. ಅವರನ್ನು ಟ್ರುಡೊ ಸರಕಾರದ ಬೆಂಬಲ ಪಡೆದಿರುವ ಖಲಿಸ್ತಾನಿ ಉಗ್ರರು ಹಿಂಬಾಲಿಸುತ್ತಾ ಕಿರುಕುಳ ನೀಡುತ್ತಿದ್ದಾರೆ. ಶನಿವಾರ ವ್ಯಾಂಕೋವರ್‌ನಲ್ಲಿ ಖಲಿಸ್ತಾನಿಗಳು ವರ್ಮಾ ಪ್ರತಿಕೃತಿಗೆ ಗುಂಡಿಕ್ಕಿ ಬಳಿಕ ಸುಟ್ಟುಹಾಕಿದ್ದಾರೆ. ಆ ಮೂಲಕ ವರ್ಮಾಗೆ ಜೀವಬೆದರಿಕೆ ಒಡ್ಡಿದ್ದಾರೆ. ವರ್ಮಾ ತಲೆ ಮೇಲೆ ಖಲಿಸ್ತಾನಿಗಳು 5 ಲಕ್ಷ ಕೆನಡಾ ಡಾಲರ್ ಬಹುಮಾನವನ್ನೂ ಘೋಷಿಸಿದ್ದಾರೆ. ಜಪಾನ್, ಸುಡಾನ್, ಇಟಲಿ, ಟರ್ಕಿ, ವಿಯೆಟ್ನಾಂ, ಚೀನಾದಲ್ಲಿ ಸೇವೆ ಸಲ್ಲಿಸಿರುವ ವರ್ಮಾ 36 ವರ್ಷಗಳ ಶ್ರೇಷ್ಠ ವೃತ್ತಿಜೀವನ ನಡೆಸಿದವರು. ಭಾರತದ ಹಿರಿಯ ರಾಜತಾಂತ್ರಿಕ ಅಧಿಕಾರಿ. ಅಂತಹವರ ವಿರುದ್ಧವೇ ಕೆನಡಾ ಪ್ರಧಾನಿ ಟ್ರುಡೊ, ರಾಜಕೀಯ ಲಾಭಕ್ಕಾಗಿ ವೃಥಾ ಆರೋಪಿಸುತ್ತಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಪ್ರತಿಕ್ರಿಯಿಸಿದೆ.

ಬಿಷ್ಣೋಯ್ ಸಮಾಜದ ಕ್ಷಮೆ ಕೇಳಿ ಸಲ್ಮಾನ್‌ಗೆ ಮಾಜಿ ಸಂಸದ ಸಲಹೆ

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ವರ್ಷಗಳ ಹಿಂದೆ 'ಕೃಷ್ಣಮೃಗ ಬೇಟೆ' ನಡೆಸಿದ ಪ್ರಕರಣದಲ್ಲಿ ಬಿಷ್ಣೋಯ್ ಸಮುದಾಯದ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಹಾಗಾಗಿ, ಆ ಸಮುದಾಯದ ಕ್ಷಮೆ ಕೇಳಿದರೆ ವಿವಾದ ಅಂತ್ಯವಾಗಬಹುದು.



ಸಲ್ಮಾನ್ ಕ್ಷಮೆ ಕೇಳಿ ಪ್ರಕರಣ ಕೊನೆಗೊಳಿಸುವುದು ಒಳಿತು ಎಂದು ಬಿಜೆಪಿ ನಾಯಕ ಮಾಜಿ ಸಂಸದ ಹರನಾಥ್ ಸಿಂಗ್ ಯಾದವ್ ಸಲಹೆ ನೀಡಿದ್ದಾರೆ. ಸಲ್ಮಾನ್ ಖಾನ್ ಮತ್ತು ಕೃಷ್ಣಮೃಗದ ಚಿತ್ರಗಳೊಟ್ಟಿಗೆ 'ಎಕ್ಸ್' ಸಂದೇಶ ರವಾನಿಸಿರುವ ಯಾದವ್, 'ಪ್ರಿಯ ಸಲ್ಮಾನ್ ಖಾನ್, ಬಿಷ್ಣೋಯ್ ಸಮುದಾಯದವರು ಕೃಷ್ಣಮೃಗಗಳನ್ನು ದೇವರ ಅವತಾರವೆಂದೇ ಪೂಜಿಸುತ್ತಾರೆ. ಆದರೆ, ನೀವು ಅಂತಹ ಜೀವಿಯನ್ನೇ ಬೇಟೆಯಾಡಿ ಕೊಂದು ಬೇಯಿಸಿ ತಿಂದಿದ್ದೀರಿ. ಇದು ಬಿಷ್ಣೋಯ್ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ. ಇದರಿಂದಾಗಿ ಬಿಷ್ಣೋಯ್ ಸಮುದಾಯ ನಿಮ್ಮ ಮೇಲೆ ವರ್ಷಗಳಿಂದ ಸಿಟ್ಟು ಕಾರುತ್ತಿದೆ, ದ್ವೇಷ ಸಾಧಿಸುತ್ತಿದೆ. ಮನುಷ್ಯರು ತಪ್ಪು ಮಾಡುತ್ತಾರೆ. ಅದು ಸಹಜ. ಆದರೆ ನೀವು ದೊಡ್ಡ ನಟ. ದೇಶದ ಜನ ನಿಮ್ಮನ್ನು ತುಂಬಾ ಪ್ರೀತಿಸುತ್ತಾರೆ. ಬಿಷ್ಣೋಯ್ ಸಮುದಾಯದ ಭಾವನೆಗಳನ್ನು ಗೌರವಿಸಿರಿ. ನಿಮ್ಮ ಪ್ರಮಾದಕ್ಕೆ ಸಮುದಾಯದ ಕ್ಷಮೆ ಯಾಚಿಸಿ. ಇದುವೇ ನಿಮಗೆ ನನ್ನ ಸಲಹೆ' ಎಂದು ಬರೆದಿದ್ದಾರೆ. ಈ ಮಧ್ಯೆ, ಎನ್‌ಸಿಪಿ ಮುಖಂಡ, ಮಾಜಿ ಸಚಿವ ಬಾಬಾ ಸಿದ್ದಿಕಿ ಕೊಲೆಯಾದ ಬಳಿಕ ನಟ ಸಲ್ಮಾನ್ ಖಾನ್‌ಗೆ ಭದ್ರತೆ ಹೆಚ್ಚಿಸಲಾಗಿದೆ.

ಕ್ಷಮೆ ಕೇಳಿದರೆ ಬಿಟ್ಟುಬಿಡುವೆ

ಯಾದವ್ ಅವರ ಈ ಸಂದೇಶ ವೈರಲ್ ಆಗಿದೆ. ಅದರ ಬೆನ್ನಲ್ಲೇ 'ಕ್ಷಮೆ ಕೇಳು ಬಿಟ್ಟುಬಿಡುತ್ತೇನೆ' ಎಂದು ಗ್ಯಾಂಗ್‌ಸ್ಟರ್ ಲಾರೆನ್ಸ್ ಹೇಳಿದ್ದ ಹಳೆ ವಿಡಿಯೊ ಕೂಡಾ ಮರಳಿ ಜಾಲತಾಣದಲ್ಲಿ ಹರಿದಾಡುತ್ತಿದೆ. 'ಎಬಿಪಿ ನ್ಯೂಸ್' ವರದಿಗಾರರೊಂದಿಗೆ ವಿಡಿಯೋ ಕರೆಯಲ್ಲಿ ಮಾತನಾಡಿದ್ದ ಲಾರೆನ್ಸ್ ಬಿಷ್ಣೋಯ್, 'ನಮ್ಮ ಗುರಿ ಒಂದೇ, ಅದು ಸಲ್ಮಾನ್ ಖಾನ್ ಕೊಲ್ಲುವುದು. ಒಂದು ವೇಳೆ ಆತ ನಮ್ಮ ಸಮುದಾಯದ ದೇಗುಲಕ್ಕೆ ಭೇಟಿ ನೀಡಿ ದೇವರ ಮುಂದೆ ಪ್ರಾಮಾಣಿಕವಾಗಿ ಕ್ಷಮೆ ಕೋರಿದರೆ ಆತನನ್ನು ಕ್ಷಮಿಸಿ ಬಿಟ್ಟುಬಿಡುತ್ತೇವೆ' ಎಂದು ಹೇಳಿದ್ದ. ಅದೇ ವಿಡಿಯೋ ಈಗ ಮತ್ತೆ ವೈರಲ್ ಆಗಿದೆ. 'ಕ್ಷಮೆ ಯಾಚಿಸುವುದಿದ್ದರೆ ಸಲ್ಮಾನ್ ಖಾನ್ ಮೊದಲು ಬಿಷ್ಣೋಯ್ ಸಮಾಜದೆದುರು ಪ್ರಸ್ತಾಪ ಸಲ್ಲಿಸಬೇಕು. ಬಿಕಾನೇರ್ ಬಳಿ ಇರುವ ಸಮಾಜದ ದೇವಸ್ಥಾನಕ್ಕೆ ಬಂದು ಕ್ಷಮೆ ಕೇಳಬೇಕು. ಮುಂದೆ ಇಂಥ ತಪ್ಪು ಮಾಡುವುದಿಲ್ಲ, ವನ್ಯಜೀವಿಗಳ ರಕ್ಷಣೆ-ಪರಿಸರ ಸಂರಕ್ಷಣೆಗೆ ಸದಾ ಶ್ರಮಿಸುವೆ ಎಂದೂ ಪ್ರತಿಜ್ಞೆ ಮಾಡಬೇಕು. ಹಾಗೆ ಮಾಡಿದರೆ, ಅವನನ್ನು ಕ್ಷಮಿಸಲು ಬಿಷ್ಣೋಯ್ ಸಮಾಜ ಪರಿಗಣಿಸಲಿದೆ' ಎಂದು ಲಾರೆನ್ಸ್ ಹೇಳಿದ್ದಾನೆ.

ಜೈಶಂಕರ್, ಶೆಹಬಾಜ್ ಹಸ್ತಲಾಘವ

ಇಸ್ಲಾಮಾಬಾದ್: ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆಯುತ್ತಿರುವ ಎಸ್‌ಸಿಒ ಶೃಂಗ ಸಭೆಯಲ್ಲಿ ಭಾಗವಹಿಸಲು ತೆರಳಿದ್ದಾರೆ. ಸಚಿವ ಜೈಶಂಕರ್ ಅವರಿದ್ದ ವಿಮಾನ ಪಾಕ್ ರಾಜಧಾನಿ ನಗರದ ಹೊರವಲಯದಲ್ಲಿನ ನೂರ್‌ಖಾನ್ ವಾಯುನೆಲೆಯಲ್ಲಿ ಮಂಗಳ ವಾರ ಮಧ್ಯಾಹ್ನ 3.30ಕ್ಕೆ ಇಳಿಯಿತು. ಜೈಶಂಕರ್ ಅವರನ್ನು ಪಾಕ್ ಆಡಳಿತದ ಹಿರಿಯ ಅಧಿಕಾರಿಗಳು ಸ್ವಾಗತಿಸಿದರು. ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ನಾಯಕರಿಗೆಂದೇ ಪಾಕ್ ಸರಕಾರ ಮಂಗಳವಾರ ರಾತ್ರಿ ಇಸ್ಲಾಮಾಬಾದ್‌ನಲ್ಲಿ ಆಯೋಜಿಸಿದ್ದ ಔತಣಕೂಟಕ್ಕೆ ಆಗಮಿಸಿದ ಸಚಿವ ಜೈಶಂಕರ್ ಅವರನ್ನು ಪ್ರಧಾನಿ ಶೆಹಬಾಜ್ ಷರೀಫ್ ಹಸ್ತಲಾಘವ ಮಾಡಿ ಬರಮಾಡಿಕೊಂಡರು. ಇಬ್ಬರ ನಡುವೆ ಚುಟುಕು ಕುಶಲೋಪರಿ ನಡೆಯಿತು ಎಂದು ತಿಳಿದುಬಂದಿದೆ. ಪಾಕ್‌ಗೆ ದಶಕದ ಬಳಿಕ ಭಾರತದ ವಿದೇಶಾಂಗ ಸಚಿವರು ಭೇಟಿ ನೀಡಿದ್ದು, ಬಹಳ ನಿರೀಕ್ಷೆ ಮತ್ತು ಕುತೂಹಲ ಹುಟ್ಟುಹಾಕಿದೆ.

ಸೈಬರ್ ಅಪರಾಧ ಸಮನ್ವಯ ಕೇಂದ್ರ: ನಟಿ ರಶ್ಮಿಕಾ ಮಂದಣ್ಣ ರಾಯಭಾರಿ!

ದೆಹಲಿ: 'ಡೀಪ್ ಫೇಕ್ ವಿಡಿಯೊ'ಗೆ ತುತ್ತಾಗಿ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದ ಖ್ಯಾತ ನಟಿ ರಶ್ಮಿಕಾ ಮಂದಣ್ಣ ಇದೀಗ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರಕ್ಕೆ 'ಪ್ರಚಾರ ರಾಯಭಾರಿ'ಯಾಗಿ (ಬ್ರಾಂಡ್ ಅಂಬಾಸಿಡರ್) ಆಗಿ ನೇಮಕಗೊಂಡಿದ್ದಾರೆ. ಈ ಬಗ್ಗೆ ಇನ್‌ಸ್ಟಾಗ್ರಾಂ ಪುಟದಲ್ಲಿ ಖುಷಿಯಿಂದ ವಿಚಾರ ಹಂಚಿಕೊಂಡಿರುವ ನಟಿ, 'ವರ್ಷಗಳ ಹಿಂದೆ ನನ್ನ ವಿಡಿಯೊ ದುರ್ಬಳಕೆ ಮಾಡಿಕೊಂಡು ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ಬಳಸಿ ದುಷ್ಕರ್ಮಿಗಳ ಡೀಪ್ ಫೇಕ್ ವಿಡಿಯೊ ಸೃಷ್ಟಿಸಿ ವೈರಲ್ ಆಗಿಸಿದ್ದರು. ಅದೊಂದು ಸೈಬರ್ ಕ್ರೈಂ ಕೃತ್ಯವಾಗಿತ್ತು. ನಂತರ ನಾನು ಸೈಬರ್ ಅಪರಾಧಗಳ ವಿರುದ್ಧ ಹೋರಾಡಬೇಕು. ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದು ಯೋಚಿಸಿದೆ. ಆ ನಿಮಿತ್ತ ಕಾರ್ಯಯೋಜನೆ ರೂಪಿಸಿದ್ದೆ. ಅಚ್ಚರಿ ಎಂಬಂತೆ ಈಗ ದೊಡ್ಡ ಅವಕಾಶವನ್ನೇ ಕೇಂದ್ರ ಸರಕಾರ ಒದಗಿಸಿಕೊಟ್ಟಿದೆ. ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದಡಿ 'ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ'ದ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕಗೊಂಡಿದ್ದೇನೆ. ಈ ವಿಚಾರ ಹಂಚಿಕೊಳ್ಳಲು ಸಂತಸವಾಗುತ್ತಿದೆ. ಸೈಬರ್ ಅಪರಾಧಿಗಳು ಅಮಾಯಕರನ್ನಷ್ಟೇ ಅಲ್ಲ, ಎಲ್ಲರನ್ನೂ ಗುರಿಯಾಗಿಸಿ ಕಷ್ಟಕ್ಕೀಡುಮಾಡುತ್ತಿದ್ದಾರೆ. ನಾವು ಎಚ್ಚರವಾಗಿರಬೇಕು. ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು ಮತ್ತು ಸೈಬರ್ ಅಪರಾಧಗಳ ವಿರುದ್ಧದ ಹೋರಾಟಕ್ಕೆ ಕೈಜೋಡಿಸಬೇಕು' ಎಂದು ಹೇಳಿದ್ದಾರೆ.

ನ.13ಕ್ಕೆ ಉ.ಪ್ರ. 9 ಕ್ಷೇತ್ರ ಉಪ ಚುನಾವಣೆ

ಲಖನೌ: ಉತ್ತರ ಪ್ರದೇಶದ 9 ವಿಧಾನಸಭಾ ಕ್ಷೇತ್ರಗಳಿಗೆ ಕೇಂದ್ರ ಚುನಾವಣಾ ಆಯೋಗ ನ.13ರಂದು ಉಪ ಚುನಾವಣೆ ನಡೆಸುವುದಾಗಿ ಪ್ರಕಟಿಸಿದೆ. ನ.23ರಂದು ಫಲಿತಾಂಶ ಹೊರಬೀಳಲಿದೆ ಎಂದು ಆಯೋಗ ಹೇಳಿದೆ. 9 ಅಸೆಂಬ್ಲಿ ಕ್ಷೇತ್ರಗಳಾದ ಕಟೆಹಾರಿ (ಅಂಬೇಡ್ಕರ್ ನಗರ), ಕರ್ಹಾಲ್ (ಮೈನ್‌ಪುರಿ), ಮೀರಾಪುರ (ಮುಜಾಫರ್‌ನಗರ), ಘಾಜಿಯಾಬಾದ್, ಮಜ್ವಾನ್ (ಮಿರ್ಜಾಪುರ), ಸಿಸಾಮಾವು (ಕಾನ್ಪುರ ನಗರ), ಖೈರ್ (ಅಲಿಗಢ), ಫುಲ್ಪುರ್ (ಪ್ರಯಾಗರಾಜ್) ಮತ್ತು ಕುಂದರ್ಕಿ(ಮೊರಾದಾಬಾದ್) ಉಪ ಚುನಾವಣೆ ನಡೆಯಲಿದೆ. ಪ್ರಸ್ತುತ ಈ ಸುತ್ತಿನ ಉಪಚುನಾವಣೆಯಿಂದ ಅಯೋಧ್ಯೆಯ ಮಿಲ್ಕಿಪುರ ವಿಧಾನಸಭಾ ಸ್ಥಾನವನ್ನು ಹೊರತುಪಡಿಸಲಾಗಿದೆ.

32 ಸಾವಿರ ಕೋಟಿ ರು.ಗಳ ಆರಂಭಿಕ ಒಪ್ಪಂದ | ಹೆಚ್ಚುವರಿ ಶಸ್ತ್ರಾಸ್ತ್ರ ಸೇರಿ 34,500 ಕೋಟಿ ರು.

ಅಮೆರಿಕದ ಬಲಿಷ್ಠ ಎಂಕ್ಯು-9ಬಿ 31 ಪ್ರಿಡೇಟರ್ ಡ್ರೋನ್ ಭಾರತ ಸೇನೆಗೆ

ದೆಹಲಿ: ಅಮೆರಿಕ ಸೇನೆ ಬಳಸುವ 'ಎಂಕ್ಯು-9ಬಿ ಪ್ರಿಡೇಟರ್' ಶ್ರೇಣಿಯ 31 ವಿಧ್ವಂಸಕ ಡ್ರೋನ್‌ಗಳ ಖರೀದಿಗೆ ಭಾರತ ಸರಕಾರ ಮುಂದಾಗಿದೆ.

ಭಾರತೀಯ ಸೇನೆಯ ಮೂರೂ ಪಡೆಗಳ ಸಾಮರ್ಥ್ಯ ವೃದ್ಧಿಗಾಗಿ ಈ ಅತ್ಯಧಿಕ ಶಕ್ತಿಶಾಲಿ ಡ್ರೋನ್‌ಗಳನ್ನು ಖರೀದಿಸಲು ಎನ್‌ಡಿಎ ಸರಕಾರ, ಅಮೆರಿಕದ ಜತೆ 32 ಸಾವಿರ ಕೋಟಿ ರು.ಗಳಷ್ಟು ದೊಡ್ಡ ಮೊತ್ತದ ಆರಂಭಿಕ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಡ್ರೋನ್‌ಗಳಲ್ಲಿ ಅಳವಡಿಸುವ ಹೆಚ್ಚುವರಿ ಸರ್ವಲೆನ್ಸ್ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳ ಖರೀದಿಯನ್ನೂ ಸೇರಿಸಿದರೆ ಒಟ್ಟಾರೆ ಒಪ್ಪಂದದ ಮೊತ್ತ 34,500 ಕೋಟಿ ರು.ಗಳಿಗೆ ಹೆಚ್ಚಳವಾಗಲಿದೆ ಎಂದು ರಕ್ಷಣಾ ಇಲಾಖೆ ಮೂಲಗಳು ತಿಳಿಸಿವೆ.

'ಜನರಲ್ ಆಟೊಮಿಕ್ಸ್ ಏರೊನಾಟಿಕಲ್ ಸಿಸ್ಟಮ್' ಸಂಸ್ಥೆ ತಯಾರಿಸುತ್ತಿರುವ ಎಂಕ್ಯು-9ಬಿ ಪ್ರಿಡೇಟರ್ ಶ್ರೇಣಿಯ 31 ಡ್ರೋನ್‌ಗಳನ್ನು ಭಾರತ ಖರೀದಿಸುತ್ತಿದೆ. ಇದರಲ್ಲಿ 15 ಡ್ರೋನ್‌ಗಳು ನೌಕಾಪಡೆ ಸೇರಲಿದ್ದರೆ, ಉಳಿದ 16 ಡ್ರೋನ್‌ಗಳಲ್ಲಿ ಸೇನೆಪಡೆಗೆ 8 ಮತ್ತು ವಾಯುಸೇನೆಗೆ 8 ಡ್ರೋನ್‌ಗಳನ್ನು ನಿಯೋಜಿಸಲಾಗುತ್ತದೆ ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಮೆರಿಕ ವಿದೇಶಿ ಮಾರಾಟ ನೀತಿಯಡಿ 31 ಡ್ರೋನ್‌ಗಳನ್ನು ಭಾರತಕ್ಕೆ ಮಾರಾಟ ಮಾಡಲು ಫೆಬ್ರುವರಿಯಲ್ಲೇ ಸಮ್ಮತಿಸಿದೆ. ಆಗ ಈ 31 ಡ್ರೋನ್‌ಗಳ ಮಾರಾಟ ಬೆಲೆ 399 ಕೋಟಿ ಡಾಲರ್‌ಗಳಷ್ಟಿತ್ತು. ಈ ಮಹತ್ವದ ರಕ್ಷಣಾ ಖರೀದಿ ಒಪ್ಪಂದ ಅ.31ರೊಳಗೆ ಪೂರ್ಣಗೊಳ್ಳಬೇಕಿದೆ. ಹಾಗಾಗಿ, ರಕ್ಷಣಾ ಖರೀದಿಗಳಿಗೆ ಸಂಬಂಧಿಸಿದ ಭಾರತ ಸರಕಾರದ ಸಚಿವ ಸಂಪುಟ ಸಮಿತಿಯೂ ಇತ್ತೀಚೆಗಷ್ಟೇ ಈ ಖರೀದಿ ಒಪ್ಪಂದಕ್ಕೆ ಅನುಮೋದನೆ ನೀಡಿದೆ.

ಡ್ರೋನ್ ಸಾಮರ್ಥ್ಯ-ವೈಶಿಷ್ಟ್ಯ

- ಬಲು ನಿಶ್ಶಬ್ದವಾಗಿ ಹಾರಾಟ ನಡೆಸುವ ಬಲುಶಕ್ತಿಶಾಲಿ ಡ್ರೋನ್
- ಗಂಟೆಗೆ 442 ಕಿಮೀ ವೇಗದಲ್ಲಿ ಹಾರಾಟ ನಡೆಸುವ ಸಾಮರ್ಥ್ಯ
- ಗರಿಷ್ಠ 50 ಸಾವಿರ ಅಡಿಗಳಷ್ಟು ಎತ್ತರದವರೆಗೂ ಸಾಗಬಲ್ಲದು
- ಇಂಧನ ಸಾಮರ್ಥ್ಯ ಪೂರ್ಣವಿದ್ದಾಗ ಗರಿಷ್ಠ 2 ಸಾವಿರ ಮೈಲು ಸಂಚಾರ
- ಹೆಚ್ಚುವರಿಯಾಗಿ ಗರಿಷ್ಠ 1700 ಕಿಲೊ ತೂಕ ಹೊರಬಲ್ಲ ಸಾಮರ್ಥ್ಯ
- 4 ಕ್ಷಿಪಣಿಗಳು ಮತ್ತು 450 ಕಿಲೊ ಬಾಂಬ್‌ಗಳ ಸಾಗಿಸುವಷ್ಟು ಶಕ್ತಿ
- ನಿರಂತರವಾಗಿ 35 ಗಂಟೆಗಳ ಕಾಲ ಆಕಾಶದಲ್ಲೇ ಇರಬಲ್ಲಷ್ಟು ಶಕ್ತಿಶಾಲಿ
- ಸ್ವಯಂಚಾಲಿತ ಟೇಕಾಫ್, ಲ್ಯಾಂಡಿಂಗ್ ಸಾಮರ್ಥ್ಯವಿದೆ
- ನಾಗರಿಕ ವಾಯು ಪ್ರದೇಶದಲ್ಲೂ ಸುರಕ್ಷಿತ ಹಾರಾಟ ಸಾಧ್ಯ
- ಭೂಮಿ, ಕಡಲ ಕಣ್ಗಾವಲು, ಜಲಾಂತರ್ಗಾಮಿ ನಾಶ ಸಾಮರ್ಥ್ಯ
- ಎಲೆಕ್ಟ್ರಾನಿಕ್ ವಾರ್, ವಿಶೇಷ ಸೇನಾ ಕಾರ್ಯಾಚರಣೆಗೆ ಸೂಕ್ತ

ಸಮಾಚಾರ ಸಣ್ಣದಲ್ಲ

ಪತ್ರಿಕೋದ್ಯಮ ತರಬೇತಿಗೆ ಅರ್ಜಿ

ರಾಯಚೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರಬೇಕು. ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರಬೇಕು. ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಆಸಕ್ತರು ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಗೆ ಭೇಟಿ ನೀಡಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ; ಲಿಂಗರಾಜ್ 9743892080, ರಮೇಶ ಜಾಲಹಳ್ಳಿ; 7349414054ಗೆ ಸಂಪರ್ಕಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

ರಾಯಚೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2024-25ನೇ ಸಾಲಿನಲ್ಲಿ ಬಿಎಸ್‌ಸಿ ನರ್ಸಿಂಗ್ ಮತ್ತು ಜಿ.ಎನ್.ಎಮ್ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅರ್ಜಿಗಳನ್ನು ಕಡ್ಡಾಯವಾಗಿ ಸೇವಾಸಿಂಧು ಆನ್‌ಲೈನ್ ಮೂಲಕ ಸಲ್ಲಿಸುವುದು. ವಿದ್ಯಾರ್ಥಿಗಳನ್ನು ಅನುದಾನದ ಲಭ್ಯತೆಯನುಸಾರ ಮೆರಿಟ್ ಅಧಾರದ ಮೇಲೆ ಆಯ್ಕೆ ಮಾಡಲಾಗುವುದು. ವಿದ್ಯಾರ್ಥಿಗಳು ಸದರಿ ಯೋಜನೆಯಡಿ ಉತ್ತೇಜನ ಮೊತ್ತವನ್ನು ಪಡೆಯಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ ಹೊಸ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್‌ಖಾತೆಯೊಂದಿಗೆ ಆಧಾರ್ ಸೀಡಿಂಗ್ ಹಾಗೂ ಎನ್.ಪಿ.ಸಿ.ಐ ಮ್ಯಾಪಿಂಗ್ ಆಗಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ವಿದ್ಯಾರ್ಥಿಯ ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.2.50 ಲಕ್ಷ ಮೀರಿರಬಾರದು. ಕೋರ್ಸ್ ಅವಧಿ-ಪೂರ್ಣವಧಿ ಹೊಂದಿರುವ ವಿದ್ಯಾರ್ಥಿಗಳು ಇದೇ 2024ರ ನವಂಬರ್ 10ರೊಳಗಾಗಿ ಸೇವಾಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸೇವಾ ಸಂಸ್ಥೆಗಳಿಂದ ಪ್ರಸ್ತಾವನೆಗೆ ಅರ್ಜಿ

ರಾಯಚೂರು: ಜಿಲ್ಲಾ ವಲಯದಲ್ಲಿ ವೃದ್ಧಾಶ್ರಮವನ್ನು ಪ್ರಾರಂಭಿಸಲು ಸರಕಾರದ ಆದೇಶ ಹೊರಡಿಸಲಾಗಿದ್ದು, ವೃದ್ಧಾಶ್ರಮವನ್ನು ಪ್ರಾರಂಭಿಸಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಂದ ಅರ್ಜಿ ನಮೂನೆಯೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ಇದೇ 2024ರ ಅ. 30ರ ಸಂಜೆ 5ಗಂಟೆಯೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಹತೆಗಳು ಷರತ್ತುಗಳು ಮತ್ತು ಇನ್ನಿತರೇ ಹೆಚ್ಚಿನ ಮಾಹಿತಿಗಾಗಿ ಕಚೇರಿಗೆ ಭೇಟಿ ಅಥವಾ ದೂರವಾಣಿ ಸಂಖ್ಯೆ: 08532-200992ಗೆ ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಪ್ರಸ್ತಾವನೆಗಳು ತಡವಾಗಿ ಬಂದಲ್ಲಿ ಯಾವುದೇ ಕಾರಣಕ್ಕೂ ಸ್ವೀಕರಿಸುವುದಿಲ್ಲ. ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚರಂಡಿ ನೀರು ರಸ್ತೆಗೆ ಸಂಚಾರಕ್ಕೆ ಅಡ್ಡಿ

ಮುದಗಲ್: ಪಟ್ಟಣ ಸಮೀಪದ ಕಾಚಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಅಡವಿಭಾವಿ ಗ್ರಾಮದಲ್ಲಿ ಚರಂಡಿ ನೀರು ರಸ್ತೆ ಮೇಲೆ ನಿಂತ

ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ಸಂಚಾರ ಮಾಡಲು ತುಂಬಾ ತೊಂದರೆಯಾಗಿದೆ ಎಂದು ಗ್ರಾಮಸ್ಥರು ದೂರಿದರು. ಅಡವಿಭಾವಿ ಗ್ರಾಮದಲ್ಲಿ ಚರಂಡಿ ನೀರು ಮುಂದೆ ಹೋಗದೆ ಇರುವದರಿಂದ ಮಹಿಳೆಯರಿಗೆ ಮಕ್ಕಳಿಗೆ ವೃದ್ದರಿಗೆ ರಾತ್ರಿ ವೇಳೆ ಸಂಚಾರ ಮಾಡಲು ತುಂಬಾ ತೊಂದರೆಯಾಗಿದೆ ಮತ್ತು ಚರಂಡಿ ನೀರು ಮಲಿನವಾಗಿ ಸೊಳ್ಳೆಗಳು ಹೆಚ್ಚಾಗಿ ಗ್ರಾಮದ ಜನರು ಅನೇಕ ರೋಗಗಳಿಗೆ ತುತ್ತಾಗುತ್ತಾರೆ ಚರಂಡಿ ಕೂಡ ತುಂಬಿ ಗಬ್ಬೆದು ನಾರುತ್ತಿದೆ ಈ ಸಮಸ್ಯೆ ಕುರಿತು ಕಾಚಾಪೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೆ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದರು.

{ಬಿ.ವೈ.ವಿಜಯೇಂದ್ರ} ರಾಜ್ಯಾಧ್ಯಕ್ಷ

ರಾಜ್ಯದಲ್ಲಿ ವ್ಯಾಪಕವಾದ ಹಗರಣಗಳು, ಭ್ರಷ್ಟಾಚಾರಗಳು ನಡೆಯುತ್ತಿವೆ. ವಾಲ್ಮೀಕಿ ನಿಗಮದಲ್ಲಿ ಕೋಟ್ಯಂತರ ರು. ಹಗರಣ ನಡೆದಿದೆ. ಮುಖ್ಯಮಂತ್ರಿಯೇ ಮುಡಾ ಹಗರಣದ ಆರೋಪ ಎದುರಿಸುತ್ತಿದ್ದಾರೆ. ಅದಲ್ಲದೆ ರಾಜ್ಯದ ಅಭಿವೃದ್ಧಿ ಕುಂಠಿತವಾಗಿದೆ. ಸರಕಾರ ಜನ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ.

ಭೂಮಿ ಪೂಜೆ ನೆರವೇರಿಸಿದ ಶಾಸಕ ರಾಘವೇಂದ್ರ ಹಿಟ್ನಾಳ ವಿಶ್ವಾಸ

ಮುಂದಿನ ಅವಧಿಗೂ ಸಿದ್ದರಾಮಯ್ಯರೇ ಸಿಎಂ

ಕೊಪ್ಪಳ: ಸಿಎಂ ಸಿದ್ದರಾಮಯ್ಯ ತಮ್ಮ 40 ವರ್ಷದ ರಾಜಕೀಯ ಜೀವನದಲ್ಲಿ ಒಂದೂ ಕಪ್ಪು ಚುಕ್ಕೆ, ಭ್ರಷ್ಟಾಚಾರ ಇಲ್ಲದಂತೆ ಆಡಳಿತ ನೀಡಿದ್ದಾರೆ. ಈ ಸರಕಾರದ ಪೂರ್ಣಾವಧಿ ವರೆಗೂ ಅವರೇ ಸಿಎಂ ಆಗುವುದಲ್ಲದೇ, ಮುಂದಿನ ಅವಧಿಗೂ ಅವರೇ ಮುಖ್ಯಮಂತ್ರಿ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ವಿಶ್ವಾಸ ವ್ಯಕ್ತಪಡಿಸಿದರು.

ತಾಲೂಕಿನ ಗುಡಿಗೇರಿ, ಕವಲೂರು, ಮುರ್ಲಾಪುರ, ಘಟ್ಟರಡ್ಡಿಹಾಳ, ಬೆಳಗಟ್ಟಿ, ಹಟ್ಟಿ, ಹೈದರ್ ನಗರ, ಕೇಸ್ಲಾಪುರ, ರಘುನಾಥನಹಳ್ಳಿ, ಅಳವಂಡಿ ಹಾಗೂ ಕಂಪ್ಲಿ ಗ್ರಾಮದಲ್ಲಿ ಸುಮಾರು 48.18 ಕೋಟಿ ರು. ವೆಚ್ಚದಲ್ಲಿ ವಿವಿಧ ಕಾಮಗಾರಿಗೆ ಚಾಲನೆ ನೀಡಿ ಮಂಗಳವಾರ ಮಾತನಾಡಿದರು.

ಸಿದ್ದರಾಮಯ್ಯ ಈ ರಾಜ್ಯ ಕಂಡ ಧೀಮಂತ ನಾಯಕ. ಮುಡಾ ಹಗರಣದಲ್ಲಿ ಅವರದ್ದು ಯಾವುದೇ ಪಾತ್ರ ಇಲ್ಲ. ವಿರೋಧ ಪಕ್ಷಗಳು ಅನಗತ್ಯವಾಗಿ ಅವರ ಹೆಸರು ಎಳೆದು ತಂದು, ರಾಜಕೀಯ ಮಾಡುತ್ತಿದ್ದಾರೆ. ಸಿಂಗಟಾಲೂರು ಏತ ನೀರಾವರಿ ಯೋಜನೆ ಕುರಿತು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಜತೆ ಮಾತನಾಡಿದ್ದೇನೆ. ಅನುದಾಮ ಮಂಜೂರು ಮಾಡುವ ಭರವಸೆ ನೀಡಿದ್ದಾರೆ. ಯೋಜನೆ ಜಾರಿಯಾದರೆ 16,523 ಹೆಕ್ಟರ್ ಪ್ರದೇಶ ನೀರಾವರಿ ಆಗಲಿದೆ.ಈ ಯೋಜನೆ ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು. ಎಲ್ಲ ರಸ್ತೆ ಅಭಿವೃದ್ಧಿ: ಈ ಬಾರಿ ಹೆಚ್ಚು ಮಳೆ ಆಗಿದ್ದರಿಂದ ಕೊಪ್ಪಳ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಸಾಕಷ್ಟು ರಸ್ತೆ ಹಾಳಾಗಿವೆ. ಹದಗೆಟ್ಟ ಎಲ್ಲ ಗ್ರಾಮೀಣ ರಸ್ತೆಗೆ ಅನುದಾನ ಮಿಸಲಿಟ್ಟು, ಅಭಿವೃದ್ಧಿ ಮಾಡುತ್ತೇನೆ. ಬಹು ದಿನಗಳ ಬೇಡಿಕೆ ಆಗಿದ್ದ ಕವಲೂರು -ಬನ್ನಿಕೊಪ್ಪ ರಸ್ತೆಯನ್ನು 7.50 ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ಈ ರಸ್ತೆಯ ಜತೆಗೆ 3.50 ಕೋಟಿ ವೆಚ್ಚದ ಕವಲೂರು -ಘಟ್ಟರೆಡ್ಡಿಹಾಳ, 2.19 ಕೋಟಿ ರು. ವೆಚ್ಚದಲ್ಲಿ ಕವಲೂರು -ಮುರ್ಲಾಪುರ, ಹೈದರ್ ನಗರ -ಹಟ್ಟಿ -ಕೇಸ್ಲಾಪುರ ರಸ್ತೆ 5 ಕೋಟಿ ರು. ವೆಚ್ಚದಲ್ಲಿ ಹಾಗೂ ಗುಡುಗೇರಿ ಮಾರ್ಗವಾಗಿ ಕವಲೂರು ಬನ್ನಿಕೊಪ್ಪ ರಸ್ತೆ 2.25 ಕೋಟಿ ರು. ವೆಚ್ಚದಲ್ಲಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದೆ. ಎಲ್ಲ ಕಡೆ ಒಂದೇ ಬಾರಿಗೆ ಕೆಲಸ ಶುರುವಾಗಲಿದೆ. ಗುಣಮಟ್ಟದ ರಸ್ತೆ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಮಾಜಿ ಸಂಸದ ಕರಡಿ ಸಂಗಣ್ಣ ಮಾತನಾಡಿದರು. ಜಿಪಂ ಮಾಜಿ ಅಧ್ಯಕ್ಷ ಎಸ್. ಬಿ.ನಾಗರಳ್ಳಿ, ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ರೆಡ್ಡಿ ಗಲಿಬಿ, ಭರಮಪ್ಪ ಹಟ್ಟಿ, ಗ್ಯಾರಂಟಿ ಅಧ್ಯಕ್ಷ ಬಾಲಚಂದ್ರನ್ ಮುನಿರಬಾದ್, ವೆಂಕನಗೌಡ ಹಿರೇಗೌಡ್ರು, ಭೀಮಣ್ಣ ಬೋಚನಹಳ್ಳಿ, ತೋಟಪ್ಪ ಸಿಂಟ್ರ, ಮುತ್ತಣ್ಣ ಕವಲೂರು, ಗುರು ಬಸವರಾಜ ಹಳ್ಳಿಕೇರಿ, ಅನ್ವರ್ ಗಡಾದ್, ರಾಜಶೇಖರ್ ಆಡೂರ್, ಶಿವಕುಮಾರ್ ಶೆಟ್ಟರ್, ಹನುಮೇಶ ಹೊಸಳ್ಳಿ, ತೋಟಪ್ಪ ಹಟ್ಟಿ, ಡಿವೈಎಸ್ಪಿ ಮುತ್ತಣ್ಣ, ಸಿಪಿಐ ಸುರೇಶ ದೊಡ್ಡಮನಿ, ತಹಸೀಲ್ದಾರ್ ವಿಠ್ಠಲ್ ಚೌಗಲೇ, ತಾಪಂ ಇಒ ದುಂಡಪ್ಪ ತುರಾದಿ, ಮಲ್ಲು ಪೂಜಾರ, ಮಹಾಂತೇಶ ಕವಲೂರು, ದೇವಪ್ಪ ಹಳ್ಳಿ, ನಜೀರ ಅಳವಂಡಿ, ಸುರೇಶ ದಾಸರೆಡ್ಡಿ, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಅಕ್ಬರ್ ಪಲ್ಟನ್ ಇದ್ದರು.

ಕೊಪ್ಪಳ ತಾಲೂಕು ಕವಲೂರು ಗ್ರಾಮದಲ್ಲಿ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಕವಲೂರು -ಬನ್ನಿಕೊಪ್ಪ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ಕೆರೆ ತುಂಬುವ ಯೋಜನೆ ಅಡಿಗಲ್ಲು

ಇದೇ ವೇಳೆ ಸಿಂಗಟಾಲೂರು ಏತಾ ನೀರಾವರಿ ಯೋಜನೆಯಡಿ 22.18 ಕೋಟಿ ವೆಚ್ಚದಲ್ಲಿ 16 ಕೆರೆ ತುಂಬುವ ಯೋಜನೆಗೆ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅಡಿಗಲ್ಲು ನೆರವೇರಿಸಿದರು. ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಕವಲೂರು ಗ್ರಾಮದ 3 ಕೆರೆ, ಮುರ್ಲಾಪುರದ 1, ಘಟ್ಟರಡ್ಡಿಹಾಳದ 1, ಬೆಳಗಟ್ಟಿಯ 1, ಹಟ್ಟಿಯ 1, ಅಳವಂಡಿಯ 2 ಕೆರೆ ಹಾಗೂ ಬೆಟಗೇರಿಯ 1 ಕೆರೆ, ಹಿರೇಸಿಂದೋಗಿಯ 1 ಕೆರೆ ಕೋಳೂರು ಹಾಗೂ ಹಂದ್ರಾಳ ಕೆರೆಗಳನ್ನು ಈ ಯೋಜನೆಡಿಯಲ್ಲಿ ತುಂಬಿಸಲಾಗುವುದು ಎಂದು ಮಾಹಿತಿ ನೀಡಿದರು.

ಆರ್‌ಎಸ್‌ಎಸ್ ಪಥಸಂಚಲನ ಸಮಾರೋಪ

ರಾಯಚೂರು: ವಿಜಯದಶಮಿ ಅಂಗವಾಗಿ ರಾಯಚೂರಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇವಕರು ಆಕರ್ಷಕ ಪಥಸಂಚಲನ ನಡೆಸಿದರು.

ನಗರದ ಗದ್ವಾಲ್ ರಸ್ತೆಯ ವೀರಾಂಜನೇಯ ಕಲ್ಯಾಣ ಮಂಟಪದಲ್ಲಿ ಭಗವಾಧ್ವಜಾರೋಹಣ ಮೂಲಕ ಆರಂಭಗೊಂಡ ಪಥಸಂಚಲನ ಬಸವನಭಾವಿ ವೃತ್ತ ಮೂಲಕ ಪಟೇಲ್, ಶೆಟ್ಟಿಬಾವಿ, ಸರಾಫ್ ಬಜಾರ ಮಹಾವೀರ, ಚಂದ್ರಮೌಳೇಶ್ವರ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳ ಮೂಲಕ ಪುನಃ ವೀರಾಂಜನೇಯ್ಯ ಕಲ್ಯಾಣ ಮಂಟಪದವರೆಗೆ ಪಥ ಸಂಚಲನ ನಡೆಯಿತು.

ಈ ಬಾರಿ ಮಾರ್ಗದುದ್ದಕ್ಕೂ ಯುವಕರು, ಸಾರ್ವಜನಿಕರು, ವಿವಿಧ ಸಂಸ್ಥೆಯ ಪ್ರತಿನಿಧಿಗಳು ಜಮಾವಣೆಗೊಂಡು ಸ್ವಯಂ ಸೇವಕರ ಸ್ವಾಗತಿಸಿ ಹೂಮಳೆಗರೆದಿದ್ದು ಗಮನಾರ್ಹವಾಗಿತ್ತು. ಅಲ್ಲದೆ, ನೂರಾರು ಸಂಖ್ಯೆಯ ಸ್ವಯಂ ಸೇವಕರ ಸಾಲು ಮುಗಿಯುವವರೆಗೂ ಅಭಿಮಾನಿಗಳು ಭಾರತ ಮಾತಾಕಿ ಜೈ ಎಂದು ಘೋಷಣೆ ಕೂಗಿದರು.

ಚಿಕ್ಕ ಚಿಕ್ಕ ಮಕ್ಕಳು ಪಥಸಂಚಲನದಲ್ಲಿ ಪಾಲ್ಗೊಂಡಿದ್ದು ಮತ್ತೊಂದು ವಿಶೇಷವಾಗಿತ್ತು. ಪಥ ಸಂಚಲನಕ್ಕೂ ಮುನ್ನ ಮಾಜಿ ಸಂಸದ ಬಿ.ವಿ ನಾಯಕ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ್, ಎನ್.ಶಂಕ್ರಪ್ಪ, ವಾಣಿಶ್ರೀ ಸೇರಿದಂತೆ ಇನ್ನಿತರ ನಾಯಕರು ಪಥಸಂಚಲನದಲ್ಲಿದ್ದ ಗಣವೇಷಾಧಿಕಾರಿಗಳ ಮೇಲೆ ಹೂ ಮಳೆ ಸುರಿಸಿದರು.

ಪಥ ಸಂಚಲಕ್ಕೆ ಯಾವುದೆ ಅಡ್ಡಿಯಾಗಬಾರದೆಂಬ ಮುನ್ನೆಚ್ಚರಿಕೆಯಿಂದಾಗಿ ಪೊಲೀಸ್ ಇಲಾಖೆ ಅಧಿಕಾರಿಗಳು, ಪೊಲೀಸರು ಬಂದೋಬಸ್ತ್ ಒದಗಿಸಿ ಸ್ವಯಂ ಸೇವಕರು ಸಾಗುವ ಮಾರ್ಗದಲ್ಲಿ ಸಂಚಾರ ಮುಕ್ತಗೊಳಿಸಿ ಅನುಕೂಲ ಮಾಡಿಕೊಟ್ಟರು.

ಶೋತ್ರಿ ಮಾತನಾಡಿ, ಸನಾತನ ಧರ್ಮ ಅಪಾರ ಶಕ್ತಿ ಹೊಂದಿದೆ. ಸಂಘವೆಂದರೆ ಸತ್ಯ, ಶಕ್ತಿಯಾಗಿದೆ ಇಂದು ಭಾರತದಲ್ಲಿ ಘಟನೆಗಳು ಗಾಬರಿ ಹುಟ್ಟಿಸುತ್ತಿದೆ ಹೀಗಾಗಿ ನಾವೆಲ್ಲರೂ ಸಂಘಟಿತರಾಗಿ ಗಟ್ಟಿಯಾಗುವ ಕಾರ್ಯ ಮಾಡಿ ಹಿಂದೂರಾಷ್ಟ್ರ ನಿರ್ಮಾಣ ಮಾಡೋಣ ಎಂದು ತಿಳಿಸಿದರು.

ವೇದಿಕೆಯಲ್ಲಿ ಜಿಲ್ಲಾ ಸಂಘ ಸಂಚಾಲಕ ಸದಾನಂದ ಪ್ರಭು ಸೇರಿದಂತೆ ನೂರಾರು ಸ್ವಯಂಸೇವಕರು, ಪ್ರಮುಖ ಮುಖಂಡರು ಇನ್ನಿತರರಿದ್ದರು.

ವಿಜಯದಶಮಿ ಅಂಗವಾಗಿ ರಾಯಚೂರಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸೇವಕರು ಆಕರ್ಷಕ ಪಥಸಂಚಲನ ನಡೆಸಿದರು.

ಹೀರಾದಲ್ಲಿ ಅದ್ದೂರಿ ಜಂಬೂಸವಾರಿ

ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಂಬೂಸವಾರಿ, 1008 ಕಳಸ, ಉಡಿತುಂಬುವ ಕಾರ್ಯ, ನೂರಾರು ಡೊಳ್ಳು ಕುಣಿತ, ಬಾಜಿ ಭಜಂತ್ರಿ ಮೂಲಕ ಅದ್ದೂರಿಯಾಗಿ ಮೆರವಣಿಗೆ ಜರುಗಿತು.

ಸಿರವಾರ: ಸಾಮೂಹಿಕ ವಿವಾಹ, ಪುರಾಣ, ಪ್ರವಚನ, ಜಾತ್ರೆ, ಮಹಿಳೆಯರಿಗೆ ಉಡಿತುಂಬವ, ಗ್ರಾಮೀಣ ಪ್ರದೇಶಗಳಲ್ಲಿ ಜಂಬೂಸವಾರಿ ಭಾಗ್ಯ ದಯಪಾಲಿಸಿರುವ ಹೀರಾ ಗ್ರಾಮದ ಶ್ರೀ ಸಿದ್ದರಾಮೇಶ್ವರ ಮಠದ ಕಾರ್ಯ ದೊಡ್ಡದು ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್. ಭೋಸರಾಜು ಹೇಳಿದರು.

ಅವರು ತಾಲೂಕಿನ ಹೀರಾ ಗ್ರಾಮದಲ್ಲಿ ದಸರಾ ಹಬ್ಬದ ಅಂಗವಾಗಿ ಸಿದ್ದರಾಮೇಶ್ವರ ಮಠದಲ್ಲಿ ನವರಾತ್ರಿ ಪುರಾಣ ಪ್ರವಚನ ಮಹಾಮಂಗಲ, ಶ್ರೀರಾಜ ರಾಜೇಶ್ವರಿ ದೇವಿ ಜಂಬೂಸವಾರಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಭಾಗದಲ್ಲಿ ಮಠಕ್ಕೆ ನಡೆದುಕೊಳ್ಳುವ ಭಕ್ತರ ಸಂಖ್ಯೆ ಹೆಚ್ಚಾಗಿದೆ, ಮಠದ ಅಭಿವೃದ್ಧಿ ಹೆಚ್ಚಿನ ಅನುದಾನ ನೀಡಲಾಗಿದೆ, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸೌಲಭ್ಯಗಳನ್ನು ಒದಗಿಸಲು ಸರಕಾರದ ಅನುದಾನ ನೀಡುವ ಭರವಸೆ ನೀಡಿದರು.

ನಂತರ ಮಾನ್ವಿ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ, ಹಿರಿಯ ಮುಖಂಡರಾದ ಚುಕ್ಕಿ ಸೂಗಪ್ಪ ಸಾಹುಕಾರ್ ಮಠದ ಕಾರ್ಯವನ್ನು ಕೊಂಡಾಡಿದರು.

ಈ ಸಂದರ್ಭದಲ್ಲಿ ಮಠಾಧ್ಯಕ್ಷರಾದ ಶ್ರೀಅಯ್ಯಪ್ಪ ತಾತ, ರುದ್ರಪ್ಪ ಅಂಗಡಿ, ಶಿವಮೂರ್ತಿ, ಕೆ.ಶಾಂತಪ್ಪ, ಶರಣಯ್ಯ ನಾಯಕ ಗುಡದಿನ್ನಿ, ಸಿರವಾರ ಪ.ಪಂ ಅಧ್ಯಕ್ಷ ಭೂಪನಗೌಡ, ಶಿವಶರಣರ ಅರಕೇರಿ, ಚುಕ್ಕಿ ಶಿವಕುಮಾರ, ರಮೇಶ ದರ್ಶನಕರ್, ಕೆ.ಬಸವರಾಜ ನಾಯಕ, ಹನುಮಂತ ರಾಯಗೌಡ, ಅಯ್ಯಪ್ಪ ದೂರೆ, ಮಲ್ಲಿಕಾರ್ಜುನ, ಸಿದ್ದಪ್ಪ ಸಾಹುಕಾರ್, ಸಿಪಿಐ ಶಶಿಕಾಂತ, ಅರಣ್ಣ ಅಧಿಕಾರಿ ಸುರೇಶ ಆಲಮೇಲ್ ಸೇರಿದಂತೆ ಅನೇಕರು ಇದ್ದರು.

ಮಕ್ಕಳ ಗ್ರಾಮ ಸಭೆಗೆ ಕ್ರೈ ಸಂಸ್ಥೆ ಮನವಿ

ಸಿರವಾರ: ಶ್ರುತಿ ಸಾಂಸ್ಕೃತಿಕ ಸಂಸ್ಥೆ ಹಾಗೂ ಕ್ರೈ ಸಂಸ್ಥೆಯು ರಾಜ್ಯದ ಮಕ್ಕಳ ಪರ ಅಂಗನವಾಡಿಗಳಲ್ಲಿ ಸಬಲೀಕರಣ, ಮಕ್ಕಳ ಅಪೌಷ್ಠಿಕತೆ, ನಿರ್ವಾಹಣೆ ಶಿಕ್ಷಣ ಹಕ್ಕಿನ ಕಾಯ್ದೆಯು ಸಮರ್ಪಕ ಜಾರಿ, ಬಾಲ್ಯ ವಿವಾಹ ಕಾರ್ಮಿಕ ಪದ್ಧತಿ ನಿರ್ಮೂಲನೆ ಮುಂತಾದ ಪ್ರಮುಖ ಅಂಶಗಳಿಗೆ ಸಂಭಂಧಿಸಿದಂತೆ ಕಾರ್ಯ ನಿರ್ವಹಿಸುತ್ತದದ್ದು ಮಕ್ಕಳ ಗ್ರಾಮ ಸಭೆ ಮಾಡಬೇಕು ಎಂದು ಸಿರವಾರ ತಾಲೂಕು ಶೃತಿ ಸಂಸ್ಕೃತಿ ಸಂಸ್ಥೆಯು ಒತ್ತಾಯಿಸಿಲಾಯಿತು.

ತಾಲೂಕಿನ ಮಲ್ಲಟ, ನವಲಕಲ್, ಹೀರಾ, ಚಂಚರಕಿ, ಹೀರೆಹಣಗಿ ಮಾಡಗಿರಿ, ಕೆ. ಗುಡದಿನ್ನಿ ಈ ಪಂಚಾಯತಿಗಳಲ್ಲಿ ಬರುವ ಗ್ರಾಮಗಳಲ್ಲಿ ನಮ್ಮ ಶೃತಿ ಸಾಂಸ್ಕೃತಿ ಸಂಸ್ಥೆಯು ಮಕ್ಕಳ ಹಕ್ಕುಗಳ ಕುರಿತು ಸುಮಾರ 10 ವರ್ಷಗಳಿಂದ ಕಾರ್ಯಾನಿರ್ವಸುತ್ತಿದ್ದು. ತಾಲೂಕಿನ ಶಾಲೆಗಳಲ್ಲಿ ನಡೆಯುವ ಶಿಕ್ಷಣ ಪದ್ಧತಿಯನ್ನು ಗಮನಿಸುವುದು ಬಾಲಕಾರ್ಮಿಕ ಮಕ್ಕಳನ್ನು ಗುರುತಿಸಿ, ಶಾಲೆಗೆ ಮರು ಸೇರ್ಪಡೆ ಮಾಡುವುದು, ಶಾಲೆಗಳಲ್ಲಿನ ವಿಷಯವಾರು ಶಿಕ್ಷಕರು ಹಾಗೂ ತರಗತಿವಾರು ಕೊಠಡಿಗಳು ಆಟದ ಮೈದಾನ ಶೌಚಾಲಯ, ಕುಡಿಯುವ ನೀರು ಸಂಭಂಧಪಟ್ಟಂತೆ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ಎಂಬ ಉದ್ದೇಶ ನಮ್ಮ ಸಂಸ್ಥೆಯದ್ದಾಗಿದೆ. ಕಾರಣ ಪ್ರತಿ ವರ್ಷದಂತೆ ನವಂಬರ್ ತಿಂಗಳಿನಲ್ಲಿ ನಡೆಯುವ ಮಕ್ಕಳ ಗ್ರಾಮ ಸಭೆಯನ್ನು ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಏರ್ಪಡಿಸುವಂತೆ ಆಯಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅವೇಶಿಸಿ ನಮ್ಮ ಸಂಸ್ಥೆ ಜತೆಗೂಡಿ ಗ್ರಾಮ ಸಭೆಗಳನ್ನು ಏರ್ಪಡಿಸುವಂತೆ ಶೃತಿ ಸಂಸ್ಕೃತಿ ಸಂಸ್ಥೆ ಸಿರವಾರ ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯಿತಿ ಸಿರವಾರ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಶೃತಿ ಸಂಸ್ಕೃತಿ ಸಂಸ್ಥೆಯ ತಾಲೂಕು ಸಂಯೋಜಕರಾದ ಶೋಭಾ, ಶಶಿಕಲಾ, ಗೀತಾ ಉಪಸ್ಥಿತರಿದ್ದರು.

ಮಕ್ಕಳ ಗ್ರಾಮ ಸಭೆ ಮಾಡಬೇಕು ಎಂದು ಸಿರವಾರ ತಾಲೂಕು ಶೃತಿ ಸಂಸ್ಕೃತಿ ಸಂಸ್ಥೆಯು ಒತ್ತಾಯಿಸಿಲಾಯಿತು.

ನಿಗಮದಿಂದ ರೈತರಿಗೆ ವಂಚನೆ: ಆರೋಪ

ಸುದ್ದಿಗಾರರೊಂದಿಗೆ ಹೊನ್ನಪ್ಪ ಚವ್ಹಾಣ ಮಾತನಾಡಿದರು.

ಕುಷ್ಟಗಿ: ನಮಗಾಗುವ ಅನ್ಯಾಯವನ್ನು ಸರಿಪಡಿಸದಿದ್ದರೆ ಕೊಪ್ಪಳ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ವಿಷ ಕುಡಿದು ಸಾಯಲು ಸಿದ್ಧ ಎಂದು ಎಂದು ತಾಲೂಕಿನ ಕಡೆಕೊಪ್ಪ ಗ್ರಾಮದ ಶಿವಪ್ಪ ಪವಾರ್ ಮತ್ತು ಗ್ರಾಮದ ಹೊನ್ನಪ್ಪ ಚವ್ಹಾಣ ಆರೋಪಿಸಿದ್ದಾರೆ.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಕೊಪ್ಪಳ ತಾಂಡಾ ಅಭಿವೃದ್ಧಿ ನಿಗಮ ವತಿಯಿಂದ ಭೂ ಒಡೆತನದ ಯೋಜನೆಯಲ್ಲಿ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಜಮೀನು ಮಂಜುರು ಮಾಡಿದ್ದು ಇದರಲ್ಲಿ ಸಾಕಷ್ಟು ಜಮೀನು ಹೊಂದಿದವರಿಗೆ ಲಂಚವನ್ನು ಪಡೆದು ನಿಗಮ ಮಂಡಳಿಯಿಂದ ಅವರಿಗೆ ಬೇಕಾದಷ್ಟು ಜಮೀನು ನೀಡಿದ್ದಾರೆ.

ಆದರೆ ಕೊಪ್ಪಳ ತಾಂಡಾ ಅಭಿವೃದ್ಧಿ ನಿಗಮ ಮಂಡಳಿ ಕೊಪ್ಪಳ ಅಧಿಕಾರಿಗಳು ಜಮೀನು ಹಂಚಿಕೆ ಮಾಡಿಕೊಡುವಲ್ಲಿ ತಾರತಮ್ಯವನ್ನು ಮಾಡಿದ್ದಾರೆ ಮತ್ತು ನಮ್ಮ ಕಡೆಯಿಂದ ಏಜೆಂಟರ ಮೂಲಕ ಅಧಿಕಾರಿಗಳು ಲಂಚವನ್ನು ಪಡೆದು ನಮಗೆ ಬಹಳ ಅನ್ಯಾಯ ಮಾಡಿದ್ದಾರೆ. ನಿಗಮ ಮಂಡಳಿಯ ಏಜೆಂಟರಾದ ಹನಮನಾಳ ಗ್ರಾಮದ ಬಸವಂತಪ್ಪ, ಶ್ರೀಕಾಂತ, ನಡುಲಕೊಪ್ಪ ಗ್ರಾಮದ ಸೋಮಪ್ಪ ತಂದಿ ಚನ್ನಪ್ಪ ಚವ್ಹಾಣ ನಮ್ಮ ತಾಂಡಾ ಅಭಿವೃದ್ಧಿ ನಿಮಗದಿಂದ ನಿಮಗೆ ಜಮೀನು ಕೊಡಿಸುತ್ತೇವೆ ಎಂದು ಒಬ್ಬ ಫಲಾನುಭವಿಕಡೆಯಿಂದ ಸುಮಾರು 1 ಲಕ್ಷ 80000 ಸಾವಿರ ರೂಪಾಯಿ ಹಣವನ್ನು ಪಡೆದು ನಮಗೆ ವಂತನೆ ಮಾಡಿ ಅಧಿಕಾರಿಗಳಿಗೆ ಲಂಚವನ್ನು ನೀಡಿ ಕೇವಲ ಒಂದು ಎಕರೆ ಜಮೀನು ನೀಡಿ ಅನ್ಯಾಯ ಮಾಡಿದ್ದಾರೆ. ಆದರೆ ಈಗ ನಮಗೆ ಸರಕಾರದಿಂದ ದೊರೆಯಬೇಕಾದ ಎರಡು ಎಕರೆ ಜಮೀನನ್ನು ನೀಡದೇ ಕೇವಲ ಒಂದು ಎಕರೆ ಕೊಟ್ಟು ಅನ್ಯಾಯ ಮಾಡಿದ್ದು ಅಲ್ಲದೇ ನಿಮಗೆ ಕೊಟ್ಟ ಜಮೀನು ವಾಪಾಸು ಪಡೆಯುತ್ತೇವೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಮಗದಿಂದ ಬೆದರಿಕೆ ಪತ್ರವನ್ನು ನೀಡಿದ್ದಾರೆ ಎಂದರು

ಈ ಸಂದರ್ಭದಲ್ಲಿ ಶರಣಪ್ಪ ಕುಂಬಾರ, ಶರಣಗೌಡ ಬಸನಗೌಡ ಪೊಲೀಸ್ ಪಾಟೀಲ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮಹಿಳೆಯರ ಪ್ರತಿಭೆಗೆ ಪ್ರೋತ್ಸಾಹ ಬೇಕಿದೆ

ಕುಕನೂರು: ನಗರದ ಆರೇರ್ ಆಯಿಲ್ ಮಿಲ್ ಸಭಾಂಗಣದಲ್ಲಿ ಮಹಿಳಾ ಧ್ವನಿ ಸಂಸ್ಥೆ ಹಾಗೂ ಹೈಬ್ರೀಡ್ ನ್ಯೂಸ್ ವತಿಯಿಂದ ದಸರಾ ದರ್ಬಾರ್ ಮಹಿಳೆಯರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉಮಾ ಆರೇರ್ ಅವರು ಚಾಲನೆ ನೀಡಿದರು.

ಕಾರ್ಯಕ್ರಮದ ಆಯೋಜಕರು ಮಹಿಳಾ ಧ್ವನಿ ಸಂಸ್ಥೆಯ ಸಂಸ್ಥಾಪಕರಾದ ಪ್ರಿಯದರ್ಶಿನಿ ಮುಂಡರಗಿಮಠ ಅವರು ಮಾತನಾಡಿ, ಪ್ರಚಲಿತ ದಿನಗಳಲ್ಲಿ ಮಹಿಳೆ ಎಲ್ಲಾ ರಂಗದಲ್ಲೂ ಗುರುತಿಸಿಕೊಳ್ಳುತ್ತಿದ್ದಾಳೆ. ಮಹಿಳೆಯರು ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಹುದು. ಅವರಲ್ಲಿನ ಪ್ರತಿಭೆಗೆ ಸೂಕ್ತ ವೇದಿಕೆಯ ಜತೆಗೆ ಪ್ರೋತ್ಸಾಹ ಬೇಕಿದೆ ಎಂದರು.

ಇದೇ ವೇಳೆ ಮಹಿಳೆಯರಿಗೆ ವಿವಿಧ ಆಟೋಟ ಸ್ಪರ್ಧೆಗಳು,ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.ವಿಜೇತರಿಗೆ ಬಹುಮಾನ ವಿರಿಸಿ ಅಭಿನಂದಿಸಲಾಯಿತು. ಪೂಜಾ ನರಿ ಜಾನಪದ ಗೀತೆಗಳ ಮೂಲಕ ಎಲ್ಲರನ್ನೂ ರಂಜಿಸಿದರು. ಕಾರ್ಯಕ್ರಮದಲ್ಲಿ ಸುಮನ್ ಓಜನಹಳ್ಳಿ,ಬಿ. ಎನ್.ಹೊರಪೇಟಿ,ಸಲ್ಮಾಜಾನ್, ಪೂಜಾ ಹಾಗೂ ಅನೇಕ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರಟಗಿ ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆ

ಕಾರಟಗಿ: ಕೊಪ್ಪಳ ಜಿಲ್ಲೆ ಕುಕನೂರು ಪಟ್ಟಣದಲ್ಲಿ ಆಯೋಜಿಸಿದ್ದ 2024-25ನೇ ಸಾಲಿನ ಕಲಬುರಗಿ ವಿಭಾಗ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಾಲಿಬಾಲ್ ಕ್ರೀಡಾಕೂಟದಲ್ಲಿ ಕಾರಟಗಿಯ ಶ್ರೀ ಶರಣಬಸವೇಶ್ವರ ವಿದ್ಯಾಸಂಸ್ಥೆಯ ಬಾಲಕರ ತಂಡ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದೆ. ವಿಜೇತ ತಂಡಕ್ಕೆ ಬಿಇಒ ಸೋಮಶೇಖರಗೌಡ ಪಾಟೀಲ್, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕ ಬಸವರಾಜ್ ಎ, ತಾಲೂಕಾ ದೈಹಿಕ ಶಿಕ್ಷಣ ಪರಿವೀಕ್ಷಕ ಶರಣಪ್ಪ ಪ್ರಮಾಣ ಪತ್ರ ಹಾಗೂ ಟ್ರೋಫಿ ವಿತರಿಸಿದರು. ಈ ವೇಳೆ ಶರಣಬಸವ (ನಾಯಕ), ಮಯೂರ, ಕಾಶಿನಾಥ, ಸಂದೀಪ, ಪ್ರಸನ್ನ, ಪೃಥ್ವಿರಾಜ್, ಸಂಜೀವ್, ರಾಜೇಶ್, ವಿಷ್ಣು, ಅರವಿಂದ್, ಪ್ರಜ್ವಲ್, ನಾಗರಾಜ್, ಸುನೀಲ್, ಯಶ್ವಂತ್, ಶ್ರೀಶರಣಬಸವೇಶ್ವರ ವಿದ್ಯಾಸಂಸ್ಥೆಯ ನಿರ್ದೇಶಕ ರುದ್ರೇಶ ಗಣಾಚಾರಿ, ಮುಖ್ಯ ಶಿಕ್ಷಕ ಮಹಾಂತೇಶ ಗದ್ದಿ, ಅಮರೇಶ ಪಾಟೀಲ್, ದೈಹಿಕ ಶಿಕ್ಷಕರಾದ ಬಸವರಾಜ ಸಿದ್ದಾಪುರ, ಗಿರೀಶ್ ಯರಡೋಣಾ, ಪಂಪಾಪತಿ ಶಿಕ್ಷಕರಾದ ಹನುಮಂತಪ್ಪ, ಶರಣಬಸವ, ಪಂಪಾಪತಿ ನಾಯಕ, ಮಂಜುನಾಥ್, ರಮೇಶ್ ಪಾಲಕರಾದ ಡಾ. ರಾಮಣ್ಣ, ಚಾಲಕರಾದ ಕನಕರಾಜ, ಅಮರೇಶ ಕಟಾಂಬ್ಲಿ, ಮಹೇಶ, ವಿಜಯಕುಮಾರ ಇನ್ನಿತರರು ಇದ್ದರು. ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಕರಾದ ದೈಹಿಕ ಶಿಕ್ಷಕರಾದ ಬಸವರಾಜ ಸಿದ್ದಾಪುರ, ಗಿರೀಶ್ ಯರಡೋಣಾ, ಪಂಪಾಪತಿಗೆ ಸಂಸ್ಥೆಯ ಸಂಸ್ಥೆ ಅಧ್ಯಕ್ಷ ಡಾ. ಎಸ್.ಬಿ ಶೆಟ್ಟರ್, ಉಪಾಧ್ಯಕ್ಷ ಜಗದೀಶ್ ಅವ ರಾದಿ, ಕಾರ್ಯದರ್ಶಿ ಚಂದ್ರಶೇಖರ ಸೋಮಲಾಪುರ ಅಭಿನಂದಿಸಿದ್ದಾರೆ.

ಸಾರಿಗೆ ಸೌಲಭ್ಯ ಒದಗಿಸಲು ಮನವಿ

ಪಟ್ಟಣ ದಿಂದ ಅಂಕಲಗಿಮಠ, ರಾಮತ್ನಾಳ ಕಂದಗಲ್ ಮಾರ್ಗದ ಮೂಲಕ ಇಲಕಲ್ ಗೆ ಸಾರಿಗೆ ಸೌಲಭ್ಯ ಒದಗಿಸಬೇಕೆಂದು ಕರುನಾಡ ವಿಜಯ ಸೇನೆ ಸಂಘಟನೆಯಿಂದ ಲಿಂಗಸುಗೂರ ಬಸ್ ಘಟಕದ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಮುದಗಲ್: ಪಟ್ಟಣ ದಿಂದ ಅಂಕಲಗಿಮಠ, ರಾಮತ್ನಾಳ ಕಂದಗಲ್ ಮಾರ್ಗದ ಮೂಲಕ ಇಲಕಲ್ ಗೆ ಸಾರಿಗೆ ಸೌಲಭ್ಯ ಒದಗಿಸಬೇಕೆಂದು ಕರುನಾಡ ವಿಜಯ ಸೇನೆ ಸಂಘಟನೆಯಿಂದ ಲಿಂಗಸುಗೂರ ಬಸ್ ಘಟಕದ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ರೂಟ್ 22-23 ರಲ್ಲಿ ಅಂಕಲಗಿಮಠ, ರಾಮತ್ನಾಳ, ಕಂದಗಲ್ ಮಾರ್ಗದ ಮೂಲಕ ಇಲಕಲ್ ಗೆ ಹೋಗುವ ಬಸ್ ಒಂದು ದಿನ ಬಂದರೆ ಮತ್ತೊಂದು ದಿನ ಬರುವುದಿಲ್ಲ. ರೂಟ್ 69-70 ರಲ್ಲಿ ಬೆಳಗ್ಗೆ ಮುದಗಲ್ ಪಟ್ಟಣದಿಂದ ಮೂದೇನೂರು ಗೆ ಹೊರಡುವ ಬಸ್ ಸಮಯ ಕೂಡ ಬದಲಾವಣೆ ಮಾಡಬೇಕು. ಬಸ್ ಲಿಂಗಸುಗೂರು ಹೋಗದೆ ತಾವರಗೇರಿಗೆ ಹೋಗುವುದರಿಂದ ಕಾಲೇಜು ವಿದ್ಯಾರ್ಥಿಗಳಿಗೆ, ಆಸ್ಪತ್ರೆಗೆ ಹೋಗುವ ಸಾರ್ವಜನಿಕರಿಗೆ ತೊಂದರೆಯಾಗಿದೆ. ಮಧ್ಯಾನ 12-30 ಕ್ಕೆ ಇಲಕಲ್ ದಿಂದ ಬಸ್ ಹೊರಡಬೇಕು. ಮುದಗಲ್ - ಮೂದೇನೂರು ಬಸ್ ಸರಿಯಾದ ಸಮಯಕ್ಕೆ ಹೋಡಿಸಬೇಕೆಂದು ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಕರುನಾಡ ವಿಜಯ ಸೇನೆ ತಾಲ್ಲೂಕು ಘಟಕದ ಅಧ್ಯಕ್ಷ ಹನುಮಂತ ಬಡಿಗೇರ್, ಉಪಾಧ್ಯಕ್ಷ ರಂಗಪ್ಪ ಬೋವಿ, ರಾಮಾತ್ನಾಳ ಗ್ರಾಮ ಘಟಕದ ಅಧ್ಯಕ್ಷ ಸಂಗನಗೌಡ ಪೊಲೀಸ್ ಪಾಟೀಲ, ಪ್ರಧಾನ ಕಾರ್ಯದರ್ಶಿ ಅಂದಪ್ಪ ನಾಯಕ ಇದ್ದರು.

ನರೇಗಾ ಜಾಗೃತಿ ಅಭಿಯಾನಕ್ಕೆ ಚಾಲನೆ

ಕೊಪ್ಪಳ: ತಾಲೂಕಿನ ಇರಕಲ್ಲಗಡಾ ಗ್ರಾಪಂ ವ್ಯಾಪ್ತಿಯ ವಡ್ಡರಹಟ್ಟಿ ಗ್ರಾಮದಲ್ಲಿ 2025-26ನೇ ಸಾಲಿನ ನರೇಗಾದ ಕಾರ್ಮಿಕ ಆಯವ್ಯಯ ತಯಾರಿಕೆ ಹಾಗೂ ಬೇಡಿಕೆ ಸ್ವೀಕೃತಿ ಜಾಗೃತಿ ಕಾರ್ಯಾಗಾರ 'ಉದ್ಯೋಗ ಖಾತರಿ ನಡಿಗೆ, ಸಬಲತೆಯಡೆಗೆ ಅಭಿಯಾನದ' ಭಾಗವಾಗಿ ನಡೆಯಿತು. ಜಿಲ್ಲಾ ಐಇಸಿ ಸಂಯೋಜಕ ಶ್ರೀನಿವಾಸ ಚಿತ್ರಗಾರ ಮಾತನಾಡಿ, ಮಹಾತ್ಮಾ ಗಾಂಧಿ ನರೇಗಾ ಕಾಯ್ದೆ ಗ್ರಾಮೀಣ ಪ್ರದೇಶದ ರೈತರು, ಕೃಷಿ ಕೂಲಿ ಕಾರ್ಮಿಕರು ಹಾಗೂ ಮಹಿಳೆಯರ ಸಬಲತೆಗೆ ಸಹಕಾರಿ ಜಾರಿಗೆ ತರಲಾಗಿದೆ. ಕಾಯ್ದೆಯಡಿ ಒಂದು ಕುಟುಂಬ 100 ದಿನ ಕೆಲ ನಿರ್ವಹಿಸಬಹುದು. ನರೇಗಾ ಯೋಜನೆಯ ಮಾಹಿತಿ, ಕಾಮಗಾರಿ ಕುರಿತು ಮನೆ ಮನೆಗೆ ಭೇಟಿ ನೀಡಿ, ಕುಟುಂಬಗಳಿಗೆ ಮಾಹಿತಿ ನೀಡಿ ಯೋಜನೆ ಬಗ್ಗೆ ಮಾಹಿತಿ ನೀಡಬೇಕಿದೆ ಎಂದರು. ಗ್ರಾಮ ಪಂಚಾಯತಿ, ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ, ಅರಣ್ಯ ಇಲಾಖೆ, ರೇಷ್ಮೆ ಇಲಾಖೆಯಿಂದ ವೈಯಕ್ತಿಕ ಕಾಮಗಾರಿ ಅನುಷ್ಠಾನ ಮಾಡುವ ಅಗತ್ಯವಿದೆ. ಮೊದಲು ಯಾವ ಕಾಮಗಾರಿ ಅನುಷ್ಠಾನಗೊಳಿಸಬೇಕು ಎಂದರು. ಮನೆ ಮನೆ ಭೇಟಿ ಸಂದರ್ಭದಲ್ಲಿ ರೈತರು ಮತ್ತು ಮಹಿಳೆಯರಿಂದ ದನದಶೆಡ್, ಕುರಿಶೆಡ್, ಕೊಳಿ ಶೆಡ್, ಬದು ನಿರ್ಮಾಣ, ತೆಂಗು ಸೇರಿ ಒಟ್ಟು 30 ವೈಯಕ್ತಿಕ ಕಾಮಗಾರಿಗಳ ಬೇಡಿಕೆ ಸ್ವೀಕರಿಸಲಾಯಿತು. ಡಿಇಒ ಮೌನೇಶ, ಗ್ರಾಮ ಕಾಯಕ ಮಿತ್ರ ಶ್ರೀದೇವಿ ಹಟ್ಟಿ ಇದ್ದರು.

ವಿಶ್ವವಾಣಿ
16.10.2024 ಬುಧವಾರ
vishwavani.news

ದಿನ ದರ್ಶಿಕೆ

ಅಶ್ವಿನ ಮಾಸ, ಶುಕ್ಲ ಪಕ್ಷ, ಚತುರ್ದಶಿ ತಿಥಿ, ಉತ್ತರ ಭಾದ್ರಪದ ನಕ್ಷತ್ರ, ಧ್ರುವ ಯೋಗ, ಗರಜ ಕರಣ, ಶರದ್ ಋತು, ದಕ್ಷಿಣಾಯನ, 1946 ಕ್ರೋಧಿನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಕಾಲಿನ ನರಗಳು ಸೆಳೆಯುತ್ತಿದ್ದರೆ ನುಗ್ಗೆಮರದ ಚಕ್ಕೆಗೆ, ಸ್ವಲ್ಪ ಜೀರಿಗೆಯನ್ನು ಸೇರಿಸಿ. ಇವೆರಡನ್ನು ನುಣ್ಣಗೆ ಅರೆದುಕೊಳ್ಳಿ. ಈ ಮಿಶ್ರಣವನ್ನು ಬಿಸಿಮಾಡಿ, ಸೆಳೆತವಿರುವಲ್ಲಿಗೆ ಹಚ್ಚಿದರೆ ಸಮಸ್ಯೆ ದೂರವಾಗುವುದು.

ಸೌಂದರ್ಯ ಸೂತ್ರ

ಕಣ್ಣಿನ ರೆಪ್ಪೆಯ ಕೂದಲು ದಟ್ಟವಾಗಬೇಕೆಂದರೆ, ಪ್ರತಿದಿನ ರಾತ್ರಿ ಮಲಗುವಾಗ ಕೆಲವು ತೊಟ್ಟು ಶುದ್ಧೀಕರಿಸಿದ ಹರಳೆಣ್ಣೆಯನ್ನು ರೆಪ್ಪೆಯ ಕೂದಲಿಗೆ ಹಚ್ಚಿ. ಇದನ್ನು ಕನಿಷ್ಟ ಪಕ್ಷ ಮೂರು ತಿಂಗಳು ಮಾಡದರೆ ರೆಪ್ಪೆಕೂದಲು ಕಪ್ಪಾಗಿಯೂ, ದಟ್ಟವಾಗಿಯೂ ಬೆಳೆಯುವುದು.

ದಿನ ಭವಿಷ್ಯ

ಮೇಷ: ವಿದೇಶಕ್ಕೆ ಹೋಗಲು ಪ್ರಯತ್ನಿಸುತ್ತಿರುವವರು ಕೆಲವು ಒಳ್ಳೆಯ ಸುದ್ದಿಗಳನ್ನು ಪಡೆಯಬಹುದು. ಜನರು ನಿಮ್ಮ ವ್ಯಕ್ತಿತ್ವ ವನ್ನು ಮೆಚ್ಚುತ್ತಾರೆ.

ವೃಷಭ: ವ್ಯವಹಾರಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ಜಾಗರೂಕರಾಗಿರಿ. ವ್ಯಾಪಾರ ಸಂಬಂಧಿತ ಕೆಲಸಗಳಿಗೆ ಸಮಯವು ಹೆಚ್ಚು ಅನುಕೂಲಕರವಾಗಿಲ್ಲ.

ಮಿಥುನ: ಈ ದಿನ ಶುಭಕರ. ನಿಮ್ಮ ವ್ಯಕ್ತಿತ್ವ ಸುಧಾರಿಸುತ್ತದೆ. ಮಹತ್ವಾಕಾಂಕ್ಷೆಗಳನ್ನು ಪೂರೈಸಲು ನೀವು ಕಷ್ಟಪಟ್ಟು ಕೆಲಸ ಮಾಡಬೇಕಾಗಬಹುದು.

ಕಟಕ: ದೊಡ್ಡ ವ್ಯಕ್ತಿಯ ಬೆಂಬಲವೂ ಸಿಗಲಿದೆ. ಸಂಬಂಧಿಗಳೊಂದಿಗೆ ಸಂಬಂಧದಲ್ಲಿ ಕಹಿ ಉಂಟಾಗಬಹುದು. ನಿಮ್ಮ ಮಾನಸಿಕ ಸ್ಥಿತಿ ಸ್ಥಿರವಾಗಿರಿಸಿಕೊಳ್ಳಿ.

ಸಿಂಹ: ಮನಸ್ಸಿನಲ್ಲಿ ಯಾವುದೇ ನಕಾರಾತ್ಮಕ ಆಲೋಚನೆಗಳು ಉದ್ಭವಿಸದಂತೆ ನೋಡಿಕೊಳ್ಳಿ. ಕೆಲವು ಪ್ರಮುಖ ವಸ್ತುಗಳ ಕಳ್ಳತನದ ಸಾಧ್ಯತೆ ಇದೆ.

ಕನ್ಯಾ: ಯಾವುದೇ ಹೊಸ ತಂತ್ರಜ್ಞಾನ ನಿಮಗೆ ವ್ಯಾಪಾರ ಸಂಬಂಧಿತ ಕೆಲಸದಲ್ಲಿ ಯಶಸ್ಸನ್ನು ನೀಡುತ್ತದೆ. ಕುಟುಂಬದೊಂದಿಗೆ ಉತ್ತಮ ಸಮಯ ಕಳೆಯುತ್ತೀರಿ.

ತುಲಾ: ಅಹಂಕಾರ ಕಡಿಮೆಮಾಡಿ, ಸರಳ ಸ್ವಭಾವವನ್ನು ಕಾಪಾಡಿಕೊಳ್ಳಿ. ಯಾವುದೇ ಯೋಜನೆಯ ಕೆಲಸವನ್ನು ಪ್ರಾರಂಭಿಸುವ ಮೊದಲು ಚರ್ಚಿಸಿ.

ವೃಶ್ಚಿಕ: ಪತಿ-ಪತ್ನಿಯರ ನಡುವಿನ ಸಂಬಂಧ ಸಾಮಾನ್ಯವಾಗಿರುತ್ತದೆ. ಎರವಲು ಹಣವನ್ನು ಮರಳಿ ಪಡೆಯುವ ಮೂಲಕ ತೃಪ್ತಿಯ ಭಾವನೆ.

ಧನು: ಕೈಯಿಂದ ಕೆಲವು ಅನಗತ್ಯ ವೆಚ್ಚಗಳು ಕೂಡ ಉಂಟಾಗಬಹುದು. ಬಜೆಟ್ ಬಗ್ಗೆ ಕಾಳಜಿ ಅವಶ್ಯಕ.

ಮಕರ: ಸಹೋದರರೊಂದಿಗೆ ಸೌಹಾರ್ದ ಸಂಬಂಧವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಬೇಕು. ವ್ಯಾಪಾರ ಚಟುವಟಿಕೆಗಳಲ್ಲಿ ಸುಧಾರಣೆ.

ಕುಂಭ: ಈ ಸಮಯ ಮಾರ್ಕೆಟಿಂಗ್‌ಗೆ ಸಂಬಂಧಿಸಿದ ಕೆಲಸದಲ್ಲಿ ಉತ್ತಮ ಫಲಿತಾಂಶ.

ಮೀನ: ಆಸ್ತಿಗೆ ಸಂಬಂಧಿಸಿದ ಯಾವುದೇ ಕೆಲಸವನ್ನು ಪೂರ್ಣಗೊಳಿಸಬಹುದು. ಟ್ರಾಫಿಕ್‌ನಲ್ಲಿ ಸಿಲುಕಿಕೊಳ್ಳುವುದರಿಂದ ಸಮಯ ವ್ಯರ್ಥ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- ವಿಶ್ವ ಆಹಾರ ದಿನ
- 1905: ಆಂಗ್ಲರು ಮುಸಲ್ಮಾನರಿಂದ ಕೂಡಿದ್ದ ಪೂರ್ವ ಬಂಗಾಳವನ್ನು ಪಶ್ಚಿಮ ಬಂಗಾಳದಿಂದ ಬೇರ್ಪಡಿಸಿದರು.
- ಖ್ಯಾತ ನಟಿ ಹೇಮಾ ಮಾಲಿನಿ ಹುಟ್ಟುಹಬ್ಬ

ಚಿತ್ರಸ್ಫೂರ್ತಿ



ಮೆಕ್ಸಿಕೋದ ಸೈನಿಕರು ತಮ್ಮ ಗಣರಾಜ್ಯದ ದ್ವಿಶತಮಾನೋತ್ಸವವನ್ನು ಆಚರಿಸಿದ ಪದ್ಧತಿ!

ಒಳಿತನ್ನು ಮಾಡಿದರೆ ಒಳ್ಳೆಯದೇ ಆಗುತ್ತದೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಆನಂದ ದಿನವಿಡೀ ಊರೆಲ್ಲ ಸುತ್ತಿ ತಿರುಗಿ ಗುಜರಿ ಸಾಮಗ್ರಿ ಸಂಗ್ರಹಿಸುತ್ತಿದ್ದ. ಸಾಯಂಕಾಲದ ಹೊತ್ತಿಗೆ ಅದನ್ನು ದೊಡ್ಡ ಗುಜರಿ ಅಂಗಡಿಗೆ ಹಾಕಿ ಬರುವ ಹಣದಲ್ಲಿ ತನ್ನ ಜೀವನ ಹೇಗೋ ನಡೆಸಿಕೊಂಡು ಹೊರಟಿದ್ದ.

ಒಮ್ಮೆ ಆತ ಒಂದು ಮನೆಯಿಂದ ಹಳೆಯ ಗುಜರಿ ಕೊಂಡುಕೊಂಡ. ಅದರಲ್ಲಿ ಪಂಚಲೋಹದ ಡಬ್ಬವೊಂದು ಸಿಕ್ಕಿತು. ಹೀಗೇ ಮುಂದೆ ಹೋದಾಗ ಅಲ್ಲೊಬ್ಬ ಮನೆಯಾತ ತಮ್ಮ ಮನೆಯ ಗುಜರಿಯನ್ನು ಕೊಡಲು ಅವನನ್ನು ಕರೆದರು. ಅವರ ಮನೆಯಲ್ಲಿನ ಬೇಡವಾದ ಎಲ್ಲ ಸಾಮಗ್ರಿಗಳನ್ನು ಒಂದು ಬೆಲೆ ಕಟ್ಟಿ ಕೊಂಡ. ಆ ಮನೆಯ ಮಾಲೀಕನಿಗೆ ಆನಂದನ ಗುಜರಿಯಲ್ಲಿದ್ದ ಪಂಚಲೋಹದ ಡಬ್ಬಿ ಆಕರ್ಷಿಸಿತು. ಅದನ್ನಾತ ವಿಚಾರಿಸಿ 5ರು.ಗೆ ಕೊಂಡುಕೊಂಡ. ಆದರೆ, ಅದರ ಮುಚ್ಚಳ ಬಹಳ ಗಟ್ಟಿಯಾಗಿ ಬೆಸೆದಿತ್ತು. ಏನು ಮಾಡಿದರೂ ತೆರೆದುಕೊಳ್ಳದ್ದರಿಂದ ಮರುದಿನ ಅದೇ ಹಾದಿಯಲ್ಲಿ ಬಂದ ಆನಂದನಿಗೆ ಮರಳಿ ಕೊಟ್ಟು ತಾನು ಕೊಟ್ಟ 5ರು. ಹಿಂದಕ್ಕೆ ಪಡೆದ.

ಆನಂದನು ದೊಡ್ಡ ಗುಜರಿ ಅಂಗಡಿ ಮಾಲೀಕನಿಗೆ ಅದನ್ನು ಮಾರಲು ಹೋದಾಗ ಅಲ್ಲೂ ಅದೇ ಸಮಸ್ಯೆ ಉಂಟಾಗಿ ಆ ಡಬ್ಬಿ ಅವನ ಬಳಿಯೇ ಉಳಿಯಿತು. ಮರುದಿನ ರವಿವಾರ ರಜೆಯ ದಿನ ವಾಗಿದ್ದರಿಂದ ಮಾರುಕಟ್ಟೆಗೆ ಬೇಗ ಹೋಗಿ ತನ್ನೆಲ್ಲ ಗುಜರಿಯೊಂದಿಗೆ ಆ ಡಬ್ಬಿಯನ್ನೂ ಮಾರಲು ಕುಳಿತ. ಗ್ರಾಹಕರು ಬೇಕಾದ ವಸ್ತು ಕೊಂಡೊಯ್ಯುತ್ತಿದ್ದರು. ಒಬ್ಬಾತ ಆ ಡಬ್ಬಿಯನ್ನು 5 ರು. ಗೆ ಕೊಂಡು ಹೋದ. ಆನಂದ ಕೈತೊಳೆದುಕೊಂಡು ಖುಷಿ ಪಟ್ಟ. ಆದರೆ ಆ ಗ್ರಾಹಕ ಪುನಃ ಸಂಜೆ ಬಂದು ಅದರ ಮುಚ್ಚಳ ತೆರೆಯಲು ಬರುತ್ತಿಲ್ಲ ಎಂದು ಮರಳಿಸಿ ತನ್ನ ಹಣ ಪಡೆದುಕೊಂಡ. ಆಗಂತೂ ಆನಂದನಿಗೆ ನಿರಾಸೆಯೇ ಆಯಿತು.

ತನ್ನ ಕಾಯಕದಲ್ಲಿ ಎಂದೂ ಹೀಗೆ ನಿರಾಸೆಗೊಂಡಿರದ ಆನಂದನಿಗೆ ಈ ಸಲ ಆ ಪಂಚಲೋಹದ ಡಬ್ಬಿಯಿಂದ ಕಿರಿ ಕಿರಿಯಾಗ ತೊಡಗಿತು. ಮನೆಗೆ ಬಂದವ ಸಿಟ್ಟಿನಿಂದ ಡಬ್ಬಿಯನ್ನು ಬೀಸಿ ನೆಲಕ್ಕೆ ಕುಕ್ಕಿ ಎಸೆದ. ಕೂಡಲೇ ಡಬ್ಬಿಯ ಬಾಯ್ತೆರೆದು ಅದರೊಳಗೆ ಸುತ್ತಿದ್ದ ಪುಟ್ಟ ಬಟ್ಟೆಯಲ್ಲಿ ಬಂಗಾರದ ತುಂಡು ಸಿಕ್ಕಿತು .

ಆನಂದನು ಅಚ್ಚರಿ ಮತ್ತು ಗಾಭರಿಯಿಂದ ಬಿಟ್ಟ ಕಣ್ಣುಗಳಿಂದ ಕೆಲ ಕ್ಷಣ ನೋಡುತ್ತ ಇದ್ದುಬಿಟ್ಟ. ಆಮೇಲೆ ಆ ಡಬ್ಬಿಯನ್ನು ಯಾರ ಮನೆಯಿಂದ ಕೊಂಡಿದ್ದನೋ ಅವರನ್ನು ನೆನೆಯುತ್ತ ಪಾಪ...! ಇದು ಅವರಿಗೆ ತಿಳಿಯದ ವಿಷಯ. ಅವರ ಹಿರಿಯರು ತಮ್ಮ ಮನೆತನಕ್ಕೆ ಸಂಬಂಧಿಸಿದ ಸಂಪತ್ತು ಇದರಲ್ಲಿ ಕೂಡಿ ಇಟ್ಟಿರಬೇಕು. ಇದನ್ನು ಅವರಿಗೆ ಹಿಂದಿರುಗಿಸುವುದೇ ಸರಿ ಎಂದು ನಿರ್ಧರಿಸಿ ಮರುದಿನ ಆ ಮನೆ ಹುಡುಕಿಕೊಂಡು ಹೊರಟ. ಆ ಮನೆಯು ಬೀಗ ಹಾಕಿತ್ತು. ಪಕ್ಕದಲ್ಲಿ ವಿಚಾರಿಸಿದ, ಪ್ರಯೋಜನ ಆಗಲಿಲ್ಲ. ಅವರು ಊರೇ ಬಿಟ್ಟು ಹೋಗಿರುವರೆಂದು ತಿಳಿಯಿತು. ನಿರ್ವಾಹ ಇಲ್ಲದೇ ಪುನಃ ತನ್ನ ಮನೆಯ ಕಡೆ ಹಿಂದಿರುಗಿದ.

ಭಗವಂತನ ಕೃಪೆ ಆಗದ ಹೊರತು ಸಮಯಕ್ಕೂ ಮುನ್ನ ಯಾರ ಭಾಗ್ಯವೂ ಬೆಳಗುವುದಿಲ್ಲ. ಅವನ ನಿಷ್ಠೆಯ ಕಾಯಕ ಅವನಿಗೆ ತಿಳಿಯದ ಒಂದು ಎತ್ತರದ ಸ್ಥಾನಕ್ಕೆ ತಲುಪಿಸಿತ್ತು. ಯಾವ ಪಂಚಲೋಹದ ಡಬ್ಬಿ ಮಾರಿ ಕೈ ತೊಳೆದುಕೊಳ್ಳಬೇಕು ಎಂದುಕೊಂಡಿದ್ದನೋ, ಅದು ಪುನಃ ಪುನಃ ಮರಳಿ ಇವನ ಕೈಗೇ ಸೇರುತ್ತಿತ್ತು. ಹಣೆಬರಹ ಅದೃಷ್ಟವಾಗಿ ಬಂದು ಅವನ ಮನೆ ಬಾಗಿಲು ಬಡಿಯುತ್ತಲೇ ಇತ್ತು.

ಆನಂದನು ಬಂಗಾರ ಅಂಗಡಿಯಲ್ಲಿ ಮಾರಿ ಬಂದ ಹಣದಲ್ಲಿ ಸ್ವಲ್ಪ ಜೀವನೋಪಾಯಕ್ಕೆ ಇಟ್ಟುಕೊಂಡು, ಉಳಿದುದನ್ನು ತನ್ನ ವ್ಯಾಪಾರದಲ್ಲಿ ತೊಡಗಿಸಿದ. ಅವನ ನಿಷ್ಠೆ ಪ್ರಾಮಾಣಿಕತೆ, ಒಳ್ಳೆಯ ಮನಸ್ಸು, ಅವನಿಗೆ ಜೀವನದಲ್ಲಿ ದೊಡ್ಡ ಅದೃಷ್ಟವನ್ನೇ ತಂದು ಕೊಟ್ಟಿತು.

ಯಾವುದೂ ನಮಗೆ ಸುಮ್ಮನೆ ಬರುವುದಿಲ್ಲ. ನಮ್ಮ ಒಳ್ಳೆಯ ಮನಸ್ಸು ಕೆಲಸಗಳಿಗೆ ಅದರ ಪ್ರತಿಫಲ ಕೆಟ್ಟ ಯೋಚನೆಗಳಿಗೆ ತಕ್ಕ ಪ್ರತಿಫಲ ದೊರೆಯದೆ ಇರುವುದಿಲ್ಲ.

ಪದಬಂಧ



ಎಡದಿಂದ ಬಲಕ್ಕೆ
1. ಯಾವುದೇ ಕಟ್ಟಡಕ್ಕೆ ಇರಬೇಕಾದ ಭದ್ರವಾದ ಬುನಾದಿ (4)
3. ಒಂದಕ್ಕೊಂದು ಜೋಡಿಸು (4)
5. ವ್ಯಕ್ತಿಯೊಬ್ಬನ ಯೋಗ್ಯತೆ (3)
7. ತೋಟದ ಕೆಲಸ ಮಾಡುವವನು (2)
8. ಸೀದಾ ಬಂದ ಸೇವಕಿ (2)
9. ಒಂಟಿಕುದುರೆಯ ಗಾಡಿ (3)
11. ಸೆರೆಮನೆ ಅಥವಾ ಕಟ್ಟು (3)
12. ಚಳಿಗೆ ಹೊಡೆದುಕೊಂಡ ಮೇಲುಹೊದಿದೆ (3)
14. ಕೆಲಸವೊಂದರಲ್ಲಿ ನುರಿತವನು (3)
17. ಸೂರ್ಯನ ಕಿರಣ (2)
18. ಸಿಹಿಯಾದ ಮಧು (2)
19. ಲೆಕ್ಕಹಾಕುವ ಶಾಸ್ತ್ರ (3)
21. ಭಯಂಕರನಾದ ಶಿವನ ಕೈಯಲ್ಲಿ ಕಂಡ ಒಂದು ವೀಣೆ (4)
22. ಮಾಡಿದ ಕೆಲಸದ ಫಲಿತಾಂಶ (4)

ಎಡದಿಂದ ಬಲಕ್ಕೆ
1. ಒಂದಿಡೀ ಪೀಳಿಗೆ (4)
2. ದೇವತೆಗಳಲ್ಲಿ ಒಂದು ವರ್ಗ (2)
3. ಬಳುಕುವ ಬಳ್ಳಿ (2)
4. ಮೋಹಕವಾದ ನಗೆಯುಳ್ಳವಳು (4)
6. ಹೇಗೆ ಹೇಗೆಯೋ ಆಡುತ್ತಿದೆ ಕಪಿ (3)
9. ನಮ್ಮನ್ನು ಹೆತ್ತವಳು (3)
10. ಕಾಣದಂತೆ ಹೇಳಿದ ನೆಪ (3)
13. ಅಂದುಕೊಂಡ ಕೆಲಸ ಈಡೇರು (4)
15. ಹುರಿಗಡಲೆಯಂತೆ ಕಂಡಾನು ಸಣ್ಣವನು (3)
16. ಹೋಲಿಕೆಯಿಲ್ಲದ್ದು (4)
19. ಗಳು ಅಥವಾ ಬಾಣ (2)
20. ಎರಡಕ್ಷರದ ತಪಸ್ಸು (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಕಬ್ಬಿಗ 3. ಮಾಲೀಕ 6. ಲಿಲಾವು 7. ಲಾವಂಚ 8. ಗುಲಾಬಿ 9. ಲಿಪಿ 11. ಮದನ 13. ಕುಲ 15. ಟಗರು 16. ಗತಿ 18. ವಣಿಕ 20. ಕದಿ 24. ವಾದಕ 25. ಕಮರಿ 26. ಮಾರಕ 27. ಕಣಿಲೆ 28. ರದನಿ

ಮೇಲಿನಿಂದ ಕೆಳಕ್ಕೆ: 2. ಗಲಿಬಿಲಿ 3. ಮಾವುತ 4. ಕಲಾವಿದ 5. ಪಂಚಮಿ 10. ಪಿಟಕ 11. ಮರುಕ 12. ನಗ 14. ಲವ 17. ತಿರುಕ 19. ಣಿಮರಿಕ 21. ದಿವಾಕರ 22. ಸಂಕಟ 23. ಕಾಮಾಲೆ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಜುವಾರಿ ಸೇತುವೆ

ಭಾರತದ ಎರಡನೇ ಅತಿ ದೊಡ್ಡ ಕೇಬಲ್ ಸೇತುವೆಯೆಂದೇ ಕರೆಯಲ್ಪಡುವ 'ಜುವಾರಿ ಸೇತುವೆ' ಗೋವಾದಲ್ಲಿದೆ. ಉತ್ತರ ಗೋವಾ ಮತ್ತು ದಕ್ಷಿಣ ಗೋವಾ ನಡುವಿನ ಸಂಪರ್ಕವನ್ನು ಸುಧಾರಿಸುವ ಜುವಾರಿ ನದಿಯ ಹೊಸ ಸೇತುವೆಯ ಮೊದಲ ಹಂತವನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ 29 ಡಿಸೆಂಬರ್ 2022 ರಂದು ಉದ್ಘಾಟಿಸಿದರು.

ಇದು ಮುಂಬೈನ ಬಾಂದ್ರಾ-ವರ್ಲಿ ಸಮುದ್ರ ಸಂಪರ್ಕ ಹೊಂದಿದೆ. ಈ ಸೇತುವೆಯು ಗೋವಾದ ಬಾಂಬೋಲಿಮ್ ಮತ್ತು ವೆರ್ನಾ ಗ್ರಾಮಗಳ ನಡುವಿನ 13.2 ಕಿಲೋಮೀಟರ್ ದೂರವನ್ನು 2,530 ಕೋಟಿ ರುಪಾಯಿ ವೆಚ್ಚದ ರಸ್ತೆ ಯೋಜನೆಯ ಭಾಗವಾಗಿದೆ.

ಪುಸ್ತಕ ಲೋಕ

ಒಂಟಿ ಸೇತುವೆ

ಕೊಂಡಪಲ್ಲಿ ಕೋಟೇಶ್ವರಮ್ಮ ಆಂಧ್ರದಲ್ಲಿ ಹೋರಾಟಗಳಿಗೆ ಸರ್ವ ಶಕ್ತಿಯನ್ನು ತುಂಬಿದವರು. ತಮ್ಮ ಒಳಗಿನ ನೋವು ದುಮ್ಮಾನ ಗಳನ್ನು ಹೊರಜಗತ್ತಿಗೆ ತೋರಿಸಿ ಕೊಡದೆ ವಿವಿಧ ಸಂಘಟನೆಗಳಿಗೆ ತಾಯಿಯಾದವರು. ಅವರು ತೆಲುಗಿನಲ್ಲಿ ಬರೆದ ಆತ್ಮಕಥನವೇ ಒಂಟಿ ಸೇತುವೆ. ಸ. ರಘುನಾಥ ಅವರು ಇದನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಾಲ ವಿಧವೆಯಾಗಿ ಆಕೆ ಸಮಾಜದಿಂದ ಸಾಕಷ್ಟು ತುಚ್ಛೀಕಾರವನ್ನು ಎದುರಿಸಬೇಕಾಗುತ್ತದೆ. ಆದರೆ ತಂದೆ, ತಾಯಿಯ ಬೆಂಬಲದಿಂದ ಆಕೆ ಎಲ್ಲ ಸವಾಲುಗಳನ್ನು ಎದುರಿಸುತ್ತಾಳೆ. ಕೊಂಡದಲ್ಲಿ ಸೀತಾರಾಮಯ್ಯರ ಜೊತೆಗೆ ಅವರ ಮರುಮದುವೆಯೇ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯಾಗಿ ಪರಿಣಮಿಸಿತ್ತು. ಹೋರಾಟದ ಅಗ್ನಿಕುಂಡವನ್ನು ದಾಟುವಾಗ ಒಬ್ಬ ಮಹಿಳೆಗೆ ಎದುರಾಗುವ ಸವಾಲುಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ.



ಟ್ವೀಟ್‌ಮೆಂಟ್

ಇಂಕಾಗ್ನಿಟೋ: ಬೆಂಗಳೂರು ಅತ್ಯಂತ ಸರಳವಾದ ಟ್ರಾಫಿಕ್ ಅನ್ನು ಹೊಂದಿದೆ.
ನವಹ್ಯಾ: ಅದಕ್ಕೆ ನಗ್ತಾ ನಗ್ತಾ, ಬೆಂಗಳೂರಿನ ಖಾಲಿ ರೋಡಲ್ಲಿ ಬಿದ್ದೆ!!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● ಇತ್ತೀಚೆಗೆ ನಿಧನರಾದ ಸಲೀಮುಲ್ ಹಕ್ ಅವರು ಯಾವ ವೃತ್ತಿಯೊಂದಿಗೆ ಸಂಬಂಧಿಸಿದ್ದರು?

- ಎ. ಸಂಗೀತಗಾರ.
- ಬಿ. ರಾಜಕೀಯ ಮುತ್ಸದ್ದಿ.
- ಸಿ. ಹವಾಮಾನ ಬದಲಾವಣೆ ತಜ್ಞ.
- ಡಿ. ಉರಗತಜ್ಞ.

ಉತ್ತರ: ಸಿ. ಹವಾಮಾನ ಬದಲಾವಣೆ ತಜ್ಞ.



ಮಾಹಿತಿ

ಹವಾಮಾನ ನ್ಯಾಯದ ಪ್ರಮುಖ ವಕೀಲರು ಮತ್ತು ಢಾಕಾದ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಕ್ಲೈಮೇಟ್ ಚೇಂಜ್ ಅಂಡ್ ಡೆವಲಪ್ಮೆಂಟ್ (ಐಸಿಸಿಸಿಎಡಿ) ನ ನಿರ್ದೇಶಕರಾಗಿದ್ದ ಪ್ರೊಫೆಸರ್ ಸಲೀಮುಲ್ ಹಕ್ ಅವರು 71 ನೇ ವಯಸ್ಸಿನಲ್ಲಿ ನಿಧನರಾದರು. ಅವರು ಹವಾಮಾನ ಬದಲಾವಣೆ, ಪರಿಸರ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಪರಿಣತರಾಗಿದ್ದರು. ಪ್ರೊಫೆಸರ್ ಹಕ್ ಅವರು ಅಭಿವೃದ್ಧಿಶೀಲ ರಾಷ್ಟ್ರಗಳು, ವಿಶೇಷವಾಗಿ ಕಡಿಮೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಮೇಲೆ ಕೇಂದ್ರೀಕರಿಸುವ ಮೂಲಕ ಹವಾಮಾನ ಬದಲಾವಣೆ ತಗ್ಗಿಸುವಿಕೆ, ಹೊಂದಾಣಿಕೆ ಮತ್ತು ಸುಸ್ಥಿರ ಅಭಿವೃದ್ಧಿಯ ನಡುವಿನ ಸಂಪರ್ಕವನ್ನು ಸ್ಥಾಪಿಸವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಸೋನೆಯ ನಡುವೆ ನೆನಪಿನ ಪ್ರೀತಿ ಜೀವಂತ

● ಲಕ್ಷ್ಮೀಕಾಂತ್ ಎಲ್. ವಿ.

ಬದುಕಿನ ಹಾದಿಯಲ್ಲಿ ಅದೆಷ್ಟೋ ಜನರನ್ನು ಭೇಟಿಯಾಗುತ್ತೇವೆ. ಎಲ್ಲರಲ್ಲೂ ನಮ್ಮನ್ನು ನಾವು ಕಂಡುಕೊಂಡದ್ದು ಕಡಿಮೆ. ಆದರೆ ನಿನ್ನೊಡನೆ ಕಳೆದ ಆ ದಿನಗಳು ಮಾತ್ರ ನೆನಪಿನ ಹೊತ್ತಿಗೆಯಲ್ಲಿ ಎಂದಿಗೂ ಮರೆಯಲಾಗದ ಸುಗಂಧವನ್ನು ತುಂಬಿವೆ. ಈ ಬಿಡದೆ ಸುರಿಯುತ್ತಿರುವ ತುಂತುರು ಸೋನೆಯ ನಡುವೆ ಮನಸ್ಸಿನ ಕೋಟೆಯಲ್ಲಿ ನಿನ್ನ ನೆನಪುಗಳು ಇಂದಿಗೂ ಮೌನವಾಗಿ, ಮಾತುಗಳೆಲ್ಲ ಮುದುಡಿ ಬಿಕರಿಯಾಗದೆ ಕಾಡುತ್ತಿವೆ. ಪದೇ ಪದೇ ನೆನಪಾಗುತ್ತಾ ನನ್ನ ಮನದ ಕೋಟೆಯಲ್ಲಿ ಸದಾ ಚಿರಸ್ಥಾಯಿಯಾಗಿರುವೆ. ನಿನ್ನೊಂದಿಗೆ ಕಳೆದ ದಿನಗಳು ಎಷ್ಟೋ ಸರಳವಾಗಿದ್ದವು. ಆದರೆ ಆ ಸರಳತೆಗಳಲ್ಲಿದ್ದ ಆಪ್ಯಾಯಮಾನತೆ ಅಪರೂಪವಾದದ್ದಾಗಿತ್ತು ಎಂಬುದೇ ವಿಶೇಷ ಕಣೆ. ಪ್ರತಿದಿನವೂ ನೀನು ನಕ್ಕಾಗ, ಆ ನಗುವಿನಲ್ಲಿದ್ದ ಸ್ನೇಹದ ಸೌಗಂಧ ನನ್ನ ಹೃದಯದಲ್ಲಿ ಶಾಶ್ವತವಾಗಿ ಉಳಿದುಬಿಟ್ಟಿದೆ. ಕೆಲವು ಕ್ಷಣಗಳು ಅಷ್ಟೊಂದು ಅರ್ಥಪೂರ್ಣವಾಗಿದ್ದರೂ, ಅವುಗಳ ಮಹತ್ವ ಈಗೀಗ ಒಂದೊಂದಾಗಿ ಕಾಡುತ್ತಾ, ಆ ಸಮಯದ ಪ್ರತಿಯೊಂದು ಕ್ಷಣವು ಬೆಲೆಬಾಳುವಂತದ್ದು ಎಂದು ಗೊತ್ತಾಗುತ್ತಿದೆ.

ಹೇ..! ಗೆಳತಿ ಹೋಗುವಾಗಲಾದರೂ ಕಾರಣ ಹೇಳಬೇಕಿತ್ತು ನೀನು! ನಿನ್ನೊಂದಿಗೆ ಹರಟಿದ ನೆನಪುಗಳು, ಇಂದು ನೀನಿಲ್ಲದೆ ಉಸಿರುಗಟ್ಟಿಸಿ ಅಸುನೀಗಲು ಅಣಿಯಾಗಿವೆ ಕಣೆ. ಎದೆಯ ಬಾಗಿಲಿನಿಂದ ತಳ್ಳಿಬಿಡಲೇ..? ಅಥವಾ ಎದೆಯೊಳಗಿನ ಬೇನೆಯಂತೆ ಅನುಭವಿಸಲೋ..? ಏನೇ ಆದರೂ ನೀನೊಮ್ಮೆ ಕಾರಣ ಹೇಳಿ ಹೋಗಬೇಕಿತ್ತು. ಆದರೂ ನೀ ನನ್ನೊಂದಿಗೆ ಕಳೆದ ಮಧುರ ದಿನಗಳ ಸುಕ್ಕುಗಳನ್ನು ಸರಿಪಡಿಸುತ್ತಾ ನನ್ನ ಮನಕಂಟಿದ ನಿನ್ನಯ ಒಲವ ಗೀಟುಗಳ ಎಣಿಸುವುದರಲ್ಲೇ ಕಾಲವನ್ನು ದೂಡುತ್ತಿರುವೆ. ಕಡಲ ಕಿನಾರೆಯಲ್ಲಿ ನಿನ್ನ ಬೆರಳು ಬೆಸೆದು ನಡೆದು ನರ್ತಿಸಿದ ನೆನಪಿನ ಗಾಯಗಳು ನಿನ್ನನ್ನೇ ನೆನೆಪಿಸುತ್ತಿವೆ ಕಣೆ.

ನೆನಪಿನ ಕನಸುಗಳ ನಡುವೆ ಬೆವರಿದ ಮನಸ್ಸು ಇನ್ನೂ ಆರಿಲ್ಲ ಕಣೆ. ತೇವದ ಹೃದಯ ಇನ್ನೂ ಪಿಸುಗುಟ್ಟುವುದನ್ನು ನಿಲ್ಲಿಸಿಲ್ಲ. ಒಲವಿನ ಮನದೊಳಗೆ ಇಣುಕಿ ನನ್ನನ್ನೇ ಆಕ್ರಮಿಸಿದ ನೆನಪಿನ ನೆಪವಿಂದು ಮಗ್ಗುಲು ಬದಲಾಯಿಸದೆ ದೂರಾದ ಸಮಯ ಸರಿದರೂ ಮನಸ್ಸಿನ ಅಂತರಾಳದಲ್ಲಿ ಬೇರೂರಿ ಇನ್ನೂ ಕಾಡುತ್ತಲೇ ಇದೆ. ನಿನ್ನೊಡನೆ ಕಳೆದ ಆ ಸುಂದರ ಕಾಲ ಮುಂದೆ ಸಾಗಿದರೂ, ನಿನ್ನಿಂದ ಕಲಿತ ಮಾರ್ಗದರ್ಶನ, ಪ್ರೀತಿಯ ಬೋಧನೆ, ಬದುಕಿನ ಬಗೆಗಿನ ನಿನ್ನ ಆಳವಾದ ದೃಷ್ಟಿಕೋನ ಇಂದಿಗೂ ನನ್ನ ಜೀವನದಲ್ಲಿ ಏನೋ ಒಂಥರಾ ಹೊಸ ಆಯಾಮವನ್ನು ನೀಡಿದೆ. ಒಮ್ಮೊಮ್ಮೆ ನಾನು ಕಾಯಿಸಿದಾಗ ನಿನ್ನ ಮನದಲ್ಲಿನ ಕಳವಳ, ಮನಸ್ಸಿನಲ್ಲಿದ್ದ ಕನಸುಗಳು ಇಂದಿಗೂ ನನಗೆ ಸ್ಪಷ್ಟವಾಗಿ ನೆನಪಾಗುತ್ತಿವೆ. ಪ್ರತಿ ಹೆಜ್ಜೆಯನ್ನೂ ಇಡುವಾಗ ನಿನ್ನ ಬುದ್ಧಿವಾದಗಳು ಮುನ್ನಡೆಸುವ ಶಕ್ತಿ ನೀಡುತ್ತವೆ. ಬಾಳಿನ ಅಡಚಣೆಗಳು ಬಂದಾಗ, ನಿನ್ನ ಶಾಂತ ಮತ್ತು ಸ್ಥಿರವಾದ ಚಿಂತನೆಗಳನ್ನು ನೆನೆಸಿಕೊಂಡು ನಾನು ಮುಂದೆ ನಡೆಯುತ್ತೇನೆ ಕಣೆ. ನಿನ್ನ ಮಾತುಗಳು ಬೆನ್ನು ತಟ್ಟೋ ಸಹಾಯದಂತೆ; ನಿನ್ನ ನೆನಪು ಅಮ್ಮನ ಮಡಿಲಿನ ಮೃದು ತಾಕಿದಂತೆ ಉಳಿಯುತ್ತಾ ಹೋದರೂ ಅವು ನಿರಂತರವಾಗಿ ಬೆಳೆಯುತ್ತವೆ.

ಆದರೆ ನಿನ್ನ ಅಗಲಿಕೆಯ ನೋವು ನನಗೆ ಸಹಿಸಲಾಗದ ಆಘಾತವೆನಿಸಿದೆ ಕಣೆ. ಮಳೆ ನಿಂತರೂ ತುಂತುರು ಬಿಡದಂತೆ ನಿನ್ನ ನೆನಪುಗಳು ಮಾತ್ರ ಅದನ್ನು ಸಮಾಧಾನವಾಗಿಸುತ್ತಿವೆ. ಒಮ್ಮೊಮ್ಮೆ ನಿನ್ನ ನೆನಪಿನ ಕುರಿತು ಬರೆಯುವಾಗ, ಜೊತೆಗೆ ಕಳೆದ ಪ್ರತಿಯೊಂದು ಕ್ಷಣವು ಮನಸ್ಸಿನ ಅಲೆಯನ್ನಾಗಿಸಿ, ಹೃದಯದ ಅಂತರಾಳದಲ್ಲಿ ಹೊಸದಾಗಿ ಮೂಡುತ್ತವೆ. ಪ್ರೀತಿಯ ತೀವ್ರತೆಯನ್ನು ಸಹಿಸುವ ಬಲವನ್ನು ನಿನ್ನಿಂದಲೇ ನನಗೆ ಸಿಕ್ಕಿದ್ದೆಂದರೆ ತಪ್ಪಾಗಲಾರದು! ಏಕೆಂದರೆ ನೆನಪುಗಳಲ್ಲಿ ಜೀವಂತವಾಗಿರುವ ಈ ಪ್ರೀತಿ ಎಂದಿಗೂ ಕಾಲದೊಂದಿಗೆ ಮಾಸದು ಕಣೆ ಮುದ್ದು. ಹತ್ತಿರವಿದ್ದಾಗ ನಿನಗೆ ಹೇಳದಿದ್ದ ಅದೆಷ್ಟೋ ಪ್ರೀತಿಯ ಮಾತುಗಳು, ಈಗ ನಿನ್ನೊಡನೆ ಇಲ್ಲದಿರುವಾಗ ನನ್ನ ಮನಸ್ಸಿನ ಕದ ತಟ್ಟಿ ಆಚೆ ಬರಲು ಅಣಿಯಾಗಿವೆ.

ಒಮ್ಮೊಮ್ಮೆ ಹಗಲಾಗಿ ಮತ್ತೊಮ್ಮೆ ಇರುಳಾಗಿ ಕಾಡುವ ನೆನಪುಗಳು ಒಲವಿನ ಗೆಲುವಿಗಾಗಿ ಹಾತೊರೆದು ಬಿಟ್ಟೂ ಬಿಡದೆ ಕಾಡುವ ಸೋನೆಯ ಹನಿಯಂತೆ ನಿನ್ನ ನಗುವಿನ ಸದ್ದು ಮತ್ತೆ ನನ್ನ ಕಿವಿ ತಾಕಲು ಹಾತೊರೆಯುತ್ತಾ ಎಲ್ಲಾ ನೆನಪುಗಳೂ ಇನ್ನೂ ಜೀವಂತವಾಗಿವೆ ಕಣೆ. ಹುಚ್ಚನ ಭಾಷೆ ಅರ್ಥ ಆಗದಿದ್ದರೂ ಖಂಡಿತವಾಗಿಯೂ ಒಲವಿನ ಮಿಡಿತ ಅರ್ಥವಾಗಿರುತ್ತದೆ. ಏನೇ ಆಗಲಿ ಈ ಮನಸ್ಸಿನ ಮುನಿಸು ತೊರೆದು ನಲುಗದ ಪ್ರೀತಿಯನ್ನು ನೀಡಲು ಮತ್ತೊಮ್ಮೆ ಬರುತ್ತೀಯಾ ತಾನೆ?

ಪ್ರಕೃತಿಯ ಕಲಾತ್ಮಕತೆ: ಗಂಡಿಕೋಟಾದ ಗ್ರ್ಯಾಂಡ್ ಕ್ಯಾನ್ಯನ್

● ಅಶ್ವಿನಿ ಸುನಿಲ್

ಯುನೈಟೆಡ್ ಸ್ಟೇಟ್ಸ್‌ನ ಅರಿಝೋನಾದಲ್ಲಿರುವ ಗ್ರಾಂಡ್ ಕ್ಯಾನ್ಯನ್ ಬಗ್ಗೆ ಕೇಳಿರುತ್ತೀರಿ. ಕೊಲೆರಡೋ ನದಿಯ ಕೊರತದಿಂದ ಕಂದಕಗಳು ಉಂಟಾಗಿ ರಮಣೀಯ ದೃಶ್ಯವನ್ನು ಸೃಷ್ಟಿಸಿದೆ. ಪ್ರಕೃತಿಯೆಂಬ ಶಿಲ್ಪಿಯ ಜಾದೂವನ್ನು ನೋಡಬೇಕಾದರೆ ಅಮೆರಿಕಕ್ಕೇ ಹೋಗಬೇಕೆಂದಿಲ್ಲ, ಪಕ್ಕದ ಆಂಧ್ರಪ್ರದೇಶದ ಕಡಪ ಜಿಲ್ಲೆಯ, ಗಂಡಿಕೋಟಾದಲ್ಲಿ ಅಂತಹುದೇ ಸುಂದರ ಕಲಾತ್ಮಕ ದೃಶ್ಯವಿರುವ 'ಗ್ರಾಂಡ್ ಕ್ಯಾನ್ಯನ್ ಆಫ್ ಇಂಡಿಯಾ' ನಮ್ಮನ್ನು ಮೋಡಿ ಮಾಡುತ್ತದೆ.

ಕಲ್ಲು ಬಂಡೆಗಳ ಮಧ್ಯೆ ಹರಿಯುವ ನೀರಿನ ರಭಸಕ್ಕೆ ಕಾಲಕ್ರಮೇಣ ಬಂಡೆಗಳು ಸವೆದು, ಕೊರಕಲು ರೂಪುಗಳುತ್ತವೆ. ಎರ್ರಮಲಾ ಬೆಟ್ಟದ ತಟದಲ್ಲಿರುವ ಗಂಡಿಕೋಟ ಎಂಬ ಹಳ್ಳಿಯಲ್ಲಿ ಪೆನ್ನಾ ನದಿಯು ಹರಿದು ಹೋಗುತ್ತಾ, ಹೀಗೆ ಆಳವಾದ ಕೊರಕಲು ಸೃಷ್ಟಿಸಿದೆ. ಪ್ರಕೃತಿಯೇ ಸೃಷ್ಟಿಸಿದ ಈ ಕಣಿವೆಯ ಸೌಂದರ್ಯವನ್ನು ನೋಡುತ್ತಾ ಕುಳಿತರೆ ಎದ್ದು ಬರಲು ಮನಸ್ಸಾಗದು.

ಬೆಂಗಳೂರಿನಿಂದ ಸುಮಾರು 280 ಕಿಲೋ ಮೀಟರ್ ದೂರದಲ್ಲಿರುವ ಗಂಡಿಕೋಟಾ ವಾರಾಂತ್ಯದಲ್ಲಿ ಭೇಟಿ ನೀಡಬಹುದಾದ ಸುಂದರ ಜಾಗ. ಬಸ್ಸು, ರೈಲು ಅಥವಾ ಕಾರಿನ ಮೂಲಕ ಗಂಡಿಕೋಟಾಗೆ ಹೋಗಬಹುದು. ಇತರ ಸಮಯದಲ್ಲಿ 40 ಡಿಗ್ರಿಗಿಂತಲೂ ಹೆಚ್ಚು ಉಷ್ಣತೆ ಇರುವ ಕಾರಣ ಅಕ್ಟೋಬರ್‌ನಿಂದ ಫೆಬ್ರವರಿ ಇಲ್ಲಿಗೆ ಭೇಟಿ ನೀಡಲು ಪ್ರಶಸ್ತಕಾಲ.ಪ್ರಾಕೃತಿಕ ಸೌಂದರ್ಯವಷ್ಟೇ ಅಲ್ಲ ಐತಿಹಾಸಿಕವಾಗಿಯೂ ಗಂಡಿಕೋಟಾ ಮಹತ್ವವನ್ನು ಪಡೆದಿದೆ

ಗಂಡಿಕೋಟದ ಇತಿಹಾಸ: ಕಲ್ಯಾಣಿ ಚಾಲುಕ್ಯರು, ಸುಲ್ತಾನರು, ಪೆಮ್ಮಸಾನಿ ನಾಯಕರು, ಮೊಘಲರು, ವಿಜಯನಗರದ ಅರಸರು ಹೀಗೆ ಹಲವಾರು ರಾಜವಂಶದ ಅಧಿಕಾರ ಕೇಂದ್ರವಾಗಿತ್ತು ಗಂಡಿಕೋಟ.

ಪೆನ್ನಾ ನದಿಯ ಗಾರ್ಜ್ ನ ವಿಹಂಗಮ ನೋಟವನ್ನು ಕಾಣಬಹುದಾದ ವ್ಯೂ ಪಾಯಿಂಟ್ ಇದೆ. ಕ್ಯಾಂಪಿಂಗ್ ಮಾಡಲು ಅನುಕೂಲವಾಗುವಂತೆ ಟೆಂಟ್ ಸೌಲಭ್ಯವೂ ಇಲ್ಲಿದೆ .

ನಿಮಗೆ ಅಡ್ವೆಂಚರ್ ಆಕ್ಟಿವಿಟೀಸ್ ಇಷ್ಟವೇ? ಅದಕ್ಕೂ ಅವಕಾಶ ಇಲ್ಲಿದೆ. ರಾಕ್ ಕ್ಲೈಂಬಿಂಗ್, ಟ್ರೆಕಿಂಗ್, ಕಾಯಾಕಿಂಗ್, ಬೋಟಿಂಗ್ ಮೊದಲಾದ ಚಟುವಟಿಕೆಗಳಿವೆ.

ಸಮಯಾವಕಾಶವಿದ್ದರೆ ಸುತ್ತಮುತ್ತಲಿರುವ ಇನ್ನೂ ಹಲವಾರು ಪ್ರಸಿದ್ಧ ಸ್ಥಳಗಳಿಗೆ ಭೇಟಿ ನೀಡಬಹುದು. ಅಹೋಬಿಲಂನ ನವ ನರಸಿಂಹ ಸ್ವಾಮಿ ದೇವಾಲಯ,ಯಾಗಂಟಿ ಉಮಾಮಹೇಶ್ವರಿ ದೇವಸ್ಥಾನ, ಬೇಲಂ ಗುಹೆ ಮೊದಲಾದ ಸ್ಥಳಗಳು ಗಂಡಿಕೋಟಾದಿಂದ ನೂರು ಕಿಲೋಮೀಟರ್‌ಗಿಂತಲೂ ಕಡಿಮೆ ಅಂತರದಲ್ಲಿರುವ ಇತರ ಪ್ರೇಕ್ಷಣೀಯ ಸ್ಥಳಗಳು.

ಮನುಷ್ಯನಿಂದ ನಿರ್ಮಿತವಾದ ದೇವಾಲಯ, ಮಸೀದಿ,ಕೋಟೆ ಹೀಗೆ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿದ್ದರೆ, ಪ್ರಕೃತಿಯೇ ನಿರ್ಮಿಸಿದ ಗಂಡಿಕೋಟ ಕಣಿವೆ ಮಾತ್ರ ತನ್ನ ಸೌಂದರ್ಯವನ್ನು ಇನ್ನೂ ಉಳಿಸಿಕೊಂಡಿರುವುದು ಮನುಷ್ಯನಿಗಿಂತಲೂ ಪ್ರಕೃತಿಯೇ ಶಕ್ತಿಶಾಲಿ ಎನ್ನುವುದನ್ನು ತೋರಿಸುತ್ತದೆ.

ಸಮಾಚಾರ ಸಣ್ಣದಲ್ಲ

ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಬಳ್ಳಾರಿ: ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿಮ ಕಡ್ಡಿ ರಾಂಪುರ ಮೂಲದ ಯಮುನಾ ನಾಯ್ಕ ಎನ್ನುವ 45 ವರ್ಷದ ವ್ಯಕ್ತಿ ಕೌಟುಂಬಿಕ ಕಲಹದಿಂದ ಅ.12 ರಂದು ನಗರದ ಬಂಡಿಹಟ್ಟಿ ಬಳಿಯ ಯಲ್ಲಮ್ಮ ದೇವಸ್ಥಾನ ಹತ್ತಿರದ ಹೆಚ್ ಎಲ್‌ಸಿ ಕಾಲುವೆಗೆ ಧುಮುಕಿ ಕಾಣೆಯಾಗಿದ್ದು, ಪತ್ತೆಗೆ ಸಹಕರಿಸಬೇಕೆಂದು ಕೌಲ್‌ಬಜಾರ್ ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಅವರು ಮನವಿ ಮಾಡಿದ್ದಾರೆ.

ಕಾಣೆಯಾದ ವ್ಯಕ್ತಿಯ ಚಹರೆ: ಎತ್ತರ 5 ಅಡಿ, ದುಂಡು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಬಲಗೈ ಮೇಲೆ ಕೈರವಿ ಅಂತಾ ಹಚ್ಚೆ ಇರುತ್ತದೆ. ವ್ಯಕ್ತಿ ಕಾಣೆಯಾದ ಸಂದರ್ಭದಲ್ಲಿ ಹಳದಿ ಬಣ್ಣದ ಚೆಕ್ಸ್ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಈ ಮೇಲ್ಕಂಡ ಚಹರೆ ಗುರುತುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಕೌಲ್‌ಬಜಾರ್ ಪೊಲೀಸ್ ಠಾಣೆಯ ಪಿ.ಐ ಮೊ:9480803047, ಪಿ.ಎಸ್.ಐ ಮೊ:9480803085 ಅಥವಾ cowlbazarblr@ksp.gov.in ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೇಣುಗೋಪಾಲಗೆ ಪಿಎಚ್.ಡಿ ಪದವಿ

ಬಳ್ಳಾರಿ: ತುರುವೇಕೆರೆಯ ತಾಲೂಕು ಎನ್‌ಆರ್ ಎಲ್‌ಎಂ ವಿಭಾಗದಲ್ಲಿ ತಾಲ್ಲೂಕು ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ವೇಣುಗೋಪಾಲ ಜಿ.ಎಸ್ ಅವರಿಗೆ ಇಲ್ಲಿನ ವಿಜಯನಗರ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿದೆ.

ವಿವಿಯ ಸಮಾಜಕಾರ್ಯ ಅಧ್ಯಯನದ ವಿಭಾಗದ ಸಂಶೋಧನಾ ವಿದ್ಯಾರ್ಥಿ ವೇಣುಗೋಪಾಲ ಜಿ.ಎಸ್ ಅವರು ಸಮಾಜಕಾರ್ಯ ಅಧ್ಯಯನ ನಿಕಾಯದ ಸಮಾಜಕಾರ್ಯ ಅಧ್ಯಯನದ ವಿಭಾಗದ ಡಾ. ಕುಮಾರ ಸಹಾಯಕ ಪ್ರಾಧ್ಯಾಪಕ ಅವರ ಮಾರ್ಗದರ್ಶನದಲ್ಲಿ ''ಎ ಸ್ಟಡಿ ಆನ್ ಇಂಪ್ಯಾಕ್ಟ್ ಆಫ್ ಲೇಬರ್ ವೆಲ್ಫೇರ್ ಫೆಸಿಲಿಟೀಸ್ ಆನ್ ವುಮೇನ್ ಎಂಪ್ಲಾಯಿಸ್ ಇನ್ ಗಾರ್ಮೆಂಟ್ ಇಂಡಸ್ಟ್ರೀಸ್ ಆಫ್ ತುಮಕೂರು ಅರ್ಬನ್'' ಎಂಬ ವಿಷಯದ ಮೇಲೆ ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಲಾಗಿದೆ ಎಂದು ವಿವಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿವಿಧ ಹುದ್ದೆಗೆ ಇಂದು ನೇರ ಸಂದರ್ಶನ

ಬಳ್ಳಾರಿ: ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಅ.16ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನೇರ ಸಂದರ್ಶನ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ತಿಳಿಸಿದ್ದಾರೆ. ನೇರ ಸಂದರ್ಶನವು ನಗರದ ಕಪ್ಪಗಲ್ ರಸ್ತೆಯ ಭರತ್ ಕುಮಾರ್ ಆಸ್ಪತ್ರೆ ಹತ್ತಿರದ ಭ್ರಮಯ್ಯ ಕಾಂಪೌಂಡ್ ಎದುರುಗಡೆಯ ಐಎಫ್‌ಎಲ್ ಸಮಸ್ತ ಫೈನಾನ್ಸ್ ಲಿಮಿಟೆಡ್‌ನಲ್ಲಿ ನಡೆಯಲಿದ್ದು, ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು. ಈ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ.

ಬೇಕಾದ ದಾಖಲೆ: ಆಧಾರ್ ಕಾರ್ಡ್, ಸ್ವ ವಿವರಗಳೊಂದಿಗೆ ಹಾಜರಾಗಬೇಕು. ಪಿಯುಸಿ, ಐಟಿಐ, ಡಿಪ್ಲೋಮಾ ಮತ್ತು ಪದವಿ ವಿದ್ಯಾರ್ಹತೆ ಹೊಂದಿದ ಆಸಕ್ತ ಅಭ್ಯರ್ಥಿಗಳು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 9663263086, 9900827768, 6360408094 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರತಿಯೊಂದು ವಾರ್ಡ್‌ಗಳಿಗೆ (ಒಟ್ಟು 39 ವಾರ್ಡ್) ವಾರ್ಡ್ ಸಮಿತಿ ರಚಿಸುವ ಕುರಿತು ಆಸಕ್ತ ಸಂಘ ಸಂಸ್ಥೆಗಳ ಪ್ರತಿನಿಧಿ ಮತ್ತು ಸಾರ್ವಜನಿಕರಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ನವೆಂಬರ್ 15 ರ ವರೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಲಾಗಿದೆ. 39 ವಾರ್ಡ್‌ಗಳಿಗೆ ಪೂರ್ಣ ಪ್ರಮಾಣದಲ್ಲಿ ಅರ್ಜಿಗಳು ಸ್ವೀಕೃತವಾಗದೆ ಇರುವುದರಿಂದ, ಪುನ: ಅರ್ಜಿ ಆಹ್ವಾನಿಸಲಾಗಿದೆ. ವಾರ್ಡ್ ಸಮಿತಿ ಸದಸ್ಯರನ್ನಾಗಿ ಆಯ್ಕೆಯಾಗಲು ಆಸಕ್ತ ಸಂಘ ಸಂಸ್ಥೆಯ ಪ್ರತಿನಿಧಿ ಮತ್ತು ಸಾರ್ವಜನಿಕರು ಪಾಲಿಕೆಯ ಕಚೇರಿಗೆ ಅರ್ಜಿ ಸಲ್ಲಿಸಬಹುದು. ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮಹಾನಗರ ಪಾಲಿಕೆಯ ವಲಯ ಕಚೇರಿ-1, 2, 3 ಅಥವಾ ವೆಬ್‌ಸೈಟ್ www.ballaricity.mrc.gov.inನ್ನು ಸಂಪರ್ಕಿಸಬಹುದು.

{ಲಕ್ಷ್ಮೀ ಹೆಬ್ಬಾಳ್ಕರ್} ಸಚಿವೆ

ಈ ಬಾರಿ ರಾಜ್ಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು ಜಲಾಶಯಗಳು, ಕೆರೆಕಟ್ಟೆಗಳು ತುಂಬಿವೆ. ರೈತರ ಮುಖದಲ್ಲಿ ಸಂತಸ ಮನೆಮಾಡಿದೆ. ಉತ್ತರ ಕರ್ನಾಟಕದ ಜೀವನಾಡಿ ಮಲಪ್ರಭಾ ಜಲಾಶಯದಲ್ಲಿ ರೈತರ ಅಗತ್ಯಕ್ಕೆ ತಕ್ಕಷ್ಟು ನೀರು ಲಭ್ಯವಾಗಲಿದೆ.

ಸಂಡೂರಿನಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ | ಮುಖ್ಯಮಂತ್ರಿ ಸಿದ್ದರಾಮಯ್ಯ

ಅಭಿವೃದ್ಧಿ ಕಾರ್ಯಗಳಿಗೆ ಅನುದಾನದ ಕೊರತೆಯಿಲ್ಲ

ಬಳ್ಳಾರಿ: ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯಾಗುತ್ತಿದ್ದು, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಯಾವುದೇ ರೀತಿಯ ಅನುದಾನದ ಕೊರತೆಯಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ಸಂಡೂರು ಪಟ್ಟಣದ ಅಗ್ನಿಶಾಮಕದಳ ಮುಂಭಾಗದ ವಿಶ್ವಾಸ್ ಯು.ಲಾಡ್ ಮೈದಾನದ ಆವರಣದಲ್ಲಿ ಆಯೋಜಿಸಿದ್ದ ಸಂಡೂರು ತಾಲೂಕಿನ ಸಾಧನಾ ಸಮಾವೇಶ, ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ವಿವಿಧ ಯೋಜನೆಗಳಿಗೆ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಸಂಡೂರು ಭಾಗದಲ್ಲಿ 280 ಕೋಟಿ ರು. ವೆಚ್ಚದಲ್ಲಿ ವಿವಿಧ ಯೋಜನೆಗಳ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. 2004 ರಿಂದ 2024 ರವರೆಗೆ 1,216 ಕೋಟಿ ರು. ಅನುದಾನ ನೀಡಲಾಗಿದೆ. ರು.160.00 ಕೋಟಿ ವೆಚ್ಚದಲ್ಲಿ ನಿಡುಗುರ್ತಿ ಸೇರಿದಂತೆ 58 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಜನಸಂಖ್ಯೆಗೆ ಅನುಗುಣವಾಗಿ ಪ.ಜಾತಿ ಮತ್ತು ಪ.ವರ್ಗದವರ ಅಭಿವೃದ್ಧಿಗಾಗಿ ಹಣ ಮೀಸಲಿಟ್ಟು, ಖರ್ಚು ಮಾಡುತ್ತಿದ್ದೇವೆ, ದೇಶದಲ್ಲಿಯೇ ಎಸ್‌ಸಿ, ಎಸ್‌ಟಿ ಕಾಯ್ದೆಯನ್ನು ಜಾರಿಗೊಳಿಸಿದ ರಾಜ್ಯ ನಮ್ಮದಾಗಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರ ಅಭಿವೃದ್ಧಿಗಾಗಿಯೇ 33,182 ಕೋಟಿ ರೂ. ಮೀಸಲಿರಿಸಲಾಗಿದೆ ಎಂದರು.

ಸಂಡೂರು ಪಟ್ಟಣದಲ್ಲಿ ವಿವಿಧ ಯೋಜನೆಗಳಿಗೆ ಉದ್ಘಾಟನೆ ನೆರವೇರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಅಭಿವೃದ್ಧಿ:

ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ನಮ್ಮ ಸರಕಾರ ರಚನೆಯಾದ 8 ತಿಂಗಳಲ್ಲಿಯೇ ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಪಂಚ ಗ್ಯಾರಂಟಿಗಳಿಂದ ರಾಜ್ಯವು ಅಭಿವೃದ್ಧಿ ಕಾಣುತ್ತಿದೆ. ರಾಜ್ಯದಲ್ಲಿ ಶಕ್ತಿ ಯೋಜನೆಯಡಿ ಸುಮಾರು 300 ಕೋಟಿ ಮಹಿಳೆಯರು ಬಸ್‌ಗಳಲ್ಲಿ ಪ್ರಯಾಣಿಸಿದ್ದಾರೆ. ಗೃಹಲಕ್ಷ್ಮಿ ಯೋಜನೆಯಡಿ 1.21 ಮಹಿಳೆಯರು ಪ್ರತಿ ತಿಂಗಳು 2000 ರೂ. ಹಣ ಪಡೆಯುತ್ತಿದ್ದಾರೆ. ಗೃಹಜ್ಯೋತಿ ಯೋಜನೆಯಡಿ ರಾಜ್ಯದ 1.60 ಕೋಟಿ ಮನೆಗಳಿಗೆ 200 ಯೂನಿಟ್ ವಿದ್ಯುತ್ ನೀಡಲಾಗಿದೆ. ಎರಡು ವರ್ಷಗಳ ಕಾಲ ನಿರುದ್ಯೋಗ ಪದವೀಧರ ಮತ್ತು ಡಿಪ್ಲೋಮಾ ಪದವೀಧರರಿಗೆ ಪ್ರತಿ ತಿಂಗಳು ಕ್ರಮವಾಗಿ 3 ಸಾವಿರ ಹಾಗೂ 2 ಸಾವಿರ ಹಣ ನೀಡಲಾಗುತ್ತಿದೆ ಎಂದರು.

ಈ ವೇಳೆ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್. ಗಣೇಶ್, ಇತರೆ ಶಾಸಕರುಗಳಾದ ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ಡಾ.ಶ್ರೀನಿವಾಸ, ಲತಾ ಮಲ್ಲಿಕಾರ್ಜುನ, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಡಾ.ಬಾಬು ಜಗನ್ ಜೀವನ ರಾಮ್ ಚರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ಮೆಹರೋಜ್ ಖಾನ್, ಪುರಸಭೆ ಅಧ್ಯಕ್ಷ ಸಿರಾಜ್ ಹುಸೇನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ತ್ರಿಲೋಕಚಂದ್ರ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಬಳ್ಳಾರಿ ವಲಯ ಐಜಿಪಿ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ.ವಿ.ಜೆ., ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಉಪವಿಭಾಗಾಧಿಕಾರಿ ಪ್ರಮೋದ್ ಸೇರಿದಂತೆ ಚುನಾಯಿತ ಪ್ರತಿನಿಧಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಾರ್ವಜನಿಕರು ಹಾಗೂ ಇತರರು ಉಪಸ್ಥಿತರಿದ್ದರು.

> **2013ರ ನಮ್ಮ ಸರಕಾರದ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 15 ಲಕ್ಷ ಮನೆಗಳನ್ನು ಕಟ್ಟಲು ಗುರಿ ಹೊಂದಲಾಗಿತ್ತು. ಸಂಡೂರು ಭಾಗದಲ್ಲಿಯೇ 12,000 ಮನೆಗಳನ್ನು ನೀಡಲಾಗಿತ್ತು. ಸಂಡೂರು ತಾಲ್ಲೂಕಿನ ಸಮಗ್ರ ಅಭಿವೃದ್ಧಿಗಾಗಿ ನಮ್ಮ ಸರ್ಕಾರವು 1216.38 ಕೋಟಿ ರು. ಅನುದಾನವನ್ನು ಬಿಡುಗಡೆ ಮಾಡುವುದರ ಮೂಲಕ ಸರ್ವರ ಏಳಿಗೆಗಾಗಿ ಶ್ರಮಿಸುವ ಸರಕಾರ ನಮ್ಮದು.**
>
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಶ್ರೀ ವಾಲ್ಮೀಕಿ ಜಯಂತ್ಯುತ್ಸವ ನಾಳೆ

ಬಳ್ಳಾರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬಳ್ಳಾರಿ ಮಹಾನಗರ ಪಾಲಿಕೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಶ್ರೀಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಅ.17 ರಂದು ಬೆಳಗ್ಗೆ 10.30 ಗಂಟೆಗೆ ನಗರದ ನಲ್ಲಚೆರವು ಪ್ರದೇಶದ ಶ್ರೀಮಹರ್ಷಿ ವಾಲ್ಮೀಕಿ ಭವನದಲ್ಲಿ ಏರ್ಪಡಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ವಾಲ್ಮೀಕಿ ಭವನದ ಆವರಣದಲ್ಲಿನ ವಾಲ್ಮೀಕಿ ಪುತ್ಥಳಿಗೆ ಪೂಜೆ ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್ ಗಣೇಶ್, ಸಂಸದರಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಶಾಸಕರಾದ ಡಾ.ಸೈಯದ್ ನಾಸೀರ್ ಹುಸೇನ್, ಬಿ.ಎಂ.ನಾಗರಾಜ, ನಾರಾ ಭರತ್ ರೆಡ್ಡಿ, ಡಾ. ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ. ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು ಬಳ್ಳಾರಿಯ ಮಹರ್ಷಿ ವಾಲ್ಮೀಕಿ ನಾಯಕರ ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಬಿ.ರಾಮ್ ಪ್ರಸಾದ್ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

> **ಕವಯಿತ್ರಿಯಿಂದ ಉಪನ್ಯಾಸ**
>
> ಕಲಬುರಗಿಯ ಲೇಖಕಿ ಹಾಗೂ ಕನ್ಯಾ ಪ್ರೌಢಶಾಲೆ ನೂತನ ವಿದ್ಯಾಲಯದ ಸಹ ಶಿಕ್ಷಕರಾದ ಲಕ್ಷ್ಮೀದೇವಿ ಎಸ್.ರತ್ನಗಿರಿ ವಾಲ್ಮೀಕಿ ಜಯಂತಿ ಕುರಿತು ಉಪನ್ಯಾಸ ನೀಡುವರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಅಂದು ಬೆಳಗ್ಗೆ 9 ಗಂಟೆಗೆ ನಗರದ ವಾಲ್ಮೀಕಿ ವೃತ್ತ(ಎಸ್‌ಪಿ ಸರ್ಕಲ್)ದಲ್ಲಿರುವ ವಾಲ್ಮೀಕಿ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ಪಿ.ಪ್ರಮೋದ್ ಕುಮಾರ್, ಬಳ್ಳಾರಿ ಮಹಾನಗರ ಪಾಲಿಕೆಯ ಆಯುಕ್ತ ಜಿ.ಖಲೀಲ್ ಸಾಬ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ್.ಕೆ ಶಂಕಿನದಾಸರ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಹೆಚ್. ಮಲ್ಲಿಕಾರ್ಜುನ ಸೇರಿದಂತೆ ಜಿಲ್ಲೆಯ ಎಲ್ಲಾ ಗೌರವಾನ್ವಿತ ಚುನಾಯಿತ ಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ವಾಲ್ಮೀಕಿ ಸಮಾಜದ ಮುಖಂಡು ಹಾಗೂ ಎಲ್ಲಾ ಸಾರ್ವಜನಿಕರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

56 ಶಿಕ್ಷಕರಿಗೆ ಗುರು ವಂದನೆ ಸಮರ್ಪಣೆ

ಹೂವಿನಹಡಗಲಿ: ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಆದ್ಯತೆ ನೀಡಬೇಕು ಎಂದು ತುಂಗಭದ್ರಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಎಂ.ಧರ್ಮಣ್ಣ ಹೇಳಿದರು.

ಪಟ್ಟಣದ ತುಂಗಭದ್ರಾ ಪ್ರೌಢಶಾಲೆಯಲ್ಲಿ 2000-01 ಮತ್ತು 2003-04ನೇ ಸಾಲಿನ ಹಳೆಯ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಆಂಗ್ಲ ಭಾಷೆಯಲ್ಲಿ ವ್ಯಾಮೋಹದಿಂದ ಕನ್ನಡಕ್ಕೆ ಹಿನ್ನಡೆ ಉಂಟಾಗಿದೆ. ತುಂಗಭದ್ರಾ ವಿದ್ಯಾ ಸಂಸ್ಥೆಯು ಮೊದಲಿನಿಂದಲೂ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಿದ ಹೆಗ್ಗಳಿಕೆ ಹೊಂದಿದೆ ಎಂದು ತಿಳಿಸಿದರು. ಸಂಸ್ಥೆಯ ತುಂಗಭದ್ರಾ ಪ್ರಾಥಮಿಕ ಪ್ರೌಢಶಾಲೆಯ ಹಳೆಯ ಹಾಗೂ ಈಗಿನ ಒಟ್ಟು 56 ಶಿಕ್ಷಕರನ್ನು ಗುರುವಂದನಾ ಕಾರ್ಯಕ್ರಮದಲ್ಲಿ ಗೌರವ ಸನ್ಮಾನ ನೆರವೇರಿಸಲಾಯಿತು. ಶಿಕ್ಷಕರಾದ ಹೇಮಲತಾ ಗಾಡ್ವಿನ್, ಹಣ್ಣಿ ಚನ್ನಪ್ಪ, ಮಲ್ಲಮ್ಮ, ಜ್ಯೋತಿ, ದೇರಮ್ಮ, ಸುವರ್ಣ, ಶಿಲ್ಪಿ ನಿರಂಜನ ಮೂರ್ತಿ, ಸಿದ್ದೇಶ್, ದ್ವಾರಕೀಶ್ ರೆಡ್ಡಿ, ವೈ.ಜಯಮ್ಮ, ಕಡ್ಲಿ ಗುರುಬಸವರಾಜ ಸ್ವಾಮಿನಾಥ ಮಾತನಾಡಿ ಅಭಿಪ್ರಾಯ ಹಂಚಿಕೊಂಡರು. ಮುಖ್ಯ ಗುರುಗಳಾದ ಸುರೇಶ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಹಳೆಯ ವಿದ್ಯಾರ್ಥಿಗಳಾದ ರಾಘವೇಂದ್ರ ಭಟ್, ದೀಪಾ ಸೊಪ್ಪಿನ, ಮಧು ಪ್ರಸಾದಿ ಮಠ, ಸುದರ್ಶನ್ ಬಣಕಾರ, ತರುಣ್, ಸಂಜ್ಯೋತಾ, ಕತಾ ಸೊಪ್ಪಿನ, ಬಸವರಾಜ, ಶ್ರೇಣಿಕ್ ಮನದಾಳದ ಮಾತನಾಡಿ ತಮ್ಮ ಹಳೆಯ ನೆನಪುಗಳನ್ನು ಬಿಚ್ಚಿಟ್ಟರು. ಎಂ.ಡಿ.ಪತ್ರ, ಚೇತನ್ ಹೊನ್ನಪ್ಪನವರ್, ರ ಕುಮಾರ್ ಎಸ್.ಎಂ, ಗಿರಿರಾಜ, ಪುನೀತ್ ಆರ್, ಪ್ರದೀಪ್, ಕೆ ಚೇತನ್, ಕೆ ಅಶೋಕ್, ಸುನೀಲ್ ಶೆಟ್ಟಿ ಇತರರು ಗುರುವಂದನಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

56 ಶಿಕ್ಷಕರನ್ನು ಗುರುವಂದನಾ ಕಾರ್ಯಕ್ರಮದಲ್ಲಿ ಗೌರವಿಸಿ ಸನ್ಮಾನಿಸಲಾಯಿತು.

> **ಸಂಸ್ಥೆಯ ಪ್ರಾಥಮಿಕ ಪ್ರೌಢಶಾಲೆಗಳಲ್ಲಿ ಓದುವ ಮಕ್ಕಳಿಗೆ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡಬೇಕು. ಕನ್ನಡ ಭಾಷೆಯಲ್ಲಿ ಓದಿದವರೇ ಹೆಚ್ಚು ಸಾಧನೆ ಮಾಡಿದ್ದಾರೆ. ಸಂಸ್ಥೆ ಕಟ್ಟಿ ಬೆಳೆಸಿದ ಸರ್ವ ಪದಾಧಿಕಾರಿಗಳ ಪರಿಶ್ರಮ ಸ್ಮರಿಸಿದರು.**
>
> -ಡಾ.ಎಂ.ಧರ್ಮಣ್ಣ, ತುಂಗಭದ್ರಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ

ತುಂಗಭದ್ರಾದಿಂದ 2ನೇ ಬೆಳೆಗೂ ನೀರು

ಹೊಸಪೇಟೆ: ರೈತರ ಜೀವನಾಡಿ ತುಂಗಭದ್ರಾ ಜಲಾಶಯದಿಂದ ಎರಡನೇ ಬೆಳೆಗೂ ನೀರು ಸಿಗುವ ವಿಶ್ವಾಸ ರೈತರಲ್ಲಿ ಮೂಡಿದೆ.

ಲಕ್ಷಾಂತರ ಹೆಕ್ಟೇರ್ ಕೃಷಿಭೂಮಿಗೆ ನೀರುಣಿಸುತ್ತಿರುವ ತುಂಗಭದ್ರೆಯನ್ನು ತಾಯಿ ಸ್ವರೂಪಿಯಾಗಿ ಕಾಣುವ ಅಚ್ಚುಕಟ್ಟು ಪ್ರದೇಶದ ರೈತರಿಗೆ ಕಳೆದ ಆಗಸ್ಟ್ ತಿಂಗಳಲ್ಲಿ ಆಘಾತ ಎದುರಾಗಿತ್ತು. ಸಂಪೂರ್ಣ ತುಂಬಿದ್ದ ಜಲಾಶಯದ ಕ್ರಸ್ಟ್‌ಗೇಟ್ 19 ಕಳಚಿ ಬಿದ್ದಿದ್ದರಿಂದ ರೈತರು ಒಂದನೇ ಬೆಳೆಗೂ ನೀರು ಸಿಗದೆ ನಷ್ಟ ಹೊಂದು ಭೀತಿ ಎದುರಿಸುತ್ತಿದ್ದರು.

ಆದರೆ, ರಾಷ್ಟ್ರೀಯ ಡ್ಯಾಂ ಗೇಟ್ ತಜ್ಞ ಕನ್ನಯ್ಯ ನಾಯ್ಡು ನೇತೃತ್ವದ ಎಂಜಿನಿಯರರು ಮತ್ತು ಕಾರ್ಮಿಕರ ಶ್ರಮದ ಪ್ರತಿಫಲವಾಗಿ ಒಂದೇ ವಾರದೊಳಗೆ ದುರಸ್ತಿ ಕಾರ್ಯ ಮುಗಿಸಲಾಗಿತ್ತು. ಒಂದೇ ತಿಂಗಳಲ್ಲಿ ಡ್ಯಾಂ ಭರ್ತಿಯಾಗಿ ಮೊದಲನೇ ಬೆಳೆಗೆ ಸಮಸ್ಯೆ ಇಲ್ಲದಂತಾಗಿತ್ತು. ಆದರೆ, ಡ್ಯಾಂ ಹರಿದುಬರುತ್ತಿರುವ ಒಳಹರಿವಿನಲ್ಲಿ ಗಣನೀಯ ಏರಿಕೆಯಾಗುತ್ತಿರುವುದು ಮತ್ತು ಸದ್ಯ ಭರ್ತಿಯಾಗಿರುವ ಡ್ಯಾಂನಿಂದ ಎರಡನೇ ಬೆಳೆಗೂ ನೀರು ಸಿಗುವ ನಿರೀಕ್ಷೆಯಲ್ಲಿದ್ದಾರೆ.

105.788 ಟಿಎಂಸಿ ಸಂಗ್ರಹಣಾ ಸಾಮರ್ಥ್ಯದ ಟಿಬಿ ಡ್ಯಾಂ ನಲ್ಲಿ 101.66 ಟಿಎಂಸಿ ನೀರು ಸಂಗ್ರಹವಾಗಿದ್ದು, 1633 ಅಡಿ ಜಲಾಶಯ ಮಟ್ಟದ ಪೈಕಿ 1631.97 ಅಡಿ ದಾಖಲಾಗಿದೆ. ಕಳೆದ ಒಂದು ತಿಂಗಳಿನಿಂದಲೇ ಇದೇ ಮಟ್ಟದಲ್ಲಿ ನೀರು ಸಂಗ್ರಹಣೆಯಾಗಿದ್ದು ಒಳಹರಿವು ಹೆಚ್ಚಾಗುತ್ತಿರುವುದರಿಂದ ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತಿದೆ.

ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆ ಸುರಿಯುತ್ತಿರುವುದರಿಂದ ಟಿಬಿ ಡ್ಯಾಂಗೆ ಹರಿದು ಬರುತ್ತಿರುವ ಒಳಹರಿವಿನ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಕಳೆದ ಮೂರು ದಿನಗಳಿಂದ 82,504 ಕ್ಯುಸೆಕ್ ಒಳಹರಿವು ಹರಿದು ಬರುತ್ತಿದೆ. ಇಷ್ಟೆ ಪ್ರಮಾಣದಲ್ಲಿ 82,324 ಕ್ಯುಸೆಕ್ ಹೊರಹರಿವು ದಾಖಲಾಗಿದೆ.

ಕಳೆದ ಮೂರು ದಿನಗಳಲ್ಲಿಯೇ ಹೆಚ್ಚಿನ ಪ್ರಮಾಣದ ನೀರು ನದಿಗೆ ಹರಿದು ಬಂದಿದೆ. ಮೊದಲ ಬೆಳೆಗೆ 90 ಮತ್ತು 2ನೇ ಬೆಳೆಗೆ 60 ಟಿಎಂಸಿ ನೀರು ಅವಶ್ಯಕ. ಮೊದಲ ಬೆಳೆ ಕೊನೆ ಹಂತದಲ್ಲಿದ್ದು, ಇನ್ನೂ 2 ನೇ ಬೆಳೆಗೂ ನೀರು ಸಿಗುವ ನಿರೀಕ್ಷೆ ಇದೆ. ಸದ್ಯ ಡ್ಯಾಂನಲ್ಲಿ 101 ಟಿಎಂಸಿ ನೀರಿದ್ದು, ನವೆಂಬರ್ ಅಂತ್ಯದ ವೇಳೆಗೆ 7 ರಿಂದ 80 ಟಿಎಂಸಿ ನೀರಿನ ಸಂಗ್ರಹವಿದ್ದರೂ 2 ನೇ ಬೆಳೆಗೆ ಸಮಸ್ಯೆಯಾಗಲ್ಲ. ಕಳೆದ ವರ್ಷ ಬರದಿಂದ ಕಂಗಾಲಾಗಿದ್ದ ರೈತರಿಗೆ ಈ ಬಾರಿ ಎರಡೂ ಬೆಳೆಗಳಿಗೂ ಭರಪೂರ ನೀರು ಸಿಗುವುದರಲ್ಲಿ ಸಂದೇಹವಿಲ್ಲ ಎನ್ನುತ್ತಾರೆ ನೀರಾವರಿ ತಜ್ಞರು.

ತುಂಗಭದ್ರಾ ಜಲಾಶಯ ಭರ್ತಿಯಾಗಿರುವ ಹಿನ್ನೆಲೆ 2ನೇ ಬೆಳೆಗೆ ನೀರು ಸಿಗುವ ವಿಶ್ವಾಸವಿದೆ. ಅಧಿಕಾರಿಗಳು ಸರಿಯಾದ ನಿರ್ವಹಣೆ ಮಾಡಿದರೆ ಸಮಸ್ಯೆಯಾಗಲ್ಲ. ಈ ಬಗ್ಗೆ ಎಚ್ಚರಿಕೆಯಿಂದ ಕ್ರಮ ವಹಿಸಬೇಕಿದೆ. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ಸಮಸ್ಯೆಗಳು ತಲೆ ದೋರುತ್ತಿವೆ ಎನ್ನುತ್ತಾರೆ ಈ ಭಾಗದ ಕೆಲ ರೈತರು.

ಒಂದೇ ವೇದಿಕೆಯಲ್ಲಿ ಗಾಲಿ ರೆಡ್ಡಿ ಸಹೋದರರು!

ಬಳ್ಳಾರಿ: ಚುನಾವಣೆಯಲ್ಲಿ ಪರಸ್ಪರ ವಿರೋಧಿಗಳಂತೆ ಹೋರಾಟ ಮಾಡಿ, ಕಾಂಗ್ರೆಸ್ ಗೆಲುವಿಗೆ ಕಾರಣರಾಗಿದ್ದ ಗಾಲಿ ರೆಡ್ಡಿ ಸಹೋದರರು ಒಂದೇ ವೇದಿಕೆಯಲ್ಲಿ ಮೊದಲ ಬಾರಿಗೆ ಜಂಟಿಯಾಗಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಭಾರತೀಯ ಜನತಾ ಪಾರ್ಟಿಯ ನಗರದ ಜಿಲ್ಲಾ ಕಚೇರಿಯಲ್ಲಿ ಸಕ್ರಿಯ ಕಾರ್ಯಕರ್ತರ ಸಭೆ ನಡೆಯಿತು. ಸಭೆಯಲ್ಲಿ ಮಾಜಿ ಸಚಿವ, ಹಾಲಿ ಗಂಗಾವತಿ ಶಾಸಕ ಗಾಲಿ ಜನಾರ್ಧನರೆಡ್ಡಿ, ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ, ಲಕ್ಷ್ಮೀ ಅರುಣಾ ಅವರು ಪಾಲ್ಗೊಂಡಿದ್ದರು. ಇಬ್ಬರು ಸಹೋದರರು ಅಕ್ಕ ಪಕ್ಕದಲ್ಲಿ ಕೂರದೆ, ನಡುವೆ ವೈ.ಎಂ.ಸತೀಶ್ ಇದ್ದರು. ಆದರೂ ಪರಸ್ಪರ ಮಾತನಾಡಿದ್ದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಹೊಸ ಉತ್ಸಾಹಕ್ಕೆ ಕಾರಣವಾಯ್ತು.

ಮಾಜಿ ಸಚಿವ ಜರ್ನಾರ್ಧನ ರೆಡ್ಡಿ ಮಾತನಾಡಿ, ಚುನಾವಣೆ ದೃಷ್ಟಿಯಿಂದ ನಾವು ಸಹೋದರರು ಪರಸ್ಪರ ವಿರೋಧಿಗಳಂತೆ ಚುನಾವಣೆಯಲ್ಲಿ ಹೋರಾಟ ಮಾಡಿತ್ತು. ಆದರೆ ನಾವು ಎಂದಿಗೂ ಒಂದೇ. ಯಾವುದೇ ಕಾರಣಕ್ಕೂ ನಮ್ಮಲ್ಲಿ ಬಿರುಕು ತರುವ ಶಕ್ತಿಗಳ ಪ್ರಯತ್ನಕ್ಕೆ ಯಶಸ್ಸು ಸಿಗಲ್ಲ. ಜಿಲ್ಲೆಯಲ್ಲಿ ಮತ್ತೊಮ್ಮೆ ಬಿಜೆಪಿಯ ವೈಭವ ತರುವುದೇ ನಮ್ಮ ಮುಖ್ಯ ಗುರಿ ಅದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ಭಾರತೀಯ ಜನತಾ ಪಾರ್ಟಿಯ ನಗರದ ಜಿಲ್ಲಾ ಕಚೇರಿಯಲ್ಲಿ ಸಕ್ರಿಯ ಕಾರ್ಯಕರ್ತರ ಸಭೆ ನಡೆಯಿತು.

ಇದಕ್ಕೆ ಸೋಮಶೇಖರ ರೆಡ್ಡಿ ಅವರು ಸಹ ಸಹೋದರನ ಮಾತುಗಳಿಗೆ ಸಮ್ಮತಿಸಿದಂತೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರಂತೆ. ಈ ಸಭೆಯಲ್ಲಿ ಮಾಜಿ ಸಚಿವ ಶ್ರೀರಾಮುಲು ಗೈರು ಎದ್ದು ಕಾಣುತ್ತಿತ್ತು. ಮತ್ತೆ ಎಲ್ಲರೂ ಒಂದಾಗಿ ನಡೆದರೆ ಕಾಂಗ್ರೆಸ್ ನವರಿಗೆ ಬಿಸಿ ಮುಟ್ಟುವ ಸಾಧ್ಯತೆ ಇದೆ. ಸಭೆಯಲ್ಲಿ ಪಕ್ಷದ ಸಮರ್ಥ ಸಂಘಟನೆಗಾಗಿ ಸದಸ್ಯತ್ವ ಅಭಿಯಾನವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಸಾಧ್ಯ ಎಂದು ಪಕ್ಷದ ಸಂಘಟಕರಿಗೆ ಕರೆ ನೀಡಲಾಯ್ತು.

ಸಮಾರಂಭದಲ್ಲಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು ಮುಖಂಡರುಗಳಾದ ಡಾ.ಎಸ್. ಜೆ.ವಿ.ಮಹಿಪಾಲ್, ಎಸ್. ಗುರುಲಿಂಗನಗೌಡ, ಗೋನಾಳ್ ರಾಜಶೇಖರಗೌಡ, ಹೆಚ್. ಹನುಮಂತಪ್ಪ, ಓಬಳೇಶ, ಮಾಜಿ ಮೇಯರ್ ಡಿ. ವೆಂಕಟರಮಣ, ಬುಡಾ ಮಾಜಿ ಅಧ್ಯಕ್ಷರುಗಳಾದ ದಮ್ಮೂರ್ ಶೇಖರ್, ಮಾರುತಿ ಪ್ರಸಾದ್ ಮೊದಲಾದವರು ಇದ್ದರು.

ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ಅ.28ರಂದು

ಬಳ್ಳಾರಿ: ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಅ.28 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಗರದ ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ತಿಳಿಸಿದ್ದಾರೆ. ಗುತ್ತಿಗೆದಾರರಿಗೆ ಲಭ್ಯವಿರುವ ಆನ್ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ. ಉದ್ಯೋಗದಾತರು ಅ.28 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಬೆಂಬಲ ವ್ಯಕ್ತಿಗಳಾಗಿ ಸೇವೆ ಸಲ್ಲಿಕೆಗೆ ಆಹ್ವಾನ

ಬಳ್ಳಾರಿ: ಜಿಲ್ಲಾ ಮಕಳ ರಕ್ಷಣ ಘಟಕ ವತಿಯಿಂದ ಪೋಕ್ಸೋ ಕಾಯ್ದೆಯಡಿ ಸಂತ್ರಸ್ತರ ಮಕ್ಕಳಿಗೆ ಬೆಂಬಲ ವ್ಯಕ್ತಿಗಳಿಗಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಮತ್ತು ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ ತಿಳಿಸಿದ್ದಾರೆ. ಅರ್ಜಿ ನಮೂನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿಯಿಂದ ಪಡೆದು, ಭರ್ತಿ ಮಾಡಿ ಪೂರಕ ದಾಖಲೆಗಳೊಂದಿಗೆ ಇದೇ ಕಚೇರಿಗೆ ಸಲ್ಲಿಸಬಹುದು. ಆಸಕ್ತರು ಅ.26 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಆಸಕ್ತ ಅಭ್ಯರ್ಥಿಗಳು ಮಕ್ಕಳೊಂದಿಗೆ ಕೆಲಸ ಮಾಡಲು ಕನಿಷ್ಠ 3 ವರ್ಷಗಳ ಅನುಭವದೊಂದಿಗೆ ಸಮಾಜ ಕಾರ್ಯ ವಿಷಯದಲ್ಲಿ ಪದವಿಯನ್ನು ಹೊಂದಿರಬೇಕು. ಪ್ರತಿ ಪ್ರಕರಣಕ್ಕೆ ಮೂರು ಸಾವಿರ ರೂ. ಮಾತ್ರ ಸಂಭಾವನೆ ನಿಗದಿಗೊಳಿಸಲಾಗಿದ್ದು, ಮಕ್ಕಳ ಆರೈಕೆ ಕೇಂದ್ರದಲ್ಲಿ ಮಕ್ಕಳಿಗೆ ಕೆಲಸ ಮಾಡುವ ಅಧಿಕಾರಿಗಳು ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕೆಲಸ ಮಾಡುವ ಯಾವುದೇ ಸಂಸ್ಥೆ ಅರ್ಜಿ ಸಲ್ಲಿಸಬಹುದು. ಆಯ್ಕೆಯಾದ ಅಭ್ಯರ್ಥಿಗಳಿಗೆ ಕ್ಷೇತ್ರ ಕಾರ್ಯವನ್ನು ಮಾಡಲು ಅಪರಾಧ ನ್ಯಾಯ ವ್ಯವಸ್ಥೆಯ ಮೂಲಕ ಮಕ್ಕಳು ಮತ್ತು ಅವರ ಕುಟುಂಬಗಳಿಗೆ ಸಹಾಯ ಮಾಡಲು ತರಬೇತಿ ನೀಡಲಾಗುತ್ತದೆ. ನಗರದ ಕಂಟೋನ್ಮೆಂಟ್ ಬಳಿಯ ಶಾಂತಿಧಾಮ ಆವರಣದಲ್ಲಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ನೀಡಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08392-241373 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರೇಮಜ್ಜಿಗೇರಿಯಲ್ಲಿ ಟಗರು ಕಾಳಗ

ಹರಪನಹಳ್ಳಿ: ತಾಲೂಕಿನ ಅರೇಮಜ್ಜಿಗೇರಿ ಗ್ರಾಮದಲ್ಲಿ ಭಂಡಾರದ ಒಡೆಯ ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಪ್ರಥಮ ವರ್ಷದ ಟಗರು ಕಾಳಗ ನೆರೆದಿದ್ದ ಜನರನ್ನು ರೋಮಾಂಚನಗೊಳಿಸಿತು.

ವಿಜಯನಗರ, ದಾವಣಗೆರೆ, ಚಿತ್ರದುರ್ಗ, ಹರಿಹರ, ಹರಪನಹಳ್ಳಿ, ರಾಣೇಬೆನ್ನೂರು, ಹಗರಿಬೊಮ್ಮನಹಳ್ಳಿ ಸೇರಿದಂತೆ ವಿವಿಧ ಕಡೆಯಿಂದ ಸುಮಾರು 140ಕ್ಕೂ ಹೆಚ್ಚು ಟಗರುಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದವು.

ಮರಿಟಗರು, 2 ಹಲ್ಲಿನ ಟಗರು, 4 ಮತ್ತು 8 ಹಲ್ಲಿನ ಟಗರುಗಳಿಗೆ ಪ್ರತ್ಯೇಕ ಸ್ಪರ್ಧೆಗಳನ್ನು ನಡೆಸಲಾಯಿತು. ಟಗರು ಕಾಳಗಕ್ಕೆ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಅವರ ಪುತ್ರ ಗೌತಮ್ ಪ್ರಭು ಚಾಲನೆ ನೀಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಮಾತನಾಡಿ ಗ್ರಾಮೀಣ ಪ್ರದೇಶದಲ್ಲಿ ಇಂತಹ ಕ್ರೀಡೆಗಳು ನಡೆಯುವುದು ತುಂಬಾ ವಿರಳ ಅರೇಮಜ್ಜಿಗೇರಿ ಚಿಕ್ಕ ಗ್ರಾಮವಾದರೂ ಇಂತಹ ಕ್ರೀಡೆಯನ್ನು ಹಮ್ಮಿಕೊಂಡಿರವುದು ಇತರರಿಗೂ ಆದರ್ಶಮಯವಾಗಿದೆ ಎಂದರು. ಹರಪನಹಳ್ಳಿ ಪುರಸಭೆ ಸದಸ್ಯರಾದ ಉದ್ದಾರ ಗಣೇಶ, ಲಾಟಿದಾದಪೀರ, ವಕೀಲ ಟಿ.ಎಚ್. ಎಂ.ಮಂಜುನಾಥ, ಅಹಿಂದ ಸಂಘಟನೆಯ ವಿಜಯನಗರ ಜಿಲ್ಲಾಧ್ಯಕ್ಷ ದಾದಾಪುರ ಶಿವಪುತ್ರ, ಶಾಸಕರ ಆಪ್ತ ಸಹಾಯಕ ಮತ್ತೂರು ಬಸವರಾಜ ಆಗಮಿಸಿದ್ದರು.

ಹರಪನಹಳ್ಳಿ: ಅರೇಮಜ್ಜಿಗೇರಿಯಲ್ಲಿ ನಡೆದ ಟಗರು ಕಾಳಗಕ್ಕೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ವಿ.ಅಂಜಿನಪ್ಪ ಚಾಲನೆ ನೀಡಿದರು.

ಬೆಳಗ್ಗೆ 11 ರಿಂದ ರಾತ್ರಿ 10 ಗಂಟೆವರೆಗೂ ಟಗರು ಕಾಳಗ ನಡೆಯಿತು. ಮರಿಕುರಿ ಕಾಳಗದಲ್ಲಿ ಹಾರಳು ಗ್ರಾಮದ ಪರಶು ರಾಮ ಎಂಬ ಟಗರು ಪ್ರಥಮ ಬಹುಮಾನ ಪಡೆದುಕೊಂಡರೆ ಹರಪನಹಳ್ಳಿಯ ಕೋಟೆ ಆಂಜನೇಯ ದ್ವಿತೀಯ ಬಹುಮಾನ ಪಡೆಯಿತು, 2 ಹಲ್ಲಿನ ಕುರಿ ಕಾಳಗದಲ್ಲಿ ಹ್ಯಾರಡ ಬೀರಲಿಂಗೇಶ್ವರ ಪ್ರಥಮ, ನೀಲಗುಂದ ಕಾಳಿ ಗ್ರೂಪ್ ದ್ವಿತೀಯ ಹಾಗೂ 4 ಹಲ್ಲಿನಲ್ಲಿ ಹರಪನಹಳ್ಳಿಯ ಇಂದ್ರ-ಚಂದ್ರ ಪ್ರಥಮ, ಚಿತ್ರದುರ್ಗದ ಕದಂಬ ದ್ವಿತೀಯ, 8 ಹಲ್ಲಿನಲ್ಲಿ ಹರಪನಹಳ್ಳಿಯ ಗಬ್ಬರ್‌ಸಿಂಗ್ ಹಾಗೂ ಸಮಾಜಿ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದುಕೊಂಡವು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಬಣಕಾರ ಗುಡ್ಡಪ್ಪ, ಟಿ. ಬಸವರಾಜ, ಎಚ್.ನಾಗೇಂದ್ರ, ಎ. ಜ್ಯೋತೇಶ, ಎಚ್.ನಾಗಪ್ಪ, ಪಿ.ಭರಮಪ್ಪ, ವಿ.ದುರುಗಪ್ಪ, ಆಯೋಜಕರಾದ ಎ. ಹಾಲೇಶ, ಕೆ.ಕರಿಯಲ್ಲಪ್ಪ, ಯೋಗೇಶ, ನಿಂಗರಾಜ, ಕಿರಣ್, ವಿನಾಯಕ, ಬಸವರಾಜ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.

ಶಿಕ್ಷಣದ ಗುಣಮಟ್ಟ ಸುಧಾರಣೆ ಅಗತ್ಯ

ಹೂವಿನಹಡಗಲಿ: ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಜಿಬಿಆರ್ ಕಾಲೇಜು ಪ್ರಾಚಾರ್ಯ ಎಸ್.ಎಸ್.ಪಾಟೀಲ್ ಹೇಳಿದರು. ಪಟ್ಟಣದ ಎಸ್‌ಆರ್‌ಎಂಪಿಪಿ ಸರಕಾರಿ ಪದವಿ ಕಾಲೇಜಿನಲ್ಲಿ ತರುಣ ಸಂಘದಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಾಲೇಜು ವಿದ್ಯಾರ್ಥಿಗಳು ಕಠಿಣ ತಪಸ್ಸಿನಂತೆ ಅಭ್ಯಾಸ ಮಾಡಿದರೆ ಉತ್ತಮ ಅವಕಾಶಗಳು ದೊರೆಯುತ್ತವೆ. ಇಲ್ಲಿನ ಗ್ರಾಮೀಣ ವಿದ್ಯಾರ್ಥಿಗಳು ಪದವಿಯಲ್ಲಿ ರ‍್ಯಾಂಕ್ ಗಳಿಸುತ್ತಿದ್ದಾರೆ. ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ರಾಜ್ಯ ಮಟ್ಟದ ಶೈಕ್ಷಣಿಕ ಸಾಧನೆ ಮಾಡುತ್ತಿರುವುದು ಮಲ್ಲಿಗೆ ನಾಡಿನ ಹೆಮ್ಮೆ. ಸಾಧಕ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ತರುಣ ಸಂಘದ ಕಾರ್ಯ ಶ್ಲಾಘನೀಯ ಎಂದರು. ತರುಣ ಸಂಘದ ಕಾರ್ಯದರ್ಶಿ ಸಿ.ಕೆ.ಎಂ.ಬಸವಲಿಂಗಸ್ವಾಮಿ ಮಾತನಾಡಿ 1964ರಲ್ಲಿ ಹಿರಿಯರು ತರುಣ ಸಂಘ ಕಟ್ಟಿ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಆರಂಭಿಸಿದರು. ಅವರ ಆಶಯದಂತೆ ಕಾರ್ಯಕ್ರಮ ರೂಪಿಸುತ್ತಿದ್ದೇವೆ ಎಂದರು. ತರುಣ ಸಂಘದ ಉಪಾಧ್ಯಕ್ಷೆ ಎಂ.ಪಿ.ಸುಮಾ ವಿಜಯ್ ಅಧ್ಯಕ್ಷತೆ ವಹಿಸಿದ್ದರು. ತರುಣ ಸಂಘದ ಅಧ್ಯಕ್ಷ ಅಟವಾಳಗಿ ಕೊಟ್ರೇಶ, ನಿರ್ದೇಶಕರಾದ ಹಣ್ಣಿ ಕೈಲಾಸನಾಥ, ಹುಚ್ಚಿ ಉಮ್ಮಣ್ಣ, ಟಿ.ವೆಂಕಟೇಶ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಪಿ.ಎಂ.ಅಶೋಕ, ಸ್ಮಾರ್ಟ್ ಕಂಪ್ಯೂಟರ್ಸ್ ಪ್ರಾಚಾರ್ಯೆ ಮಂಜುಳಾ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಅನುಚಿತ ವರ್ತನೆ: ಕೋಚ್ ಅಮಾನತು



ಢಾಕಾ: ಆಟಗಾರನ ಮೇಲೆ ಹಲ್ಲೆ ಆರೋಪ ಸೇರಿದಂತೆ ಅನುಚಿತ ವರ್ತನೆಗಾಗಿ ಕೋಚ್ ಚಂಡಿಕ ಹತುರಸಿಂಘ ಅವರನ್ನು ಅಮಾನತುಗೊಳಿಸಿರುವುದಾಗಿ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಮಂಗಳವಾರ ತಿಳಿಸಿದೆ. ವೆಸ್ಟ್ ಇಂಡೀಸ್‌ನ ಮಾಜಿ ಆಲ್ರೌಂಡರ್ ಫಿಲ್ ಸಿಮನ್ಸ್ ಅವರನ್ನು ಪ್ರಭಾರಿ ಕೋಚ್ ಆಗಿ ನೇಮಕ ಮಾಡಲಾಗಿದೆ. ಅವರು ಪಾಕಿಸ್ತಾನದಲ್ಲಿ 2025ರಲ್ಲಿ ನಿಗದಿಯಾಗಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಯವರೆಗೆ ತರಬೇತಿಯ ಹೊಣೆ ವಹಿಸಲಿದ್ದಾರೆ. ರಾಷ್ಟ್ರೀಯ ಆಟಗಾರನ ಮೇಲೆ ನೀವು ಹಲ್ಲೆ ನಡೆಸುವಂತಿಲ್ಲ ಎಂದು ಹತುರಸಿಂಘ ಅಮಾನತು ಘೋಷಿಸಿದ ಬಿಸಿಬಿ ಅಧ್ಯಕ್ಷ ಫರೂಕ್ ಅಹ್ಮದ್ ಅವರು, ನಡೆದಿದೆ ಎನ್ನಲಾದ ಈ ಪ್ರಕರಣದ ವಿವರಗಳನ್ನಾಗಲಿ, ಆಟಗಾರನ ಹೆಸರನ್ನಾಗಲಿ ಬಹಿರಂಗಪಡಿಸಲಿಲ್ಲ. ಹತುರಸಿಂಘ ಅವರೂ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ. ಶ್ರೀಲಂಕಾದ 56 ವರ್ಷ ವಯಸ್ಸಿನ ಮಾಜಿ ಆಟಗಾರ 2023ರಲ್ಲಿ ಎರಡನೇ ಬಾರಿ ತಂಡದ ಹೆಡ್ ಕೋಚ್ ಆಗಿ ನೇಮಕಗೊಂಡಿದ್ದಾರೆ. 2014 ರಿಂದ 2017ರ ವರೆಗೆ ಅವರ ಮೊದಲ ಅವಧಿಯಲ್ಲಿ ಬಾಂಗ್ಲಾದೇಶ ಉತ್ತಮ ತಂಡವಾಗಿ ರೂಪುಗೊಂಡಿತ್ತು.

ಎಚ್‌ಐಎಲ್ ಹರಾಜು: ವಿಕ್ಟರ್‌ಗೆ 40 ಲಕ್ಷ

ದೆಹಲಿ: ಬೆಲ್ಜಿಯಂನ ಮಿಡ್‌ಫೀಲ್ಡರ್ ವಿಕ್ಟರ್ ವೆಗ್ನೆಝ್ ಅವರು ಹಾಕಿ ಇಂಡಿಯಾ ಹರಾಜು ಪ್ರಕ್ರಿಯೆ ಎರಡನೇ ದಿನವಾದ ಸೋಮವಾರ ಅತಿ ದುಬಾರಿ ಆಟಗಾರ ಎನಿಸಿದರು. ಅವರು 40 ಲಕ್ಷ ರು. ಮೊತ್ತಕ್ಕೆ ಸೂರ್ಮಾ ಹಾಕಿ ಕ್ಲಬ್ ಪಾಲಾದರು. ಡಚ್ ಆಟಗಾರರಾದ ಥಿಯರಿ ಬ್ರಿಂಕ್ಮನ್ (38 ಲಕ್ಷ ರು.) ಮತ್ತು ಆರ್ಥರ್ ವಾನ್ ಡೊರೆನ್ (32 ಲಕ್ಷ ರು.) ಅವರೂ ಉತ್ತಮ ಮೊತ್ತಕ್ಕೆ ಕಳಿಂಗ ಲ್ಯಾನ್ಸರ್ಸ್ ಪಾಲಾದರು. ಥಾಮಸ್ ಡೊಮಿನ್ ಅವರು 36 ಲಕ್ಷ ರು.ಗೆ ಡೆಲ್ಲಿ ಎಸ್‌ಜಿ ಪೈಪರ್ಸ್ ಪಾಲಾದರೆ, ಆಸ್ಟ್ರೇಲಿಯಾದ ಆರನ್ ಝುಲೆವ್ಸ್ಕಿ (27 ಲಕ್ಷ ರು.) ಅವರನ್ನು ಕಳಿಂಗ ಲ್ಯಾನ್ಸರ್ ಪಡೆಯಿತು. ಬ್ಲೇಕ್ ಗೋವರ್ಸ್ ಅವರು 27 ಲಕ್ಷ ರು.ಗೆ ತಮಿಳುನಾಡು ಡ್ರ್ಯಾಗನ್ಸ್ ಪಾಲಾದರು. ಮೊರಿಯಾಂಗ್ಥೆಮ್ಸ್ ರವಿಚಂದ್ರ (32 ಲಕ್ಷ ರು.ಗೆ ಕಳಿಂಗ ಲ್ಯಾನ್ಸರ್ಸ್) ಮತ್ತು ಮೊಹಮ್ಮದ್ ರಾಹೀಲ್ ಮೌಸೀನ್ (25 ಲಕ್ಷ ರು.ಗೆ ತಮಿಳುನಾಡು ಡ್ರ್ಯಾಗನ್ಸ್) ಅವರು ಹರಾಜು ಪ್ರಕ್ರಿಯೆಯ ಎರಡನೇ ದಿನ ಉತ್ತಮ ಮೊತ್ತ ಗಳಿಸಿದ ಭಾರತದ ಪ್ರಮುಖ ಆಟಗಾರರು ಎನಿಸಿದರು.

ಬಾಂಗ್ಲಾ ವಿರುದ್ಧದ ಸರಣಿ ಕ್ಲೀನ್‌ಸ್ವೀಪ್ ಮಾಡಿರುವ ಹುಮ್ಮಸ್ಸಿನಲ್ಲಿ ಟೀಂ ಇಂಡಿಯಾ | ಮಳೆ ಕಾರಣದಿಂದ ಪಂದ್ಯಕ್ಕೆ ಭೀತಿ

ಟೆಸ್ಟ್‌ಗೆ ಮಳೆಯದ್ದೇ ಚಿಂತೆ

ಬೆಂಗಳೂರು: ಬಾಂಗ್ಲಾದೇಶ ವಿರುದ್ಧದ ತವರಿನ ಟೆಸ್ಟ್ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿದ ಜೋಶ್‌ನಲ್ಲಿರುವ ಭಾರತ ತಂಡ ಇದೀಗ ಮತ್ತೊಂದು ತವರಿನ ಟೆಸ್ಟ್ ಸರಣಿಯನ್ನಾಡಲು ರೆಡಿಯಾಗಿದೆ. ಎದುರಾಳಿ ಬಲಿಷ್ಠ ನ್ಯೂಜಿಲ್ಯಾಂಡ್. ಇತ್ತಂಡಗಳ ಸರಣಿಯ ಮೊದಲ ಪಂದ್ಯ ಇಂದಿನಿಂದ ಆರಂಭಗೊಳ್ಳಲಿದೆ. ಈ ಪಂದ್ಯವು ಎಂ. ಚಿನ್ನಸ್ವಾಮಿ ಕ್ರಿಕೆಟ್ ಸ್ಟೇಡಿಯಂ ನಡೆಯಲಿದೆ. ಆದರೆ, ಪಂದ್ಯಕ್ಕೆ ಮಳೆ ಭೀತಿಯೂ ಎದುರಾಗಿದೆ.

ರೋಹಿತ್-ಕೊಹ್ಲಿ ಬ್ಯಾಟಿಂಗ್ ಚಿಂತೆ: ಯುವ ಆಟಗಾರರಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಕಳೆದ ಬಾಂಗ್ಲಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ನಿರೀಕ್ಷಿತ ಪ್ರದರ್ಶನ ತೋರಿದ್ದರು. ಹೀಗಾಗಿ ಇವರ ಬ್ಯಾಟಿಂಗ್ ಫಾರ್ಮ್ ಬಗ್ಗೆ ಸದ್ಯ ಯಾವುದೇ ಚಿಂತೆಯಿಲ್ಲ. ಚಿಂತೆ ಇರುವುದು ಅನುಭವಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಕೆ.ಎಲ್ ರಾಹುಲ್ ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡಿರುವುದು. ವರ್ಷಾಂತ್ಯದಲ್ಲಿ ಆಸ್ಟ್ರೇಲಿಯಾ ಪ್ರವಾಸ, ಮುಂದಿನ ವರ್ಷ ನಡೆಯುವ ಟೆಸ್ಟ್ ವಿಶ್ವಕಪ್‌ಗೂ ಮುನ್ನ ಉಭಯ ಆಟಗಾರರು ಬ್ಯಾಟಿಂಗ್ ಲಯಕ್ಕೆ ಮರಳುವ ಅಗತ್ಯವಿದೆ. ಬುಧವಾರ ಬೆಳಗ್ಗೆ ಟಾಸ್ ಸಮಯದವರೆಗೂ ಭಾರತದ ಆಡುವ 11ರ ಬಳಗದ ಬಗ್ಗೆ ಗೊಂದಲ ಮುಂದುವರಿಯಲಿದೆ. ಮಧ್ಯಮ ಕ್ರಮಾಂಕದಲ್ಲಿ ರಾಹುಲ್ ಮತ್ತು ಸರ್ಫರಾಜ್ ಮಧ್ಯೆ ಪೈಪೋಟಿ ಇದೆ. ಸರ್ಫರಾಜ್ ಇರಾನಿ ಕಪ್‌ನಲ್ಲಿ ದ್ವಿಶತಕ ಬಾರಿಸಿ ಮಿಂಚಿದ್ದರು.

ಭಾರತದ್ದು ತ್ರಿವಳಿ ವೇಗಿ, ಅವಳಿ ಸ್ಪಿನ್ ಕಾಂಬಿನೇಶನ್: ಸ್ಪಿನ್ ಬೌಲಿಂಗ್ ಆಲ್ರೌಂಡರ್ ಜಡೇಜ ಸೇರಿದಂತೆ 5 ಮಂದಿ ಸ್ಪೆಷಲಿಸ್ಟ್ ಬೌಲರ್‌ಗಳನ್ನು ಭಾರತ ಕಣಕ್ಕಿಳಿಸಲಿದೆ. ಇದು ತ್ರಿವಳಿ ವೇಗಿ, ಅವಳಿ ಸ್ಪಿನ್ ಕಾಂಬಿನೇಶನ್ ಆಗಿರಲಿದೆ. ಬಾಂಗ್ಲಾ ವಿರುದ್ಧದ ಮೊದಲ ಟೆಸ್ಟ್‌ನಂತೆ ಮತ್ತೆ ಜಸ್‌ಪ್ರೀತ್ ಬುಮ್ರಾ, ಮೊಹಮದ್ ಸಿರಾಜ್, ಆಕಾಶ್‌ದೀಪ್‌ರನ್ನು ಬೆಂಗಳೂರಿನಲ್ಲೂ ಕಣಕ್ಕಿಳಿಸುವ ಲೆಕ್ಕಾಚಾರವಿದೆ. ಅಲ್ಲದೆ ಪಿಚ್ ಮೇಲಿನ ಸ್ವಲ್ಪ ಹಸಿರು ಹುಲ್ಲು ಮತ್ತು ಬೆಂಗಳೂರಿನ ಮೋಡಕವಿದ ವಾತಾವರಣ ಮತ್ತು ಮಳೆ ವೇಗದ ಬೌಲರ್‌ಗಳಿಗೆ ಅನುಕೂಲಕರವೆನಿಸಿದೆ. ಪ್ರಧಾನ ಸ್ಪಿನ್ನರ್ ಅಶ್ವಿನ್ ಮತ್ತು ಜಡೇಜಾ ಕಿವೀಸ್ ಸರದಿಗೆ ಕಂಟಕವಾದರೆ ಗೆಲುವು ನಮ್ಮದೆ. ಕಿವೀಸ್ ತಂಡದಲ್ಲಿಯೂ ಅನುಭವಿ ಸ್ಪಿನ್ನರ್ ಆದ ಅಜಾಜ್ ಪಟೇಲ್ ಈ ಬಾರಿಯೂ ಭಾರತಕ್ಕೆ ಸವಾಲೆಸೆಯುವ ಸಾಧ್ಯತೆ ಇದೆ. ಕಳೆದ 2021ರ ಪ್ರವಾಸದಲ್ಲಿ ಮುಂಬೈಯಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿ ಅವರು ಬರೋಬ್ಬರಿ 47.5 ಓವರ್ ಎಸೆದೆ ಎಲ್ಲ ಹತ್ತೂ ವಿಕೆಟ್ ಕಿತ್ತು ಮಿಂಚಿದ್ದರು. ಹೀಗಾಗಿ ಈ ಬಾರಿಯೂ ಇವರ ಮೇಲೆ ಕಿವೀಸ್ ಹೆಚ್ಚಿನ ನಂಬಿಕೆ ಇರಿಸಿದೆ. ಮತ್ತೊಂದೆಡೆ ಬೆಂಗಳೂರು ಮೂಲದ ರಚಿನ್ ರವೀಂದ್ರ ಕೂಡ ತಂಡದಲ್ಲಿದ್ದಾರೆ. ಐಪಿಎಲ್‌ನಲ್ಲಿ ಭಾರತದ ಪಿಚ್‌ನಲ್ಲಿ ಆಡಿದ ಅನುಭವ ಅವರಿಗಿದೆ. ಮಿಚೆಲ್ ಸ್ಯಾಂಟ್ನರ್ ಪ್ರಧಾನ ಸ್ಪಿನ್ನರ್ ಆಗಿರಲಿದ್ದಾರೆ. ವೇಗಿಗಳಾಗಿ ಮ್ಯಾಟ್ ಹೆನ್ರಿ ಮತ್ತು ಟಿಮ್ ಸೌಥಿ ಕಾಣಿಸಿಕೊಂಡಿದ್ದಾರೆ.

ಅತ್ಯಧಿಕ ರನ್

ಉಭಯ ತಂಡಗಳ ನಡುವಣ ಇದುವರೆಗಿನ ಟೆಸ್ಟ್ ಸರಣಿಯಲ್ಲಿ ಅತ್ಯಧಿಕ ರನ್ ಗಳಿಸಿದ ದಾಖಲೆ ಮಾಜಿ ಆಟಗಾರ ರಾಹುಲ್ ದ್ರಾವಿಡ್ ಹೆಸರಿನಲ್ಲಿದೆ. ದ್ರಾವಿಡ್ 15 ಪಂದ್ಯಗಳಿಂದ 1659 ರನ್ ಬಾರಿಸಿದ್ದಾರೆ. ಈ ವೇಳೆ ಅವರು ತಲಾ 6 ಶತಕ ಮತ್ತು ಅರ್ಧಶತಕ ಬಾರಿಸಿದ್ದಾರೆ. ಆ ಬಳಿಕದ ಸ್ಥಾನದಲ್ಲಿ ಸಚಿನ್ ತೆಂಡೂಲ್ಕರ್(1595) ಮತ್ತು ಬ್ರೆಂಡನ್ ಮೆಕಲಮ್(1224) ಕಾಣಿಸಿಕೊಂಡಿದ್ದಾರೆ.

ಅತ್ಯಧಿಕ ವಿಕೆಟ್

ಇತ್ತಂಡಗಳ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅತ್ಯಧಿಕ ವಿಕೆಟ್ ಕಿತ್ತ ದಾಖಲೆ ಆರ್.ಅಶ್ವಿನ್ ಹೆಸರಿನಲ್ಲಿದೆ. ಅವರು ಇದುವರೆಗೆ 9 ಪಂದ್ಯ ಆಡಿ 66 ವಿಕೆಟ್ ಕಿತ್ತಿದ್ದಾರೆ. 7/59 ಗರಿಷ್ಠ ವೈಯಕ್ತಿಕ ಸಾಧನೆಯಾಗಿದೆ. ರಿಚರ್ಡ್ ಹ್ಯಾಡ್ಲೀ(65) ಮತ್ತು ಬಿಶನ್ ಬೇಡಿ(57) ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿದ್ದಾರೆ. ಅಶ್ವಿನ್ ಸರಣಿಯನ್ನಾಡುತ್ತಿರುವ ಕಾರಣ ಅವರಿಗೆ ತಮ್ಮ ವಿಕೆಟ್ ಸಂಖ್ಯೆ ಹೆಚ್ಚಿಸುವ ಅವಕಾಶವಿದೆ.

ನ್ಯೂಜಿಲ್ಯಾಂಡ್

ಟಾಮ್ ಲ್ಯಾಥಮ್ (ನಾಯಕ), ಟಾಮ್ ಬ್ಲಂಡೆಲ್ (ವಿ.ಕೀ), ಮೈಕೆಲ್ ಬ್ರೇಸ್ವೆಲ್ (ಮೊದಲ ಟೆಸ್ಟ್ ಮಾತ್ರ), ಮಾರ್ಕ್ ಚಾಪ್ಮನ್, ಡೆವೊನ್ ಕಾನ್ವೇ, ಮ್ಯಾಟ್ ಹೆನ್ರಿ, ಡೇರಿಲ್ ಮಿಚೆಲ್, ವಿಲ್ ಒ'ರೂರ್ಕ, ಅಜಾಜ್ ಪಟೇಲ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಜಾಕೋಬ್ ಡಫಿ, ಇಶ್ ಸೋಧಿ (2ನೇ ಮತ್ತು 3ನೇ ಟೆಸ್ಟ್ ಮಾತ್ರ), ಟಿಮ್ ಸೌಥಿ, ಕೇನ್ ವಿಲಿಯಮ್ಸನ್, ವಿಲ್ ಯಂಗ್.

ಭಾರತ

ರೋಹಿತ್ (ನಾಯಕ), ಜಸ್ಪ್ರೀತ್ ಬುಮ್ರಾ (ಉಪ ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಸರ್ಫರಾಜ್ ಖಾನ್, ಪಂತ್ (ವಿಕೆಟ್ ಕೀಪರ್), ಧ್ರುವ್ ಜುರೆಲ್ (ವಿಕೆಟ್ ಕೀಪರ್), ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಸಿರಾಜ್, ಆಕಾಶ್ ದೀಪ್. ಪ್ರಯಾಣ ಮೀಸಲು: ಹರ್ಷಿತ್ ರಾಣಾ, ನಿತೀಶ್ ಕುಮಾರ್ ರೆಡ್ಡಿ, ಮಯಾಂಕ್ ಯಾದವ್, ಪ್ರಸಿದ್ಧ್ ಕೃಷ್ಣ.

ಕಿವೀಸ್‌ಗೆ ಆಘಾತ

ಭಾರತ ವಿರುದ್ಧದ ಟೆಸ್ಟ್ ಸರಣಿ ಆರಂಭಕ್ಕೂ ಮುನ್ನವೇ ಪ್ರವಾಸಿ ನ್ಯೂಜಿಲ್ಯಾಂಡ್ ತಂಡಕ್ಕೆ ಆಘಾತವೊಂದು ಎದುರಾಗಿದೆ. ಈಗಾಗಲೇ ಅನುಭವಿ ಆಟಗಾರ ಕೇನ್ ವಿಲಿಯಮ್ಸನ್ ಗಾಯದಿಂದ ಮೊದಲ ಪಂದ್ಯಕ್ಕೆ ಅಲಭ್ಯರಾದ ಬೆನ್ನಲ್ಲೇ ತಂಡದ ಯುವ ವೇಗಿ ಬೆನ್ ಸಿಯರ್ಸ್ ಸರಣಿಯಿಂದಲೇ ಹೊರಗುಳಿದಿದ್ದಾರೆ. ಮೊಣಕೈ ಗಾಯದಿಂದ ಚೇತರಿಕೆ ಕಾಣದ ಕಾರಣ ಅವರನ್ನು ಸರಣಿಯಿಂದ ಕೈ ಬಿಡಲಾಗಿದೆ. ಕಳೆದ ತಿಂಗಳು ಶ್ರೀಲಂಕಾ ವಿರುದ್ಧದ ಟೆಸ್ಟ್ ಸರಣಿ ವೇಳೆ ಬೆನ್ ಸಿಯರ್ಸ್ ಮೊಣಕೈ ಗಾಯಕ್ಕೆ ಸಿಲುಕಿದ್ದರು. ಆದಾಗ್ಯೂ ಅವರನ್ನು ಭಾರತದ ವಿರುದ್ಧದ ಟೆಸ್ಟ್ ಸರಣಿಗೆ ಆಯ್ಕೆ ಮಾಡಲಾಗಿತ್ತು. ಆದರೀಗ ಅವರು ಸಂಪೂರ್ಣ ಫಿಟ್‌ನೆಸ್ ಸಾಧಿಸುವಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ಅವರನ್ನು ತಂಡದಿಂದ ಕೈ ಬಿಡಲು ಕಿವೀಸ್ ಕ್ರಿಕೆಟ್ ಮಂಡಳಿ ನಿರ್ಧರಿಸಿದೆ. ಅವರ ಸ್ಥಾನಕ್ಕೆ ಜೇಕೊಬ್ ಡಫಿ ಅವರನ್ನು ಬದಲಿ ಆಟಗಾರನಾಗಿ ಆಯ್ಕೆ ಮಾಡಲಾಗಿದೆ. ಜೇಕೊಬ್ ಡಫಿಗೆ ಇದು ಟೆಸ್ಟ್ ತಂಡದ ಚೊಚ್ಚಲ ಕರೆಯಾಗಿದೆ. ಕಿವೀಸ್ ಪರ 6 ಏಕದಿನ ಮತ್ತು 14 ಟಿ20 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ ಅನುಭವ ಹೊಂದಿದ್ದಾರೆ. ಕೆಂಪು ಚೆಂಡಿನ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರು 299 ವಿಕೆಟ್‌ಗಳನ್ನು ಕಿತ್ತ ಸಾಧನೆ ಮಾಡಿದ್ದಾರೆ.

ಮುಖಾಮುಖಿ

62	22	13	27	2021
ಒಟ್ಟು ಪಂದ್ಯ	ಭಾರತದ ಗೆಲುವು	ನ್ಯೂಜಿಲೆಂಡ್ ಗೆಲುವು	ಡ್ರಾ	ಕೊನೆಯ ಪಂದ್ಯ

ಚೆನ್ನೈಗೆ ಶ್ರೀಶಾಂತ್ ಬೌಲಿಂಗ್ ಕೋಚ್?

ಚೆನ್ನೈ: ಭಾರತ ಕ್ರಿಕೆಟ್ ತಂಡದ ಮಾಜಿ ವೇಗಿ ಕೇರಳದ ಎಸ್.ಶ್ರೀಶಾಂತ್ ಅವರು ಮುಂಬರುವ ಐಪಿಎಲ್ 18ನೇ ಆವೃತ್ತಿಗೆ ಐದು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬೌಲಿಂಗ್ ಕೋಚ್ ಆಗಿ ನೇಮಕಗೊಳ್ಳುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಈ ಹಿಂದೆ ಚೆನ್ನೈ ತಂಡದ ಬೌಲಿಂಗ್ ಕೋಚ್ ಆಗಿದ್ದ ವೆಸ್ಟ್ ಇಂಡೀಸ್‌ನ ಮಾಜಿ ಆಟಗಾರ ಡ್ವೇನ್ ಬ್ರಾವೊ ಹಾಲಿ ಚಾಂಪಿಯನ್ ಕೋಲ್ಕತ್ತಾ ನೈಟ್ ರೇಡರ್ಸ್ ತಂಡದ ಮೆಂಟರ್ ಆಗಿ ನೇಮಕವಾಗಿದ್ದಾರೆ. ಹೀಗಾಗಿ ಇವರಿಂದ ತೆರವಾದ ಸ್ಥಾನಕ್ಕೆ ಶ್ರೀಶಾಂತ್ ಆಯ್ಕೆಯಾಗಲಿದ್ದಾರೆ ಎನ್ನಲಾಗಿದೆ. 2013ರಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಸದಸ್ಯರಾಗಿದ್ದಾಗ ಶ್ರೀಶಾಂತ್ ಅವರನ್ನು ಸ್ಪಾಟ್ ಫಿಕ್ಸಿಂಗ್ ಆರೋಪದ ಮೇಲೆ ಬಂಧಿಸಲಾಗಿತ್ತು. ಫಿಕ್ಸಿಂಗ್ ಆರೋಪ ಕೇಳಿ ಬಂದ ಕಾರಣ ಬಿಸಿಸಿಐ ಶ್ರೀಶಾಂತ್‌ಗೆ ಆಜೀವ ನಿಷೇಧ ಹೇರಿತ್ತು. ಸುದೀರ್ಘ ವಿಚಾರಣೆಯ ನಂತರ ದೆಹಲಿ ಹೈಕೋರ್ಟ್ ಇವರನ್ನು ಈ ಪ್ರಕರಣದಲ್ಲಿ ಖುಲಾಸೆಗೊಳಿಸಿತ್ತು. ಇದಾದ ಬಳಿಕ ಬಿಸಿಸಿಐ ಕೂಡ ಶ್ರೀಶಾಂತ್ ಅವರ ನಿಷೇಧವನ್ನು 7 ವರ್ಷಕ್ಕಿಳಿಸಿತ್ತು. 2020ರ ಸೆಪ್ಟೆಂಬರ್‌ನಲ್ಲಿ ಈ ನಿಷೇಧದಿಂದ ಮುಕ್ತರಾಗಿದ್ದರು. ಆದರೆ ಈ ನಿಷೇಧ ಮುಗಿಯುವಷ್ಟರಲ್ಲಿ ಅವರ ವಯಸ್ಸು ಕೂಡ 40ರ ಸನಿಹಕ್ಕೆ ಬಂದಿತ್ತು. ಹೀಗಾಗಿ ಅವರ ಕ್ರಿಕೆಟ್ ಜೀವನ ಫಿಕ್ಸಿಂಗ್‌ನಿಂದಾಗಿ ದುರಂತ ಅಂತ್ಯ ಕಂಡಿತ್ತು.

ಮಹಿಳಾ ಹಾಕಿ: ಉದಿತಾಗೆ ಉತ್ತಮ ಬಿಡ್

ದೆಹಲಿ: ಭಾರತದ ರಕ್ಷಣೆ ಆಟಗಾರ್ತಿ ಉದಿತಾ ದುಹಾನ್ ಅವರು ಹಾಕಿ ಇಂಡಿಯಾ ಮಹಿಳೆಯರ ಲೀಗ್‌ನ ಹರಾಜು ಪ್ರಕ್ರಿಯೆಲ್ಲಿ ಅತಿ ಹೆಚ್ಚು ಮೌಲ್ಯ ಪಡೆದಿದ್ದಾರೆ. ಮಂಗಳವಾರ ಅವರು 32 ಲಕ್ಷ ರು. ಮೊತ್ತಕ್ಕೆ ಶ್ರಾಚಿ ರರ್ ಬೆಂಗಾಲ್ ಟೈಗರ್ಸ್ ತಂಡದ ಪಾಲಾಗಿದ್ದಾರೆ.

ಡಚ್ (ನೆದರ್ಲೆಂಡ್ಸ್) ಆಟಗಾರ್ತಿ, ಡ್ರ್ಯಾಗ್ ಫ್ಲಿಕ್ ಪರಿಣಿತೆ ಯಿಬ್ಬಿ ಜಾನ್ಸೆನ್ ಅವರು ಎರಡನೇ ಅತಿ ಹೆಚ್ಚು ಮೊತ್ತ (29 ಲಕ್ಷ ರು.)ಕ್ಕೆ ಒಡಿಶಾ ವಾರಿಯರ್ಸ್ ಪಾಲಾಗಿದ್ದಾರೆ. ಭಾರತದ ಆಟಗಾರ್ತಿಯರಲ್ಲಿ ಲಾಲ್ರೆಮ್ಸಿಯಾಮಿ ಅವರು 25 ಲಕ್ಷ ರು. ಮೊತ್ತಕ್ಕೆ ಶ್ರಾಚಿ ಬೆಂಗಾಲ್ ಟೈಗರ್ಸ್ ಪಾಲಾಗಿದ್ದಾರೆ. ಸುನೆಲಿಟಾ ಟೊಪ್ಪೊ ಅವರನ್ನು 24 ಲಕ್ಷ ರು.ಗೆ ಡೆಲ್ಲಿ ಎಸ್‌ಜಿ ಪೈಪರ್ಸ್ ತಂಡ ಪಡೆದುಕೊಂಡಿದೆ. ಸಂಗೀತಾ ಕುಮಾರಿ ಅವರು 22 ಲಕ್ಷ ರು.ಗೆ ಇದೇ ತಂಡದ ಪಾಲಾಗಿದ್ದಾರೆ. ವಿದೇಶದ ಹಲವು ಆಟಗಾರ್ತಿಯರೂ ಬಿಡ್‌ನಲ್ಲಿ ವಿವಿಧ ತಂಡಗಳ ಪರ ಆಡಲು ಸಜ್ಜಾಗಿದ್ದರೆ. ಬೆಲ್ಜಿಯಂನ ಚಾರ್ಲೊಟ್ ಇಂಗೆಲ್ಬರ್ಟ್ (16 ಲಕ್ಷ ರು.ಗೆ ಸೂರ್ಮಾ ಹಾಕಿ ಕ್ಲಬ್), ಜರ್ಮನಿಯ ಚಾರ್ಲೊಟೆ ಸ್ಟಫ಼ನ್‌ಹಾರ್ಸ್ಟ್ (16 ಲಕ್ಷ ರು.ಗೆ ಸೂರ್ಮಾ ಹಾಕಿ ಕ್ಲಬ್), ಆಸ್ಟ್ರೇಲಿಯಾದ ಜೋಸ್ಲಿನ್ ಬರ್ಟ್ರಾಮ್ (15 ಲಕ್ಷರು.ಗೆ ಒಡಿಶಾ ವಾರಿಯರ್ಸ್) ಇವರಲ್ಲಿ ಪ್ರಮುಖರು.

ವಿಟಾಕೀಸ್

ಥ್ರಿಲ್ಲರ್ ಕಥೆಯ ಟೆನೆಂಟ್

ಶ್ರೀಧರ್ ಶಾಸ್ತ್ರಿ ನಿರ್ದೇಶನದ ಟೆನೆಂಟ್ ಚಿತ್ರೀಕರಣ ಮುಗಿಸಿದ್ದು ತೆರೆಗೆ ಸಿದ್ಧವಾಗಿದೆ. ಸದ್ಯ ಚಿತ್ರದ ಟೀಸರ್ ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನಗೆದ್ದಿದೆ. ಧರ್ಮ ಕೀರ್ತಿರಾಜ್, ಉಗ್ರಂ ಮಂಜು ಹಾಗೂ ತಿಲಕ್, ರಾಕೇಶ್ ಮಯ್ಯ ಹಾಗೂ ಸೋನು ಗೌಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ನಿರ್ದೇಶಕರಾದ ಶಶಾಂಕ್, ಪವನ್ ಒಡೆಯರ್, ಖ್ಯಾತ ಛಾಯಾಗ್ರಹಕ ಸತ್ಯ ಹೆಗ್ಡೆ, ಡಿಸೈನರ್ ಹಾಗೂ ವಿತರಕಿ ಸಚಿನ್ನಾ ಹೆಗ್ಗಾರ್, ಚಂದನ್ ಶೆಟ್ಟಿ, ನಟ, ನಿರ್ದೇಶಕ ವಿಕ್ಕಿ, ನಟ ನವೀನ್ ಶಂಕರ್ ಹೀಗೆ ಹಲವರು ಚಿತ್ರಕ್ಕೆ ಸಾಥ್ ನೀಡಿದ್ದಾರೆ. ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿರುವ ಟೆನೆಂಟ್ ಸಿನಿಮಾದ ಟೀಸರ್ ಕುತೂಹಲ ಭರಿತವಾಗಿದ್ದು ಚಿತ್ರದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟುಗೊಳಿಸಿದೆ. ಈ ಹಿಂದಿನ ಸಿನಿಮಾಗಳಲ್ಲಿ ಲವ್ವರ್ ಬಾಯ್ ಆಗಿ ಮಿಂಚಿದ್ದ ನಟ ಧರ್ಮ ಕೀರ್ತಿರಾಜ್ ಈ ಸಿನಿಮಾದಲ್ಲಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹಾಗಾಗಿಯೇ ಈ ಸಿನಿಮಾದ ಮೇಲೆ ಅವರಿಗೂ ಸಹಜವಾಗಿಯೇ ನಿರೀಕ್ಷೆ ಹೆಚ್ಚಾಗಿದೆ. ಟೀಸರ್‌ನಲ್ಲಿ ಎಲ್ಲಾ ಪಾತ್ರಗಳು ಸಹ ಗಮನಸೆಳೆಯುತ್ತಿದೆ. ಹಿನ್ನೆಲೆ ಸಂಗೀತ ಟೀಸರ್‌ಗೆ ಶಕ್ತಿ ತುಂಬಿದೆ. ಗಿರೀಶ್ ಹೊತೂರ್ ಸಂಗೀತ ನಿರ್ದೇಶನ, ಉಜ್ವಲ್ ಸಂಕಲನ, ಮನೋಹರ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮಾಸ್ಟರ್ ಚಾಯ್ಸ್ ಕ್ರಿಯೇಶನ್‌ನಲ್ಲಿ ಟಿ.ನಾಗರಾಜ್ ಚಿತ್ರ ನಿರ್ಮಾಣ ಮಾಡಿದ್ದಾರೆ. ಟೆನೆಂಟ್ ನವೆಂಬರ್ 22ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ದೀಪಾವಳಿಗೆ ಬರಲಿದ್ದಾನೆ ಬಘೀರ

ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಬಘೀರ ದೀಪಾವಳಿ ಹಬ್ಬದಂದು ಭರ್ಜರಿಯಾಗಿ ತೆರೆಗೆ ಬರಲಿದ್ದಾನೆ. ಅದಕ್ಕು ಮೊದಲು ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಲಿದೆ. ರೋರಿಂಗ್ ಸ್ಟಾರ್ ಶ್ರೀಮುರಳಿ ನಾಯಕನಾಗಿ ನಟಿಸಿರುವ ಬಘೀರ ಚಿತ್ರ ಈಗಾಗಲೇ ಸಾಕಷ್ಟು ಹೈಪ್ ಕ್ರಿಯೇಟ್ ಮಾಡಿದೆ. ಈ ಚಿತ್ರಕ್ಕೆ ಕೆಜಿಎಫ್ ಮತ್ತು ಸಲಾರ್ ಸಿನಿಮಾ ನಿರ್ದೇಶಕ ಪ್ರಶಾಂತ್ ನೀಲ್ ಕಥೆ ಬರೆದಿದ್ದಾರೆ ಎಂಬುದು ಚಿತ್ರದ ಬಗ್ಗೆ ಕುತೂಹಲ ಮೂಡಲು ಕಾರಣವಾಗಿದೆ. ಆ್ಯಕ್ಷನ್ ಟೀಸರ್ ಮೂಲಕವೇ ನಿರೀಕ್ಷೆ ಮೂಡಿಸಿರುವ ಈ ಸಿನಿಮಾದ ಮೊದಲ ಹಾಡು ರುಧೀರ ಧಾರಾ... ಹಾಡು ಅಕ್ಟೋಬರ್ 17ರ ಬೆಳಗ್ಗೆ 10:35ಕ್ಕೆ ಬಿಡುಗಡೆಯಾಗಲಿದೆ.

ಡಾಕ್ಟರ್ ಸೂರಿ ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಚಿತ್ರದಲ್ಲಿ ಮುರಳಿ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದು, ರುಕ್ಮಿಣಿ ವಸಂತ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಪ್ರಕಾಶ್ ರಾಜ್, ರಂಗಾಯಣ ರಘು, ಅಚ್ಯುತ್ ಕುಮಾರ್, ಗರುಡ ರಾಮ್ ಸೇರಿದಂತೆ ದೊಡ್ಡ ಕಲಾವಿದರ ದಂಡೇ ಚಿತ್ರದಲ್ಲಿದೆ. ಎ.ಜೆ ಶೆಟ್ಟಿ ಛಾಯಾಗ್ರಹಣ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಪ್ರಣವ್ ಶ್ರೀಪ್ರಸಾದ್ ಸಂಕಲನ, ರವಿ ಸಂತೆಹಕ್ಲು ಕಲಾ ನಿರ್ದೇಶನದ ಈ ಚಿತ್ರಕ್ಕಿದೆ. ಚೇತನ್ ಡಿಸೋಜ್ ಸಾಹಸ ನಿರ್ದೇಶನದಲ್ಲಿ ಅದ್ಭುತ ಸಾಹಸ ದೃಶ್ಯಗಳು ಮೂಡಿಬಂದಿವೆ. ಮೊದಲ ಹಾಡಿನ ಮೂಲಕ ಆಗಮಿಸುತ್ತಿರುವ ಬಘೀರ, ಸಾಲು ಸಾಲು ಉಡುಗೊರೆ ನೀಡಲಿದೆ.



ಮೌನ ಮುರಿದ ಕಿಚ್ಚ

ಕಿಚ್ಚ ಸುದೀಪ್ ನಿರೂಪಣೆಯಲ್ಲಿಯೇ ಕನ್ನಡದ ಬಿಗ್‌ಬಾಸ್ ಹತ್ತು ಸೀಸನ್‌ಗಳು ಯಶಸ್ವಿಯಾಗಿ ಮೂಡಿಬಂದವು. ಈಗ ಹನ್ನೊಂದನೇ ಸೀಸನ್ ಕೂಡ ಸುದೀಪ್ ಸಾರಥ್ಯದಲ್ಲಿಯೇ ಮೂಡಿಬರುತ್ತಿದೆ. ಈ ಸೀಸನ್ ಬಳಿಕ ಸುದೀಪ್, ಬಿಗ್‌ಬಾಸ್ ತೊರೆಯಲು ನಿರ್ಧರಿಸಿದ್ದಾರೆ. ಈ ಕುರಿತಂತೆ ಕಿಚ್ಚ ಸೋಷಿಯಲ್ ಮೀಡಿಯಾದಲ್ಲಿ ಟ್ವೀಟ್ ಮಾಡುವ ಮೂಲಕ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ. ಇದನ್ನು ಕೇಳಿ ಅಭಿಮಾನಿಗಳು ಶಾಕ್ ಆಗಿದ್ದು, ಸುದೀಪ್ ಅವರು ಬಿಗ್‌ಬಾಸ್ ತೊರೆಯಲು ಕಾರಣ ಏನಿರಬಹುದು ಎಂದು ಚಿಂತಿಸುತ್ತಿದ್ದಾರೆ. ಈ ನಡುವೆ, ಹಲವರು ಸುದೀಪ್ ಅವರಿಗೆ ವಾಹಿನಿಯಿಂದ ಅವಮಾನವಾಗಿದೆ ಹಾಗಾಗಿಯೇ ಕಿಚ್ಚ, ಬಿಗ್‌ಬಾಸ್‌ನಿಂದ ಹೊರ ನಡೆಯುತ್ತಿದ್ದಾರೆ ಎಂದು ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದರು. ಇದನ್ನು ಗಮನಿಸಿದ ಕಿಚ್ಚ ಸುದೀಪ್, ಕಲರ್ಸ್ ವಾಹಿನಿಯಿಂದ ನನಗೆ ಯಾವುದೇ ಅವಮಾನವಾಗಿಲ್ಲ ಎಂದು ಎಲ್ಲಾ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ನನ್ನ ಟ್ವೀಟ್ ಬಗ್ಗೆ ನಿಮ್ಮೆಲ್ಲರ ಪ್ರೀತಿ ಮತ್ತು ಬೆಂಬಲವನ್ನು ನಾನು ಪ್ರಶಂಸಿಸುತ್ತೇನೆ. ಇದು ನಿಜವಾಗಿಯೂ ನನಗೆ ಖುಷಿ ತಂದಿದೆ. ಆದಾಗ್ಯೂ, ವಾಹಿನಿ ಹಾಗೂ ನನ್ನ ನಡುವೆ ಯಾವುದೋ ಭಿನ್ನಾಭಿಪ್ರಾಯವಿದೆ ಎಂದು ಊಹಿಸಿಕೊಂಡು ಕಾಮೆಂಟ್ ಹಾಗೂ ವೀಡಿಯೊ ಮಾಡುವವರಲ್ಲಿ ನಾನು ಕೇಳಿಕೊಳ್ಳುತ್ತೀನಿ, ಕಲರ್ಸ್ ಕನ್ನಡ ಹಾಗೂ ನಾನು ಸುದೀರ್ಘ ಮತ್ತು ಸಕಾರಾತ್ಮಕ ಪ್ರಯಾಣವನ್ನು ಹಂಚಿಕೊಂಡಿದ್ದೇವೆ. ಅಗೌರವ ಎಂಬ ಪದವನ್ನು ಅದರೊಂದಿಗೆ ಸೇರಿಸುವುದು ಸರಿಯಲ್ಲ. ಈ ಸಮಸ್ಯೆಯ ಸುತ್ತಲಿನ ಯಾವುದೇ ಊಹೆಗಳಿಗೆ ಆಧಾರವಿಲ್ಲ. ಹಾಗೂ ಇದನ್ನು ಸಮರ್ಥಿಸಲು ಸಾಧ್ಯವಿಲ್ಲ. ನನ್ನ ಟ್ವೀಟ್ ನೇರ ಮತ್ತು ಪ್ರಾಮಾಣಿಕವಾಗಿದೆ. ಕಲರ್ಸ್ ಜತೆ ನನ್ನ ಸಂಬಂಧ ಅದ್ಭುತವಾಗಿದೆ ಮತ್ತು ಅವರು ಯಾವಾಗಲೂ ನನ್ನನ್ನು ಗೌರವದಿಂದ ನಡೆಸಿಕೊಂಡಿದ್ದಾರೆ. ನಿರ್ದೇಶಕ ಪ್ರಕಾಶ್ ಪ್ರತಿಭಾವಂತ ಮತ್ತು ಶಕ್ತಿಯುತ ವ್ಯಕ್ತಿ, ನಾನು ಅವರ ಬಗ್ಗೆ ತುಂಬಾ ಗೌರವ ಹೊಂದಿದ್ದೇನೆ. ನಾನು ಕೆಲಸ ಮಾಡುತ್ತಿರುವ ತಂಡವು ಅನಗತ್ಯ ಆರೋಪಗಳನ್ನು ಎದುರಿಸುತ್ತಿರುವಾಗ ಸುಮ್ಮನೆ ಕುಳಿತು ಆನಂದಿಸುವವನಲ್ಲ ಎಂದು ಸುದೀಪ್ ಬೇಸರ ವ್ಯಕ್ತಪಡಿಸಿದ್ದಾರೆ. ಹಾಗಾದರೆ ಸುದೀಪ್ ಅವರು ಬಿಗ್‌ಬಾಸ್ ತೊರೆಯುತ್ತಿರುವುದೇಕೆ ಎಂದು ಎಲ್ಲರೂ ಯೋಚಿಸುತ್ತಿದ್ದಾರೆ.



ಅಭಿಮನ್ಯುಗೆ ಸಾಥ್ ನೀಡಿದ ಸುದೀಪ್

ಹಿರಿಯ ನಟ, ನಿರ್ದೇಶಕ ಕಾಶಿನಾಥ್ ಅವರ ಪುತ್ರ ಅಭಿಮನ್ಯು, ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರದ ಮೂಲಕ ತೆರೆಗೆ ಬರುತ್ತಿದ್ದಾರೆ. ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಕಿಚ್ಚ ಸುದೀಪ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದ್ದಾರೆ. ಕಾಶಿನಾಥ್ ಅವರ ಕೊಡುಗೆಗಳನ್ನು ಕನ್ನಡ ಚಿತ್ರರಂಗ ಎಂದಿಗೂ ಮರೆಯಲು ಸಾಧ್ಯವಿಲ್ಲ. ಕಾಶಿನಾಥ್ ಅವರು ಚಿತ್ರರಂಗಕ್ಕೆ ಸಲ್ಲಿಸಿರುವ ಸೇವೆಯ ಮುಂದೆ ಅಭಿಮನ್ಯುಗೆ ನಾವು ನೀಡುತ್ತಿರುವ ಬೆಂಬಲ ತೀರಾ ಚಿಕ್ಕದು, ಅವರ ಬೆಂಬಲಕ್ಕೆ ಸದಾ ನಾನಿರುತ್ತೇನೆ ಎಂದು ಸುದೀಪ್ ಹೇಳಿದರು. ಅಲ್ಲದೆ ಟ್ರೇಲರ್ ನೋಡಿ ಕಿಚ್ಚ ಸುದೀಪ್ ಮೆಚ್ಚುಗೆ ವ್ಯಕ್ತಪಡಿಸಿದರು. ವಿಶೇಷ ಎಂದರೆ ಈ ಚಿತ್ರ ಹಾಡಿಗೆ ಕಿಚ್ಚ ದನಿಯಾಗಿದ್ದಾರೆ. ಟೈಟಲ್‌ನಲ್ಲಿಯೇ ಕುತೂಹಲ ಕೆರಳಿಸಿರುವ ಎಲ್ಲಿಗೆ ಪಯಣ ಯಾವುದೋ ದಾರಿ ಪಯಣದಲ್ಲಿ ಸಾಗುವ ಕಥೆಯ ಲವ್ ಸ್ಟೋರಿಯನ್ನಿ ಒಳಗೊಂಡಿದ್ದು, ಸಂದೇಶವನ್ನು ಹೊತ್ತು ಬಂದಿದೆ. ನಿರ್ದೇಶಕ ಕಿರಣ್ ಒಳ್ಳೆಯ ಕಥೆಯನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುತ್ತಿದ್ದಾರೆ. ಚಿತ್ರದ ಟೈಟಲ್ ನಮಗೆ ಶಕ್ತಿ ತುಂಬಿದೆ. ಎಲ್ಲರಿಗೂ ಹಿಡಿಸುವ ಕಥೆ. ನನ್ನ ಪಾತ್ರಕ್ಕೆ ಸಾಕಷ್ಟು ಒತ್ತು ನೀಡಿದ್ದು, ಈ ಸಿನಿಮಾದಲ್ಲಿ ನಟಿಸಿರುವುದು ನನಗೆ ಖುಷಿ ಕೊಟ್ಟಿದೆ ಎಂದು ಅಭಿಮನ್ಯು ಕಾಶಿನಾಥ್ ಹೇಳಿದರು. ಸ್ಫೂರ್ತಿ ಉಡಿ ಮನೆ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ, ಎಲ್ಲಿಗೆ ಪಯಣ ಯಾವುದೋ ದಾರಿ ಚಿತ್ರದ ಕಥೆ ಅದ್ಭುತವಾಗಿದೆ. ಚಿತ್ರದಲ್ಲಿ ನನ್ನ ಪಾತ್ರ ಬಹಳ ಚಾಲೆಂಜಿಂಗ್ ಆಗಿದೆ. ಅದಕ್ಕೆ ತಕ್ಕ ತಯಾರಿ ಮಾಡಿಕೊಂಡು ನಟಿಸಿದ್ದೇನೆ ಎಂದು ಸ್ಫೂರ್ತಿ ಹೇಳಿದರು. ವಿಜಯಶ್ರೀ ಕಲಬುರ್ಗಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಲರಾಜವಾಡಿ, ಶೋಭನ್, ಅಯಾಂಕ್, ಪ್ರದೀಪ್, ರವಿತೇಜ, ಕಿಶೋರ್, ಅಶ್ವಿನಿ ರಾವ್, ಪ್ರಿಯಾ ಮುಂತಾದವರು ತಾರಾಗಣದಲ್ಲಿದ್ದಾರೆ. ಕಿರಣ್.ಎಸ್. ಸೂರ್ಯ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಚಿತ್ರ ನಿರ್ದೇಶನ ಮಾಡಿದ್ದಾರೆ. ಪ್ರಣವ್ ರಾವ್ ಸಂಗೀತ ನಿರ್ದೇಶನ, ಸತ್ಯ ರಾಮ್ ಛಾಯಾಗ್ರಹಣವಿರುವ ಈ ಚಿತ್ರದ ಹಾಡುಗಳಿಗೆ ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದಾರೆ. ಸುದರ್ಶನ ಆರ್ಟ್ಸ್ ಬ್ಯಾನರ್‌ನಲ್ಲಿ ಜತಿನ್ ಪಟೇಲ್ ಚಿತ್ರ ನಿರ್ಮಾಣ ಮಾಡಿದ್ದಾರೆ.